ಶನಿವಾರ, ಏಪ್ರಿಲ್ 17, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 107 | ಪುಟ 20

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ಕಳೆದೊಂದು ವರ್ಷದಿಂದ ಮದುವೆಯಾಗದ, ಮೂವತ್ತೈದರ ಆಜೂಬಾಜು ಇರುವಂತಹ ಹೆಣ್ಣುಮಕ್ಕಳು ಅಂಡಾಣುಗಳನ್ನು ಕಾದಿರಿಸುತ್ತಿರುವ ವಿದ್ಯಮಾನ ಜಾಸ್ತಿಯಾಗಿದೆ. ಇದಕ್ಕೆ ಕಾರಣಗಳೇನು?

ಚರ್ಚೆ
ಸಾಂವಿಧಾನಿಕ ಸಂಸ್ಥೆಗಳ ದುರ್ಬಳಕೆ ಆಗುತ್ತಿದೆಯೇ? 9

ಚೆನ್ನೈ 'ಕಿಂಗ್ಸ್' ಗೆ ಮಣಿದ ಪಂಜಾಬ್ 12

ಪಶ್ಚಿಮ ಬಂಗಾಳ: ಆರೋಪ–ಪ್ರತ್ಯಾರೋಪ ತೀವ್ರ 6

ಸೆನ್ಸೆಕ್ಸ್	ನಿಫ್ಟಿ	₹/$
48,832 ▲	14,617 ▲	74.35 ▲

ಧಾರ್ಮಿಕ ಸಮಾರಂಭ ನಿಷೇಧ: ರಾಜಕೀಯ ಕಾರ್ಯಕ್ರಮಕ್ಕೆ ಅವಕಾಶ

ಕೋವಿಡ್: ಕಠಿಣ ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿರುವ ಕಾರಣ ಸಾರ್ವಜನಿಕ ಸಭೆ, ಸಮಾರಂಭ ಮತ್ತು ವಿವಿಧ ಆಚರಣೆಗಳಲ್ಲಿ ಜನ ಸೇರುವುದಕ್ಕೆ ಕಠಿಣ ನಿರ್ಬಂಧ ವಿಧಿಸಿ ರಾಜ್ಯ ಸರ್ಕಾರ ಮಾರ್ಗಸೂಚಿ ಹೊರಡಿಸಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ಶುಕ್ರವಾರ ಬೆಳಿಗ್ಗೆ ಕೋವಿಡ್ ನಿರ್ವಹಣೆ ಕುರಿತು ತುರ್ತುಸಭೆ ನಡೆಸಲಾಯಿತು. ಆ ಸಂದರ್ಭದಲ್ಲಿ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಲಾಗಿತ್ತು. ಇದನ್ನು ಆಧರಿಸಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಪರಿಷ್ಕೃತ ಮಾರ್ಗಸೂಚಿ ಹೊರಡಿಸಿದ್ದಾರೆ.

ಹೊಸ ಮಾರ್ಗಸೂಚಿಯ ಪ್ರಕಾರ, ಧಾರ್ಮಿಕ ಆಚರಣೆ ಮತ್ತು ಸಮಾರಂಭಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಆದರೆ, ತೆರೆದ ಪ್ರದೇಶದಲ್ಲಿ 200 ಜನ ಮೀರದಂತೆ ರಾಜಕೀಯ ಕಾರ್ಯಕ್ರಮಗಳನ್ನು ನಡೆಸಲು ಅವಕಾಶ ನೀಡಲಾಗಿದೆ.

ಮದುವೆಗಳನ್ನು ತೆರೆದ ಪ್ರದೇಶದಲ್ಲಿ ನಡೆಸುವುದಾದರೆ 200 ಜನ ಮೀರಬಾರದು. ಕಲ್ಯಾಣ ಮಂಟಪ, ಸಭಾಂಗಣ, ಹಾಲ್‌ಗಳಲ್ಲಿ 100 ಜನ ಮೀರಬಾರದು. ಸಾಮಾಜಿಕ ಸಮಾರಂಭಗಳನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯ ಅನ್ವಯ ವ್ಯಕ್ತಿಗಳ ನಡುವೆ 3.25 ಚದರಡಿ ಅಂತರ ಕಾಯ್ದುಕೊಂಡು ನಡೆಸಬಹುದು.

ಜನ್ಮದಿನ ಮತ್ತು ಇತರ ಆಚರಣೆಗಳು ತೆರೆದ ಪ್ರದೇಶದಲ್ಲಿ ನಡೆಸುವುದಾದರೆ 50 ಜನ ಮೀರಬಾರದು, ಸಭಾಂಗಣ ಮತ್ತು ಹಾಲ್‌ಗಳಲ್ಲಿ 25 ಜನ ಮೀರಬಾರದು. ನಿಧನದ ಸಂದರ್ಭದಲ್ಲಿ ತೆರೆದ ಪ್ರದೇಶದಲ್ಲಿ 50 ಜನ ಮತ್ತು ಮುಚ್ಚಿದ ಪ್ರದೇಶದಲ್ಲಿ 25 ಜನ ಮೀರಬಾರದು. ಶವಸಂಸ್ಕಾರ/ಅಂತ್ಯಕ್ರಿಯೆಯಲ್ಲಿ 25 ಕ್ಕೂ ಹೆಚ್ಚು ಜನ ಭಾಗವಹಿಸಬಾರದು ಎಂದು ತಿಳಿಸಿದೆ.

ಇತರ ಯಾವುದೇ ಸಮಾರಂಭದಲ್ಲಿ ಹಾಲ್‌ನ ವಿಸ್ತೀರ್ಣಕ್ಕೆ ಅನುಗುಣವಾಗಿ 50 ಕ್ಕೂ ಹೆಚ್ಚು ಜನ ಇರಬಾರದು. ಸಭಾಂಗಣ, ಕಲ್ಯಾಣ ಮಂಟಪ, ಸಿನಿಮಾಮಂದಿರ, ಹಾಲ್‌ಗಳು ಮತ್ತು ಆಚರಣೆಗೆ ಜನ ಸೇರುವ ಪ್ರದೇಶದಲ್ಲಿ ಕಡ್ಡಾಯವಾಗಿ ಸ್ಯಾನಿಟೈಸ್ ಮಾಡಬೇಕು.

ಈ ಆದೇಶವು ಬಿಬಿಎಂಪಿ ವ್ಯಾಪ್ತಿ ಮತ್ತು ಎಲ್ಲಾ ಜಿಲ್ಲೆಗಳಿಗೂ ಅನ್ವಯವಾಗುತ್ತದೆ. ಇದನ್ನು ಉಲ್ಲಂಘಿಸಿದರೆ ವಿಪತ್ತು ನಿರ್ವಹಣೆ ಕಾಯ್ದೆ 2005 ಸೆಕ್ಷನ್ 51 ರಿಂದ 60 ಅನ್ವಯ ಕ್ರಮ ಜರುಗಿಸಲು ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚಿಸಲಾಗಿದೆ.

ಆಮ್ಲಜನಕ ಉತ್ಪಾದನೆ ಹೆಚ್ಚಳಕ್ಕೆ ಸೂಚನೆ

ನವದೆಹಲಿ (ಪಿಟಿಐ): ಕೋವಿಡ್‌ನ ಹೊಸ ಪ್ರಕರಣಗಳು ವಿಪರೀತ ಮಟ್ಟದಲ್ಲಿ ಏರಿಕೆಯಾಗುತ್ತಿರುವ 12 ರಾಜ್ಯಗಳ ಪರಿಸ್ಥಿತಿ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ವಿವಿಧ ಸಚಿವಾಲಯಗಳ ಜತೆ ಶುಕ್ರವಾರ ಸಭೆ ನಡೆಸಿದ್ದಾರೆ. ಈ ರಾಜ್ಯಗಳಲ್ಲಿ ವೈದ್ಯಕೀಯ ಆಮ್ಲಜನಕದ ಕೊರತೆ ಆಗುವ ಅಪಾಯವಿದೆ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ. ಹೀಗಾಗಿ, 'ದೇಶದಲ್ಲಿ ವೈದ್ಯಕೀಯ ಗುಣಮಟ್ಟದ ಆಮ್ಲಜನಕದ ಉತ್ಪಾದನೆಯನ್ನು ಹೆಚ್ಚಿಸಿ' ಎಂದು ಮೋದಿ ಅವರು ಸೂಚನೆ ನೀಡಿದ್ದಾರೆ.

ಅತಿಹೆಚ್ಚು ಪ್ರಕರಣಗಳು ಪತ್ತೆಯಾಗುತ್ತಿರುವ ಮಹಾರಾಷ್ಟ್ರ, ಮಧ್ಯಪ್ರದೇಶ, ಗುಜರಾತ್, ಉತ್ತರ ಪ್ರದೇಶ, ದೆಹಲಿ. ಛತ್ತೀಸಗಡ, ಕರ್ನಾಟಕ, ಕೇರಳ, ತಮಿಳುನಾಡು, ಪಂಜಾಬ್, ಹರಿಯಾಣ ಮತ್ತು ರಾಜಸ್ಥಾನದಲ್ಲಿನ ಪರಿಸ್ಥಿತಿ ಬಗ್ಗೆ ಪರಿಶೀಲನೆ ನಡೆಸಲಾಗಿದೆ. ಈ ರಾಜ್ಯಗಳಲ್ಲಿ ಮುಂದಿನ ದಿನಗಳಲ್ಲಿ ಅಗತ್ಯವಿರುವ ಆಮ್ಲಜನಕದ ಪ್ರಮಾಣದ ಅಂದಾಜನ್ನು ಪ್ರಧಾನಿಗೆ ವಿವರಿಸಲಾಗಿದೆ. ಏಪ್ರಿಲ್ 20ರ ವೇಳೆಗೆ 4,880 ಟನ್, ಏಪ್ರಿಲ್ 25ರ ವೇಳೆಗೆ 5,619 ಟನ್ ಮತ್ತು ಏಪ್ರಿಲ್ 30 ವೇಳೆಗೆ 6,593 ಟನ್ ಆಮ್ಲಜನಕವನ್ನು ಹಂಚಿಕೆ ಮಾಡಲಾಗಿದೆ ಎಂದು ಪ್ರಧಾನಿ ಕಾರ್ಯಾಲಯ ಮಾಹಿತಿ ನೀಡಿದೆ

ದೇಶದ ಎಲ್ಲಾ ಆಮ್ಲಜನಕ ಘಟಕಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವಂತೆ ಪ್ರಧಾನಿ ಅವರು ಸೂಚಿಸಿದ್ದಾರೆ. ಈ ಘಟಕಗಳು 24 ಗಂಟೆಯೂ ಕಾರ್ಯನಿರ್ವಹಿಸಲು ಅನುಮತಿ ನೀಡಲಾಗಿದೆ. ಕೈಗಾರಿಕಾ ಆಮ್ಲಜನಕದ ಸಿಲಿಂಡರ್‌ಗಳನ್ನು, ವೈದ್ಯಕೀಯ ಆಮ್ಲಜನಕದ ಸಿಲಿಂಡರ್‌ಗಳಾಗಿ ಪರಿವರ್ತಿಸಲು ಅನುಮತಿ ನೀಡಲಾಗಿದೆ. ವಿದೇಶಗಳಿಂದ ಆಮ್ಲಜನಕ ಆಮದು ಮಾಡಿಕೊಳ್ಳಲು ಸಾಧ್ಯವೇ ಎಂಬುದರ ಬಗ್ಗೆ ಪರಿಶೀಲನೆ ನಡೆಸಲು ವಾಣಿಜ್ಯ ಸಚಿವಾಲಯಕ್ಕೆ ಸೂಚಿಸಲಾಗಿದೆ ಎಂದು ಪ್ರಧಾನಿ ಕಾರ್ಯಾಲಯವು ಮಾಹಿತಿ ನೀಡಿದೆ.

ಕೈಗಾರಿಕಾ ವಲಯಕ್ಕೆ ಲಭ್ಯವಾಗುತ್ತಿರುವ ಹೆಚ್ಚುವರಿ ಆಮ್ಲಜನಕವನ್ನು ವೈದ್ಯಕೀಯ ವಲಯಕ್ಕೆ ಪೂರೈಕೆ ಮಾಡುವಂತೆ ಸಭೆಯಲ್ಲಿ ಸೂಚಿಸಲಾಗಿದೆ. ಆಮ್ಲಜನಕದ ಟ್ಯಾಂಕರ್‌ಗಳ ಸಂಚಾರಕ್ಕೆ ಯಾವುದೇ ರೀತಿಯ ಅಡಚಣೆಯಾಗದಂತೆ ಕ್ರಮ ತೆಗೆದುಕೊಳ್ಳಿ ಎಂದು ರಾಜ್ಯಗಳಿಗೆ ಸೂಚಿಸಲಾಗಿದೆ. ಸಾರ್ವಜನಿಕ ಆರೋಗ್ಯ ರಕ್ಷಣೆಗೆ ಸಂಬಂಧಿಸಿದ ವಸ್ತುಗಳ ತಯಾರಿಕೆ ಮತ್ತು ಪೂರೈಕೆ ಮೇಲೆ ಯಾವುದೇ ನಿರ್ಬಂಧ ಹೇರಬಾರದು ಎಂದೂ ತಿಳಿಸಲಾಗಿದೆ.

ಬಿಎಸ್‌ವೈಗೆ ಎರಡನೇ ಬಾರಿ ಕೋವಿಡ್

ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಕೋವಿಡ್ ದೃಢಪಟ್ಟಿದ್ದು, ಚಿಕಿತ್ಸೆಗಾಗಿ ಅವರನ್ನು ಮಣಿಪಾಲ ಆಸ್ಪತ್ರೆಗೆ ದಾಖಲಿಸಲಾಗಿದೆ. ಎರಡು ದಿನಗಳಿಂದ ಜ್ವರದಿಂದ ಬಳಲುತ್ತಿದ್ದ ಯಡಿಯೂರಪ್ಪ ಶುಕ್ರವಾರ ಎಂ.ಆರ್.ರಾಮಯ್ಯ ಆಸ್ಪತ್ರೆಯಲ್ಲಿ ಆರ್‌ಟಿಪಿಸಿಆರ್ ಪರೀಕ್ಷೆ ಮಾಡಿಸಿಕೊಂಡರು.

ಈ ಹಿಂದೆ ಲಾಕ್‌ಡೌನ್ ಸಂದರ್ಭದಲ್ಲೂ ಸೋಂಕಿಗೆ ಒಳಗಾಗಿದ್ದರು. ಇದೀಗ ಎರಡನೇ ಬಾರಿ ಸೋಂಕಿಗೆ ಒಳಗಾಗಿದ್ದಾರೆ. 'ಅಲ್ಪ ಪ್ರಮಾಣದಲ್ಲಿ ರೋಗ ಲಕ್ಷಣಗಳಿರುವುದರಿಂದ ವೈದ್ಯರ ಸಲಹೆಯ ಮೇರೆಗೆ ಆಸ್ಪತ್ರೆಗೆ ದಾಖಲಾಗುತ್ತಿದ್ದೇನೆ' ಎಂದು ಯಡಿಯೂರಪ್ಪ ಟ್ವೀಟ್ ಮಾಡಿದ್ದಾರೆ.

20ಕ್ಕೆ ಮುಂದಿನ ತೀರ್ಮಾನ

'ಈ ಹಿಂದಿನ ನಿರ್ಧಾರದಂತೆ ಏಪ್ರಿಲ್ 20ರವರೆಗೂ ಎಂಟು ನಗರಗಳಲ್ಲಿ ರಾತ್ರಿ ಕರ್ಫ್ಯೂ ಮುಂದುವರಿಯಲಿದೆ' ಎಂದು ಯಡಿಯೂರಪ್ಪ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕೋವಿಡ್ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ತಜ್ಞರು ವರದಿ ನೀಡಿದ್ದಾರೆ. ಎಂಟು ನಗರಗಳಲ್ಲಿ ರಾತ್ರಿ ಕರ್ಫ್ಯೂ ಯಥಾಸ್ಥಿತಿಯಲ್ಲಿ ಮುಂದುವರಿಯಲಿದೆ. ಬೇರೆ ಕಡೆಗಳಲ್ಲೂ ಜಾರಿಗೊಳಿಸುವ ಕುರಿತು ಉನ್ನತಮಟ್ಟದ ಸಭೆಯ ಬಳಿಕ ತೀರ್ಮಾನಕ್ಕೆ ಬರಲಾಗುವುದು' ಎಂದರು.

ರಾಜ್ಯ ಕೋವಿಡ್ ಅಂಕಿ–ಅಂಶ

11,24,509	ಒಟ್ಟು ಸೋಂಕಿತರು (11,09,650 ನಿನ್ನೆಯ ವಿವರ) ▲
1,07,315	ಸಕ್ರಿಯ ಪ್ರಕರಣಗಳು ▲
10,03,985	ಗುಣಮುಖರಾದವರು ▲
13,190	ಒಟ್ಟು ಸಾವು ▲

ದಿನದ ಏರಿಕೆ

ಹೊಸ ಪ್ರಕರಣ	14,859 ▲
ಗುಣಮುಖ	4,031 ▲
ಸಾವು	78 ▲

577 ಐಸಿಯುನಲ್ಲಿ ಇರುವವರು

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಸರ್ವಪಕ್ಷಗಳ ಸಭೆ ರದ್ದು

ಕೋವಿಡ್ ವಿಚಾರವಾಗಿ ಭಾನುವಾರ ನಡೆಯಬೇಕಿದ್ದ ಸರ್ವಪಕ್ಷಗಳ ನಾಯಕರ ಸಭೆಯನ್ನು ರದ್ದುಪಡಿಸಲಾಗಿದೆ. ಯಡಿಯೂರಪ್ಪ ಅವರು ಕೋವಿಡ್ ಸೋಂಕಿನಿಂದ ಆಸ್ಪತ್ರೆಗೆ ದಾಖಲಾಗಿರುವ ಕಾರಣ ಸಭೆ ಮುಂದೂಡಲಾಗಿದೆ.

ಕೋವಿಡ್ ಸ್ಥಿತಿಯನ್ನು ನಿಭಾಯಿಸಲು ವಿರೋಧ ಪಕ್ಷಗಳ ನಾಯಕರ ಸಲಹೆ ಸೂಚನೆಗಳನ್ನು ಪಡೆಯಲು ನಿರ್ಧರಿಸಲಾಗಿತ್ತು. ಒಂದು ಹಂತದಲ್ಲಿ ಆಸ್ಪತ್ರೆಯಿಂದ ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಲು ಯಡಿಯೂರಪ್ಪ ತೀರ್ಮಾನಿಸಿದ್ದರು ಎಂದು ಮೂಲಗಳು ಹೇಳಿವೆ.

ಇನ್ನಷ್ಟು ಸುದ್ದಿಗಳು 5A, 5B

ಮತದಾನಕ್ಕೆ ಸಿದ್ಧತೆ

ಬೀದರ್ ಜಿಲ್ಲೆಯ ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯ ಮತದಾನ ಶನಿವಾರ ನಡೆಯಲಿದ್ದು, ಶುಕ್ರವಾರ ಚುನಾವಣಾ ಸಿಬ್ಬಂದಿ ಅಗತ್ಯ ಸಾಮಗ್ರಿಗಳೊಂದಿಗೆ ಸಿದ್ಧತೆ ಮಾಡಿಕೊಂಡರು

ಉಪಚುನಾವಣೆ: ಅಭ್ಯರ್ಥಿಗಳ ಹಣೆಬರಹ ನಿರ್ಧಾರ ಇಂದು

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಕಾಂಗ್ರೆಸ್ ಮತ್ತು ಬಿಜೆಪಿ ಮಧ್ಯೆ ತೀವ್ರ ಜಿದ್ದಾಜಿದ್ದಿನ ಕಣಗಳಾಗಿರುವ ಬೆಳಗಾವಿ ಲೋಕಸಭೆ ಹಾಗೂ ಮಸ್ಕಿ, ಬಸವಕಲ್ಯಾಣ ವಿಧಾನಸಭೆ ಕ್ಷೇತ್ರಗಳ ಉಪಚುನಾವಣೆಯ ಅಭ್ಯರ್ಥಿಗಳ ರಾಜಕೀಯ ಭವಿಷ್ಯ ಶನಿವಾರ (ಏ.17) ನಿರ್ಧಾರವಾಗಲಿದೆ.

ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಸೋಂಕು ಹರಡದಂತೆ ಎಚ್ಚರ ವಹಿಸಲು ಮತಗಟ್ಟೆಗಳಲ್ಲಿ ಅಂತರ ಕಾಯ್ದುಕೊಂಡು ಮತದಾನ ಮಾಡಬೇಕಿದೆ. ಹೀಗಾಗಿ ಮತದಾನದ ಅವಧಿಯನ್ನು ಒಂದು ಗಂಟೆ ಹೆಚ್ಚಿಸಲಾಗಿದೆ. ಬೆಳಿಗ್ಗೆ 7ರಿಂದ ಸಂಜೆ 7ರ ವರೆಗೆ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ.

ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವರಾಗಿದ್ದ ಸುರೇಶ ಅಂಗಡಿ ಮತ್ತು ಶಾಸಕರಾಗಿದ್ದ ಬಿ.ನಾರಾಯಣರಾವ್ ಅವರು ಕೋವಿಡ್‌ನಿಂದ ಮೃತಪಟ್ಟ ಕಾರಣಕ್ಕಾಗಿ ಬೆಳಗಾವಿ, ಬಸವಕಲ್ಯಾಣಕ್ಕೆ ಹಾಗೂ ಬಿಜೆಪಿ ಸರ್ಕಾರದ ರಚನೆಗಾಗಿ ರಾಜ್ಯದ ವಿವಿಧೆಡೆಯ 16 ಶಾಸಕರೊಟ್ಟಿಗೆ ಪ್ರತಾಪಗೌಡ ಪಾಟೀಲ ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಮಸ್ಕಿ ಕ್ಷೇತ್ರಕ್ಕೆ ಉಪ ಚುನಾವಣೆ ನಡೆಯುತ್ತಿದೆ.

ಬಸವಕಲ್ಯಾಣದಲ್ಲಿ ದಿ.ನಾರಾಯಣರಾವ್ ಅವರ ಪತ್ನಿ ಕಾಂಗ್ರೆಸ್‌ನ ಮಾಲಾ, ಬಿಜೆಪಿಯ ಶರಣು ಸಲಗರ, ಜೆಡಿಎಸ್‌ನ ಸಯ್ಯದ್ ಯಸ್ರಬ್ ಅಲಿ ಖಾದ್ರಿ, ಪಕ್ಷೇತರರಾಗಿರುವ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಸೇರಿ 12 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಒಟ್ಟು 2,39,782 ಮತದಾರರು ಇದ್ದಾರೆ. 326 ಮತಗಟ್ಟೆಗಳಿದ್ದು, 163 ಮತಗಟ್ಟೆಗಳಿಗೆ ವೆಬ್ ಕಾಸ್ಟಿಂಗ್ ಮಾಡಲಾಗುತ್ತಿದೆ. ಅತಿ ಸೂಕ್ಷ್ಮ ಮತಗಟ್ಟೆಗಳಲ್ಲಿ 9 ವಿಡಿಯೊಗ್ರಾಫರ್‌ಗಳನ್ನು ನಿಯೋಜಿಸಲಾಗಿದೆ. ಒಟ್ಟು 1,960 ಸಿಬ್ಬಂದಿಯನ್ನು ಚುನಾವಣಾ ಕಾರ್ಯಕ್ಕೆ ನಿಯೋಜಿಸಲಾಗಿದೆ. 20 ಜನ ಕೋವಿಡ್ ಸೋಂಕಿತರು ಮತದಾನ ಮಾಡುವುದಾಗಿ ಅರ್ಜಿ ಸಲ್ಲಿಸಿದ್ದು, ಅವರಿಗೆ ಕೊನೆಯ ಒಂದು ಗಂಟೆಯ ಅವಧಿಯಲ್ಲಿ ಮತದಾನಕ್ಕೆ ಅವಕಾಶ ನೀಡಲಾಗಿದೆ.

ಪರಿಶಿಷ್ಟ ಪಂಗಡಕ್ಕೆ ಮೀಸಲಿರುವ ಮಸ್ಕಿಯಲ್ಲಿ ಈ ಬಾರಿ ಪ್ರತಾಪಗೌಡ ಪಾಟೀಲ ಬಿಜೆಪಿಯಿಂದ ಹಾಗೂ ಬಸನಗೌಡ ಪಾಟೀಲ ತುರ್ವಿಹಾಳ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದಾರೆ. ಕಳೆದ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಬಸನಗೌಡ ತುರ್ವಿಹಾಳ ಆಗ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಪ್ರತಾಪಗೌಡ ಪಾಟೀಲ ವಿರುದ್ಧ ಕೇವಲ 213 ಮತಗಳ ಅಂತರದಿಂದ ಸೋತಿದ್ದರು.

ಕಣದಲ್ಲಿ ಒಟ್ಟು ಎಂಟು ಅಭ್ಯರ್ಥಿಗಳಿದ್ದಾರೆ. ಹಣ ಹಂಚಿಕೆಗೆ ಸಂಬಂಧಿಸಿದ ಆರೋಪ–ಪ್ರತ್ಯಾರೋಪ, ವಿಡಿಯೊಗಳ ಸದ್ದು ಇಲ್ಲಿ ಜೋರಾಗಿರುವುದರಿಂದ ಈ ಕ್ಷೇತ್ರ ರಾಜ್ಯದ ಗಮನ ಸೆಳೆದಿದೆ.

6ನೇ ಪುಟ ನೋಡಿ

ಐಸಿಎಸ್‌ಇ: 10, 12ನೇ ತರಗತಿಗಳ ಪರೀಕ್ಷೆ ಮುಂದೂಡಿಕೆ

ನವದೆಹಲಿ (ಪಿಟಿಐ): ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಐಸಿಎಸ್‌ಇ ಆಡಳಿತ ಮಂಡಳಿಯು, ಈ ಸಾಲಿನ 10 ಮತ್ತು 12ನೇ ತರಗತಿಯ ಪರೀಕ್ಷೆಗಳನ್ನು ಮುಂದೂಡಿದೆ.

'ನಿಗದಿಯಂತೆ ಈ ಪರೀಕ್ಷೆಗಳು ಮೇ 4ರಿಂದ ಆರಂಭವಾಗಬೇಕಿತ್ತು. ಪರಿಸ್ಥಿತಿ ಅವಲೋಕಿಸಿ ಪರೀಕ್ಷೆ ನಡೆಸುವ ಕುರಿತು ಜೂನ್ ಮೊದಲ ವಾರ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಐಸಿಎಸ್‌ಇ ಮಂಡಳಿಯ ಕಾರ್ಯದರ್ಶಿ ಗ್ಯಾರಿ ಅರತೂನ್ ತಿಳಿಸಿದ್ದಾರೆ.

ಕಲ್ಲು ಹೊಡೆದು ಚಾಲಕನ ಕೊಲೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಜಮಖಂಡಿ ತಾಲ್ಲೂಕಿನ ಕವಟಗಿ ಪುನರ್ವಸತಿ ಕೇಂದ್ರದ ಬಳಿ ಶುಕ್ರವಾರ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಬಸ್ ತಡೆದ ಅಪರಿಚಿತ ದುಷ್ಕರ್ಮಿಗಳು ಚಾಲಕ ನಬಿ ರಸೂಲ್ ಆವಟಿ (59) ಅವರನ್ನು ಕಲ್ಲು ಹೊಡೆದು ಸಾಯಿಸಿದ್ದಾರೆ.

ಮುಷ್ಕರದ ನಡುವೆ ಮೇಲಧಿಕಾರಿಗಳ ಕರೆಗೆ ಓಗೊಟ್ಟು ನಬಿ ರಸೂಲ್ ಆವಟ ಅವರು ಕರ್ತವ್ಯಕ್ಕೆ ಹಾಜರಾಗಿದ್ದರು ಎನ್ನಲಾಗಿದೆ. ಜಮಖಂಡಿ ಡಿಪೋಗೆ ಸೇರಿದ ಬಸ್ ಇದಾಗಿದ್ದು, ಜಮಖಂಡಿ–ವಿಜಯಪುರ ಹಾಗೂ ಕಲಬುರ್ಗಿ ಜಿಲ್ಲೆ ಅಫಜಲಪುರ ತಾಲ್ಲೂಕಿನ ಘತ್ತರಗಾ ಮಾರ್ಗದಲ್ಲಿ ಸಂಚರಿಸುತ್ತಿತ್ತು. ಶುಕ್ರವಾರ ಬಸ್ ಘತ್ತರಗಾಕ್ಕೆ ಹೋಗದೇ ವಿಜಯಪುರ–ಜಮಖಂಡಿ ಮಧ್ಯೆ ಮಾತ್ರ ಸಂಚರಿಸುತ್ತಿತ್ತು.

ನಬಿ ರಸೂಲ್ ಆವಟಿ

4ನೇ ಪುಟ ನೋಡಿ

ಸೂಪರ್ ಬ್ರ್ಯಾಂಡ್‌ಗಳ ಬಂಪರ್ ಕೊಡುಗೆಗಳು ಇದೀಗ ನಿಮಗಾಗಿ

ಪ್ರಜಾವಾಣಿ ವಾರೆವ್ಹಾ ವಾರಾಂತ್ಯ

ವಾರಾಂತ್ಯದ ಪುರುಸೊತ್ತಿನಲ್ಲಿ ನಿಮಗಾಗಿ ಕಾದಿವೆ ಭರ್ಜರಿ ಕೊಡುಗೆಗಳು. ಬಾಯಲ್ಲಿ ನೀರೂರಿಸುವ ಭೋಜನ, ತಿಂಗಳ ದಿನಸಿಯಿಂದ ಹಿಡಿದು ಪ್ರಯಾಣ ಮತ್ತು ಮನರಂಜನೆಯವರೆಗೂ, ಬಂಪರ್ ಕೊಡುಗೆಗಳ ಸುರಿಮಳೆ..

ಹೆಚ್ಚಿನ ಮಾಹಿತಿಗಾಗಿ ಪ್ರಜಾ ಪ್ಲಸ್ ಪುಟ 05 ನೋಡಿರಿ

ಇಂದಿನ ಪಾಡ್‌ಕಾಸ್ಟ್ ವಿಶೇಷ

ಪ್ರಜಾವಾಣಿ ಕನ್ನಡ ಧ್ವನಿ

ವಚನವಾಣಿ 100

ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ



ನಿಮ್ಮ ವಜ್ರದ ಗಾತ್ರವನ್ನು ಆರಿಸಿರಿ

VVS ಕ್ಲ್ಯಾರಿಟಿ, E/F ಕಲರ್, 18 ಕೆರೆಟ್ ಚಿನ್ನದಲ್ಲಿ ಆಳವಡಿಸಿದ ಫಾರ್‌ಎವರ್‌ಮಾರ್ಕ್ ಐಕಾನ್ ಉಂಗುರದ ಬೆಲೆಗಳು.

0.25 ಕೆರೆಟ್	0.5 ಕೆರೆಟ್	1 ಕೆರೆಟ್
ರೂ. 75,000/-	ರೂ. 2,15,000/-	ರೂ. 8,60,000/-

ಪ್ರಾಮಾಣಿಕತೆಯ ಹೆಗ್ಗುರುತು

ಜಗತ್ತಿನಲ್ಲಿ 1%ಕ್ಕೂ ಕಡಿಮೆ ಡೈಮಂಡ್‌ಗಳು ಫಾರ್‌ಎವರ್‌ಮಾರ್ಕ್ ಆಗಬಹುದು. ಪ್ರತಿಯೊಂದು ಫಾರ್‌ಎವರ್ ಮಾರ್ಕ್ ಡೈಮಂಡ್‌ನಲ್ಲಿ ಅನನ್ಯವಾದ ಐಡೆಂಟಿಫಿಕೇಶನ್ ನಂಬರ್ ಲೇಖಿಸಲಾಗಿದೆ ಮತ್ತು ಐಡೆಂಟಿಫಿಕೇಶನ್ ಕಾರ್ಡ್‌ನೊಂದಿಗೆ ಬರುತ್ತದೆ. ಐಕಾನ್ ಉಂಗುರಗಳೊಂದಿಗೆ ಫಾರ್‌ಎವರ್‌ಮಾರ್ಕ್ ಗ್ರೇಡಿಂಗ್ ರಿಪೋರ್ಟ್ ಕೂಡ ಪ್ರಸ್ತುತಪಡಿಸಲಾಗುತ್ತದೆ.

FOREVERMARK
A DIAMOND IS FOREVER

DE BEERS GROUP   FOREVERMARK.COM

© Forevermark Limited 2020. Forevermark™, ◇®, A DIAMOND IS FOREVER™ are Trade Marks of The De Beers Group.

Abaran 23598600 | Apranje Jewellers 22121819 | C. Krishniah Chetty 7625035227 | GRT Jewellers 9741574343 | Joyalukkas 25589916 | Malabar Gold & Diamonds 41283916 | Neelkanth jewellers 9606333525 | PMJ Jewels 8008019281 | Senco Gold & Diamonds 18001030017

ಕ್ಷಮೆ ಕೇಳದಿದ್ದರೆ ಘೇರಾವ್: ಕಟೀಲ್‌ಗೆ ಎಚ್ಚರಿಕೆ

ಮೈಸೂರು: ಕಾಂಗ್ರೆಸ್ ಪಕ್ಷ ಹಾಗೂ ಕಾಂಗ್ರೆಸ್ಸಿಗರ ಬಗ್ಗೆ ಕೀಳಾಗಿ ಮಾತನಾಡಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಬಹಿರಂಗವಾಗಿ ಕ್ಷಮೆ ಕೇಳದಿದ್ದರೆ, ಅವರು ಹೋದೆಡೆಯೆಲ್ಲ ಘೇರಾವ್ ಹಾಕಿ ಕೊರಳಿಗೆ ಚಪ್ಪಲಿ ಹಾರ ಹಾಕುವುದಾಗಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಶುಕ್ರವಾರ ಇಲ್ಲಿ ಎಚ್ಚರಿಕೆ ನೀಡಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಲಯ ಆಯುಕ್ತರು (ದಕ್ಷಿಣ)ರವರ ಕಚೇರಿ, ಮಹಾನಗರ ಪಾಲಿಕೆ ವಾಣಿಜ್ಯ ಸಂಕೀರ್ಣ ಕಟ್ಟಡ,
2ನೇ ಮಹಡಿ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, 2ನೇ ಬ್ಲಾಕ್, ಜಯನಗರ, ಬೆಂಗಳೂರು – 560 011.

ಸಂಖ್ಯೆ: ವ.ಆ(ದ)/ಪಿಆರ್/77/2021–22 ದಿನಾಂಕ: 16.04.2021

ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕರೋನಾ ವೈರಸ್‌ನ (ಕೋವಿಡ್–19)ನಿಯಂತ್ರಣಕ್ಕೆ ಅವಶ್ಯಕವಿರುವ ಹೆಚ್ಚುವರಿ ಮಾನವ ಸಂಪನ್ಮೂಲವನ್ನು ತಾತ್ಕಾಲಿಕವಾಗಿ 03 ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ವಾಕ್–ಇನ್–ಪ್ರಕ್ರಿಯೆ ಮೂಲಕ ಸೇವೆಯನ್ನು ಪಡೆಯಲು ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಾಕ್–ಇನ್–ಪ್ರಕ್ರಿಯೆ

ಕ್ರ ಸಂ	ಹುದ್ದೆಯ ಹೆಸರು	ವಿದ್ಯಾರ್ಹತೆ	ವೇತನ
1.	ಎಂ.ಬಿ.ಬಿ.ಎಸ್ ವೈದ್ಯರುಗಳು	ಅಂಗೀಕೃತ ಭಾರತೀಯ ವೈದ್ಯಕೀಯ ಸಂಸ್ಥೆಯಿಂದ ಅನುಮೋದಿತ ಎಂ.ಬಿ.ಬಿ.ಎಸ್ ಪದವಿ ಪಡೆದಿರಬೇಕು	ರೂ.60,000/– (ಹೆಚ್ಚುವರಿ ರೂ. 20,000/– ಕೋವಿಡ್ ಭತ್ಯೆ) = ರೂ.80,000/–
2.	ಡೆಂಟಲ್ ವೈದ್ಯರುಗಳು	ಭಾರತೀಯ ದಂತ ವೈದ್ಯಕೀಯ ಸಂಸ್ಥೆಯಿಂದ ಅನುಮೋದಿತ ಬಿ.ಡಿ.ಎಸ್ ಪದವಿ ಪಡೆದಿರಬೇಕು	ರೂ.45,000/– (ಹೆಚ್ಚುವರಿ ರೂ. 15,000/– ಕೋವಿಡ್ ಭತ್ಯೆ)= ರೂ.60,000/–
3.	ಆಯೂಷ್ ವೈದ್ಯರುಗಳು	ಅಂಗೀಕೃತ ಆಯುರ್ವೇದ ಸಂಸ್ಥೆಯ ಅನುಮೋದಿತ ಬಿ.ಎ.ಎಂ.ಎಸ್ ಪದವಿ ಪಡೆದಿರಬೇಕು	ರೂ.45,000/– (ಹೆಚ್ಚುವರಿ ರೂ. 15,000/– ಕೋವಿಡ್ ಭತ್ಯೆ)= ರೂ.60,000/–
		ಅಂಗೀಕೃತ ಯುನಾನಿ ಸಂಸ್ಥೆಯ ಅನುಮೋದಿತ ಬಿ.ಯು.ಎಂ.ಎಸ್ ಪದವಿ ಪಡೆದಿರಬೇಕು	
		ಅಂಗೀಕೃತ ಸಿದ್ದ ಸಂಸ್ಥೆಯ ಅನುಮೋದಿತ ಬಿ.ಎಸ್.ಎಂ.ಎಸ್ ಪದವಿ ಪಡೆದಿರಬೇಕು	
		ಅಂಗೀಕೃತ ಹೋಮಿಯೋಪತಿ ಸಂಸ್ಥೆಯ ಅನುಮೋದಿತ ಬಿ.ಹೆಚ್.ಎಂ.ಎಸ್ ಪದವಿ ಪಡೆದಿರಬೇಕು	
4.	ಸ್ಟಾಫ್ ನರ್ಸ್	ಅಂಗೀಕೃತ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿಎಸ್ಸಿ/ ಜಿ.ಎನ್.ಎಂ/ಡಿಪ್ಲೋಮ ಇನ್ ನರ್ಸಿಂಗ್ ಕೋರ್ಸ್ ಪದವಿ ಪಡೆದಿರಬೇಕು	ರೂ.20,000/– (ಹೆಚ್ಚುವರಿ ರೂ. 10,000/– ಕೋವಿಡ್ ಭತ್ಯೆ)= ರೂ.30,000/–
5.	ಸ್ವಾಬ್ ಕಲೆಕ್ಟರ್	ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರಬೇಕು	ರೂ.14,000/– (ಹೆಚ್ಚುವರಿ ರೂ. 5,000/– ಕೋವಿಡ್ ಭತ್ಯೆ)= ರೂ.19,000/–

ಅರ್ಹತೆ 1. ವಯಸ್ಸು: ಅಧಿಸೂಚನೆ ಹೊರಡಿಸಿದ ದಿನಾಂಕಕ್ಕೆ 50 ವರ್ಷಗಳನ್ನು ಮೀರಿರಬಾರದು.
2. ಕನ್ನಡ ಭಾಷೆ ಮಾತನಾಡಲು, ಓದಲು, ಬರೆಯಲು ಬರಬೇಕು.

ದಿನಾಂಕ: 19–04–2021 ರಿಂದ 21–04–2021 ಸ್ಥಳ: ಮಹಾನಗರ ಪಾಲಿಕೆ ವಾಣಿಜ್ಯ ಸಂಕೀರ್ಣ ಕಟ್ಟಡ, ಜಯನಗರ 2ನೇ ಬ್ಲಾಕ್, 3ನೇ ಮಹಡಿ ಸಮಯ: ಬೆಳಿಗ್ಗೆ 11:00 ರಿಂದ ಸಂಜೆ 4:00 ಗಂಟೆಯವರೆಗೆ.

ಆಸಕ್ತರು ಸಂಬಂಧಿಸಿದ ದಾಖಲೆಗಳೊಂದಿಗೆ ಪಟ್ಟಿಯಲ್ಲಿ ಸೂಚಿಸಿರುವ ಸ್ಥಳ ಮತ್ತು ದಿನಾಂಕದಂದು ವಾಕ್–ಇನ್–ಪ್ರಕ್ರಿಯೆಗೆ ಹಾಜರಾಗಲು ಸೂಚಿಸಲಾಗಿದೆ. ಅಭ್ಯರ್ಥಿಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನಿಯೋಜಿಸಲಾಗುವುದು. ಮೇಲ್ಕಂಡ ಹುದ್ದೆಗಳ ಸಂಖ್ಯೆಗಳನ್ನು ಹೆಚ್ಚಿಸುವ / ಕಡಿತಗೊಳಿಸುವ ಅಧಿಕಾರವನ್ನು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಹೊಂದಿರುತ್ತಾರೆ. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: 8431816718 ಹಾಗೂ ಇ–ಮೇಲ್ ಐ.ಡಿ **hhosouth@gmail.com** ಅನ್ನು ಸಂಪರ್ಕಿಸಲು ಸೂಚಿಸಲಾಗಿದೆ.

ಸೂಚನೆ: ಸ್ವಾಬ್ ಕಲೆಕ್ಟರ್‌ಗಳನ್ನು ಸಂಚಾರಿ ತಂಡ / ಫೀವರ್ ಕ್ಲಿನಿಕ್ / ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನಿಯೋಜಿಸಲಾಗುವುದು.

ಸಹಿ/–
ವಲಯ ಆಯುಕ್ತರು (ದಕ್ಷಿಣ),
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿದ್ಯುತ್ ವ್ಯತ್ಯಯ ಇದೇ 19ರಿಂದ

ಬೆಂಗಳೂರು: ಭೂಗತ ಕೇಬಲ್ ಅಳವಡಿಕೆ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 19ರಿಂದ 24ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5.30ರ ತನಕ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಆರ್.ಬಿ.ಐ ಬಡಾವಣೆ, ಶ್ರೀನಿಧಿ ಬಡಾವಣೆ, ಜೆ.ಪಿ. ನಗರ 6ನೇ ಹಂತ, ಸಾರಕ್ಕಿ ತೋಟ, ರೋಸ್ ಗಾರ್ಡನ್, ಸಿಂಧೂರ್ ಕಲ್ಯಾಣಮಂಟಪ, ಸಿದ್ದೇಶ್ವರ ಥಿಯೇಟರ್, ಸಾರಕ್ಕಿ ಕೆರೆ, ಆಂಥೋನಿ ಕೈಗಾರಿಕಾ ಪ್ರದೇಶ, ರಾಜೀವ್ ಗಾಂಧಿ ರಸ್ತೆ, ಗಣಪತಿಪುರ, ಚುಂಚಘಟ್ಟ ರಸ್ತೆ-,ತಿಪ್ಪಸಂದ್ರ, ಚನ್ನಮ್ಮ ಗಾರ್ಡನ್.

10.30ರಿಂದ ಸಂಜೆ 6.30: ಜೆ.ಪಿ. ನಗರ ಐದನೇ ಹಂತ, ವಿನಾಯಕ ನಗರ,ನಂಜುಂಡೇಶ್ವರ ಬಡಾವಣೆ, ಪಾಂಡುರಂಗ ನಗರ, ಬಿ.ಜಿ. ರಸ್ತೆ, ಆದರ್ಶ ಅಪಾರ್ಟ್‌ಮೆಂಟ್, ಅಡಿಗ ಹೋಟೆಲ್, ಎಸ್ಟೀಮ್ ಪಾರ್ಕ್ ರಸ್ತೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು.

PUBLIC NOTICE

The General public are hereby notified that my clients entered into an agreement to purchase the Schedule property from its Owner: **M/s. COUNTRY CONDO'S LIMITED** {formerly owned by M/s Country Club (Bangalore) Ltd}, having its registered Office at No.8-2-703, Mahogany Complex, Ground Floor, Amrutha Valley, Road No.12, Banjara Hills, Hyderabad-500 034.

Apart from the said owner, if any other person/s have any manner of right, title and or interest or claim or charge or lien over the Schedule property or otherwise have any lawful objection/s for the sale of the Schedule property by the said owner, they are hereby called upon to file their objection/s in writing, along with the photocopies of documents on which they rely, with the undersigned, **within 10 days** from the date of publication of this notice. Objection/s received thereafter will not be binding on my clients.

SCHEDULE

All that piece and parcel of the industrial land measuring (i)1 Acre 07 Guntas bearing **Sy.No.101/3,** (ii)1 Acre 06 Guntas bearing **Sy.No.102/3,** (iii) 1 Acre bearing **Sy.No.103/17,** (iv) 11 Guntas bearing **Sy.No.103/1,** (v) 7 Guntas bearing **Sy.No.103/2** and (vi) 19 Guntas bearing **Sy.No.103/17, totally measuring 4 Acres 10 Guntas,** situated at **Kumbalgodu Village,** Kengeri Hobli, Bangalore South Taluk and bounded as follows :

East by : United Spirits' Industry
West by : Land of KIADB
North by : Land in Sy.No.146 & 148
South by : Dodda Aaladamara Road

Sd/- **S.F.Goutam Chand**
Advocate
Goutam Associates
No.60, 2nd Floor, Kanakapura Road,
Basavanagudi, Bengaluru–560 004

ಒಕ್ಕಲಿಗರ ಸಂಘದ ಚುನಾವಣೆ ಮುಂದೂಡಲು ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಕಾರಣ ರಾಜ್ಯ ಒಕ್ಕಲಿಗರ ಸಂಘದ ಚುನಾವಣೆ ಮುಂದೂಡಲು ನಿರ್ಧರಿಸಿದ್ದು, ಈ ಸಂಬಂಧ ಸೂಕ್ತ ನಿರ್ದೇಶನ ನೀಡಬೇಕು' ಎಂದು ಚುನಾವಣಾಧಿಕಾರಿ ಪಿ.ಎನ್.ರವೀಂದ್ರ ಅವರು ರಾಜ್ಯ ಸರ್ಕಾರಕ್ಕೆ ಶುಕ್ರವಾರ ಪತ್ರ ಬರೆದಿದ್ದಾರೆ.

'ಕೆಂಪೇಗೌಡ ವೈದ್ಯಕೀಯ ಸಂಶೋಧನಾ ಸಂಸ್ಥೆಯ (ಕಿಮ್ಸ್) ಆವರಣದಲ್ಲಿರುವ ಒಕ್ಕಲಿಗರ ಸಂಘದ ಕೇಂದ್ರ ಕಚೇರಿಯಲ್ಲಿ ಚುನಾವಣಾಧಿಕಾರಿಗಳ ಕಚೇರಿ ತೆರೆಯಲಾಗಿದೆ. ಸಾರ್ವಜನಿಕರು, ಸಂಘದ ಸದಸ್ಯರು ಹಾಗೂ ಚುನಾವಣೆಗೆ ಉಮೇದುವಾರಿಕೆ ಸಲ್ಲಿಸುವವರು ಇಲ್ಲಿಗೆ ನಿರಂತರವಾಗಿ ಭೇಟಿ ನೀಡುತ್ತಿದ್ದಾರೆ. ಕಿಮ್ಸ್ ಆಸ್ಪತ್ರೆಯಲ್ಲಿ ಕೋವಿಡ್ ಪೀಡಿತರಿಗೂ ಚಿಕಿತ್ಸೆ ನೀಡಲಾಗುತ್ತಿದೆ. ಇದರಿಂದ ಕೋವಿಡ್ ಹರಡುವ ಅಪಾಯ ಹೆಚ್ಚಿದೆ' ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತರೂ ಆಗಿರುವ ರವೀಂದ್ರ ಪತ್ರದಲ್ಲಿ ತಿಳಿಸಿದ್ದಾರೆ.

'ಸುಮಾರು 1.90 ಲಕ್ಷ ಮತದಾರರ ಪೈಕಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಈ ಜಿಲ್ಲೆಗಳಲ್ಲಿ ಸೋಂಕು ತೀವ್ರಗತಿಯಲ್ಲಿ ಏರಿಕೆಯಾಗುತ್ತಿದೆ. ಮತಪತ್ರಗಳನ್ನು ಬಳಸಿ ಚುನಾವಣೆ ನಡೆಸಬೇಕಿರುವುದರಿಂದ ಸಾಕಷ್ಟು ಸಿಬ್ಬಂದಿಯನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಮತ ಎಣಿಕೆಯ ಸಂದರ್ಭದಲ್ಲಿ ಸಿಬ್ಬಂದಿ ಹಗಲು ರಾತ್ರಿ ಕೆಲಸ ಮಾಡಬೇಕಾಗುತ್ತದೆ. ಹೀಗಾಗಿ ಮತದಾರರು, ಅಭ್ಯರ್ಥಿಗಳು ಹಾಗೂ ಅಧಿಕಾರಿಗಳ ಹಿತದೃಷ್ಟಿಯಿಂದ ಚುನಾವಣಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ಈಗಾಗಲೇ ಹೊರಡಿಸಿರುವ ಅಧಿಸೂಚನೆಯನ್ನು ತಾತ್ಕಾಲಿಕವಾಗಿ ಹಿಂಪಡೆದು ಚುನಾವಣೆ ಮುಂದೂಡಬೇಕು. ಕೋವಿಡ್ ಪರಿಸ್ಥಿತಿ ಅವಲೋಕಿಸಿ ಚುನಾವಣೆ ಪ್ರಕ್ರಿಯೆ ನಡೆಸುವ ಬಗ್ಗೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ಮನವಿ ಮಾಡಿದ್ದಾರೆ.

ಪ್ರಾಣಿಗಳಿಗೆ ನೀರು ಪೂರೈಸಲು ಅರಣ್ಯದಲ್ಲಿ ಕೊಳವೆಬಾವಿ: ಸಚಿವ

ಗಂಗಾವತಿ: 'ಅರಣ್ಯದಲ್ಲಿ ಕೊಳವೆಬಾವಿಗಳನ್ನು ಕೊರೆಸಿ, ಸೋಲಾರ್ ಸಂಪರ್ಕ ಕಲ್ಪಿಸಿ ವನ್ಯಜೀವಿಗಳಿಗೆ ನೀರು ಲಭ್ಯವಾಗುವಂತೆ ಮಾಡಲಾಗುವುದು' ಎಂದು ಅರಣ್ಯ ಸಚಿವ ಅರವಿಂದ ಲಿಂಬಾವಳಿ ತಿಳಿಸಿದರು.

'ಬೇಸಿಗೆಯಲ್ಲಿ ಅರಣ್ಯದಲ್ಲಿಯ ಕೆರೆ ಕಾಲುವೆ ಹಾಗೂ ಇತರೆ ಜಲಮೂಲಗಳು ಬತ್ತಿ ಹೋಗುತ್ತವೆ. ಅವುಗಳಿಗೆ ಕೊಳವೆಬಾವಿಗಳ ಮೂಲಕ ನೀರು ಹರಿಸಿ, ಪ್ರಾಣಿಗಳಿಗೆ ನೀರು ಲಭ್ಯವಾಗುವಂತೆ ನೋಡಿಕೊಳ್ಳಲಾಗುವುದು' ಎಂದು ತಿಳಿಸಿದರು.

'ಮೈಲಾರ್ಡ್' ಬೇಡ: ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೈಲಾರ್ಡ್' ಅಥವಾ 'ಯುವರ್ ಲಾರ್ಡ್ ಶಿಪ್' ಎಂಬ ಅತಿಯಾದ ಗೌರವಯುತ ಪದಗಳ ಬಳಕೆ ತಪ್ಪಿಸಿ 'ಸರ್' ರೀತಿಯ ಪದಗಳ್ನು ಬಳಕೆ ಮಾಡುವಂತೆ ವಕೀಲರಿಗೆ ಹೈಕೋರ್ಟ್ ನ್ಯಾಯಮೂರ್ತಿ ಪಿ. ಕೃಷ್ಣಭಟ್ ಮನವಿ ಮಾಡಿದರು.

'ನ್ಯಾಯಾಲಯ ಅಥವಾ ನ್ಯಾಯಾಧೀಶರನ್ನು ಉದ್ದೇಶಿಸಿ ಮಾತನಾಡುವಾಗ ಭಾರತೀಯರ ವಿಧಾನಗಳನ್ನು ಅನುಸರಿಸುವುದು ಸೂಕ್ತ' ಎಂದು ಮೌಖಿಕವಾಗಿ ತಿಳಿಸಿದರು.

ವಸಾಹತುಶಾಹಿ ಈ ಅಭ್ಯಾಸದ ಬಗ್ಗೆ ಪರಿಶೀಲನೆ ಕೋರಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಮುಂದೆ ಹಲವು ಅರ್ಜಿಗಳು ಇವೆ.

ರಾಜಸ್ಥಾನ ಹೈಕೋರ್ಟ್ ಮತ್ತು ಕೋಲ್ಕತ್ತ ಹೈಕೋರ್ಟ್‌ಗಳು 'ಮೈಲಾರ್ಡ್' ಅಥವಾ 'ಯುವರ್ ಲಾರ್ಡ್ ಶಿಪ್' ಎಂದು ನ್ಯಾಯಾಧೀಶರನ್ನು ಸಂಬೋಧಿಸುವುದನ್ನು ನಿಲ್ಲಿಸಬೇಕು ಎಂದು ತಿಳಿಸಿದ್ದವು. ಇದು ಸಂವಿಧಾನ ಪ್ರತಿಪಾದಿಸಿರುವ ಸಮಾನತೆಯ ಸಂದೇಶವನ್ನು ಗೌರವಿಸುವ ನಿರ್ಧಾರ ಎಂದು ರಾಜಸ್ಥಾನ ಹೈಕೋರ್ಟ್ ತಿಳಿಸಿತ್ತು.

ಕರ್ನಾಟಕ ಸರ್ಕಾರ
ಕರ್ನಾಟಕ ವಿಧಾನ ಪರಿಷತ್ತು,
ವಿಧಾನ ಪರಿಷತ್ತಿನ ಸಚಿವಾಲಯ, ಅಂಚೆ ಪೆಟ್ಟಿಗೆ ಸಂಖ್ಯೆ: 5079,
ವಿಧಾನಸೌಧ, ಬೆಂಗಳೂರು–560 001. ದೂರವಾಣಿ ಸಂಖ್ಯೆ 22258569.

ಸಂಖ್ಯೆ:ಕವಿಪ/ಅ-2/70/ವೈಕ/2000 ದಿನಾಂಕ: 07-04-2021

ಹಾಜರಾತಿ ತಿಳುವಳಿಕೆ ಪತ್ರ

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ದಲಾಯತ್ ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎಸ್. ಪ್ರಸನ್ನ ಕುಮಾರ್, ಆದ ನೀವು ದಿನಾಂಕ: **19.05.2020** ರಿಂದ ಕಛೇರಿ ಕೆಲಸಕ್ಕೆ ಅನಧಿಕೃತ ಗೈರು ಹಾಜರಾಗಿದ್ದು, ಹಲವಾರು ಬಾರಿ ಕಛೇರಿಗೆ ಹಾಜರಾಗಲು ತಿಳಿಸಿದ್ದರೂ ಸಹ ಕರ್ತವ್ಯದ ಮೇಲೆ ಹಾಜರಾಗಿರುವುದಿಲ್ಲ.

ಆದುದರಿಂದ, ನೀವು ಈ ಕೂಡಲೇ ಕರ್ತವ್ಯದ ಮೇಲೆ ಹಾಜರಾಗಬೇಕೆಂದು ಅಂತಿಮವಾಗಿ ಎಚ್ಚರಿಸಲಾಗಿದೆ. ಹಾಜರಾಗದಿದ್ದಲ್ಲಿ ನಿಯಮಾನುಸಾರ ಶಿಸ್ತಿನ ಕ್ರಮ ಜರುಗಿಸಲಾಗುವುದು.

ಸಹಿ/–
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

DIPR/DDU/AAPL/RO.166/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರದಲ್ಲಿ ಇಂದು

'ಮಹಿಳಾ ಸಾಹಿತ್ಯ ಸಂಪುಟಗಳು' ಕುರಿತು ವಿಚಾರ ಸಂಕಿರಣ (ಬೆಳಿಗ್ಗೆ 10.30): ಉದ್ಘಾಟನೆ–ಲೇಖಕಿ ಹೇಮಲತಾ ಮಹಿಷಿ, ಪ್ರಾಸ್ತಾವಿಕ ನುಡಿ–ಸವಿತಾ ಶ್ರೀನಿವಾಸ್, ಅತಿಥಿ–ಹಿರಿಯ ಲೇಖಕಿ ಮಲ್ಲಿಕಾ ಘಂಟಿ, ಅಧ್ಯಕ್ಷತೆ–ಮನು ಬಳಿಗಾರ್, 12ಕ್ಕೆ 'ಕಥೆ ಸಂಪುಟ' ವಿಚಾರ ಸಂಕಿರಣ–ಪದ್ಮಿನಿ ನಾಗರಾಜು, ನೇಮಿಚಂದ್ರ, ಮಧ್ಯಾಹ್ನ 2ಕ್ಕೆ 'ಸ್ತ್ರೀವಾದಿ ಚಿಂತನೆ ಸಂಪುಟ' ವಿಚಾರ ಸಂಕಿರಣ–ಧರಣೀದೇವಿ ಮಾಲಗತ್ತಿ, ಕೆ.ಎಸ್.ಚೈತ್ರ, ಆಯೋಜನೆ–ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ–ಕೃಷ್ಣರಾಜ ಪರಿಷನ್ಮಂದಿರ, ಪರಿಷತ್ತು, ಚಾಮರಾಜಪೇಟೆ

ವಿಶ್ವ ಆರೋಗ್ಯ ದಿನದ ಅಂಗವಾಗಿ 'ಸೀನಿಯರ್ ಕೇರ್ ಮೇಡ್ ಈಸಿ' ಕುರಿತು ವೆಬಿನಾರ್: ಭಾಗವಹಿಸುವವರು–ಮಣಿಪಾಲ್ ಆಸ್ಪತ್ರೆಯ ಆಂತರಿಕ ಔಷಧ ಸಲಹೆಗಾರರಾದ ಡಾ.ಬಸವರಾಜ ಕುಂಟೋಜಿ, ಡಾ.ದಿನೇಶ್ ವಿ.ಕಾಮತ್, ಮಲ್ಲೇಶ್ವರ ಸ್ವಾಭಿಮಾನ ಇನಿಷಿಯೇಟಿವ್ ಕಾರ್ಯದರ್ಶಿ ಸುಭಾಷಿಣಿ ಜಗನ್ನಾಥ್, ಸ್ತ್ರೀರೋಗ ತಜ್ಞೆ ಡಾ.ಮೀನಾಕ್ಷಿ ಭರತ್, ಆಯೋಜನೆ–ಮಣಿಪಾಲ್ ಆಸ್ಪತ್ರೆ ಮಲ್ಲೇಶ್ವರ, ಸಹಯೋಗ–ಡಿಎಚ್ ಬ್ರ್ಯಾಂಡ್‌ಸ್ಪಾಟ್, ಬೆಳಿಗ್ಗೆ 11.30

83ನೇ ಶ್ರೀರಾಮನವಮಿ ಅಂತರರಾಷ್ಟ್ರೀಯ ಸಂಗೀತೋತ್ಸವ: ಶ್ರೀಮದ್ ವಾಲ್ಮೀಕಿ ರಾಮಾಯಣ ಉಪನ್ಯಾಸ (ಬೆಳಿಗ್ಗೆ 8)–ವ್ಯಾಸರಾಜ ಮಠದ ವಿದ್ಯಾಶ್ರೀಶ ತೀರ್ಥರು, ಸಂಜೆ 6ಕ್ಕೆ ವಿಶಾಖ ಹರಿ ಅವರಿಂದ ಹರಿಕಥೆ, ಆಯೋಜನೆ: ಶ್ರೀ ರಾಮಸೇವಾ ಮಂಡಳಿ, (ಆನ್‌ಲೈನ್ ಕಾರ್ಯಕ್ರಮ- live. ramanavami.org)

ಬೋಟ್ ಅಪಘಾತ: ಮತ್ತಿಬ್ಬರ ಶವ ಪತ್ತೆ

ಮಂಗಳೂರು: ಅರಬ್ಬಿ ಸಮುದ್ರದಲ್ಲಿ ಸೋಮವಾರ ತಡರಾತ್ರಿ ಸಂಭವಿಸಿದ ಬೋಟ್ ಅಪಘಾತದಲ್ಲಿ ನಾಪತ್ತೆಯಾಗಿರುವ ಒಂಬತ್ತು ಮೀನುಗಾರರ ಪೈಕಿ, ಇಬ್ಬರು ಮೀನುಗಾರರ ಮೃತದೇಹ ಶುಕ್ರವಾರ ಸಂಜೆ ಪತ್ತೆಯಾಗಿದೆ. ಉಳಿದ 7 ಜನರಿಗೆ ಶೋಧ ಕಾರ್ಯ ಮುಂದುವರಿದಿದೆ.

ನೌಕಾಪಡೆ ಕಾರ್ಯಾಚರಣೆ ಮಾಡುವಾಗ ಎರಡು ಮೃತದೇಹಗಳು ಸಿಕ್ಕಿವೆ. ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಿಧನವಾರ್ತೆ

ಖಾದರ್ ಹಾಜಿ



ಬೆಂಗಳೂರು: ಸುನ್ನಿ ಸಮುದಾಯದ ಮುಂದಾಳುವಾದ ಉದ್ಯಮಿ ಎಸ್. ಎಸ್.ಎ. ಖಾದರ್ ಹಾಜಿ (80) ಶುಕ್ರವಾರ ಅಲ್ಪಕಾಲದ ಅಸೌಖ್ಯದ ಬಳಿಕ ನಗರದ ಆಸ್ಪತ್ರೆಯೊಂದರಲ್ಲಿ ನಿಧನರಾದರು. ಮಗ ಮತ್ತು ಮಗಳು ಇದ್ದಾರೆ.

ಅವರು ಕೇರಳದ ಜಾಗತಿಕ ವಿದ್ಯಾಕೇಂದ್ರ ಮರ್ಕಝ್ ನ ಉಪಾಧ್ಯಕ್ಷರಾಗಿದ್ದರು. ಬೆಂಗಳೂರಿನ ಮರ್ಕಿನ್ಸ್ ನ ಚೇರ್ಮನ್, ಖಾದ್ರಿಯಾ ಟ್ರಸ್ಟ್ ನ ಮತ್ತು ಕ್ವೆಸ್ಟ್ ಫೌಂಡೇಷನ್ ನ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದು, ಕೊಡುಗೈ ದಾನಿಯಾಗಿದ್ದರು. ರಾತ್ರಿ ಶಾಂತಿನಗರದ ಕಬರಸ್ತಾನದಲ್ಲಿ ಅಂತ್ಯಕ್ರಿಯೆ ನೆರವೇರಿತು.

ರೆಮ್‌ಡಿಸಿವಿರ್ ಅಕ್ರಮ: ಬಂಧನದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೆಮ್‌ಡಿಸಿವಿರ್ ಔಷಧಿಯ ಕೃತಕ ಅಭಾವ ಸೃಷ್ಟಿಸಿ, ಕಾಳಸಂತೆಯಲ್ಲಿ ವಿರುದ್ಧ ಎಫ್‌ಐಆರ್ ದಾಖಲಿಸಿ, ಬಂಧನ ಮಾಡಲಾಗುವುದು ಎಂದು ಗೃಹ ಮತ್ತು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ವಿಧಾನಸೌಧದಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳ ಜತೆ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ರೆಮ್‌ಡಿಸಿವಿರ್ ಪ್ರಾಣ ಉಳಿಸಲು ಇರುವ ಔಷಧ. ಇದನ್ನು ಕಾಳಸಂತೆಯಲ್ಲಿ ಮಾರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಎಂದರು.

ರೆಮ್‌ಡಿಸಿವಿರ್ ದಾಸ್ತಾನುದಾರರು ಯಾರು? ವಿತರಕರು ಯಾರು? ಬೇಡಿಕೆ ಸಲ್ಲಿಸಿದವರು ಯಾರು? ದಾಸ್ತಾನು ಎಲ್ಲಿದೆ ಸೇರಿದಂತೆ ಎಲ್ಲ ಮಾಹಿತಿಯನ್ನು ಕಲೆ ಹಾಕಲು ಸೂಚಿಸಲಾಗಿದೆ. ಇದರಿಂದ ಯಾವ ಹಂತದಲ್ಲಿ ಕೃತಕ ಅಭಾವ ಸೃಷ್ಟಿಸಿ, ಕಾಳಸಂತೆಯಲ್ಲಿ ಮಾರಾಟ ಮಾಡಲಾಗುತ್ತಿದೆ ಎಂಬುದನ್ನು ಪತ್ತೆ ಹಚ್ಚಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಬಸವರಾಜ ಬೊಮ್ಮಾಯಿ

ನೆರೆಯ ರಾಜ್ಯಗಳಿಂದ ಬರುವವರನ್ನು ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಿಸುವ ಉದ್ದೇಶದಿಂದ ಗಡಿಭಾಗದಲ್ಲಿ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲು ಆರೋಗ್ಯ ಇಲಾಖೆ ಸಚಿವರ ಜತೆ ಚರ್ಚೆ ಮಾಡುವುದಾಗಿ ಬೊಮ್ಮಾಯಿ ತಿಳಿಸಿದರು.

ಪೊಲೀಸರಿಗೆ ಚಿಕಿತ್ಸೆ: ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ 30 ಪೊಲೀಸ್ ಸಿಬ್ಬಂದಿಗೆ ಕೋವಿಡ್ ಪಾಸಿಟಿವ್ ಬಂದಿದೆ. ಒಟ್ಟು ಪೊಲೀಸ್ ಕುಟುಂಬದ 450 ಮಂದಿಗೆ ಕೋವಿಡ್ ಸೋಂಕು ತಗುಲಿದೆ. ಪೊಲೀಸ್ ಸಿಬ್ಬಂದಿಗೆ ಆಸ್ಪತ್ರೆಗಳಲ್ಲಿ ಅತ್ಯುತ್ತಮ ಚಿಕಿತ್ಸೆ ಸಿಗುವಂತೆ ನೋಡಿಕೊಳ್ಳುವ ಉದ್ದೇಶದಿಂದ ಎಡಿಜಿಪಿ ಮಟ್ಟದ ಅಧಿಕಾರಿಯೊಬ್ಬರನ್ನು ಸಮನ್ವಯ ಅಧಿಕಾರಿಯಾಗಿ ನೇಮಕ ಮಾಡಲಾಗಿದೆ ಎಂದು ಹೇಳಿದರು.

ಅಗ್ನಿ ಶಾಮಕ, ಗೃಹರಕ್ಷಕ, ಜೈಲು ಸಿಬ್ಬಂದಿ ಸೇರಿದಂತೆ ಎಲ್ಲ ಪೊಲೀಸರಿಗೂ ಅತ್ಯುತ್ತಮ ಚಿಕಿತ್ಸೆ ನೀಡಲಾಗುವುದು. ಚಿಕಿತ್ಸೆ ನೀಡಲು ಆಸ್ಪತ್ರೆಗಳು ನಿರಾಕರಿಸದಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದರು.

ಕೊರೊನಾದಿಂದ ರಕ್ಷಿಸಿಕೊಳ್ಳಲು ಪೊಲೀಸ್ ಸಿಬ್ಬಂದಿಗೆ ಮಾಸ್ಕ್ ಮತ್ತು ಶೀಲ್ಡ್ ಗಳನ್ನು ನೀಡಲಾಗುವುದು ಎಂದು ಬೊಮ್ಮಾಯಿ ತಿಳಿಸಿದರು.

ಕ್ರಮಕ್ಕೆ ಡಿಜಿಪಿ ಸೂಚನೆ

‘ಕೊರೊನಾ ಸೋಂಕಿತರ ಚಿಕಿತ್ಸೆಗೆ ಬಳಸುವ ರೆಮ್‌ಡಿಸಿವಿರ್ ಔಷಧಿ ಹಾಗೂ ಚುಚ್ಚುಮದ್ದುಗಳನ್ನು ಸರ್ಕಾರ ನಿಗದಿಪಡಿಸಿದ ದರಕ್ಕಿಂತ ದುಬಾರಿ ದರಕ್ಕೆ ಮಾರಾಟ ಮಾಡಿದರೆ ಕಠಿಣ ಕಾನೂನು ಕ್ರಮ ಜರುಗಿಸಬೇಕು’ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಈ ಸಂಬಂಧ ಹೊರಡಿಸಿರುವ ಸುತ್ತೋಲೆಯನ್ನು ರಾಜ್ಯದ ಎಲ್ಲ ಕಮಿಷನರ್ ಹಾಗೂ ಜಿಲ್ಲಾ ಎಸ್ಪಿಗಳಿಗೆ ಸುತ್ತೋಲೆ ಪ್ರತಿ ಕಳುಹಿಸಲಾಗಿದೆ.

‘ಕಾಳಸಂತೆಯಲ್ಲಿ ಔಷಧಿ ಹಾಗೂ ಚುಚ್ಚುಮದ್ದು ಮಾರಾಟ ಪ್ರಕರಣಗಳು ಕಂಡುಬಂದಲ್ಲಿ ಠಾಣಾಧಿಕಾರಿಗಳು ತಪ್ಪಿತಸ್ಥರನ್ನು ಪತ್ತೆ ಮಾಡಿ ಕಠಿಣ ಕ್ರಮ ಕೈಗೊಳ್ಳಬೇಕು. ಮಾಹಿತಿ ಇದ್ದರೆ ಗೌಪ್ಯ ತಪಾಸಣೆ ನಡೆಸಿ ಪ್ರಕರಣ ದಾಖಲಿಸಿಕೊಳ್ಳಬೇಕು. ಇಂಥ ಪ್ರಕರಣಗಳಲ್ಲಿ ಕೈಗೊಂಡ ಕ್ರಮದ ಬಗ್ಗೆ ಮುಖ್ಯ ಕಚೇರಿಗೆ ವರದಿ ಕಳುಹಿಸಬೇಕು’ ಎಂದೂ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಡಿಕೆಶಿಗೆ ಸಿಕ್ಕಿದ್ದು ಮಂಡಕ್ಕಿ ಮೂಟೆ: ಬಿಜೆಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಮಸ್ಕಿಯಲ್ಲಿ ಹಿಡಿದ ಎರಡು ಮೂಟೆಗಳಲ್ಲಿ ಸಿಕ್ಕಿದ್ದು ಮಂಡಕ್ಕಿಯೇ ಹೊರತು ಹಣವಲ್ಲ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನಕಾರ್ಯದರ್ಶಿ ಎನ್.ರವಿಕುಮಾರ್ ಹೇಳಿದ್ದಾರೆ.

ಈ ಕುರಿತು ವಿಡಿಯೊ ಒಂದನ್ನು ಬಿಡುಗಡೆ ಮಾಡಿರುವ ಅವರು, ಬಿಜೆಪಿ ಮತದಾರರಿಗೆ ಹಣ ಹಂಚುತ್ತಿದೆ ಎಂದು ಸುಳ್ಳು ಪ್ರಚಾರ ನಡೆಸಿರುವ ಶಿವಕುಮಾರ್ ಅವರು ಯಡಿಯೂರಪ್ಪ ಮತ್ತು ನಳಿನ್ ಕುಮಾರ್ ಕಟೀಲ್ ಅವರಲ್ಲಿ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದ್ದಾರೆ.

ರವಿಕುಮಾರ್

ಬಿಜೆಪಿಯವರು ಎರಡು ಚೀಲಗಳಲ್ಲಿ ಹಣ ಇಟ್ಟಿದ್ದರು ಎನ್ನಲಾದ ನಿಗದಿತ ಸ್ಥಳಕ್ಕೆ ಪೊಲೀಸರು ತೆರಳಿ ಆ ಚೀಲಗಳನ್ನು ಪರಿಶೀಲಿಸಿದಾಗ ಅದರಲ್ಲಿ ಮಂಡಕ್ಕಿ ಮಾತ್ರ ಇತ್ತು. ಒಂದು ಪೈಸೆಯೂ ಸಿಕ್ಕಿಲ್ಲ ಎಂದು ರವಿಕುಮಾರ್ ಸ್ಪಷ್ಟಪಡಿಸಿದರು.

ಈ ಸಂಬಂಧ ಚುನಾವಣಾ ಆಯೋಗಕ್ಕೆ ದೂರು ನೀಡಿ ಡಿ.ಕೆ. ಶಿವಕುಮಾರ್ ವಿರುದ್ಧ ಕ್ರಮಕ್ಕೆ ಒತ್ತಾಯಿಸಲಾಗುವುದು ಎಂದು ಹೇಳಿದರು.

ನೆಟ್ ಮೀಟರಿಂಗ್: ಶೀಘ್ರ ಸಭೆ

ಬೆಂಗಳೂರು: 5 ಕಿಲೊವಾಟ್‌ವರೆಗೆ ವಿದ್ಯುತ್ ಉತ್ಪಾದಿಸುವ ಸೌರಚಾವಣಿ ವಿದ್ಯುತ್ ಉತ್ಪಾದನಾ ಘಟಕಗಳಿಗೆ ನೆಟ್ ಮೀಟರಿಂಗ್ ಸೌಲಭ್ಯ ಹಿಂತೆಗೆದುಕೊಳ್ಳುವುದಿಲ್ಲ ಎಂಬ ಭರವಸೆ ನೀಡಿರುವ ಕೇಂದ್ರ ಸರ್ಕಾರದ ನಿಲುವನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಉಪಕರಣಗಳ ತಯಾರಕರ ಸಂಘ ಸ್ವಾಗತಿಸಿದೆ.

10 ಕಿಲೊವಾಟ್ ವಿದ್ಯುತ್‌ಗಿಂತ ಹೆಚ್ಚು ಉತ್ಪಾದಿಸುವ ಸೌರಚಾವಣಿ ವಿದ್ಯುತ್ ಉತ್ಪಾದನಾ ಘಟಕಗಳಿಗೆ ನೆಟ್ ಮೀಟರಿಂಗ್ ಸೌಲಭ್ಯ ಹಿಂತೆಗೆದುಕೊಂಡಿರುವುದಾಗಿ ಹೇಳಿದ್ದ ಕೇಂದ್ರ ಸರ್ಕಾರ, ಈ ಕುರಿತು 2020ರ ಡಿ.31ರಂದು ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದೆ.

‘ಈಗ 5 ಕೆವಿ ವಿದ್ಯುತ್ ಉತ್ಪಾದಿಸುವ ಸೌರಚಾವಣಿ ಘಟಕಗಳಿಗೆ ನೆಟ್‌ಮೀಟರಿಂಗ್ ಅವಕಾಶ ನೀಡುವ ಬಗ್ಗೆ ಚರ್ಚೆಗೆ ಕರೆಯಲಾಗಿದೆ. ಏ.30ರಂದು ಸಭೆ ನಡೆಯಲಿದೆ' ಎಂದು ಸಂಘದ ಅಧ್ಯಕ್ಷ ರಮೇಶ್ ಶಿವಣ್ಣ ಹೇಳಿದರು.

‘ನೆಟ್ ಮೀಟರಿಂಗ್ ವ್ಯವಸ್ಥೆ ಬಂದಿದ್ದರೆ, ನಾವು ಉತ್ಪಾದಿಸಿದ ಎಲ್ಲ ವಿದ್ಯುತ್ ಅನ್ನು ಸರ್ಕಾರಕ್ಕೆ ಯುನಿಟ್‌ಗೆ ₹3ರಂತೆ ಮಾರಾಟ ಮಾಡಬೇಕು. ಅದೇ ವಿದ್ಯುತ್ ಅನ್ನು ನಾವು ಖರೀದಿಸಿದರೆ ಯುನಿಟ್‌ಗೆ ಅಂದಾಜು ₹7 ನೀಡಬೇಕು. ಈ ವ್ಯವಸ್ಥೆ ಜಾರಿಗೆ ಬಂದಿದ್ದರೆ ಸೌರವಿದ್ಯುತ್ ಉತ್ಪಾದನೆಯನ್ನು ಉದ್ಯಮವಾಗಿ ತೆಗೆದುಕೊಳ್ಳಲು ಯಾರೂ ಮುಂದೆ ಬರುತ್ತಿರಲಿಲ್ಲ’ ಎಂದರು.

ಬನ್ನೇರುಘಟ್ಟ: 13 ಪ್ರಾಣಿಗಳ ದತ್ತು

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ 2021ರಲ್ಲಿ 13 ಪ್ರಾಣಿಗಳನ್ನು ಎಂಟು ಮಂದಿ ದತ್ತು ಪಡೆದಿದ್ದಾರೆ. ₹34 ಸಾವಿರ ದೇಣಿಗೆ ನೀಡಿದ್ದಾರೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕಿ ವನಶ್ರೀ ವಿಪಿನ್ ಸಿಂಗ್ ಮಾಹಿತಿ ನೀಡಿದ್ದಾರೆ..

ಆನೆ ವೇದಳಿಗೆ ಜನಿಸಿದ ಹೆಣ್ಣು ಮರಿ, ಜೀಬ್ರಾ ಕಾವೇರಿಗೆ ಜನಿಸಿದ ಹೆಣ್ಣು ಮರಿ, ಹಿಪ್ಪೋಪೊಟಮಸ್ ದಶ್ಯಗಳಿಗೆ ಜನಿಸಿದ ಗಂಡು ಮರಿ, ಲಂಗೂರ್ ರೇಷ್ಮಿಗೆ ಜನಿಸಿರುವ ಹೆಣ್ಣು ಮರಿ, ಲಂಗೂರ್ ಅಧಿತಿಗೆ ಜನಿಸಿದ ಹೆಣ್ಣು ಮರಿ, ಗ್ರೇವುಲ್ಫ್ ಅಕಿರಾಳಿಗೆ ಜನಿಸಿರುವ ಮೂರು ಗಂಡು ಮತ್ತು ಒಂದು ಹೆಣ್ಣು ಮರಿ ಮತ್ತು ಜಿರಾಫೆ ಗೌರಿ, 5 ವರ್ಷ ವಯಸ್ಸಿನ ಗಂಡು ಚಿರತೆ, 4 ವರ್ಷ ವಯಸ್ಸಿನ ಹೆಣ್ಣು ಚಿರತೆ ಸೇರಿದಂತೆ ಹಲವು ಪ್ರಾಣಿಗಳು ದತ್ತು ಪಡೆಯಲು ಲಭ್ಯವಿವೆ ಎಂದರು.

ಸಿಂಹಿಣಿ ಸನಾಳಿಗೆ ಜನಿಸಿರುವ ಮರಿಗಳ ಜೋಡಿ

ದತ್ತು ಪಡೆಯಲು ಆಸಕ್ತಿಯಿರುವವರು ಉದ್ಯಾನದ ಶಿಕ್ಷಣಾಧಿಕಾರಿ ಅವರನ್ನು educationbbp@gmail.com ಸಂಪರ್ಕಿಸಬಹುದು ಎಂದರು.

ಹುಲಿ ಸಂಖ್ಯೆ 19ಕ್ಕೆ: ಬನ್ನೇರುಘಟ್ಟ ಜೈವಿಕ ಉದ್ಯಾನದ ಹುಲಿ ಅನುಷ್ಕಾಳು ಫೆ.12ರಂದು ಎರಡು ಹೆಣ್ಣು ಮರಿಗಳಿಗೆ ಜನ್ಮನೀಡಿದ್ದಾಳೆ. ಮರಿಗಳು ಆರೋಗ್ಯವಾಗಿದ್ದು ತಾಯಿಯೊಂದಿಗೆ ಸಂತಸದಿಂದಿವೆ. ಇದರಿಂದ ಜೈವಿಕ ಉದ್ಯಾನದಲ್ಲಿ ಹುಲಿ ಸಂಖ್ಯೆ 19ಕ್ಕೇರಿದೆ

ಉದ್ಯಾನದ ಸಿಂಹಿಣಿ ಸನಾ ಜ.15ರಂದು ಎರಡು ಹೆಣ್ಣು ಮರಿಗಳಿಗೆ ಜನ್ಮ ನೀಡಿದ್ದು ತಾಯಿ ಮತ್ತು ಮರಿ ಆರೋಗ್ಯವಾಗಿವೆ. ಸಿಂಹಗಳ ಸಂಖ್ಯೆ 24ಕ್ಕೇರಿದೆ. ಈ ಮರಿಗಳಿಗೆ ನಾಮಕರಣ ಮಾಡಿಲ್ಲ. ದತ್ತು ತೆಗೆದುಕೊಳ್ಳಲು ದಾನಿಗಳು ಇಷ್ಟಪಟ್ಟಲ್ಲಿ ಅವರು ಸೂಚಿಸುವ ಹೆಸರಿಟ್ಟು ದತ್ತು ತೆಗೆದುಕೊಳ್ಳಲು ಅವಕಾಶವಿದೆ ಎಂದು ಉದ್ಯಾನದ ಅಧಿಕಾರಿಗಳು ತಿಳಿಸಿದ್ದಾರೆ.

ಆರೈಕೆ ಅಗತ್ಯ: ‘ಮರಿಗಳು ಹುಟ್ಟಿದಾಗ ಅತ್ಯಂತ ಸೂಕ್ಷ್ಮವಾಗಿ ಅವುಗಳನ್ನು ನೋಡಿಕೊಳ್ಳಬೇಕು. ಹಾಗಾಗಿ ಹುಟ್ಟಿದ ತಕ್ಷಣ ಹುಲಿ ಮತ್ತು ಸಿಂಹದ ಮರಿಗಳು ಸಾರ್ವಜನಿಕ ವೀಕ್ಷಣೆಗೆ ಲಭ್ಯವಿರುವುದಿಲ್ಲ. ಮೇಕೆ ಮರಿಗಳ ಹಾಲು ಮತ್ತು ಪೌಷ್ಟಿಕಾಂಶ ಟಾನಿಕ್‌ಗಳನ್ನು ಪ್ರಾಣಿ ಪಾಲಕರು ನೀಡುವ ಮೂಲಕ ಮರಿಗಳನ್ನು ಸಾಕಿದ್ದಾರೆ. ಮರಿಗಳು ಆರೋಗ್ಯವಾಗಿವೆ’ ಎಂದು ಉದ್ಯಾನದ ವೈದ್ಯ ಡಾ.ಉಮಾಶಂಕರ್ ತಿಳಿಸಿದರು.

‘ಸೂಚನಾ ಫಲಕ ಇಲ್ಲದ್ದೇ ಸಾವಿಗೆ ಕಾರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ’ ಯಲಚೇನಹಳ್ಳಿ ನಿಲ್ದಾಣದಲ್ಲಿ ಅಪಾಯದ ಕುರಿತು ಎಚ್ಚರಿಸುವ ಸೂಚನಾ ಫಲಕ ಇಲ್ಲದಿರುವುದೇ ವೃದ್ಧನ ಸಾವಿಗೆ ಕಾರಣ ಎಂದು ನಾಗರಿಕರು ದೂರಿದ್ದಾರೆ.

ಶೌಚಾಲಯ ಎಂದು ಭಾವಿಸಿ, ವಿದ್ಯುತ್ ಪರಿಕರ, ಕೊಳಚೆ ಪೈಪ್ ಮತ್ತಿತರ ಕೇಬಲ್‌ಗಳ ದುರಸ್ತಿಗೆ ಮೀಸಲಾಗಿರಿಸಿದ್ದ ಕೊಠಡಿಗೆ (ಯುಟಿಲಿಟಿ ಶಾಫ್ಟ್) ತೆರಳಿದ್ದ 65 ವರ್ಷದ ನಾಗರಾಜ್ ಎಂಬುವರು, ಇತ್ತೀಚೆಗೆ ಸಾವಿಗೀಡಾಗಿದ್ದರು. ಇದು ತಡವಾಗಿ ಗಮನಕ್ಕೆ ಬಂದಿತ್ತು.

ಯಲಚೇನಹಳ್ಳಿ ನಿಲ್ದಾಣದಲ್ಲಿರುವ ಕೊಠಡಿಯ ಎದುರು ಯಾವುದೇ ಸೂಚನಾ ಫಲಕ ಅಳವಡಿಸಿಲ್ಲ

‘ಇಂತಹ ಸ್ಥಳಗಳು ಅಪಾಯಕಾರಿಯಾಗಿರುತ್ತವೆ. ಆ ಕೊಠಡಿಗೆ ಬೀಗ ಹಾಕಬೇಕಾಗಿತ್ತು ಮತ್ತು ಇದು ಅಪಾಯಕಾರಿ ಸ್ಥಳ, ಪ್ರವೇಶ ನಿರ್ಬಂಧಿಸಿದೆ ಎಂದ ಎಚ್ಚರಿಕೆ ಫಲಕವನ್ನು ನಿಗಮವು ಅಳವಡಿಸಬೇಕಾಗಿತ್ತು. ಈ ವಿಷಯದಲ್ಲಿ ನಿಗಮವು ನಿರ್ಲಕ್ಷ್ಯ ವಹಿಸಿದೆ’ ಎಂದು ಭಾರ್ಗವಿ ಎಂಬುವರು ದೂರಿದ್ದಾರೆ.

‘ನಿಲ್ದಾಣದಲ್ಲಿ ಕಾರ್ಯನಿರ್ವಹಿಸುವ ಭದ್ರತಾ ಸಿಬ್ಬಂದಿಗೆ ಕನ್ನಡ ಬರುವುದಿಲ್ಲ. ಸೂಚನಾ ಫಲಕವೂ ಕನ್ನಡದಲ್ಲಿಲ್ಲ. ಮೆಟ್ರೊ ನಿಲ್ದಾಣಗಳಲ್ಲಿ ಇದರಿಂದ ಅನೇಕರಿಗೆ ತೊಂದರೆಯಾಗುತ್ತದೆ’ ಎಂದು ಅವರು ಹೇಳಿದ್ದಾರೆ.

‘ಸ್ಥಳೀಯ ಭಾಷೆಯಲ್ಲಿ ಮಾಹಿತಿ ಒದಗಿಸುವುದು ಎಷ್ಟು ಮಹತ್ವದ್ದು ಎಂಬುದನ್ನು ಬಿಎಂಆರ್‌ಸಿಎಲ್ ಇನ್ನು ಮುಂದಾದರೂ ತಿಳಿದುಕೊಳ್ಳಬೇಕು. ಕನ್ನಡದಲ್ಲಿಯೇ ಸೂಚನಾ ಫಲಕಗಳು, ಮಾಹಿತಿ ಫಲಕ ಇರಬೇಕು ಎಂದು ಈ ಹಿಂದೆ ಪ್ರತಿಭಟನೆ ಮಾಡಿದ್ದೆವು. ಆದರೂ ಪ್ರಯೋಜನವಾಗಿಲ್ಲ’ ಎಂದು ಮೆಟ್ರೊ ರೈಲು ಪ್ರಯಾಣಿಕ ಗುರು ಕೃಷ್ಣಮೂರ್ತಿ ಬೇಸರ ವ್ಯಕ್ತಪಡಿಸಿದರು.

‘ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು’ ಎಂದು ನಿಗಮದ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟ ಇವರ ಕಛೇರಿ.

ಸಂಖ್ಯೆ:ಲೋಇ:ಬಾವಿ:/ಪಿಬಿ/ಕೆಡಬ್ಲ್ಯು/2021-22/00123 ದಿನಾಂಕ: 12-04-2021

ಟೆಂಡರ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999-2000ರ ಪ್ರಕಾರ ಆಕ್ಟ 2000 ರ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ ಕೆ/ಡಬ್ಲ್ಯೂ-3,4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಬಾಗಲಕೋಟ ವಿಭಾಗದ ಅಡಿಯಲ್ಲಿಯ ಈ ಕೆಳಕಾಣಿಸಿದ ಕಾಮಗಾರಿಗಳ ಟೆಂಡರ ಅಹ್ವಾನಿಸಲಾಗಿದೆ.

ವರ್ಕ ಇಂಡೆಂಟ್ ನಂ: ಸಾಮಾನ್ಯ: 137248, 136954, 137244, 135124, 135162,137249, 137252

ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರಗಿಟ್ಟ ಮೊತ್ತ ರೂ 890.60 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ 55.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಟೆಂಡರ ಅಹ್ವಾನಿಸಲಾಗಿದೆ.

ಅ)	ಪ್ರೀಬಿಡ್ ಮಿಟಿಂಗ್ 28-04-2021 ರಂದು ಮಧ್ಯಾಹ್ನ 11-30 ಘಂಟೆಯವರೆಗೆ
ಬ)	ಟೆಂಡರ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ: 30-04-2021 ರಂದು ಮಧ್ಯಾಹ್ನ 5-30 ಘಂಟೆಯವರೆಗೆ
ಕ)	ಟೆಂಡರ ಸ್ವೀಕರಿಸುವ ದಿನಾಂಕ : 03-05-2021 ರಂದು ಮಧ್ಯಾಹ್ನ 4-00 ಘಂಟೆಯವರೆಗೆ
ಡ)	ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 04-05-2021 ರಂದು ಮಧ್ಯಾಹ್ನ 4.30 ಘಂಟೆಯವರೆಗೆ
ಬ)	ಆರ್ಥಿಕ ಬಿಡ್ ತೆರೆಯುವ ದಿನಾಂಕ : 05-05-2021 ರಂದು ಮಧ್ಯಾಹ್ನ 4.30 ಘಂಟೆಯವರೆಗೆ

ಕಾಮಗಾರಿಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ವೈಬ್‌ಸೈಟ್ ವಿಳಾಸ http://eproc.karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟ.

ವಾ.ಸಾ.ಇ/ಬಾಗಲಕೋಟ/26/2021-22/ದೇಶಪಾಂಡೆಪಬ್ಲಿಸಿಟಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

रजिस्ट्री सं. डी.एल.- 33004/99 REGD. No. D. L.-33004/99

भारत का राजपत्र
The Gazette of India

सी.जी.-डी.एल.-अ.-24032021-226070
CG-DL-E-24032021-226070

असाधारण
EXTRAORDINARY
भाग II—खण्ड 3—उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY

सं. 1185] नई दिल्ली, मंगलवार, मार्च 23, 2021/चैत्र 2, 1943
No. 1185] NEW DELHI, TUESDAY, MARCH 23, 2021/CHAITRA 2, 1943

ಭಾರತ ಸರ್ಕಾರ
ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಇಲಾಖೆ
ರಾಷ್ಟ್ರೀಯ ಹೆದ್ದಾರಿಗಳು, ಮಿನಿವಿಧಾನಸೌಧ, ಧಾರವಾಡ-580001

ಸಂ. ಎಲ್ ಎಕ್ಯೂ/ಎನ್ ಹೆಚ್-367/ರಾಹೆ/ಸಿಆರ್- /2021-22 ದಿನಾಂಕ: 23-03-2021

ಅಧಿಸೂಚನೆ
ನವದೆಹಲಿ, ದಿನಾಂಕ: 23ನೇ ಮಾರ್ಚ್ 2021

ಎಸ್.ಓ ನಂ. 1282(ಇ) ಕೇಂದ್ರ ಸರ್ಕಾರಕ್ಕೆ ಇದೀಗ ಸಾರ್ವಜನಿಕ ಉದ್ದೇಶಕ್ಕಾಗಿ ಇದರೊಂದಿಗೆ ಲಗತ್ತಿಸಿರುವ ಷೆಡ್ಯೂಲನಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದಲ್ಲಿ ಇರುವ ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನಲ್ಲಿ ಹಾಯ್ದುಹೋಗುವ ರಾಷ್ಟ್ರೀಯ ಹೆದ್ದಾರಿ ನಂ-367 ರಲ್ಲಿ (ಬಾಣಾಪೂರ - ಗದ್ದನಕೇರಿ ಸೆಕ್ಷನ್) ಕಿ ಮೀ 39.95 ರಿಂದ ಕಿ ಮೀ 52.00 ರವರೆಗೆ ದ್ವಿಪಥ ರಸ್ತೆ ನಿರ್ಮಾಣಕ್ಕಾಗಿ ಸಂರಕ್ಷಣೆ, ಕಾರ್ಯನಿರ್ವಹಣೆ ಹಾಗೂ ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನ ಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆ ಎಂಬುದು ಕಂಡುಬಂದಿರುತ್ತದೆ. ಆದ ಕಾರಣ ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956(1956 ರ 48) ರ ಪ್ರಕಾರ ಕಲಂ 3(ಎ) (1) ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇದರೊಂದಿಗೆ ಅನುಸೂಚಿಯಲ್ಲಿ ವಿವರಿಸಿರುವ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಈ ಮೂಲಕ ಅಧಿಸೂಚನೆ ನೀಡಿದೆ.

ಸದರಿ ಜಮೀನುಗಳ ಬಗ್ಗೆ ಭೂಮಾಲಿಕರು ಅಥವಾ ಯಾವುದೇ ರೀತಿಯ ಹಿತಾಸಕ್ತಿ ಉಳ್ಳವರು ಹಾಗೂ ಸಾರ್ವಜನಿಕ ಅವಗಾಹನೆಗಾಗಿ ಈ ಪ್ರಕಟಣೆ ಪ್ರಕಟಿಸಿದ ದಿನಾಂಕದಿಂದ 21 ದಿನಗಳೊಳಗಾಗಿ ಸದರಿ ಕಾಯ್ದೆಯ ಕಲಂ 3ಸಿ (1) ರ ಅನ್ವಯ ತಮ್ಮಗಳ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು ಸಕ್ಷಮ ಪ್ರಾಧಿಕಾರಿ ಅಂದರೆ ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿ ರಾಷ್ಟ್ರೀಯ ಹೆದ್ದಾರಿಗಳು, ಮಿನಿವಿಧಾನ ಸೌಧ, ಧಾರವಾಡ, 580001 ಇವರಿಗೆ ಲಿಖಿತ ರೂಪದಲ್ಲಿ ಸಕಾರಣಗಳೊಂದಿಗೆ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲೀ ಅಥವಾ ಅವರ ಪರ ವಕೀಲರನ್ನಾಗಲಿ ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ ಈ ಬಗ್ಗೆ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956 (1956 ರ 48) ರ ಪ್ರಕಾರ ನಿಯಮ 3ಸಿ(2) ರಂತೆ ಸಕ್ಷಮ ಪ್ರಾಧಿಕಾರ ಮಾಡಿದ ಆದೇಶವು ಅಂತಿಮವಾಗಿರುತ್ತದೆ.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕಾಶೆಗಳು ಮೇಲೆ ಕಾಣಿಸಿದ ಸಕ್ಷಮ ಪ್ರಾಧಿಕಾರದಲ್ಲಿ ಲಭ್ಯವಿರುತ್ತದೆ ಮತ್ತು ಈ ಜಮೀನುಗಳ ಬಗ್ಗೆ ಹಿತಾಸಕ್ತಿ ಉಳ್ಳವರು ಸಕ್ಷಮ ಪ್ರಾಧಿಕಾರಿಯವರ ಕಚೇರಿಯಲ್ಲಿ ಪರಿಶೀಲಿಸಬಹುದಾಗಿರುತ್ತದೆ.

ವಿ.ಸೂ : ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು ಯಾವುದೇ ಕ್ರಯವಿಕ್ರಯ, ಭೋಗ್ಯ ಇತರೆ ದಸ್ತಾವೇಜುಗಳನ್ನು ಮಾಡುವಂತಿಲ್ಲ ಹಾಗೂ ಯಾವುದೇ ಅಭಿವೃದ್ಧಿಕಾರ್ಯವನ್ನು ಕೈಗೊಳ್ಳಬಾರದೆಂದು ಈ ಮೂಲಕ ಸೂಚಿಸಿದೆ.

ಸಹಿ/- ಎಸ್.ವೈ. ಭಜಂತ್ರಿ
ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಕ್ಷಮ ಪ್ರಾಧಿಕಾರಿ,
ರಾ ಹೆ-367 (ಬಾಣಾಪೂರ-ಗದ್ದನಕೇರಿ ವಿಭಾಗ)
ರಾಷ್ಟ್ರೀಯ ಹೆದ್ದಾರಿಗಳು, ಮಿನಿವಿಧಾನ ಸೌಧ, ಧಾರವಾಡ -580001

ವಾಸಾಸಂಇ/ಧಾ ಯಕ್ಷಿ/47/2021-22

ಅನುಸೂಚಿ

ಕರ್ನಾಟಕ ರಾಜ್ಯದ ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನಲ್ಲಿ ಹಾಯ್ದುಹೋಗಿರುವ ರಾಷ್ಟ್ರೀಯ ಹೆದ್ದಾರಿ ನಂ-367 ರಲ್ಲಿ (ಬಾಣಾಪೂರ-ಗದ್ದನಕೇರಿ ಸೆಕ್ಷನ್) ಕಿ ಮೀ 39.95 ರಿಂದ ಕಿ ಮೀ 52.00 ರವರೆಗೆ ಅವಶ್ಯಕವಾಗಿರುವ ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ – ಇಪಿಸಿ ಮೋಡ್.

ರಾಜ್ಯ : ಕರ್ನಾಟಕ				ಜಿಲ್ಲೆ : ಗದಗ	
ಕ್ರಸಂ	ಸರ್ವೇ ನಂ	ಜಮೀನಿನ ವಿವರಣೆ	ಜಮೀನಿನ ತರಹೆ	ವಿಸ್ತೀರ್ಣ (ಚದರ ಮೀಟರಗಳಲ್ಲಿ)	ವಿಸ್ತೀರ್ಣ (ಹೆಕ್ಟೇರಗಳಲ್ಲಿ)
1	2	3	4	5	6
ತಾಲೂಕ : ಗಜೇಂದ್ರಗಡ				ಗ್ರಾಮ : ಪುರ್ತಗೇರಿ	
1	11	ಖಾಸಗಿ	ಖುಷ್ಕಿ	32.4520000	0.0032452
2	23	ಖಾಸಗಿ	ಖುಷ್ಕಿ	53.9710000	0.0053971
3	26	ಖಾಸಗಿ	ಖುಷ್ಕಿ	28.5920000	0.0028592
4	9	ಖಾಸಗಿ	ಖುಷ್ಕಿ	87.5990000	0.0087599
ತಾಲೂಕ : ಗಜೇಂದ್ರಗಡ				ಗ್ರಾಮ : ರಾಜೂರ	
1	1/2	ಖಾಸಗಿ	ಖುಷ್ಕಿ	48.9720000	0.0048972
2	209/1	ಖಾಸಗಿ	ಖುಷ್ಕಿ	94.5870000	0.0094587
3	223/1	ಖಾಸಗಿ	ಖುಷ್ಕಿ	63.4680000	0.0063468
4	223/3	ಖಾಸಗಿ	ಖುಷ್ಕಿ	71.1490000	0.0071149
5	ಗ್ರಾಮ ಠಾಣಾ	ಸರಕಾರಿ	ಖುಷ್ಕಿ	12.0670000	0.0012067
ತಾಲೂಕ : ಗಜೇಂದ್ರಗಡ				ಗ್ರಾಮ : ಉಣಚಗೇರಿ	
1	1	ಖಾಸಗಿ	ಖುಷ್ಕಿ	358.2540000	0.0358254
2	102	ಖಾಸಗಿ	ಖುಷ್ಕಿ	849.2410000	0.0849241
3	103	ಖಾಸಗಿ	ಖುಷ್ಕಿ	1,212.4050000	0.1212400
4	104/1	ಖಾಸಗಿ	ಖುಷ್ಕಿ	206.9810000	0.0206981
5	104/2	ಖಾಸಗಿ	ಖುಷ್ಕಿ	141.2410000	0.0141241
6	137/1	ಖಾಸಗಿ	ಖುಷ್ಕಿ	496.1910000	0.0496191
7	137/4	ಖಾಸಗಿ	ಖುಷ್ಕಿ	205.2440000	0.0205244
8	138	ಖಾಸಗಿ	ಖುಷ್ಕಿ	390.0850000	0.0390085
9	139/1	ಖಾಸಗಿ	ಖುಷ್ಕಿ	351.9020000	0.0351902
10	159	ಖಾಸಗಿ	ಖುಷ್ಕಿ	920.8710000	0.0920871
11	2/14	ಖಾಸಗಿ	ಖುಷ್ಕಿ	91.6590000	0.0091659
12	2/6	ಖಾಸಗಿ	ಖುಷ್ಕಿ	128.8250000	0.0128825
13	2/9	ಖಾಸಗಿ	ಖುಷ್ಕಿ	58.7670000	0.0058767
14	20	ಖಾಸಗಿ	ಖುಷ್ಕಿ	72.0320000	0.0072032
15	22	ಖಾಸಗಿ	ಖುಷ್ಕಿ	458.9000000	0.0458900
16	277	ಖಾಸಗಿ	ಖುಷ್ಕಿ	151.6180000	0.0151618
17	278	ಖಾಸಗಿ	ಖುಷ್ಕಿ	113.6550000	0.0113655
18	279	ಖಾಸಗಿ	ಖುಷ್ಕಿ	367.5120000	0.0367512
19	282	ಖಾಸಗಿ	ಖುಷ್ಕಿ	48.6250000	0.0048625
20	3	ಖಾಸಗಿ	ಖುಷ್ಕಿ	94.0720000	0.0094072
21	306	ಖಾಸಗಿ	ಖುಷ್ಕಿ	24.2210000	0.0024221
22	34	ಖಾಸಗಿ	ಖುಷ್ಕಿ	905.5790000	0.0905579
23	36	ಖಾಸಗಿ	ಖುಷ್ಕಿ	600.7330000	0.0600733
24	92	ಖಾಸಗಿ	ಖುಷ್ಕಿ	331.3900000	0.0331390
25	94	ಖಾಸಗಿ	ಖುಷ್ಕಿ	910.2370000	0.0910237
26	96	ಖಾಸಗಿ	ಖುಷ್ಕಿ	790.1980000	0.0790198
27	97	ಖಾಸಗಿ	ಖುಷ್ಕಿ	274.3460000	0.0274346
28	ಹಳ್ಳ	ಸರಕಾರಿ	ಖುಷ್ಕಿ	90.8700000	0.0090870
29	ರಸ್ತೆ	ಸರಕಾರಿ	ಖುಷ್ಕಿ	58.7370000	0.0058737
30	ರಸ್ತೆ	ಸರಕಾರಿ	ಖುಷ್ಕಿ	116.3860000	0.0116386
31	ರಸ್ತೆ	ಸರಕಾರಿ	ಖುಷ್ಕಿ	86.7640000	0.0086764
ಒಟ್ಟು				11,400.3980 ಚದರ ಮೀಟರಗಳು	1.1400 ಹೆಕ್ಟರ್‌ಗಳು

[F. No. NH-12014/29/2014-KNT-(P-6)/3A2]
ರಾಜೇಶ್ ಗುಪ್ತ, ನಿರ್ದೇಶಕರು

ಸಾರಿಗೆ ಸಂಸ್ಥೆಯ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಎಫ್.ಎಚ್. ಜಕ್ಕಪ್ಪನವರ ಮನವಿ

‘ಮುಷ್ಕರ ಕೈಬಿಟ್ಟು ಕರ್ತವ್ಯಕ್ಕೆ ಹಾಜರಾಗಿ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳನ್ನು ಖಾಸಗೀಕರಣಗೊಳಿಸುವ ಹುನ್ನಾರ ನಡೆಯುತ್ತಿದೆ. ಎಸ್‌ಸಿ ಮತ್ತು ಎಸ್‌ಟಿ ನೌಕರರೇ ಇದರ ಮೊದಲ ಬಲಿಪಶುವಾಗಲಿದ್ದಾರೆ. ಹಾಗಾಗಿ, ಮುಷ್ಕರ ಕೈಬಿಟ್ಟು ಕರ್ತವ್ಯಕ್ಕೆ ಹಾಜರಾಗಿ ಸಂಸ್ಥೆಗಳನ್ನು ಉಳಿಸಬೇಕು’ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ನೌಕರರ ಸಂಘದ ಅಧ್ಯಕ್ಷ ಎಫ್.ಎಚ್. ಜಕ್ಕಪ್ಪನವರ ಮನವಿ ಮಾಡಿದರು.

‘ಸರ್ಕಾರ ಮುಷ್ಕರ ನಿರತರನ್ನು ನಡೆಸಿಕೊಳ್ಳುತ್ತಿರುವ ರೀತಿ ಹಾಗೂ ಬಿಎಂಟಿಸಿಯನ್ನು ಖಾಸಗೀಕರಣಗೊಳಿಸಬೇಕೆಂಬ ಸಂಸದ ತೇಜಸ್ವಿ ಸೂರ್ಯ ಅವರ ಹೇಳಿಕೆ ಇದಕ್ಕೆ ಪುಷ್ಟಿ ನೀಡುತ್ತವೆ. ನಿಗಮಗಳಲ್ಲಿರುವ ಮೀಸಲಾತಿ ಇಲ್ಲವಾಗಿಸುವ ಉದ್ದೇಶ ಇದರ ಹಿಂದೆ ಅಡಗಿದೆ. ಅದಕ್ಕಾಗಿ ಸರ್ಕಾರ ಮುಷ್ಕರವನ್ನು ಬಳಸಿಕೊಳ್ಳುತ್ತಿದೆ. ಈ ಬೆಳವಣಿಗೆಗಳ ಹಿಂದೆ ಆರ್‌ಎಸ್‌ಎಸ್ ಇದೆ’ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

‘ರಾಜ್ಯದಲ್ಲಿ 1.11 ಲಕ್ಷ ಸಾರಿಗೆ ನೌಕರರಿದ್ದಾರೆ. ಈ ಪೈಕಿ ಚಾಲಕ, ನಿರ್ವಾಹಕರು ಹಾಗೂ ಕಾರ್ಯಾಗಾರಗಳಲ್ಲಿರುವವರ ಸಂಖ್ಯೆ 98,159. ಇದರಲ್ಲಿ ಎಸ್‌ಸಿ ಮತ್ತು ಎಸ್‌ಟಿ ನೌಕರರು ಅಂದಾಜು 40 ಸಾವಿರ ಇದ್ದಾರೆ. ಸರ್ಕಾರದ ಶಿಸ್ತುಕ್ರಮಕ್ಕೆ ಗುರಿಯಾಗಿರುವ ಮುಷ್ಕರ ನಿರತರಲ್ಲಿ ಶೇ 40ರಷ್ಟು ಮಂದಿ ಈ ಸಮುದಾಯದವರೇ ಇದ್ದಾರೆ. ಮುಷ್ಕರ ಬೆಂಬಲಿಸಿದರೆ, ಈ ಸಮುದಾಯಗಳ ಉದ್ಯೋಗಕ್ಕೆ ಕುತ್ತು ಬರುತ್ತದೆ. ಹಾಗಾಗಿ, ಮುಷ್ಕರದಿಂದ ಎಲ್ಲರೂ ಹಿಂದೆ ಸರಿಯಬೇಕು’ ಎಂದರು.

ಚಾಲಕನ ಕುಟುಂಬಕ್ಕೆ ₹30 ಲಕ್ಷ ಪರಿಹಾರ

ಹುಬ್ಬಳ್ಳಿ: ಜಮಖಂಡಿ ತಾಲ್ಲೂಕಿನ ಕವಟಗಿ ಪುನರ್ವಸತಿ ಕೇಂದ್ರದ ಬಳಿ ಶುಕ್ರವಾರ ಬಸ್ ಚಾಲನೆ ಮಾಡುವಾಗ ಕಲ್ಲು ತೂರಾಟದಲ್ಲಿ ಗಾಯಗೊಂಡು ಮೃತಪಟ್ಟಿರುವ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಾಹನ ಚಾಲಕ ನಬಿ ರಸೂಲ್ ಆವಟಿ (59) ಅವರ ಕುಟುಂಬ ಸದಸ್ಯರಿಗೆ ₹30 ಲಕ್ಷ ಪರಿಹಾರ ನೀಡಲಾಗಿದೆ. ಮೃತ ಚಾಲಕನ ಮನೆಗೆ ಭೇಟಿ ನೀಡಿರುವ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ಬಾಜಪೇಯಿ ಅವರು, ಸಾಂತ್ವನ ಹೇಳಿ, ಪರಿಹಾರದ ಚೆಕ್ ನೀಡಿದರು.

ವೇತನ ಹೆಚ್ಚಳಕ್ಕೆ ಸರ್ಕಾರ ಬದ್ಧ: ಸಚಿವ ಹೆಬ್ಬಾರ್

ಮುಂಡಗೋಡ (ಉತ್ತರ ಕನ್ನಡ): ‘ಸಾರಿಗೆ ಸಿಬ್ಬಂದಿಯನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸುವುದು ಹಾಗೂ 6ನೇ ವೇತನ ಆಯೋಗದ ಶಿಫಾರಸ್ಸಿನಂತೆ ವೇತನ ಹೆಚ್ಚಿಸುವುದು ಯಾವುದೇ ಕಾರಣಕ್ಕೂ ಸಾಧ್ಯವಿಲ್ಲ’ ಎಂದು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ ಹೇಳಿದರು.

ತಾಲ್ಲೂಕಿನ ಮೈನಳ್ಳಿ ಗ್ರಾಮದಲ್ಲಿ ಬಾಬು ಜಗಜೀವನ್ ರಾಂ ಸಭಾಭವನ ನಿರ್ಮಾಣಕ್ಕೆ ಶುಕ್ರವಾರ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

‘ಆದರೆ ಈಗಾಗಲೆ ಭರವಸೆ ನೀಡಿದಂತೆ ವೇತನ ಹೆಚ್ಚಳಕ್ಕೆ ಸರ್ಕಾರ ಬದ್ಧವಾಗಿದೆ. ಸಾರಿಗೆ ನಿಗಮದ ಬೇಡಿಕೆ ಈಡೇರಿಸಿದರೆ ಇನ್ನುಳಿದ 67 ನಿಗಮಗಳಿಗೂ ಅನ್ವಯಿಸುತ್ತದೆ. ಅನುಭವದ ಕೊರತೆಯಿರುವ ಕೆಲ ರಾಜಕಾರಣಿಗಳು ಈ ಮುಷ್ಕರಕ್ಕೆ ಬೆಂಬಲ ನೀಡುವ ಮಾತುಗಳನ್ನಾಡುತ್ತಿರುವುದು ಸರಿಯಲ್ಲ’ ಎಂದರು.

ವಿವಿಧೆಡೆ 12 ಸಿಬ್ಬಂದಿ ಬಂಧನ

ಬೆಂಗಳೂರು: ಸಾರಿಗೆ ನೌಕರರ ಮುಷ್ಕರಕ್ಕೆ ಪ್ರಚೋದನೆ ಹಾಗೂ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಮೇರೆಗೆ ಈಶಾನ್ಯ ಸಾರಿಗೆ ಸಂಸ್ಥೆಗೆ ಸೇರಿದ 7 ಜನ ಸಿಬ್ಬಂದಿಯನ್ನು ಬಂಧಿಸಲಾಗಿದೆ.

ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆಯ ಹುಬ್ಬಳ್ಳಿ ಗ್ರಾಮಾಂತರ ಘಟಕ-1ರ ಐದು ಜನ ಸಿಬ್ಬಂದಿಯನ್ನು ಬಂಧಿಸಲಾಗಿದೆ ಎಂದು ಸಂಸ್ಥೆಯ ಅಧಿಕಾರಿಗಳು ತಿಳಿಸಿದ್ದಾರೆ

ಹಾಸನ: ಎರಡು ಬಸ್ಸುಗಳಿಗೆ ಕಲ್ಲು

ಹಾಸನ: ತಾಲ್ಲೂಕಿನ ಹಗರೆ ಸಮೀಪದ ಕಡದರವಳ್ಳಿ ಬಳಿ ಶುಕ್ರವಾರ ಸಂಜೆ ಅಪರಿಚಿತರು ಸಾರಿಗೆ ಸಂಸ್ಥೆಯ ಎರಡು ಬಸ್‌ಗಳ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಹಾಸನ ಡಿಪೊಗೆ ಸೇರಿದ ಹಾಸನ- ಚಿಕ್ಕಮಗಳೂರು ಹಾಗೂ ಬೇಲೂರು-ಹಾಸನ ಮಾರ್ಗದಲ್ಲಿ ಸಂಚರಿಸುತ್ತಿದ್ದ ಬಸ್‌ಗಳಿಗೆ ಕಲ್ಲು ಎಸೆದಿದ್ದರಿಂದ, ಗಾಜುಗಳು ಪುಡಿಯಾಗಿವೆ. ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಕೆಎಸ್‌ಆರ್‌ಟಿಸಿ ನೌಕರರ ಮುಷ್ಕರದ ನಡುವೆಯೂ ಗುರುವಾರ ಜಿಲ್ಲೆಯಲ್ಲಿ 182 ಸಾರಿಗೆ ಸಂಸ್ಥೆ ಬಸ್‌ಗಳು ಹಾಸನದಿಂದ ಸಂಚಾರ ನಡೆಸಿದವು. 364 ಸಿಬ್ಬಂದಿ ಕರ್ತವ್ಯಕ್ಕೆ ಹಾಜರಾಗಿದ್ದರು.

‘ಸರ್ಕಾರ- ಕೋಡಿಹಳ್ಳಿ ಮಧ್ಯೆ ಅಪವಿತ್ರ ಮೈತ್ರಿ’: ಹುಬ್ಬಳ್ಳಿ ವರದಿ: ‘ಸಾರಿಗೆ ನೌಕರರ ಮುಷ್ಕರಕ್ಕೆ ಕರೆ ಕೊಟ್ಟಿರುವ ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ಮತ್ತು ರಾಜ್ಯ ಸರ್ಕಾರದ ಮಧ್ಯೆ ಅಪವಿತ್ರ ಮೈತ್ರಿ ನಡೆದಿದೆ. ಹೋರಾಟದ ದಿಕ್ಕು ದಾರಿ ತಪ್ಪಿದ್ದು, ಸಾರ್ವಜನಿಕರಿಗೆ ಹೆಚ್ಚಿನ ತೊಂದರೆಯಾಗುತ್ತಿದೆ. ಹಾಗಾಗಿ, ನೌಕರರು ಮುಷ್ಕರ ಕೈಬಿಟ್ಟು ಕರ್ತವ್ಯಕ್ಕೆ ಹಾಜರಾಗಬೇಕು’ ಎಂದು ಕಾರ್ಮಿಕ ಮುಖಂಡ ದೇವಾನಂದ ಜಗಾಪುರ ಹೇಳಿದರು.

‘ರೈತರ ಸಮಸ್ಯೆಗಳ ಬಗ್ಗೆಯೇ ಸರಿಯಾಗಿ ಗಮನ ಹರಿಸದ ಚಂದ್ರಶೇಖರ್ ಅವರು, ತಮಗೆ ಸಂಬಂಧವಿಲ್ಲದ ಸಾರಿಗೆ ನೌಕರರ ಪರ ಹೋರಾಟಕ್ಕೆ ಇಳಿದಿದ್ದಾರೆ. ಮುಷ್ಕರಕ್ಕೆ ಕರೆ ಕೊಡುವುದಕ್ಕೆ ಮುಂಚೆ ಅವರು, ಕಾರ್ಮಿಕ ಹಾಗೂ ರೈತ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಆಗಬಹುದಾದ ಸಾಧಕ-ಬಾಧಕಗಳ ಬಗ್ಗೆಯೂ ಚರ್ಚಿಸಿಲ್ಲ’ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

ಪ್ರಜಾವಾಣಿ

ಜಸ್ಟ್ ಮ್ಯೂಸಿಕ್- ಹಿತಾನುಭವ

ಆಭರಣ ಮತ್ತು ಮೋರ್ಚಿಂಗ್!



ವಿದ್ವಾನ್ ಬಿ.ರಾಜಶೇಖರ್ ಅವರು ಮೋರ್ಚಿಂಗ್ ನಾದ ನಿಲಿಸಿ ಆಭರಣ ತಯಾರಿಕೆಯಲ್ಲಿ ತೊಡಗುವ ನಿರ್ಧಾರ ಕೈಗೊಳ್ಳುತ್ತಾರೆ. ಆಗ ವಿದ್ವಾನ್ ಕದ್ರಿ ಗೋಪಾಲನಾಥರು ಹೇಳಿದ್ದೇನು ಗೊತ್ತಾ?

https://bit.ly/20SF0n8

ಹತ್ತು ದಿನ ಪೂರೈಸಿದ ಮುಷ್ಕರ

ಕಾಯಂ ನೌಕರರ ಸೇವೆಗೂ ಕುತ್ತು

ಬೆಂಗಳೂರು: ವೇತನ ಪರಿಷ್ಕರಣೆಗೆ ಆಗ್ರಹಿಸಿ ನಾಲ್ಕು ಸಾರಿಗೆ ನಿಗಮಗಳ ನೌಕರರು ನಡೆಸುತ್ತಿರುವ ಮುಷ್ಕರ ಹತ್ತು ದಿನಗಳನ್ನು ಪೂರೈಸಿದೆ. ಸರ್ಕಾರವೂ ಮತ್ತಷ್ಟು ಕಠಿಣ ಕ್ರಮಗಳತ್ತ ಹೆಜ್ಜೆ ಇರಿಸಿದ್ದು, ಮುಷ್ಕರದಲ್ಲಿ ಭಾಗಿಯಾಗಿರುವ ಕಾಯಂ ನೌಕರರನ್ನೂ ಸೇವೆಯಿಂದ ವಜಾಗೊಳಿಸುವ ಪ್ರಕ್ರಿಯೆಯನ್ನು ಶುಕ್ರವಾರದಿಂದ ಆರಂಭಿಸಿದೆ.

ಬಿಎಂಟಿಸಿ 240 ಕಾಯಂ ನೌಕರರನ್ನು ಸೇವೆಯಿಂದ ವಜಾಗೊಳಿಸಿ ಶುಕ್ರವಾರ ಆದೇಶ ಹೊರಡಿಸಿದೆ. ಈ ನೌಕರರನ್ನು ಅಮಾನತುಗೊಳಿಸಿ ಸೋಮವಾರ ಆದೇಶ ಹೊರಡಿಸಲಾಗಿತ್ತು. ತರಬೇತಿ ಮತ್ತು ಪ್ರೊಬೇಷನರಿ ಅವಧಿಯಲ್ಲಿದ್ದ 580 ನೌಕರರನ್ನು ಈ ಹಿಂದೆಯೇ ವಜಾ ಮಾಡಲಾಗಿತ್ತು. ಬಿಎಂಟಿಸಿಯಿಂದ ವಜಾಗೊಂಡ ಕಾರ್ಮಿಕರ ಸಂಖ್ಯೆ 820ಕ್ಕೆ ಏರಿದೆ. 727 ಮಂದಿ ಅಮಾನತಿನಲ್ಲಿದ್ದಾರೆ.

ಕೆಎಸ್‌ಆರ್‌ಟಿಸಿಯಲ್ಲಿ ತರಬೇತಿಯಲ್ಲಿರುವ ಸುಮಾರು 500 ನೌಕರರಿಗೆ ಶನಿವಾರ ಬೆಳಿಗ್ಗೆ 11.30ರೊಳಗೆ ಕರ್ತವ್ಯಕ್ಕೆ ಹಾಜರಾಗುವಂತೆ ಗಡುವು ವಿಧಿಸಿದೆ. ಶನಿವಾರವೂ ಕರ್ತವ್ಯಕ್ಕೆ ಹಾಜರಾಗದವರ ವಿರುದ್ಧ ಕಠಿಣ ಕ್ರಮ ಜರುಗಿಸಲು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ.

‘ತರಬೇತಿಯಲ್ಲಿರುವ ನೌಕರರಿಗೆ ವಾರದ ಹಿಂದೆಯೇ ನೋಟಿಸ್ ಜಾರಿ ಮಾಡಲಾಗಿತ್ತು. ಸುಮಾರು 500 ನೌಕರರು ಕಾಲಾವಕಾಶ ಕೋರಿದ್ದರು. ಶನಿವಾರ ಬೆಳಿಗ್ಗೆಯವರೆಗೂ ಗಡುವು ವಿಸ್ತರಿಸಲಾಗಿದೆ. ಇನ್ನೂ ಹೆಚ್ಚಿನ ಕಾಲಾವಕಾಶ ನೀಡುವುದಿಲ್ಲ’ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಕಳಸದ ತಿಳಿಸಿದರು.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಶುಕ್ರವಾರ ನಾಲ್ವರು ನೌಕರರನ್ನು ವಜಾ ಮಾಡಿದೆ. ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಶುಕ್ರವಾರ 10 ನೌಕರರನ್ನು ವಜಾಗೊಳಿಸಲಾಗಿದೆ. ಕಾಯಂ ನೌಕರರಿಗೆ ಕೊನೆಯ ಹಂತದ ನೋಟಿಸ್ ಜಾರಿಗೆ ಎಲ್ಲ ನಿಗಮಗಳೂ ಸಿದ್ಧತೆ ಮಾಡಿಕೊಂಡಿವೆ.

177 ಎಫ್‌ಐಆರ್ ದಾಖಲು: ಸರ್ಕಾರಿ ಬಸ್‌ಗಳಿಗೆ ಹಾನಿ ಮಾಡಿದವರು ಹಾಗೂ ಮುಷ್ಕರದ ನಾಯಕತ್ವ ವಹಿಸಿರುವ ನೌಕರರ ವಿರುದ್ಧ ಎಫ್‌ಐಆರ್ ದಾಖಲಿಸುವ ಪ್ರಕ್ರಿಯೆ ಮುಂದುವರಿದಿದೆ. ಶುಕ್ರವಾರದವರೆಗೆ ಒಟ್ಟು 453 ಮಂದಿ ವಿರುದ್ಧ 177 ಎಫ್‌ಐಆರ್ ದಾಖಲಿಸಲಾಗಿದೆ.

80 ಬಸ್‌ಗಳಿಗೆ ಹಾನಿಯಾಗಿದ್ದು, ಈವರೆಗೆ 312 ಜನರ ವಿರುದ್ಧ 142 ಎಫ್‌ಐಆರ್ ದಾಖಲಿಸಲಾಗಿದೆ. ಅಗತ್ಯ ಸೇವೆಗಳಿಗೆ ಅಡ್ಡಿಪಡಿಸುತ್ತಿರುವ ಆರೋಪದ ಮೇಲೆ ‘ಎಸ್ಮಾ’ ಕಾಯ್ದೆಯಡಿ 141 ಮಂದಿ ವಿರುದ್ಧ 35 ಎಫ್‌ಐಆರ್ ದಾಖಲಿಸಲಾಗಿದೆ. ಈ ಪೈಕಿ 47 ಜನರನ್ನು ಬಂಧಿಸಲಾಗಿದೆ.

ಮತ್ತೊಂದು ಬಸ್‌ಗೆ ಕಲ್ಲು...

ಘತ್ತರಗಾ ಬಸ್ ಮೇಲೆ ಕಲ್ಲು ತೂರಾಟಕ್ಕೂ ಮುನ್ನ ಅದೇ ಮಾರ್ಗದಲ್ಲಿ ಆಲಗೂರಿನಲ್ಲಿ ಮತ್ತೊಂದು ಬಸ್ ಮೇಲೂ ದುಷ್ಕರ್ಮಿಗಳು ಕಲ್ಲು ತೂರಿದ್ದಾರೆ. ಅಲ್ಲಿ ಜನ ಸೇರುತ್ತಿದ್ದಂತೆಯೇ ಪರಾರಿಯಾಗಿದ್ದಾರೆ.

ಎರಡು ಬಸ್‌ಗಳ ಮೇಲೆ ಕಲ್ಲು ತೂರಾಟಕ್ಕೆ ಸಂಬಂಧಿಸಿದಂತೆ ಅನುಮಾನಾಸ್ಪದವಾಗಿ ವರ್ತಿಸಿದ 10ಕ್ಕೂ ಹೆಚ್ಚು ಜನರನ್ನು ವಶಕ್ಕೆ ಪಡೆದ ಪೊಲೀಸರು ಜಮಖಂಡಿ ನಗರ ಠಾಣೆಗೆ ಕರೆತಂದು ವಿಚಾರಣೆ ಕೈಗೊಂಡಿದ್ದಾರೆ. ಘಟನಾ ಸ್ಥಳಕ್ಕೆ ಬಾಗಲಕೋಟೆ ಎಸ್ಪಿ ಲೋಕೇಶ ಜಗಲಾಸರ್ ಅವರು ಭೇಟಿ ನೀಡಿ ಪರಿಶೀಲಿಸಿದರು.

ಶುಕ್ರವಾರ ಕಾರ್ಯಾಚರಣೆ ನಡೆಸಿದ ಬಸ್‌ಗಳ ವಿವರ (ರಾತ್ರಿ 8ರವರೆಗೆ)	
ಕೆಎಸ್‌ಆರ್‌ಟಿಸಿ	2,567
ಬಿಎಂಟಿಸಿ	873
ಎನ್‌ಇಕೆಆರ್‌ಟಿಸಿ	1,142
ಎನ್‌ಡಬ್ಲ್ಯುಕೆಆರ್‌ಟಿಸಿ	965
ಒಟ್ಟು	5,547

ಹೆಚ್ಚಿದ ಬಸ್ ಸಂಚಾರ

‘ಗುರುವಾರಕ್ಕೆ ಹೋಲಿಸಿದರೆ ಶುಕ್ರವಾರ ಸಂಚಾರ ನಡೆಸಿರುವ ಬಸ್‌ಗಳ ಸಂಖ್ಯೆಯಲ್ಲಿ ಏರಿಕೆಯಾಗಿದೆ. ರಾತ್ರಿ 8 ಗಂಟೆಯವರೆಗೆ ನಿಗದಿಯಾಗಿದ್ದ 16,700 ಬಸ್‌ಗಳ ಪೈಕಿ 5,547 ಬಸ್‌ಗಳು ಸಂಚಾರ ನಡೆಸಿವೆ’ ಎಂದು ಸಾರಿಗೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ facebook LIVE fb.com/prajavani.net

ದ್ವಿತೀಯ ಪಿಯು ವಿದ್ಯಾರ್ಥಿಗಳೇ, ಗಮನಿಸಿ!

ಭಯ ಬೇಡ, ಧೈರ್ಯದಿಂದ ಪರೀಕ್ಷೆ ಎದುರಿಸಿ

ಮಂದಾರ್ ಹುಕ್ಕೇರಿ, ಗಣಿತಶಾಸ್ತ್ರ ಉಪನ್ಯಾಸಕರು, ಆರ್. ಜೆ. ಪದವಿಪೂರ್ವ ಕಾಲೇಜು, ಕಲಬುರಗಿ. ಇವರಿಂದ ಟಿಪ್ಸ್

ವಿಷಯ ಗಣಿತಶಾಸ್ತ್ರ

ಸಂಯೋಜನೆ: AIDSO ಕರ್ನಾಟಕ ರಾಜ್ಯ ಸಮಿತಿ

ಇಂದು ಮತ್ತು 19 ಸಂಜೆ 4.30 ರಿಂದ 6.00

ಐವರು ಆರೋಪಿಗಳ ಬಂಧನ

ಬಾಗಲಕೋಟೆ: ಜಮಖಂಡಿ ತಾಲ್ಲೂಕಿನ ಕವಟಗಿ ಪುನರ್ವಸತಿ ಕೇಂದ್ರದ ಬಳಿ ಶುಕ್ರವಾರ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಬಸ್ ತಡೆದು ಚಾಲಕ ನಬಿ ರಸೂಲ್ ಆವಟಿ (59) ಅವರನ್ನು ಕಲ್ಲು ಹೊಡೆದು ಸಾಯಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಆರೋಪಿಗಳನ್ನು ಸಾವಳಗಿ ಠಾಣೆ ಪೊಲೀಸರು ತಡರಾತ್ರಿ ಬಂಧಿಸಿದ್ದಾರೆ.

ವಾಯವ್ಯ ಸಾರಿಗೆ ಸಂಸ್ಥೆ ಸಿಬ್ಬಂದಿ ಮಲ್ಲಪ್ಪ ತಳವಾರ, ಚೇತನ ಕರ್ವೆ, ಸದಾಶಿವ ಕಂಕಣವಾಡಿ, ಲೋಹಿತ್ ದಾಸರ ಹಾಗೂ ಅರುಣ್ ಅರಕೇರಿ ಬಂಧಿತರು ಎಂದು ತಿಳಿದುಬಂದಿದೆ.

ಮುಷ್ಕರದ ಹಿನ್ನೆಲೆಯಲ್ಲಿ ಸಾರಿಗೆ ಸಂಸ್ಥೆಗಳು ಬಸ್‌ಗಳು ಸಂಚಾರ ಮಾಡಬಾರದು ಹಾಗೂ ಸಾರ್ವಜನಿಕವಾಗಿ ಆತಂಕದ ವಾತಾವರಣ ಸೃಷ್ಟಿಯಾಗಬೇಕು ಎಂಬ ಕಾರಣಕ್ಕೆ ಆರೋಪಿಗಳು ನಬಿ ಅವರ ಮೇಲೆ ಕಲ್ಲು ತೂರಾಟ ಮಾಡಿ ದಾಳಿ ನಡೆಸಿದ್ದಾರೆ ಎಂಬುದು ಪ್ರಾಥಮಿಕ ತನಿಖೆಯಲ್ಲಿ ತಿಳಿದು ಬಂದಿದೆ. ಆರೋಪಿಗಳನ್ನು ತೀವ್ರ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ತಿಳಿಸಿರುವ ಪೊಲೀಸರು, ಹೆಚ್ಚಿನ ಮಾಹಿತಿ ಬಹಿರಂಗಕ್ಕೆ ನಿರಾಕರಿಸಿದ್ದಾರೆ.

ಕಲ್ಲು ಹೊಡೆದು ಬಸ್ ಚಾಲಕನ ಕೊಲೆ

ಒಂದನೇ ಪುಟದಿಂದ...

ಬಸ್ ಚಿಕ್ಕಪಡಸಲಗಿ ಬ್ಯಾರೇಜ್‌ಗೆ ಮುನ್ನ ಕವಟಗಿ ಪುನರ್ವಸತಿ ಕೇಂದ್ರದ ಬಳಿ ಬರುತ್ತಿದ್ದಂತೆಯೇ, ನಿರ್ಜನ ಪ್ರದೇಶದಲ್ಲಿ ಹಿಂದಿನಿಂದ ಬೈಕ್‌ನಲ್ಲಿ ಬಂದ ನಾಲ್ವರು ಅಪರಿಚಿತರು ಅಡ್ಡಹಾಕಿ ಚಾಲಕನ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಈ ವೇಳೆ ತಲೆಗೆ ಪೆಟ್ಟು ಬಿದ್ದು ನಬಿ ರಸೂಲ್ ತೀವ್ರವಾಗಿ ಗಾಯಗೊಂಡು ಪ್ರಜ್ಞಾಹೀನರಾಗಿದ್ದಾರೆ. ಬಸ್‌ನಲ್ಲಿದ್ದ ಪ್ರಯಾಣಿಕರು, ಸ್ಥಳೀಯರ ನೆರವಿನಿಂದ ಜಮಖಂಡಿ ಆಸ್ಪತ್ರೆಗೆ ಕರೆದೊಯ್ಯುವ ವೇಳೆ ಮಾರ್ಗ ಮಧ್ಯದಲ್ಲಿಯೇ ಸಾವನ್ನಪ್ಪಿದ್ದಾರೆ ಎಂದು ತಿಳಿದು ಬಂದಿದೆ. ಜಮಖಂಡಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

ಜಮಖಂಡಿಯ ಆವಟಿ ಗಲ್ಲಿಯ ನಿವಾಸಿಯಾದ ನಬಿ ರಸೂಲ್ ಅವರಿಗೆ ಪತ್ನಿ ಹಾಗೂ ನಾಲ್ವರು ಪುತ್ರರು ಇದ್ದಾರೆ. ಅವರ ಸೇವಾ ನಿವೃತ್ತಿಗೆ ಇನ್ನೊಂದು ವರ್ಷ ಮಾತ್ರ ಬಾಕಿ ಇತ್ತು.

‘ಬೆದರಿಕೆಗೆ ಜೀವವನ್ನೇ ಕಳೆದುಕೊಂಡರು’: ‘ಮುಷ್ಕರದ ಕಾರಣ ಪತಿ ಮನೆಯಲ್ಲಿಯೇ ಇದ್ದರು. ಮನೆಗೆ ಬಂದ ಸಂಸ್ಥೆಯ ಅಧಿಕಾರಿಗಳು ಕರ್ತವ್ಯಕ್ಕೆ ಹಾಜರಾಗದಿದ್ದರೆ ಕೆಲಸದಿಂದ ತೆಗೆದು ಹಾಕುವುದಾಗಿ ಎಚ್ಚರಿಕೆ ನೀಡಿದ್ದರು. ಇದರಿಂದ ಬೆದರಿದ ಪತಿ ಗುರುವಾರದಿಂದ ಕೆಲಸಕ್ಕೆ ಹೋಗಿದ್ದರು. ಮೊದಲ ದಿನ ಜಮಖಂಡಿ-ಮಹಾಲಿಂಗಪುರ ನಡುವೆ ಬಸ್ ಓಡಿಸಿದ್ದರು. ಈಗ ಅವರೇ ಇಲ್ಲ. ಮೇಲಧಿಕಾರಿಗಳ ಬೆದರಿಕೆಗೆ ಅವರು ಜೀವವನ್ನೇ ಕಳೆದುಕೊಂಡರು‘ ಎಂದು ನಬಿ ಅವರ ಪತ್ನಿ ಸಾಯಿರಾಬಾನು ಆಸ್ಪತ್ರೆ ಎದುರು ಕಣ್ಣೀರು ಹಾಕಿದರು.

ಮುಖ್ಯಮಂತ್ರಿಗಳ ಚಿನ್ನದ ಪದಕ ಪಡೆದಿದ್ದರು: 1984ರಲ್ಲಿ ನಬಿ ರಸೂಲ್ ಆವಟಿ ಅವರು ಸಾರಿಗೆ ಸಂಸ್ಥೆಯ ನೌಕರಿಗೆ ಸೇರಿದ್ದರು. 37 ವರ್ಷಗಳ ಸೇವಾ ಅವಧಿಯಲ್ಲಿ ಅಪಘಾತರಹಿತ ಚಾಲನೆಗಾಗಿ 2015ರಲ್ಲಿ ಮುಖ್ಯಮಂತ್ರಿಗಳ ಚಿನ್ನದ ಪದಕಕ್ಕೆ ಭಾಜನರಾಗಿದ್ದರು. ನಿವೃತ್ತಿ ಅಂಚಿಗೆ ಬಂದಿದ್ದ ಅವರಿಗೆ ಡಿಪೋ ಹಾಗೂ ಬಸ್ ನಿಲ್ದಾಣದಲ್ಲಿಯೇ ಕೆಲಸ ನೀಡಲಾಗಿತ್ತು. ಇತ್ತೀಚೆಗೆ ಅವರು ಚಾಲಕರಾಗಿ ಹೊರಗೆ ಹೋಗುತ್ತಿರಲಿಲ್ಲ. ಸಿಬ್ಬಂದಿ ಮುಷ್ಕರದ ಕಾರಣ ಅನಿವಾರ್ಯವಾಗಿ ಅವರನ್ನು ಕರ್ತವ್ಯಕ್ಕೆ ಕಳುಹಿಸಲಾಗಿತ್ತು ಎಂದು ನಬಿ ಅವರ ಸಹೋದ್ಯೋಗಿಯೊಬ್ಬರು ತಿಳಿಸಿದರು.

‘ವಿಟಿಯು ಪರೀಕ್ಷೆ ಮುಂದೂಡಿಲ್ಲ’

ಬೆಳಗಾವಿ: ‘ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು)ದ ಪರೀಕ್ಷೆಗಳನ್ನು ಮುಂದೂಡಲಾಗಿಲ್ಲ. ಮೊದಲನೇ ಸೆಮಿಸ್ಟರ್ ಪರೀಕ್ಷೆಗಳು ಏ.19ರಿಂದ ನಿಗದಿತ ವೇಳಾಪಟ್ಟಿ ಪ್ರಕಾರವೇ ನಡೆಯಲಿವೆ. ವಿದ್ಯಾರ್ಥಿಗಳಿಗೆ ಬಸ್ ವ್ಯವಸ್ಥೆ ಮಾಡುವಂತೆ ಆಯಾ ಕಾಲೇಜುಗಳ ಮುಖ್ಯಸ್ಥರಿಗೆ ಸೂಚಿಸಲಾಗಿದೆ. ವಿದ್ಯಾರ್ಥಿಗಳು ಹಾಗೂ ಪೋಷಕರು ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ’ ಎಂದು ಕುಲಸಚಿವ ಪ್ರೊ.ಬಿ.ಈ. ರಂಗಸ್ವಾಮಿ ತಿಳಿಸಿದ್ದಾರೆ.

ಡಿಸಿಸಿ ಬ್ಯಾಂಕ್ ಹಗರಣ: ಸಿಬಿಐ ತನಿಖೆಗಾಗಿ ಸರ್ಕಾರಕ್ಕೆ ಪತ್ರ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಡಿಸಿಸಿ ಬ್ಯಾಂಕ್‌ನ ಗಾಂಧಿ ಬಜಾರ್ ಶಾಖೆಯಲ್ಲಿ 2014ರಲ್ಲಿ ನಡೆದ ₹ 62.77 ಕೋಟಿ ಬಂಗಾರ ಅಡಮಾನ ಸಾಲ ಹಗರಣದ ತನಿಖೆಯನ್ನು ಸಿಬಿಐಗೆ ವಹಿಸಲು ಕೋರಿ ಬ್ಯಾಂಕ್‌ನ ಆಡಳಿತ ಮಂಡಳಿ ಸರ್ಕಾರಕ್ಕೆ ಪತ್ರ ಬರೆದಿದೆ.

‘ಹಗರಣದಲ್ಲಿ ಡಿಸಿಸಿ ಬ್ಯಾಂಕ್‌ನ ಅಂದಿನ ಅಧ್ಯಕ್ಷ ಆರ್.ಎಂ.ಮಂಜುನಾಥ ಗೌಡ ಸೇರಿ 18 ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ಸಿಐಡಿ ತನಿಖೆ ನಡೆದು ಮಂಜುನಾಥ್ ಗೌಡರನ್ನು ಆರೋಪಮುಕ್ತಗೊಳಿಸಲಾಗಿತ್ತು. ಸಿಐಡಿ ಅಧಿಕಾರಿಗಳು ನಡೆಸಿದ ತನಿಖೆ ಸಮರ್ಪಕವಾಗಿಲ್ಲ ಎನ್ನುವ ಭಾವನೆ ಇದೆ. ಹೀಗಾಗಿ, ಕೂಲಂಕಷ ತನಿಖೆಗಾಗಿ ಸಿಬಿಐಗೆ ವಹಿಸಲು ಆಡಳಿತ ಮಂಡಳಿ ಸಭೆಯಲ್ಲಿ ಸರ್ವಾನುಮತದ ತೀರ್ಮಾನ ತೆಗೆದುಕೊಳ್ಳಲಾಗಿದೆ. ಉಳಿದ 17 ಆರೋಪಿಗಳ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ನಿರ್ಧರಿಸಲಾಗಿದೆ’ ಎಂದು ಬ್ಯಾಂಕ್ ಅಧ್ಯಕ್ಷ ಎಂ.ಬಿ. ಚನ್ನವೀರಪ್ಪ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಡಿಸಿಸಿ ಬ್ಯಾಂಕ್ ರಾಜ್ಯದ ವಿಜಯಪುರ, ಬಾಗಲಕೋಟೆ, ಚನ್ನರಾಯಪಟ್ಟಣದ ಸಕ್ಕರೆ ಕಾರ್ಖಾನೆಗಳಿಗೆ ಸುಮಾರು ₹ 90 ಕೋಟಿ ಸಾಲ ನೀಡಿದೆ. ಹಿಂದಿನ ಆಡಳಿತ ಮಂಡಳಿ ನಿಯಮಬಾಹಿರವಾಗಿ ಸಾಲ ನೀಡಿದೆ ಎಂದು ಬ್ಯಾಂಕಿನ 11 ನಿರ್ದೇಶಕರು ದೂರು ನೀಡಿದ್ದಾರೆ. ಈ ಕುರಿತು ತನಿಖೆಗೆ ಒತ್ತಾಯಿಸಲಾಗಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ನಿರ್ದೇಶಕರಾದ ದುಗ್ಗಪ್ಪಗೌಡ, ಯೋಗೀಶ್, ಎಸ್.ಪಿ.ದಿನೇಶ್ ಪರಸ್ಪರ ವಾಗ್ವಾದ ನಡೆಸಿದರು. ಆರೋಪ, ಪ್ರತ್ಯಾರೋಪಗಳೂ ಕೇಳಿಬಂದವು.

ನಿಧನವಾರ್ತೆ

‘ಅಂಬಾರಿ ಚಾಮುಂಡಿ’ಯ ಕರ್ತೃ ಜನಾರ್ದನಮೂರ್ತಿ



ಮೈಸೂರು: ಲೋಹಶಿಲ್ಪಿ ಹಾಗೂ ಮೈಸೂರು ದಸರಾ ಮಹೋತ್ಸವದ ಜಂಬೂಸವಾರಿಯಲ್ಲಿ ಪ್ರತಿಷ್ಠಾಪನೆಯಾಗುವ ಚಾಮುಂಡೇಶ್ವರಿ ದೇವಿಯ ಉತ್ಸವಮೂರ್ತಿಯ ಕರ್ತೃ ಎನ್.ಎಸ್. ಜನಾರ್ದನಮೂರ್ತಿ (72) ಶುಕ್ರವಾರ ನಿಧನರಾದರು.

ಇವರಿಗೆ ಪತ್ನಿ ಮತ್ತು ಮೂವರು ಪುತ್ರರು ಇದ್ದಾರೆ. ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಲ್ಪಿ, ಮಂಡ್ಯ ಜಿಲ್ಲೆಯ ನಾಗಮಂಗಲದ ಎನ್.ಪಿ.ಶ್ರೀನಿವಾಸಾಚಾರ್ಯ ಅವರ ಪುತ್ರರಾದ ಇವರು, ಅಖಿಲ ಭಾರತ ಕರಕುಶಲ ಮಂಡಳಿಯಲ್ಲಿ 3 ವರ್ಷಗಳ ಕಾಲ ಎರಕ ಕಲೆಯ ತರಬೇತಿ ಪಡೆದರು. ಚಾಮರಾಜೇಂದ್ರ ತಾಂತ್ರಿಕ ತರಬೇತಿ ಕಾಲೇಜಿನಲ್ಲಿ 35 ವರ್ಷಗಳ ಕಾಲ ಬೋಧಕರಾಗಿ ಕಾರ್ಯನಿರ್ವಹಿಸಿದ್ದರು. ಈ ಅವಧಿಯಲ್ಲಿ ನೂರಾರು ಮಂದಿ ಶಿಷ್ಯಂದಿರಿಗೆ ಎರಕ ಕಲೆಯ ಬಗ್ಗೆ ತರಬೇತಿ ನೀಡಿದ್ದಾರೆ.

ತಂದೆ ಶಿಲ್ಪಿ ಶ್ರೀನಿವಾಸಾಚಾರ್ಯ ಅವರ ಮಾರ್ಗದರ್ಶನದಲ್ಲಿ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಿಯ ಉತ್ಸವಮೂರ್ತಿಯನ್ನು ರೂಪಿಸಿದ್ದರು. ಈಗ ಜಂಬೂಸವಾರಿಯಲ್ಲಿ ಇದೇ ಉತ್ಸವಮೂರ್ತಿಯನ್ನು ಇಟ್ಟು, ದಸರಾ ಮಹೋತ್ಸವ ನೆರವೇರಿಸಲಾಗುತ್ತಿದೆ. ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಸೇರಿ ಹಲವು ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಮೈಸೂರಿನಲ್ಲಿ ಶುಕ್ರವಾರ ಅಂತ್ಯಕ್ರಿಯೆ ನೆರವೇರಿತು.

ನಟ ದ್ವಾರಕೀಶ್ ಪತ್ನಿ ಅಂಬುಜಾ



ಬೆಂಗಳೂರು: ಹಿರಿಯ ನಟ ದ್ವಾರಕೀಶ್ ಅವರ ಪತ್ನಿ ಅಂಬುಜಾ (80) ಅವರು ಎಚ್‌ಎಸ್‌ಆರ್ ಲೇಔಟ್‌ನ ತಮ್ಮ ನಿವಾಸದಲ್ಲಿ ಶುಕ್ರವಾರ ನಿಧನರಾದರು.

ಅವರಿಗೆ ನಿರ್ಮಾಪಕ ಯೋಗಿ ಸೇರಿದಂತೆ ಐವರು ಪುತ್ರರು ಇದ್ದಾರೆ. ಕಳೆದ ಜನವರಿ 28ರಂದು ಅವರು 80ನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದರು. ವಯೋಸಹಜ ಕಾಯಿಲೆಗಳಿಂದ ಅವರು ಬಳಲುತ್ತಿದ್ದರು. ಶುಕ್ರವಾರ ಅಂತ್ಯಕ್ರಿಯೆ ನಡೆಯಿತು.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗೆ ಮಾತೃವಿಯೋಗ

ಮೂಡುಬಿದಿರೆ (ದಕ್ಷಿಣ ಕನ್ನಡ): ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅಬ್ದುಲ್ ನಜೀರ್ ಅವರ ತಾಯಿ ಅಮಿದಾಬಿ (88) ಶುಕ್ರವಾರ ಬೆಳಗಿನ ಜಾವ ನವದೆಹಲಿಯಲ್ಲಿ ನಿಧನರಾದರು.

ಅವರಿಗೆ ಪುತ್ರಿ, ಐವರು ಪುತ್ರರು ಇದ್ದಾರೆ. ಅವರು ತಮ್ಮ ಪುತ್ರ, ನ್ಯಾ.ಅಬ್ದುಲ್ ನಜೀರ್ ಅವರೊಂದಿಗೆ ನವದೆಹಲಿಯಲ್ಲೇ ನೆಲೆಸಿದ್ದರು. ಪಾರ್ಥಿವ ಶರೀರವನ್ನು ಅವರ ಸ್ವಂತ ಊರಾದ ಮೂಡುಬಿದಿರೆ ಸಮೀಪದ ಬೆಳುವಾಯಿ ಗ್ರಾಮದ ಕಾನಕ್ಕೆ ಶನಿವಾರ ಬೆಳಿಗ್ಗೆ ತರಲಾಗುತ್ತದೆ. ನಂತರ ಅಲ್ಲೇ ಅಂತ್ಯಕ್ರಿಯೆ ನಡೆಸಲಾಗುವುದು.

ಎನ್‌ಸಿಬಿ ‘ಡ್ರಗ್ಸ್’ ಬೇಟೆ; 36 ಪ್ರಕರಣ, 49 ಮಂದಿ ಜೈಲುಪಾಲು

ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಕರ್ನಾಟಕ ಹಾಗೂ ತೆಲಂಗಾಣ ರಾಜ್ಯಗಳಲ್ಲಿ ಚುರುಕಿನ ಕಾರ್ಯಾಚರಣೆ ನಡೆಸುತ್ತಿರುವ ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕದ (ಎನ್‌ಸಿಬಿ) ಅಧಿಕಾರಿಗಳು, ಗುಪ್ತವಾಗಿ ನಡೆಯುತ್ತಿರುವ ಡ್ರಗ್ಸ್ ಜಾಲಗಳನ್ನು ಒಂದೊಂದಾಗಿ ಬಯಲಿಗೆ ಎಳೆಯುತ್ತಿದ್ದಾರೆ.

ಎರಡೂ ರಾಜ್ಯಗಳಲ್ಲಿ ನಡೆಯುವ ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ಮೇಲೆ ಎನ್‌ಸಿಬಿ ತಂಡ ನಿಗಾ ವಹಿಸಿದೆ. ಬೆಂಗಳೂರು ಹಾಗೂ ಹೈದರಾಬಾದ್ ವಲಯದ ಅಧಿಕಾರಿಗಳು, 2020ರ ಜನವರಿಯಿಂದ 2021ರ ಮಾರ್ಚ್‌ವರೆಗೆ 36 ಪ್ರಕರಣ ದಾಖಲಿಸಿಕೊಂಡು, 49 ಮಂದಿಯನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ. ಅವರಿಂದ ಕೋಟ್ಯಂತರ ರೂಪಾಯಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿ, ಜಾಲವನ್ನು ಬುಡ ಸಮೇತ ಕಿತ್ತು ಹಾಕಲು ತನಿಖೆ ಮುಂದುವರಿಸಿದ್ದಾರೆ.

ಕೆಲ ಸಿನಿ ತಾರೆಯರು, ಕೆಲ ಉದ್ಯಮಿಗಳು, ಕೆಲ ವ್ಯಾಪಾರಿಗಳು, ಕೆಲ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಡ್ರಗ್ಸ್ ಮಾರಾಟ ಮಾಡುತ್ತಿದ್ದ ದೊಡ್ಡ ಜಾಲವನ್ನೇ ಕಳೆದ ವರ್ಷ ಭೇದಿಸಿದ್ದರು. ಈ ಪ್ರಕರಣದಲ್ಲಿ ಯುವತಿ ಡಿ. ಅನಿಕಾ ಸೇರಿ ಹಲವರನ್ನು ಬಂಧಿಸಿದ್ದ ಎನ್‌ಸಿಬಿ, ಅವರನ್ನು ಜೈಲಿಗಟ್ಟಿದೆ. ಮಾದಕ ವಸ್ತು ನಿಯಂತ್ರಣ ಕಾಯ್ದೆ (ಎನ್‌ಡಿಪಿಎಸ್) ಎಲ್ಲರ ಮೇಲೂ ದೋಷಾರೋಪ ಪಟ್ಟಿ ಸಹ ಸಲ್ಲಿಕೆಯಾಗಿದೆ.

ಉಡುಪಿ ಜಿಲ್ಲೆಯ ಮಣಿಪಾಲ್ ಸೇರಿದಂತೆ ಹಲವು ನಗರಗಳ ಕೆಲ ವಿದ್ಯಾರ್ಥಿಗಳಿಗೆ ಡ್ರಗ್ಸ್ ಮಾರುತ್ತಿದ್ದ ಅಂತರರಾಜ್ಯ ಜಾಲದ ಸದಸ್ಯರನ್ನೂ ಎನ್‌ಸಿಬಿ ಬಂಧಿಸಿತ್ತು. ಮಕ್ಕಳ ಬ್ಯಾಗ್, ಪಾತ್ರೆಗಳು, ಹೀಗೆ... ಹಲವು ವಸ್ತುಗಳನ್ನು ಬಚ್ಚಿಟ್ಟು ಸಾಗಿಸುತ್ತಿದ್ದ ಡ್ರಗ್ಸ್ ಜಾಲವನ್ನೂ ಪತ್ತೆ ಮಾಡಿತ್ತು.

ವಿಶೇಷವೆಂದರೆ, ಬಂಧಿತರಲ್ಲಿ ಭಾರತೀಯರೇ ಹೆಚ್ಚಿದ್ದಾರೆ. ವಿದೇಶಿಗರ ಸಂಖ್ಯೆ ತೀರಾ ಕಡಿಮೆ ಇದೆ. ವಿದೇಶದಿಂದ ಡ್ರಗ್ಸ್ ತರಿಸುತ್ತಿರುವ ಸ್ಥಳೀಯರು, ಎರಡೂ ರಾಜ್ಯಗಳಲ್ಲಿ ತಮ್ಮದೇ ಜಾಲ ರೂಪಿಸಿಕೊಂಡು ಮಾರುತ್ತಿದ್ದಾರೆ.

‘ಹೊರ ರಾಜ್ಯಗಳಲ್ಲಿ ಬೆಳೆಯುವ ಗಾಂಜಾವನ್ನು ನಗರಕ್ಕೆ ಮಾರುವವರು ಹೆಚ್ಚಾಗುತ್ತಿದ್ದಾರೆ. ಕಾರು, ಗೂಡ್ಸ್ ವಾಹನಗಳಲ್ಲಿ ನಗರಕ್ಕೆ ಗಾಂಜಾ ಬರುತ್ತಿದೆ. ಉಪ ಪೆಡ್ಲರ್‌ಗಳ ಮೂಲಕ ಗಾಂಜಾ ಗ್ರಾಹಕರ ಕೈ ತಲುಪುತ್ತಿದೆ. ಜಪ್ತಿ ಮಾಡಲಾದ ಡ್ರಗ್ಸ್‌ಗಳ ಪೈಕಿ ಗಾಂಜಾ ಪ್ರಮಾಣವೂ ಹೆಚ್ಚಿದೆ’ ಎಂದು ಎನ್‌ಸಿಬಿ ಮೂಲಗಳು ಹೇಳಿವೆ.

ಡಾರ್ಕ್‌ನೆಟ್, ಕೋಡ್ ವ್ಯವಹಾರ: ಬಹುತೇಕ ಪ್ರಕರಣಗಳಲ್ಲಿ ಡ್ರಗ್ಸ್ ಖರೀದಿ ಮೂಲ ಪತ್ತೆಯಾಗಿಲ್ಲ. ಡಾರ್ಕ್‌ನೆಟ್ ಮೂಲಕ ಡ್ರಗ್ಸ್ ಖರೀದಿ ಮಾಡುವ ಪೆಡ್ಲರ್‌ಗಳು, ಅದನ್ನು ಕೋರಿಯರ್ ಹಾಗೂ ಇತರೆ ಮಾರ್ಗಗಳಿಂದ ತರಿಸಿ ಗ್ರಾಹಕರಿಗೆ ಮಾರಾಟ ಮಾಡುತ್ತಿರುವುದು ತನಿಖೆಯಿಂದ ಗೊತ್ತಾಗಿದೆ ಎಂದು ಎನ್‌ಸಿಬಿ ಮೂಲಗಳು ತಿಳಿಸಿವೆ.

ಜಪ್ತಿ ಮಾಡಲಾದ ಡ್ರಗ್ಸ್ ವಿವರ
(2020ರ ಜನವರಿಯಿಂದ 2021ರ ಮಾರ್ಚ್)

ಗಾಂಜಾ	4,032 ಕೆ.ಜಿ	ಎಲ್‌ಎಸ್‌ಡಿ	2.9 ಗ್ರಾಂ
ಚರಸ್	1 ಕೆ.ಜಿ 20 ಗ್ರಾಂ	ಕೆಟಾಮಿನ್	235 ಗ್ರಾಂ
ಹ್ಯಾಶೀಷ್ (ಗಾಂಜಾ ಎಣ್ಣೆ)	3 ಕೆ.ಜಿ	ಸೂಡೊ ಎಫೆಡ್ರೈನ್	11.22 ಕೆ.ಜಿ
ಕೊಕೇನ್	549 ಗ್ರಾಂ	ಟ್ರಮಡೋಲ್	10 ಗ್ರಾಂ
ಹೆರಾಯಿನ್	630 ಗ್ರಾಂ	ಡಯಾಝೆಫಮ್	24.96 ಗ್ರಾಂ
ಮೆಥಾಂಫೆಟಮೈನ್	1.5 ಕೆ.ಜಿ	ಆಲ್ಪ್ರಝೋಲಮ್	18.98 ಗ್ರಾಂ
ಆ್ಯಂಫೆಟಮೈನ್	90 ಗ್ರಾಂ	ಕ್ಲೋನಾಝೆಫಮ್	29.07 ಗ್ರಾಂ
ಎಂಡಿಎಂಎ	1,147 ಕೆ.ಜಿ 6 ಗ್ರಾಂ	ಫೆನ್ಸಡೈಲ್ ಸಿರಪ್	200 ಬಾಟಲಿ

ಅಂಕಿ–ಅಂಶ
(2020ರ ಜನವರಿಯಿಂದ 2021ರ ಮಾರ್ಚ್)

25 ಬೆಂಗಳೂರು

11 ಹೈದರಾಬಾದ್

ಬಂಧಿತ ಆರೋಪಿಗಳು

41 ಭಾರತೀಯರು (4 ಮಹಿಳೆಯರು)

8 ವಿದೇಶಿಗರು (3 ಮಹಿಳೆಯರು)

ಡ್ರಗ್ಸ್ ಸಾಗಣೆ, ಮಾರಾಟದ ಮಾಹಿತಿ ಇದ್ದರೆ ಸಂಪರ್ಕಿಸಿ
ದೂ.ಸಂ; 080-29720586
ಇ–ಮೇಲ್ Mail-zdblzu-ncb@nic.in

ಕ್ರಿಕೆಟ್ ಸಾಮಗ್ರಿಗಳಲ್ಲಿ ₹ 20 ಲಕ್ಷ ಮೌಲ್ಯದ ಡ್ರಗ್ಸ್

ಡ್ರಗ್ಸ್ ಬಚ್ಚಿಟ್ಟಿದ್ದ ಕ್ರಿಕೆಟ್ ಸೇಫ್ ಗಾರ್ಡ್

ಕತಾರ್ ದೋಹಾದಿಂದ ನಗರಕ್ಕೆ ಪಾರ್ಸೆಲ್ ಕಳುಹಿಸಲಾಗಿದ್ದ ಡ್ರಗ್ಸ್ ಪತ್ತೆ ಮಾಡಿರುವ ಎನ್‌ಸಿಬಿ ಅಧಿಕಾರಿಗಳು, ಆ ಸಂಬಂಧ ಎಸ್. ನಶಾಂತ್ ಎಂಬಾತನನ್ನು ಮಂಗಳೂರಿನಲ್ಲಿ ಬಂಧಿಸಿದ್ದಾರೆ.

‘ಕೋರಿಯರ್ ಮೂಲಕ ಡ್ರಗ್ಸ್ ತರಿಸಿಕೊಂಡು ಮಾರಾಟ ಮಾಡುತ್ತಿದ್ದ ಜಾಲವನ್ನು ಭೇದಿಸಲಾಗಿದ್ದು, ₹ 20 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ. ಇದರಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ನಶಾಂತ್‌ನನ್ನು ಬಂಧಿಸಿ ತನಿಖೆ ಮುಂದುವರಿಸಲಾಗಿದೆ’ ಎಂದು ಎನ್‌ಸಿಬಿ ಬೆಂಗಳೂರು ವಲಯ ನಿರ್ದೇಶಕ ಅಮಿತ್ ಘಾವಟೆ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕೋರಿಯರ್ ಮೂಲಕ ಪಾರ್ಸೆಲ್ ಬಂದಿರುವ ಮಾಹಿತಿ ಸಿಕ್ಕಿತ್ತು. ಏಪ್ರಿಲ್ 8ರಂದು ಕಾರ್ಯಾಚರರಣೆ ನಡೆಸಿದಾಗ, ಕ್ರಿಕೆಟ್‌ಗೆ ಬಳಸುವ ಕೈಗವಸ (ಗ್ಲೌಸ್) ಹಾಗೂ ಸೇಫ್ ಗಾರ್ಡ್ ಸಾಮಗ್ರಿಗಳಲ್ಲಿ ಡ್ರಗ್ಸ್ ಬಚ್ಚಿಟ್ಟು ಸಾಗಿಸುತ್ತಿದ್ದ ಸಂಗತಿ ತಿಳಿಯಿತು’

‘ದೋಹಾದ ಎ. ಕುಜಿಯಾಲ್ ಎಂಬಾತನ ಹೆಸರಿನಿಂದ, ಕೇರಳ ಕಾರಸಗೋಡಿನ ಎಸ್. ನಶಾಂತ್ ಹೆಸರಿಗೆ ಕೋರಿಯರ್ ಬಂದಿತ್ತು’ ಎಂದೂ ಹೇಳಿದರು.

ಪ್ರತ್ಯೇಕ ಅಪಘಾತ; ವ್ಯವಸ್ಥಾಪಕ ಸೇರಿ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗುರುವಾರ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಸೆಕ್ಯುರಿಟಿ ಏಜೆನ್ಸಿಯೊಂದರ ವ್ಯವಸ್ಥಾಪಕ ಸೇರಿ ಇಬ್ಬರು ಮೃತಪಟ್ಟಿದ್ದಾರೆ.

ಗೋಪಾಲಕೃಷ್ಣ (55) ಹಾಗೂ ಜಯಂತ್ (27) ಮೃತರು. ಎರಡೂ ಅಪಘಾತ ಸಂಬಂಧ ಶಿವಾಜಿನಗರ ಹಾಗೂ ಯಲಹಂಕ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸೆಕ್ಯುರಿಟಿ ಏಜೆನ್ಸಿಯೊಂದರಲ್ಲಿ ವ್ಯವಸ್ಥಾಪಕರಾಗಿದ್ದ ಗೋಪಾಲಕೃಷ್ಣ, ದ್ವಿಚಕ್ರ ವಾಹನದಲ್ಲಿ ಗುರುವಾರ ರಾತ್ರಿ ಕಬ್ಬನ್ ರಸ್ತೆಯಲ್ಲಿ ಹೊರಟಿದ್ದರು. ಅದೇ ಸಂದರ್ಭದಲ್ಲೇ ದ್ವಿಚಕ್ರ ವಾಹನ ಹಾಗೂ ಆಟೊ ನಡುವೆ ಅಪಘಾತವಾಗಿದೆ. ರಸ್ತೆ ಮೇಲೆ ಬಿದ್ದಿದ್ದ ಅವರ ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು’ ಎಂದು ಪೊಲೀಸರು ಹೇಳಿದರು.

‘ಗಾಯಾಳು ಗೋಪಾಲಕೃಷ್ಣ ಅವರನ್ನು ಬೌರಿಂಗ್ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಮಾರ್ಗ ಮಧ್ಯೆಯೇ ಅವರು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು. ಗೋಪಾಲಕೃಷ್ಣ ಅವರೇ ಆಟೊಗೆ ಗುದ್ದಿದ್ದರೆಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಆಟೊ ಚಾಲಕ ಲೋಕೇಶ್ ದೂರು ನೀಡಿದ್ದು, ತನಿಖೆ ಮುಂದುವರಿದಿದೆ’ ಎಂದರು.

ಟ್ರ್ಯಾಕರ್ ಡಿಕ್ಕಿ ಹೊಡೆದು ಸಾವು: ಇನ್ನೊಂದು ಪ್ರಕರಣದಲ್ಲಿ ಬೈಕ್‌ಗೆ ಟ್ರ್ಯಾಕ್ಟರ್ ಡಿಕ್ಕಿ ಹೊಡೆದು ಸವಾರ ಜಯಂತ್ ಮೃತಪಟ್ಟಿದ್ದಾರೆ.

‘ಹಿಂದೂಪುರದ ಜಯಂತ್, ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಕಂಪನಿಯೊಂದರಲ್ಲಿ ಲೆಕ್ಕಾಧಿಕಾರಿ ಆಗಿ ಕೆಲಸ ಮಾಡುತ್ತಿದ್ದರು. ಇತ್ತೀಚೆಗೆ ಹಬ್ಬಕ್ಕೆಂದು ಊರಿಗೆ ಹೋಗಿದ್ದ ಅವರು, ಸ್ನೇಹಿತ ಹರೀಶ್ ಜೊತೆ ವಾಪಸು ಗುರುವಾರ ಬೆಳಿಗ್ಗೆ ಬೆಂಗಳೂರಿಗೆ ಬರುತ್ತಿದ್ದಾಗಲೇ ಈ ಅಪಘಾತ ಸಂಭವಿಸಿದೆ’ ಎಂದು ಪೊಲೀಸರು ಹೇಳಿದರು.

‘ಯಲಹಂಕ ಜಕ್ಕೂರು ಮೇಲ್ಸೇತುವೆಯಲ್ಲಿ ಜಯಂತ್ ಬೈಕ್‌ಗೆ ಟ್ರ್ಯಾಕ್ಟರ್ ಡಿಕ್ಕಿ ಹೊಡೆದಿತ್ತು. ರಸ್ತೆಯಲ್ಲೇ ಉರುಳಿಬಿದ್ದು ತೀವ್ರವಾಗಿ ಗಾಯಗೊಂಡ ಜಯಂತ್ ಹಾಗೂ ಹೇಮಂತ್ ಅವರನ್ನು ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಜಯಂತ್ ಮೃತಪಟ್ಟಿದ್ದಾರೆ. ಹರೀಶ್ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ’ ಎಂದೂ ತಿಳಿಸಿದರು.

‘ಅಪಘಾತದ ನಂತರ ಟ್ರ್ಯಾಕ್ಟರ್ ಸಮೇತ ಚಾಲಕ ಪರಾರಿಯಾಗಿದ್ದಾನೆ. ಆತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದೂ ಹೇಳಿದರು.

ಕದ್ದ ಚಿನ್ನ ಮಾರುತ್ತಿದ್ದಾಗಲೇ ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗಳಲ್ಲಿ ಕಳವು ಮಾಡಿದ್ದ ಚಿನ್ನವನ್ನು ಸಾರ್ವಜನಿಕರಿಗೆ ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಮಾರತ್ತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ನೇಪಾಳದ ರಾಮ್ ಬಹದ್ದೂರ್ (48) ಹಾಗೂ ಕಮಲ್‌ರಾಜ್ (20) ಬಂಧಿತರು. ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ ಆರೋಪಿಗಳು, ಗೋವಿಂದ ಪುರದಲ್ಲಿ ವಾಸವಿದ್ದರು. ಅವರಿಂದ ₹ 2 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ ಆರೋಪಿಗಳು, ಬೀಗ ಹಾಕಿರುತ್ತಿದ್ದ ಹಾಗೂ ಅಂಗಳದಲ್ಲಿ ಕಸ ಬಿದ್ದಿರುತ್ತಿದ್ದ ಮನೆಗಳನ್ನು ಗುರುತಿಸಿ ಕಳ್ಳತನ ಮಾಡುತ್ತಿದ್ದರು. ಮಾರತ್ತಹಳ್ಳಿ ಠಾಣೆ ವ್ಯಾಪ್ತಿಯ ಎರಡು ಮನೆಗಳಲ್ಲಿ ಇವರು ಕೃತ್ಯ ಎಸಗಿದ್ದರು’ ಎಂದೂ ತಿಳಿಸಿದರು.

ಜಪ್ತಿ ಮಾಡಲಾದ ಚಿನ್ನ, ಬೆಳ್ಳಿ ಆಭರಣ ಜೊತೆ ಆರೋಪಿಗಳು ಹಾಗೂ ಅವರನ್ನು ಬಂಧಿಸಿದ ಪೊಲೀಸರ ತಂಡ

‘ಶಿರಡಿ ಸಾಯಿನಗರದ ಮನೆಯೊಂದರ ಬಾಗಿಲು ಲಾಕ್ ಮುರಿದು ಕಳ್ಳತನ ಮಾಡಿದ್ದರು. ₹40 ಸಾವಿರ ನಗದು, 7 ವಾಚ್ ಕದ್ದಿದ್ದರು. ಈ ಬಗ್ಗೆ ದೂರು ದಾಖಲಾಗಿತ್ತು.’

‘ಏಪ್ರಿಲ್ 9ರಂದು ಸಂಜೆ ಮಾರತ್ತಹಳ್ಳಿ ಮೇಲ್ಸೇತುವೆ ಬಳಿ ನಿಂತಿದ್ದ ಆರೋಪಿಗಳು, ತಮ್ಮ ಬಳಿ ಇದ್ದ ಚಿನ್ನದ ಸರವನ್ನು ಸಾರ್ವಜನಿಕರಿಗೆ ಮಾರಲು ಯತ್ನಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಅವರಿಬ್ಬರನ್ನು ಬಂಧಿಸಲಾಯಿತು’ ಎಂದೂ ಹೇಳಿದರು.

ತಾಯಿಗೆ ಬೈದಿದ್ದಕ್ಕೆ ಸ್ನೇಹಿತನನ್ನೇ ಕೊಂದ

ಬೆಂಗಳೂರು: ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಠಾಣೆ ವ್ಯಾಪ್ತಿಯಲ್ಲಿ ಫರಾನ್ (26) ಎಂಬುವರನ್ನು ಕೊಲೆ ಮಾಡಲಾಗಿದ್ದು, ಸ್ನೇಹಿತ ಯೂಸೂಫ್ (28) ಎಂಬಾತನೇ ಕೃತ್ಯ ಎಸಗಿರುವ ಅನುಮಾನ ವ್ಯಕ್ತವಾಗಿದೆ.

‘ಸ್ಥಳೀಯ ನಿವಾಸಿಗಳಾದ ಫರಾನ್ ಹಾಗೂ ಯೂಸೂಫ್, ಬಾಲ್ಯ ಸ್ನೇಹಿತರು. ಕೋಳಿ ಮಾಂಸ ಮಾರಾಟ ಅಂಗಡಿಯಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದರು. ಗುರುವಾರ ರಾತ್ರಿ ಅವರಿಬ್ಬರ ನಡುವೆ ಗಲಾಟೆ ನಡೆದು, ಕೊಲೆಯಲ್ಲಿ ಅಂತ್ಯವಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕ್ಷುಲ್ಲಕ ಕಾರಣಕ್ಕಾಗಿ ಗಲಾಟೆ ಶುರುವಾಗಿತ್ತು. ಇದೇ ವೇಳೆ ಫರಾನ್, ಅವಾಚ್ಯ ಶಬ್ದಗಳಿಂದ ಯೂಸೂಫ್ ತಾಯಿಯನ್ನು ನಿಂದಿಸಿದ್ದರು. ಕೋಪಗೊಂಡ ಯೂಸೂಫ್, ಮಾಂಸ ಕತ್ತರಿಸಲು ಬಳಸುವ ಚೂರಿಯಿಂದ ಫರಾನ್‌ಗೆ ಇರಿದಿದ್ದರು.’

‘ತೀವ್ರ ಗಾಯಗೊಂಡು ರಕ್ತಸ್ರಾವದಿಂದಾಗಿ ಫರಾನ್ ಮೃತಪಟ್ಟಿದ್ದಾರೆ. ಆರೋಪಿ ಯೂಸೂಫ್ ತಲೆಮರೆಸಿಕೊಂಡಿದ್ದಾರೆ’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಸ್ನೇಹಿತೆ ಮನೆಯಲ್ಲಿ ಚಿನ್ನ ಕದ್ದಿದ್ದ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಗಲಗುಂಟೆ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕಳ್ಳತನ ಪ್ರಕರಣ ಸಂಬಂಧ ಆರೋಪಿ ಸಂಜಯ್ ಅಲಿಯಾಸ್ ಬಿ.ಕೆ.ಸಿದ್ದಪ್ಪ (38) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಮಂಡ್ಯ ಜಿಲ್ಲೆಯ ದೊಡ್ಡ ಬಾಣಸವಾಡಿಯ ಸಂಜಯ್, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ. ಚಿಕ್ಕಬಾಣಾವರದಲ್ಲಿ ನೆಲೆಸಿದ್ದ. ಸ್ನೇಹಿತೆ ಮನೆಯಲ್ಲಿ ಕಳ್ಳತನ ಮಾಡಿದ್ದ. ಆತನಿಂದ ₹ 18 ಲಕ್ಷ ಮೌಲ್ಯದ ಚಿನ್ನಾಭರಣ, ಇನ್ನೋವಾ ಕಾರು ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘2015ರಲ್ಲಿ ಚಿಕ್ಕಬಾಣಾವರದ ಚಂದ್ರಕಲಾ ಟ್ರಾವೆಲ್ಸ್ ಕಂಪನಿಯಲ್ಲಿ ವ್ಯವಸ್ಥಾಪಕನಾಗಿ ಆರೋಪಿ ಕೆಲಸ ಮಾಡುತ್ತಿದ್ದ. ಅದೇ ಸಂದರ್ಭದಲ್ಲೇ ಆತನಿಗೆ ದೂರುದಾರರ ಪರಿಚಯವಾಗಿ ಸ್ನೇಹ ಏರ್ಪಟ್ಟಿತ್ತು. ಸ್ನೇಹಿತೆ ಮನೆಗೆ ಆಗಾಗ ಬಂದು ಹೋಗುತ್ತಿದ್ದ.’

‘2020ರ ಆಗಸ್ಟ್ 18ರಂದು ಸಂಜೆ ಸ್ನೇಹಿತೆ ಮನೆಗೆ ಹೋಗಿದ್ದ ಆರೋಪಿ, ಕುಶಲೋಪರಿ ವಿಚಾರಿಸಿದ್ದ. ಕೆಲಸ ನಿಮಿತ್ತ ಸ್ನೇಹಿತೆ, ಅವಸರದಲ್ಲಿ ಮನೆಯಿಂದ ಹೋಗಿದ್ದರು. ತಾವು ವಾಪಸು ಬರುವವರೆಗೂ ಮನೆಯಲ್ಲೇ ಕುಳಿತುಕೊಳ್ಳುವಂತೆ ಸಂಜಯ್‌ಗೆ ಹೇಳಿದ್ದರು. ಸಂಜೆ ಮನೆಗೆ ಬಂದಾಗ ಆರೋಪಿ ಇರಲಿಲ್ಲ. ಕೊಠಡಿಯ ಮಂಚದ ಮೇಲಿದ್ದ ಚಿನ್ನಾಭರಣವೂ ಕಾಣಿಸಿರಲಿಲ್ಲ. ಮನೆಗೆ ಬಂದಿದ್ದ ಸಂಜಯ್‌ನೇ ಕೃತ್ಯ ಎಸಗಿರುವ ಅನುಮಾನ ವ್ಯಕ್ತಪಡಿಸಿ ಸ್ನೇಹಿತೆ ಠಾಣೆಗೆ ದೂರು ನೀಡಿದ್ದರು. ಆರೋಪಿ ತಲೆಮರೆಸಿಕೊಂಡಿದ್ದ’ ಎಂದೂ ಪೊಲೀಸರು ತಿಳಿಸಿದರು.

‘ಠಾಣೆ ವ್ಯಾಪ್ತಿಯ ಮಂಜುನಾಥನಗರದ ಬಸ್ ತಂಗುದಾಣ ಸಮೀಪ ಏಪ್ರಿಲ್ 4ರಂದು ಆರೋಪಿ ಕಾಣಿಸಿಕೊಂಡಿದ್ದ. ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಆತನನ್ನು ಬಂಧಿಸಲಾಯಿತು. ಲಾಕ್‌ಡೌನ್‌ನಿಂದಾಗಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ಆರೋಪಿ, ಪರಿಚಯಸ್ಥರ ಇನ್ನೋವಾ ಕಾರು ಹಾಗೂ ಬೈಕ್ ಕದ್ದಿರುವುದು ತನಿಖೆಯಿಂದ ತಿಳಿಯಿತು’ ಎಂದೂ ಹೇಳಿದರು.

ಮಾವು ಖರೀದಿಗೆ ಆನ್‌ಲೈನ್ ಪೋರ್ಟಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾವಿನ ಹಣ್ಣನ್ನು ಮನೆ ಮನೆಗೆ ತಲುಪಿಸಲು ಮುಂದಾಗಿರುವ ಮಾವು ಅಭಿವೃದ್ಧಿ ನಿಗಮ ಆನ್‌ಲೈನ್ ಮೂಲಕ ಮಾವು ಖರೀದಿಗೆ ಪೋರ್ಟಲ್ ಆರಂಭಿಸಿದೆ. ಈ ಪೋರ್ಟಲ್ ಗುರುವಾರದಿಂದ ಕಾರ್ಯಾರಂಭಗೊಂಡಿದ್ದು, ಮನೆಯಲ್ಲೇ ಕುಳಿತು ಮಾವು ಖರೀದಿಸಲು ಸಾಧ್ಯವಿದೆ ಎಂದು ನಿಗಮದ ಅಧ್ಯಕ್ಷ ಕೆ.ವಿ. ನಾಗರಾಜ ತಿಳಿಸಿದರು.

‘ಮಾವು ಬೆಳೆಗಾರರಿಗೆ ಪ್ರೋತ್ಸಾಹ ನೀಡುವ ಸಲುವಾಗಿ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ‘ಕರ್‌ಸಿರಿ ಮ್ಯಾಂಗೋಸ್’ ಎಂಬ ಪೋರ್ಟಲ್ ಆರಂಭಿಸಿದೆ. ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿದರೆ ಪ್ರತಿ ಮಂಗಳವಾರ ಮತ್ತು ಶುಕ್ರವಾರ ಅಂಚೆ ಮೂಲಕ ಮಾವು ತಲುಪಿಸಲಾಗುವುದು’ ಎಂದು ತಿಳಿಸಿದರು.

‘ಕಳೆದ ವರ್ಷದಿಂದ ರೈತರಿಗೆ ತರಬೇತಿ ನೀಡಲಾಗುತ್ತಿದ್ದು, ಉತ್ತಮ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಈ ಬಾರಿ 17 ಜಿಲ್ಲೆಗಳಿಂದ 14 ಲಕ್ಷ ಟನ್ ಮಾವು ನಿರೀಕ್ಷೆಯಿತ್ತು. ಫೆಬ್ರುವರಿ ತಿಂಗಳಲ್ಲಿ ಬಿದ್ದ ಅಕಾಲಿಕ ಮಳೆಯಿಂದ ಕೇವಲ 9ರಿಂದ 10 ಟನ್ ಮಾವು ಬೆಳೆದಿದ್ದಾರೆ. ಕಳೆದ ವರ್ಷ ಜನರು ಪೋರ್ಟಲ್ ಮೂಲಕ 100 ಟನ್ ಮಾವು ಖರೀದಿ ಮಾಡಿದ್ದರು. ಇದರಿಂದ ರೈತರಿಗೆ ₹1.5 ಕೋಟಿ ಜಮೆ ಮಾಡಲಾಗಿತ್ತು. ಈ ಬಾರಿ 500 ಟನ್ ಮಾರಾಟದ ಗುರಿ ಹೊಂದಲಾಗಿದೆ’ ಎಂದು ತಿಳಿಸಿದರು.

‘ಈ ಪೋರ್ಟಲ್ ಮೂಲಕ ರೈತರು ನೇರವಾಗಿ ಮಾವು ಮಾರಾಟ ಮಾಡಲಿದ್ದಾರೆ. ಕಳೆದ ವರ್ಷ 600 ಟನ್‌ನಷ್ಟು ಮಾವಿನ ಹಣ್ಣನ್ನು ಮಾರಾಟ ಮಾಡಲಾಗಿದೆ. ಈ ಬಾರಿ 1 ಸಾವಿರ ಟನ್ ಮಾವಿನ ಹಣ್ಣನ್ನು ಮಾರಾಟ ಮಾಡಲು ಗುರಿ ಹೊಂದಲಾಗಿದೆ’ ಎಂದರು.

ತೋಟಗಾರಿಕೆ ಇಲಾಖೆ ನಿರ್ದೇಶಕಿ ಬಿ.ನೌಜಿಯಾ ತರನಮ್ ಮಾತನಾಡಿ, ‘ಈ ವರ್ಷ ಆರೋಗ್ಯ ಇಲಾಖೆಯ ನಿಯಮಗಳನ್ನು ಅನುಸರಿಸಿ ಪ್ರತಿ ಜಿಲ್ಲೆಯಲ್ಲಿಯೂ ಮಾವು ಮೇಳ ನಡೆಸಲಾಗುವುದು. ಈವರೆಗೆ ಪೋರ್ಟಲ್ ಅನ್ನು 12 ಲಕ್ಷ ಮಂದಿ ವೀಕ್ಷಣೆ ಮಾಡಿದ್ದಾರೆ. ಗ್ರಾಹಕರು ಪೋರ್ಟಲ್ ಮೂಲಕ ಖರೀದಿ ಮಾಡಬಹುದು. ಕೋವಿಡ್ ಇರುವುದರಿಂದ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಹೆಚ್ಚಿನ ಮಾಹಿತಿಗೆ 6366783105 ಸಂಪರ್ಕಿಸಬಹುದು’ ಎಂದು ತಿಳಿಸಿದರು.

ಸಾರಿಗೆ ಬಸ್‌ಗಳ ಸಂಖ್ಯೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನೌಕರರ ಮೇಲೆ ಸರ್ಕಾರ ಕ್ರಮಕ್ಕೆ ಮುಂದಾಗಿರುವ ನಡುವೆ, ನಗರದಲ್ಲಿ ಸಾರಿಗೆ ನಿಗಮಗಳ ಬಸ್‌ಗಳ ಸಂಚಾರ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದೆ.

ಕೆಎಸ್‌ಆರ್‌ಟಿಸಿಯ 2,651, ಬಿಎಂಟಿಸಿಯ 873, ಎನ್‌ಇಕೆಆರ್‌ಟಿಸಿಯ 1,150 ಮತ್ತು ಎನ್‌ಡಬ್ಲ್ಯುಆರ್‌ಟಿಸಿಯ 956 ಬಸ್‌ಗಳು ಸೇರಿ ಶುಕ್ರವಾರ ಒಟ್ಟು 5,639 ಬಸ್‌ಗಳು ಕಾರ್ಯಾಚರಣೆ ಮಾಡಿದವು. ಗುರುವಾರ 4209 ಬಸ್‌ಗಳು ಕಾರ್ಯಾಚರಣೆ ಮಾಡಿದ್ದವು.

ಇದರ ನಡುವೆಯೂ ಖಾಸಗಿ ಬಸ್‌ಗಳ ದರ್ಬಾರ್ ಮುಂದುವರಿದಿದೆ. ಬಸ್‌ಗಳಲ್ಲಿ ದುಪ್ಪಟ್ಟು ದರ ವಸೂಲಿ ಮಾಡುವುದು ಕೂಡ ಮುಂದುವರಿದಿತ್ತು. ಈ ನಡುವೆ ಬಿಎಂಟಿಸಿ ನೌಕರರ ಮೇಲಿನ ಕ್ರಮ ಕೂಡ ತೀವ್ರಗೊಂಡಿದೆ. ಒಟ್ಟಾರೆ 820 ಜನರನ್ನು ಬಿಎಂಟಿಸಿ ವಜಾಗೊಳಿಸಿದೆ. ಇದರಲ್ಲಿ ತರಬೇತಿ, ಪ್ರೊಬೇಷನರಿ ಅವಧಿಯ 580 ಸಿಬ್ಬಂದಿಯೂ ಇದ್ದಾರೆ. ಶುಕ್ರವಾರ ಇನ್ನೂ 232 ಮಂದಿಯನ್ನು ಅಮಾನತುಗೊಳಿಸಲಾಗಿದ್ದು, ಸದ್ಯ 727 ಮಂದಿ ಅಮಾನತಿನಲ್ಲಿದ್ದಾರೆ ಎಂದು ಬಿಎಂಟಿಸಿ ತಿಳಿಸಿದೆ.

ಬಿಎಂಟಿಸಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಕಾದಿರುವ ಬಸ್‌ಗಳು –ಪ್ರಜಾವಾಣಿ ಚಿತ್ರ

ಕೆಎಸ್‌ಆರ್‌ಟಿಸಿಯಲ್ಲಿ ಈವರೆಗೆ 85 ಮಂದಿ ವಜಾಗೊಂಡಿದ್ದಾರೆ. ಬೇರೆ ಮೂರು ನಿಗಮಗಳಿಗೆ ಹೋಲಿಸಿದರೆ ಬಿಎಂಟಿಸಿಯಲ್ಲೇ ಅತೀ ಹೆಚ್ಚು ಸಿಬ್ಬಂದಿಯನ್ನು ವಜಾಗೊಳಿಸಲಾಗಿದೆ. ಮುಷ್ಕರಕ್ಕೆ ಕರೆ ನೀಡಿರುವ ಸಾರಿಗೆ ನೌಕರರ ಕೂಟದಲ್ಲಿ ಬಿಎಂಟಿಸಿ ನೌಕರರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಮುಷ್ಕರವನ್ನು ನೇರವಾಗಿ ಬೆಂಬಲಿಸುತ್ತಿರುವ ನೌಕರರನ್ನು ಗುರುತಿಸಿ ಪಟ್ಟಿ ಮಾಡಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ನೌಕರರು ದೂರುತ್ತಾರೆ.

‘ಕೆಎಸ್‌ಆರ್‌ಟಿಸಿ ಸೇರಿ ಬೇರೆ ನಿಗಮಗಳಲ್ಲಿ ಗೈರಾದ ನೌಕರರನ್ನು ವರ್ಗಾವಣೆ ಮಾಡಲಾಗುತ್ತಿದೆ. ಬಿಎಂಟಿಸಿಯಲ್ಲಿ ವರ್ಗಾವಣೆ ಮಾಡಿದರೆ ಬೆಂಗಳೂರಿನಲ್ಲೇ ಬೇರೆ ಡಿಪೋ ಸಿಗಲಿದೆ. ಅದಕ್ಕೆ ನೌಕರರು ಹೆದರುವ ಸಾಧ್ಯತೆ ಇಲ್ಲ. ಹೀಗಾಗಿ, ಅಮಾನತು ಮತ್ತು ವಜಾ ರೀತಿಯ ಕ್ರಮಗಳನ್ನು ಅನುಸರಿಸಲಾಗುತ್ತಿದೆ’ ಎಂದು ಅಧಿಕಾರಿಗಳು ಹೇಳುತ್ತಾರೆ.

ಹತ್ಯೆಯಾದ ಬಾಲಕ ಬಜರಂಗದಳದ ಕಾರ್ಯಕರ್ತ

ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಶಿವಲಿಂಗು ಸೇರಿ 17 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಮಂಡ್ಯ: ಹದಿಹರೆಯದವರ ಪ್ರೇಮ ಪ್ರಕರಣಕ್ಕೆ ಸಂಬಂಧಿಸಿ ಮಂಡ್ಯದಲ್ಲಿ ನಡೆದ ಬಾಲಕನ ಕೊಲೆ ಪ್ರಕರಣದಲ್ಲಿ, ಬಾಲಕಿಯ ತಂದೆ, ನಗರಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಎಸ್. ಶಿವಲಿಂಗು ಹಾಗೂ ಅವರ ಪತ್ನಿ ಅನುರಾಧಾ ಸೇರಿದಂತೆ ಎಲ್ಲ 17 ಆರೋಪಿಗಳನ್ನು ಶುಕ್ರವಾರ ಬಂಧಿಸಲಾಗಿದೆ.

ಬಂಧಿತರಲ್ಲಿ, ಮೈಸೂರು ಜಿಲ್ಲಾ ಅಪರಾಧ ನಿಗ್ರಹ ದಳದ ಸಬ್‌ಇನ್‌ಸ್ಪೆಕ್ಟರ್ ಒಬ್ಬರ ಇಬ್ಬರು ಮಕ್ಕಳೂ ಸೇರಿದ್ದಾರೆ. ಪ್ರಮುಖ ಆರೋಪಿಗಳನ್ನು ಪೊಲೀಸ್ ವಶಕ್ಕೆ ಪಡೆಯಲಾಗಿದ್ದು, ಉಳಿದವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಬಜರಂಗದಳದ ಕಾರ್ಯಕರ್ತ: ಬಾಲಕಿಯ ಕುಟುಂಬದ ಸದಸ್ಯರಿಂದ ಹತ್ಯೆಗೀಡಾದ ಬಾಲಕ ದರ್ಶನ್, ಬಜರಂಗದಳ ನಗರ ವಿದ್ಯಾರ್ಥಿ ಘಟಕದ ಅಧ್ಯಕ್ಷನಾಗಿದ್ದ ಎಂಬ ವಿಚಾರ ಬೆಳಕಿಗೆ ಬಂದಿದೆ.

ಬಜರಂಗದಳ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ ಈತ ಕಲ್ಲಹಳ್ಳಿಯಲ್ಲಿ ಕಚೇರಿ ತೆರೆಯಲು ಸಿದ್ಧತೆ ನಡೆಸಿದ್ದ. ಅಕ್ರಮವಾಗಿ ಹಸು ಸಾಗಿಸುವ ಪ್ರಕರಣ ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ. ಪೊಲೀಸರಿಗೆ ಮಾಹಿತಿಯನ್ನೂ ನೀಡುತ್ತಿದ್ದ ಎನ್ನಲಾಗಿದೆ.

ಹತ್ಯೆಯಾದ ಯುವಕನ ಬೃಹತ್ ಕಟೌಟ್ ಹಾಕಿರುವುದು

ಎಂ.ಎಸ್. ಶಿವಲಿಂಗು

ಆತನ ಸಾವಿನ ಸುದ್ದಿ ತಿಳಿದ ನಂತರ ಬಜರಂಗದಳ ಕಾರ್ಯಕರ್ತರು ಆರೋಪಿ ಶಿವಲಿಂಗು ಅವರ ಮನೆ ಹಾಗೂ ಪೊಲೀಸ್ ಠಾಣೆ ಮುಂದೆ ಪ್ರತಿಭಟನೆ ನಡೆಸಲು ಸಜ್ಜಾಗಿದ್ದರು. ಆದರೆ, ವೈಯಕ್ತಿಕ ವಿಚಾರವಾದ ಕಾರಣ ಹಿರಿಯರ ಸಲಹೆ ಮೇರೆಗೆ ಪ್ರತಿಭಟನೆ ಕೈಬಿಟ್ಟರು ಎಂದು ಮೂಲಗಳು ತಿಳಿಸಿವೆ.

ಪೊಲೀಸ್ ಭದ್ರತೆ ನಡುವೆ ಅಂತ್ಯಕ್ರಿಯೆ: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಅಶ್ವಿನಿ ನೇತೃತ್ವದಲ್ಲಿ 200ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯ ಭದ್ರತೆ ನಡುವೆ ಶುಕ್ರವಾರ ಕಲ್ಲಹಳ್ಳಿ ಸ್ಮಶಾನದಲ್ಲಿ ದರ್ಶನ್ ಅಂತ್ಯಕ್ರಿಯೆ ನೆರವೇರಿತು.

ಕಲ್ಲಹಳ್ಳಿಯ ವಿವಿಧೆಡೆ ದರ್ಶನ್ ಸಾವಿಗೆ ಶ್ರದ್ಧಾಂಜಲಿ ಕೋರಿ ಬೃಹತ್ ಕಟೌಟ್ ಹಾಕಲಾಗಿದೆ. ಈಗಲೂ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದ್ದು, ಬಿಗಿ ಭದ್ರತೆ ಮುಂದುವರಿಸಲಾಗಿದೆ.

‘ಇಸಾಕ್ ಗ್ರಂಥಾಲಯಕ್ಕೆ ಸರ್ಕಾರದ ನೆರವು’

ಬೆಂಗಳೂರು: ‘ಮೈಸೂರಿನ ಸೈಯದ್ ಇಸಾಕ್ ಅವರ ಸಾರ್ವಜನಿಕ ಗ್ರಂಥಾಲಯಕ್ಕೆ ಸರ್ಕಾರದಿಂದ ನೆರವು ನೀಡಲಾಗುವುದು’ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ತಿಳಿಸಿದ್ದಾರೆ.

ಗ್ರಂಥಾಲಯಕ್ಕೆ ರಾಜಾರಾಂ ಮೋಹನರಾಯ್ ಗ್ರಂಥಾಲಯ ಪ್ರತಿಷ್ಠಾನದ ವತಿಯಿಂದ ಸಹಾಯ ಧನವನ್ನು ಮಂಜೂರು ಮಾಡಲು ಕೂಡಲೇ ಪ್ರಸ್ತಾವ ಸಲ್ಲಿಸಬೇಕೆಂದು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಅವರು ಸೂಚನೆ ನೀಡಿದ್ದಾರೆ.

ದುಷ್ಕರ್ಮಿಗಳ ಕೃತ್ಯದಿಂದ 10 ಸಾವಿರಕ್ಕೂ ಹೆಚ್ಚು ಪುಸ್ತಕಗಳು ಭಸ್ಮವಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ನೆರವಿಗೆ ಧಾವಿಸಲು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಟಿಪ್ಪಣಿ ಮೂಲಕ ಸಚಿವರು ಸೂಚಿಸಿದ್ದಾರೆ.

ಇಲಾಖೆಯ ವತಿಯಿಂದ ನಿರ್ದಿಷ್ಟ ವರ್ಷದ ಪುಸ್ತಕ ಆಯ್ಕೆಯಾಗಿ ಲೇಖಕರು ಮತ್ತು ಪ್ರಕಾಶಕರಿಂದ ಸ್ವೀಕರಿಸಲ್ಪಟ್ಟು ಇಲಾಖೆಯಲ್ಲಿ ಸಂಗ್ರಹಿಸಲಾಗುವ ಆಯ್ದ ಪುಸ್ತಕಗಳನ್ನು ಇಸಾಕ್ ಅವರ ಗ್ರಂಥಾಲಯಕ್ಕೆ ಒದಗಿಸಲು ಕ್ರಮ ಕೈಗೊಳ್ಳಬೇಕು ಎಂದೂ ಅವರು ಸೂಚನೆ ನೀಡಿದ್ದಾರೆ.

ಪುಸ್ತಕ ನೆರವು

ಬೆಂಗಳೂರು: ಮೈಸೂರಿನ ಸೈಯದ್ ಇಸಾಕ್ ಅವರಿಗೆ ಗ್ರಂಥಾಲಯವನ್ನು ಪುನರ್ ಸ್ಥಾಪಿಸಲು ₹ 10 ಸಾವಿರ ನಗದು ಹಾಗೂ 5 ಸಾವಿರ ಪುಸ್ತಕಗಳನ್ನು ನೀಡಲಾಗುವುದು ಎಂದು ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ ಘೋಷಿಸಿದೆ.

ಕೆಲ ದಿನಗಳ ಹಿಂದೆ ಕಿಡಿಗೇಡಿಗಳು ಅವರ ಗ್ರಂಥಾಲಯಕ್ಕೆ ಬೆಂಕಿ ಹಚ್ಚಿದ್ದರು. ಸುಮಾರು 11 ಸಾವಿರ ಪುಸ್ತಕಗಳು ಭಸ್ಮವಾಗಿದ್ದವು. ‘ಪುಸ್ತಕಗಳು ಹಾಗೂ ಆರ್ಥಿಕ ನೆರವನ್ನು ನೀಡಲು ಸಂಘವು ತನ್ನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನಿಸಿದೆ’ ಎಂದು ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ ಹಾಗೂ ಕಾರ್ಯದರ್ಶಿ ಆರ್. ದೊಡ್ಡೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಬ್ಲಿಕ್ ಶಾಲಾ ಮಕ್ಕಳಿಗೆ ವರ್ಕ್ ಬುಕ್ ವಿತರಣೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸರ್ಕಾರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುವ ಬಡ ಮಕ್ಕಳಿಗೆ ಸಂಘಸಂಸ್ಥೆಗಳು ನೆರವು ನೀಡುವ ಮೂಲಕ ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ ಎಂದು ಪಾಲಿಕೆಯ ಮಾಜಿ ನಾಮನಿರ್ದೇಶಿತ ಸದಸ್ಯ ಪಿ.ಜೆ.ಅಂತೋಣಿಸ್ವಾಮಿ ಹೇಳಿದರು.

ಕೆ.ಆರ್.ಪುರ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಹಾಗೂ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ವತಿಯಿಂದ ಹತ್ತನೇ ತರಗತಿಯ 205 ವಿದ್ಯಾರ್ಥಿಗಳಿಗೆ ವರ್ಕ್ ಬುಕ್ ವಿತರಿಸಿ ಮಾತನಾಡಿದರು.

ಶಾಲಾ ವಿದ್ಯಾರ್ಥಿಗಳಿಗೆ ಪಿ.ಜೆ.ಅಂತೋಣಿಸ್ವಾಮಿ ವರ್ಕ್ ಬುಕ್ ವಿತರಿಸಿದರು. ಪ್ರಾಂಶುಪಾಲ ಕೃಷ್ಣಪ್ಪ, ಮುಖಂಡರಾದ ಶಮಂತ್, ಗಿರೀಶ್, ಚೇತನ್, ನಂದಕುಮಾರ್ ಇದ್ದರು.

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಚಾಲಕಿ ಸವಿತಾ ಮಾತನಾಡಿ, ಬಡ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲು 205 ವಿದ್ಯಾರ್ಥಿಗಳಿಗೆ ಸಮಾಜಶಾಸ್ತ್ರ, ವಿಜ್ಞಾನ ಮತ್ತು ಗಣಿತ ವಿಷಯಗಳ ವರ್ಕ್ ಬುಕ್‌ಗಳನ್ನು ಸಂಸ್ಥೆ ವತಿಯಿಂದ ಉಚಿತವಾಗಿ ನೀಡಲಾಗಿದೆ ಎಂದರು.

‘ನೈರುತ್ಯ ಮುಂಗಾರು ವಾಡಿಕೆ ಮಳೆ ನಿರೀಕ್ಷೆ’

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷ ದೇಶದಲ್ಲಿ ನೈರುತ್ಯ ಮುಂಗಾರು ಮಳೆ ಪ್ರಮಾಣ ವಾಡಿಕೆಯಷ್ಟು ಇರಲಿದೆ ಎಂದು ಹವಾಮಾನ ಇಲಾಖೆ ಶುಕ್ರವಾರ ಮುನ್ಸೂಚನೆ ನೀಡಿದೆ. ಮಳೆಯ ಒಟ್ಟು ಪ್ರಮಾಣದಲ್ಲಿ ಶೇ 75ರಷ್ಟು ಮಳೆಯು ನೈರುತ್ಯ ಮುಂಗಾರು ಅವಧಿಯಲ್ಲಿಯೇ ಸುರಿಯಲಿದೆ.

‘ಈ ಬಾರಿ ಮಳೆಯ ದೀರ್ಘಾವಧಿ ಸರಾಸರಿ ಪ್ರಮಾಣವು (ಲಾಂಗ್ ಪೀರಿಯಡ್ ಆವರೇಜ್–ಎಲ್‌ಪಿಎ) ಶೇ 98ರಷ್ಟು ಇರಲಿದೆ, ಇದರಲ್ಲಿ ಶೇ 5ರಷ್ಟು ಹೆಚ್ಚು ಅಥವಾ ಕಡಿಮೆ ಆಗಬಹುದು' ಎಂದು ಭೂ ವಿಜ್ಞಾನ ಸಚಿವಾಲಯದ ಕಾರ್ಯದರ್ಶಿ ಎಂ.ರಾಜೀವನ್ ತಿಳಿಸಿದ್ದಾರೆ.

ಜೂನ್ ತಿಂಗಳಿನಲ್ಲಿ ಕೇರಳ ಕರಾವಳಿಯ ಮೂಲಕ ಭಾರತವನ್ನು ಪ್ರವೇಶಿಸುವ ನೈರುತ್ಯ ಮಾರುತ, ಸೆಪ್ಟೆಂಬರ್ ಅಂತ್ಯದವರೆಗೆ ನಾಲ್ಕು ತಿಂಗಳು ಮಳೆಯನ್ನು ತರುತ್ತದೆ ಎಂದ ಅವರು, ಮುಂಗಾರು ಮುನ್ಸೂಚನಾ ವರದಿಯನ್ನು ಬಿಡುಗಡೆ ಮಾಡಿದರು.

ಖಾಸಗಿ ಹವಾಮಾನ ಮುನ್ಸೂಚನೆ ಸಂಸ್ಥೆ ‘ಸ್ಕೈಮೆಟ್’ ಪ್ರಕಾರ, ಉತ್ತರ ಭಾರತದ ನೈರುತ್ಯ ವಲಯದ ಕೆಲ ಭಾಗಗಳು ಈ ಋತುವಿನಲ್ಲಿ ಮಳೆ ಕೊರತೆ ಎದುರಾಗುವ ಸಂಭವವಿದೆ. ಕರ್ನಾಟಕದ ಒಳನಾಡಿನ ಕೆಲವೆಡೆ ಮುಂಗಾರು ಅವಧಿಯ ಪ್ರಮುಖ ಮಾಸಗಳಾದ ಜುಲೈ, ಆಗಸ್ಟ್‌ನಲ್ಲಿ ಕಡಿಮೆ ಮಳೆಯಾಗಬಹುದು.

‘ಎಸ್ಸೆಸ್ಸೆಲ್ಸಿ, ಪಿಯುಸಿ: ಸದ್ಯಕ್ಕೆ ನಿಗದಿಯಂತೆ ಪರೀಕ್ಷೆ’

ಪ್ರಜಾವಾಣಿ ವಾರ್ತೆ

ಹನೂರು: ಈಗಿರುವ ಪರಿಸ್ಥಿತಿಯಲ್ಲಿ, ರಾಜ್ಯದಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆ ನಿಗದಿಯಂತೆ ನಡೆಯಲಿವೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ಶುಕ್ರವಾರ ಹೇಳಿದರು.

ತಾಲ್ಲೂಕಿನ ಲೊಕ್ಕನಹಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಜೂನ್ 21ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ. ಕಳೆದ ವರ್ಷ, ಪರೀಕ್ಷೆ ಸಂದರ್ಭದಲ್ಲಿ ಪಾಲಿಸಿದ ಮಾನದಂಡಗಳು ಸಾಕೇ ಅಥವಾ ಹೊಸದಾಗಿ ಇನ್ನೇನಾದರೂ ರೂಪಿಸಬೇಕೇ ಎಂಬ ಬಗ್ಗೆ ಆರೋಗ್ಯ ಇಲಾಖೆಯನ್ನು ಕೇಳಿದ್ದೇವೆ. ಶೀಘ್ರದಲ್ಲಿ ವರದಿ ಬರಲಿದೆ. ಇನ್ನೂ ಸಮಯವಿರುವುದರಿಂದ ಕಾಲ ಕಾಲಕ್ಕೆ ಅಗತ್ಯ ನಿರ್ಧಾರ ತೆಗೆದುಕೊಳ್ಳಲಾಗುವುದು’ ಎಂದರು.

‘ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕೂಡ ಪರೀಕ್ಷೆ ನಡೆಯಬೇಕು ಎಂದು ಪತ್ರ ಬರೆದಿದ್ದಾರೆ. ಪರಿಸ್ಥಿತಿ ಅವಲೋಕಿಸಿ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ಸಚಿವರು ಹೇಳಿದರು.

‘1 ರಿಂದ 5 ಮತ್ತು 6 ರಿಂದ 9 ನೇ ತರಗತಿ ಪರೀಕ್ಷೆ ಬಗ್ಗೆ ಇನ್ನೂ ತೀರ್ಮಾನ ಆಗಿಲ್ಲ. 1ರಿಂದ 9 ನೇ ತರಗತಿವರೆಗೆ ಪರೀಕ್ಷೆ ನಡೆಸುವ ಬಗ್ಗೆ ತಜ್ಞರೊಂದಿಗೆ ಚರ್ಚಿಸಲಾಗಿದ್ದು, ಶೀಘ್ರವೇ ಈ ಬಗ್ಗೆ ನಿರ್ಧರಿಸಲಾಗುವುದು’ ಎಂದು ಪ್ರಶ್ನೆಯೊಂದಕ್ಕೆ ಅವರು ಉತ್ತರಿಸಿದರು.

ಅಪಾರ್ಟ್‌ಮೆಂಟ್ ಕಾಯ್ದೆ ಅನುಷ್ಠಾನ ಕೋರಿ ಪಿಐಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕರ ಸಂಘಗಳ ಕಾಯ್ದೆ ಅನುಷ್ಠಾನಕ್ಕೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ ರಾಜ್ಯ ಸರ್ಕಾರಕ್ಕೆ ನೋಟಿಸ್ ನೀಡಲು ಹೈಕೋರ್ಟ್ ಆದೇಶಿಸಿದೆ.

ಬೆಂಗಳೂರಿನ ವಕೀಲ ಎನ್. ಅಭಿಲಾಷ್ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ‘ಹಲವು ಅಪಾರ್ಟ್‌ಮೆಂಟ್ ಮಾಲೀಕರು ಕಾಯ್ದೆಯಡಿ ನಿಬಂಧನೆಗಳ ಅಡಿ ಸಂಘಗಳನ್ನು ನೊಂದಾಯಿಸಲು ಸಿದ್ಧರಿಲ್ಲ. ನಿಯಮಾವಳಿ ರೂಪಿಸಬೇಕು ಎಂಬ ಕಾಯ್ದೆಯಲ್ಲಿರುವ ಅಧಿಕಾರವನ್ನು ಸರ್ಕಾರ ಬಳಿಸಿಕೊಳ್ಳುತ್ತಿಲ್ಲ’ ಎಂದು ಅರ್ಜಿದಾರರು ತಿಳಿಸಿದ್ದಾರೆ.

‘ಕಾಯ್ದೆಯಡಿ ನಿಯಮಗಳನ್ನು ರೂಪಿಸುವ ಅಧಿಕಾರ ಇದ್ದರೂ, ಸರ್ಕಾರ ಏಕೆ ಬಳಸಿಕೊಂಡಿಲ್ಲ. ಈ ಬಗ್ಗೆ ಆಕ್ಷೇಪಣಾ ಹೇಳಿಕೆ ಸಲ್ಲಿಸಬೇಕು’ ಎಂದು ಪೀಠ ತಿಳಿಸಿತು.

ಜಾಹೀರಾತಿನಲ್ಲಿ ಜನಪ್ರತಿನಿಧಿ ಹೆಸರು, ಚಿತ್ರ: ನೋಟಿಸ್

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿನ ಜಾಹೀರಾತುಗಳಲ್ಲಿ ಜನಪ್ರತಿನಿಧಿಗಳ ಹೆಸರು ಮತ್ತು ಭಾವಚಿತ್ರಗಳನ್ನು ತೆಗೆದುಹಾಕಬೇಕು ಎಂದು ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ, ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಗೆ ನೋಟಿಸ್ ನೀಡಲು ಹೈಕೋರ್ಟ್ ಆದೇಶಿಸಿದೆ.

ಸಾಮಾಜಿಕ ಕಾರ್ಯಕರ್ತ ಎಚ್.ಎಂ. ವೆಂಕಟೇಶ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಜೂ.7ರೊಳಗೆ ಆಕ್ಷೇಪಣೆ ಸಲ್ಲಿಸಬೇಕು ತಿಳಿಸಿತು.

‘ಬಸ್ ನಿಲ್ದಾಣ, ಸಾರ್ವಜನಿಕ ಶೌಚಾಲಯ, ಕುಡಿಯುವ ನೀರಿನ ಘಟಕಗಳಲ್ಲಿನ ಜಾಹೀರಾತು ಮತ್ತು ಫಲಕಗಳಲ್ಲಿ ಇರುವ ಜನಪ್ರತಿನಿಧಿಗಳ ಹೆಸರು ಮತ್ತು ಭಾವಚಿತ್ರಗಳನ್ನು ತೆಗೆದುಹಾಕಬೇಕು ಎಂದು ಸುಪ್ರಿಂ ಕೋರ್ಟ್ 2020 ಮೇ 13ರಂದು ಆದೇಶಿಸಿದೆ. ಅದನ್ನು ಪಾಲಿಸುತ್ತಿಲ್ಲ. ಸರ್ಕಾರದ ಹಣದಲ್ಲಿ ಜನಪ್ರತಿನಿಧಿಗಳು ಅಗತ್ಯಕ್ಕಿಂತ ಹೆಚ್ಚು ಪ್ರಚಾರ ತೆಗೆದುಕೊಳ್ಳುತ್ತಿದ್ದಾರೆ’ ಎಂದು ಅರ್ಜಿದಾರರು ದೂರಿದ್ದಾರೆ.

ಪ್ಲಾಸ್ಟಿಕ್ ಅಥವಾ ಸ್ಟೀಲಿನ ಡಬ್ಬಿಯಲ್ಲಿ ಆಭರಣವನ್ನು ಇಡುವ ಮುನ್ನ ಅದಕ್ಕೆ ಕಾಟನ್ ಬಟ್ಟೆಯನ್ನು ಸುತ್ತಿ ಇಡುವುದು ಒಳ್ಳೆಯದು. ಇದರಿಂದ ಆಭರಣ ಹಾಳಾಗದಂತೆ ಸುರಕ್ಷಿತವಾಗಿ ಇಡಬಹುದು

'ಭಾನುವಾರದ ಪುರವಣಿ' ಓದಿರಿ

ಅಂತರ್ಜಾಲವೆಂಬ ಗೂಡಿನಲ್ಲಿ ಮಕ್ಕಳ ಮೇಲಿರಲಿ ನಿಗಾ

ರೇಷ್ಮಾ

'ನನ್ನ ಮಗ ಅಥರ್ವ ಇತ್ತೀಚೆಗೆ ತುಂಬಾ ಬದಲಾಗಿದ್ದಾನೆ. ಹಟಮಾರಿಯಾಗಿದ್ದಾನೆ. ನನ್ನ ಮಾತೇ ಕೇಳುತ್ತಿಲ್ಲ. ಯಾವಾಗಲೂ ಮೊಬೈಲ್ ಹಿಡಿದೇ ಕುಳಿತುಕೊಳ್ಳುತ್ತಾನೆ. ಊಟ-ತಿಂಡಿಯ ಮೇಲೂ ಅವನಿಗೆ ಗಮನವಿಲ್ಲ. ಜಾಸ್ತಿ ಏನಾದ್ರೂ ಮಾತನಾಡಿದ್ರೆ ಕೊಠಡಿ ಒಳಗೆ ಹೋಗಿ ಬಾಗಿಲು ಹಾಕಿಕೊಳ್ಳುತ್ತಾನೆ. ಬ್ರೆಡ್, ಬಿಸ್ಕತ್ತು ತಿನ್ನುತ್ತಾನೆ. ಯಾವಾಗ್ಲೂ ಆನ್‌ಲೈನ್‌ನಲ್ಲಿ ಏನಾದ್ರೂ ನೋಡುತ್ತಿರುತ್ತಾನೆ. ''ಕೇಳಿದ್ರೆ ಆನ್‌ಲೈನ್ ಕ್ಲಾಸ್, ನೋಟ್ಸ್ ಬರಿಯೋದು ಇದೆ, ಕ್ಲಾಸ್‌ದು ವಿಡಿಯೊ ಕಳ್ಸಿದಾರೆ, ನೋಡ್ತಾ ಇದೀನಿ'' ಅಂತಾನೆ. ಒಟ್ಟಾರೆ ಅವನ ವರ್ತನೆ ಸಂಪೂರ್ಣವಾಗಿ ಬದಲಾಗಿದೆ' ಎಂದು ತನ್ನ ಸ್ನೇಹಿತೆಯ ಬಳಿ ಗೋಳು ತೋಡಿಕೊಳ್ಳುತ್ತಿದ್ದರು ಖಾಸಗಿ ಕಂಪನಿಯಲ್ಲಿ ಉನ್ನತ ಹುದ್ದೆಯಲ್ಲಿರುವ ಶಿಲ್ಪಾ.

ಆನ್‌ಲೈನ್ ತರಗತಿಯಿಂದಾಗಿ ಮಕ್ಕಳಲ್ಲಿ ಅಂತರ್ಜಾಲ ಬಳಕೆ ಹೆಚ್ಚಿದೆ. ಆದರೆ ಅತಿಯಾದ ಬಳಕೆಯಿಂದ ಮಕ್ಕಳಲ್ಲಿ ದೈಹಿಕ ಮತ್ತು ಮಾನಸಿಕ ಸಮಸ್ಯೆ ತಲೆದೋರದಂತೆ ನಿಗಾ ವಹಿಸುವುದು ಹೇಗೆ?

ಇತ್ತೀಚೆಗೆ ಮಕ್ಕಳ ಆನ್‌ಲೈನ್ ತರಗತಿಗಳ ನಡುವೆ ಮೊಬೈಲ್ ಹಾಗೂ ಅಂತರ್ಜಾಲದ ಬಳಕೆ ಹೆಚ್ಚಿದೆ. ಅಂತರ್ಜಾಲದಿಂದ ಉಪಯೋಗವೂ ಇದೆ, ಅಪಾಯವೂ ಇದೆ. ಅಂತರ್ಜಾಲದೊಂದಿಗೆ ಬೆಳೆಯುತ್ತಿರುವ ಮಕ್ಕಳು ನೇರ ಸಂವಹನಕ್ಕಿಂತ ಇ-ಮೇಲ್ ಹಾಗೂ ಟೆಕ್ಸ್ಟ್ ಮೆಸೇಜ್‌ಗಳ ಮೂಲಕವೇ ಸಂವಹನ ನಡೆಸಲು ಹೆಚ್ಚು ಇಷ್ಟಪಡುತ್ತಾರೆ. ಅಲ್ಲದೇ ಅತಿಯಾದ ಅಂತರ್ಜಾಲ ಬಳಕೆಯು ಮಕ್ಕಳಲ್ಲಿ ನಿದ್ರಾಹೀನತೆ, ಸಾಮಾಜಿಕವಾಗಿ ಬೆರೆಯಲು ಸಾಧ್ಯವಾಗದೇ ಇರುವುದು, ಓದಿನಲ್ಲಿ ಹಿಂದುಳಿಯುವುದು ಮುಂತಾದ ಸಮಸ್ಯೆಗಳಿಗೆ ಕಾರಣವಾಗಬಹುದು.

'ಆದರೆ ಮಕ್ಕಳ ಮೊಬೈಲ್ ಹಾಗೂ ಅಂತರ್ಜಾಲ ಬಳಕೆಯಲ್ಲಿ ಪೋಷಕರ ಪಾತ್ರವೂ ದೊಡ್ಡದು. ಮಕ್ಕಳು ಮೊಬೈಲ್ ಫೋನ್‌ಗಳನ್ನು ಹೆಚ್ಚಾಗಿ ಬಳಸದಂತೆ ತಡೆಯಲು ಕೆಲವೊಂದು ಮಾರ್ಗಗಳನ್ನು ಅನುಸರಿಸಬೇಕು' ಎನ್ನುತ್ತಾರೆ ಆಪ್ತ ಸಮಾಲೋಚಕ ಮಹ್ಮದ್ ಇಕ್ಬಾಲ್.

- ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆಗೆ ಮನೆಯ ಸದಸ್ಯರಿಗೂ ನಿರ್ಬಂಧವಿರಲಿ. ಯಾಕೆಂದರೆ ಮಕ್ಕಳು ಎಲ್ಲವನ್ನೂ ಗಮನಿಸುತ್ತಾರೆ, ಅಲ್ಲದೇ ವಿಷಯಗಳನ್ನು ಗ್ರಹಿಸುತ್ತಾರೆ. ಮನೆಯ ಹಿರಿಯರು ಮಾಡುವ ಪ್ರತಿ ಕೆಲಸವನ್ನು ಅವರು ಗಮನಿಸುತ್ತಿರುತ್ತಾರೆ.
- ಮಕ್ಕಳೊಂದಿಗೆ ಸಮಯ ಕಳೆಯಿರಿ. ನಿಮಗೆ ಮುಖ್ಯವಾದ ಇ-ಮೇಲ್‌ಗಳು ಹಾಗೂ ಸಂದೇಶಗಳು ಬಂದರೆ ಅದನ್ನು ನೋಡಲು ಹಾಗೂ ಪ್ರತಿಕ್ರಿಯೆ ನೀಡಲು ಒಂದು ಸಮಯ ನಿಗದಿಪಡಿಸಿಕೊಳ್ಳಿ. ಬೇರೆ ಸಮಯದಲ್ಲಿ ಮಕ್ಕಳೊಂದಿಗೆ ಸಮಯ ಕಳೆಯಿರಿ. ಕಚೇರಿಯಲ್ಲಿ ಅಥವಾ ಕಚೇರಿ ಅವಧಿಯಲ್ಲಷ್ಟೇ ಕಚೇರಿ ಕೆಲಸ ಮಾಡಿ. ಉಳಿದ ಸಮಯದಲ್ಲಿ ಮಕ್ಕಳೊಂದಿಗೆ ಇರಿ.
- ನಿಮ್ಮ ಸ್ಮಾರ್ಟ್‌ಫೋನ್‌ನಿಂದ ಪದೇ ಪದೇ ಕಿರಿಕಿರಿಯಾಗುತ್ತಿದ್ದರೆ ಅದನ್ನು ಮ್ಯೂಟ್ ಮಾಡಿ ನಿಮ್ಮ ದೃಷ್ಟಿಯಿಂದ ದೂರ ಇರಿಸಿ. ರಾತ್ರಿ ಮಲಗುವ 2 ಗಂಟೆ ಮೊದಲು ಫೋನ್ ಅನ್ನು ಸ್ವಿಚ್ ಆಫ್ ಮಾಡಿ. ಇದರಿಂದ ಮಕ್ಕಳೂ ರಾತ್ರಿ ವೇಳೆ ಫೋನ್ ಬಳಸುವುದನ್ನು ತಪ್ಪಿಸಬಹುದು. ನಿಮಗೂ ಬೇರೆ ಬೇರೆ ವಿಷಯಗಳನ್ನು ಯೋಚಿಸಲು ಸಮಯ ಸಿಗುತ್ತದೆ.
- ಮೊಬೈಲ್, ಸಾಮಾಜಿಕ ಜಾಲತಾಣ ಹಾಗೂ ಇಂಟರ್‌ನೆಟ್ ಬಳಕೆಗೆ ಸಂಬಂಧಿಸಿ ನಿಮ್ಮ ಮಕ್ಕಳಿಗೆ ನಿರ್ಬಂಧ ಹೇರಿ. ತಂದೆ-ತಾಯಿ ಮೊಬೈಲ್‌ನಲ್ಲಿ ನೋಡಿದ ಕೆಲವೊಂದು ವಿಷಯಗಳನ್ನು ಮಕ್ಕಳು ಪುನಃ ತೆರೆದು ನೋಡಬಹುದು. ಅಂತಹ ವೆಬ್‌ಸೈಟ್‌ಗಳನ್ನು ತಂದೆ-ತಾಯಿಗಳೂ ನೋಡದಿರುವುದು ಉತ್ತಮ. ಮಕ್ಕಳಿಗೆ ಅದರ ನಕಾರಾತ್ಮಕ ಪರಿಣಾಮಗಳ ಬಗ್ಗೆ ತಿಳಿಸಿ ಹೇಳಬೇಕು; ಅದರಿಂದ ಮಕ್ಕಳ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲಾಗುವ ಪರಿಣಾಮಗಳ ಬಗ್ಗೆಯೂ ತಿಳಿಸಿ ಹೇಳಬೇಕು.
- ಮಕ್ಕಳು ನಿಮ್ಮ ಮೊಬೈಲ್‌ನಲ್ಲಿ ಯಾವ ಕಾರಣಕ್ಕಾಗಿ ಇಂಟರ್‌ನೆಟ್ ಬಳಸುತ್ತಿದ್ದಾರೆ ಎಂದು ತಿಳಿದುಕೊಳ್ಳಿ. ಮಕ್ಕಳು ಮೊಬೈಲ್ ಮೂಲಕ ಸಂಪರ್ಕದಲ್ಲಿರುವ ಜನರು, ವೆಬ್‌ಸೈಟ್ ಹಾಗೂ ಆ್ಯಪ್‌ಗಳ ಬಗ್ಗೆ ತಿಳಿಯಿರಿ.
- ಮೊಬೈಲ್ ಮೂಲಕ ಮಕ್ಕಳು ಒಳ್ಳೆಯ ವಿಷಯಗಳನ್ನು ಕಲಿಯುತ್ತಿದ್ದರೆ ಅದಕ್ಕೆ ನಿರ್ಬಂಧ ಹೇರಬೇಡಿ. ಯಾಕೆಂದರೆ ಅಂತರ್ಜಾಲ ಎಂಬ ಗೂಡಿನಲ್ಲಿ ಎಲ್ಲವೂ ಲಭ್ಯವಿದೆ. ಆ ಕಾರಣಕ್ಕೆ ಕಲಿಕೆಯ ವಿಷಯದಲ್ಲಿ ಮಕ್ಕಳು ಯಾವುದನ್ನು ಕಲಿಯುತ್ತಿದ್ದಾರೆ ಗಮನಿಸಿ.
- ಮಕ್ಕಳಿಗೆ ಹೊಸ ಹವ್ಯಾಸವನ್ನು ರೂಢಿಸಿ. ಮಗುವಿಗೆ ಯಾವುದು ಇಷ್ಟವಾಗುತ್ತದೆ ಹಾಗೂ ಯಾವುದರಲ್ಲಿ ಮುಂದುವರಿಯಲು ಬಯಸುತ್ತಾರೆ ಎಂದು ಗಮನಿಸಿ. ಅವರ ಆಸಕ್ತಿಯ ಮೇಲೆ ಮುಂದುವರಿಯಲು ಬಿಡಿ. ಹೊಸ ಹವ್ಯಾಸಗಳು ಮುಂದಿನ ಬದುಕಿಗೆ ದಾರಿಯಾಗಬಹುದು. ❖

ಬಿಸಿಲ ತಾಪಕ್ಕೆ ಶ್ವೇತ ವಸ್ತ್ರ

ಮನಸ್ವಿ

ಬಿಸಿಲಿನ ತಾಪ ದಿನ ದಿನಕ್ಕೂ ಏರುತ್ತಿದೆ. ಈ ಬಿಸಿಲ ಧಗೆ ದೇಹಕ್ಕೆ ಮಾತ್ರವಲ್ಲ, ಮನಸ್ಸಿಗೂ ಕಿರಿಕಿರಿ ಮೂಡಿಸುತ್ತದೆ. ಆ ಕಾರಣಕ್ಕೆ ದೇಹಕ್ಕೂ, ಮನಸ್ಸಿಗೂ ಇಷ್ಟವಾಗುವಂತಹ ಉಡುಪು ಧರಿಸುವುದು ಸೂಕ್ತ. ಈಗಂತೂ ಮನೆಯಿಂದಲೇ ಕಚೇರಿ ಕೆಲಸ ಮಾಡುವ ಕಾರಣ ಮನೆಯಲ್ಲಿ ಧರಿಸಲು ಸುಲಭವಾಗುವ ಹಾಗೂ ಬೇಸಿಗೆಗೆ ಸೂಕ್ತ ಎನ್ನಿಸುವ ಉಡುಪುಗಳನ್ನು ಧರಿಸುವುದು ಉತ್ತಮ. ಅದರಲ್ಲೂ ಬೇಸಿಗೆಯಲ್ಲಿ ಧರಿಸಲು ಸುಲಭವಾಗುವ, ಸ್ಟೈಲಿಶ್ ಆಗಿರುವ, ಫ್ರಾಕ್‌ನಂತಿರುವ ದಿರಿಸುಗಳು ಹೆಚ್ಚು ಸೂಕ್ತ ಎನ್ನಿಸುತ್ತವೆ. ಈಗ ಕೋವಿಡ್ ಕಾರಣ ಮದುವೆ, ಮುಂಜಿಯಂತಹ ಕಾರ್ಯಗಳೂ ಝೂಮ್‌ನಲ್ಲೇ ನಡೆಯುವ ಕಾಲ ಬಂದಿದೆ. ಆ ಕಾರಣಕ್ಕೆ ಬೇಸಿಗೆಯೊಂದಿಗೆ ಕಚೇರಿ, ಸಮಾರಂಭಕ್ಕೂ ಹೊಂದುವಂತಹ ಉಡುಪುಗಳನ್ನು ಆಯ್ಕೆ ಮಾಡಿ ತೊಡಬೇಕಾಗುತ್ತದೆ.

ಶ್ವೇತ ವಸ್ತ್ರ

ಬೇಸಿಗೆಗೆ ಬಿಳಿ ಬಣ್ಣದ ಉಡುಪುಗಳು ಧರಿಸಲು ಸೂಕ್ತ ಎನ್ನಿಸುತ್ತವೆ. ಇವು ಸಾಧಾರಣ ಎನ್ನಿಸಿದರೂ ಬೇಸಿಗೆಗೆ ಮುದ ನೀಡುತ್ತವೆ. ಅಲ್ಲದೇ ಬೇಸಿಗೆಯ ಎಲ್ಲಾ ಸ್ಟೈಲ್ ಸಮಸ್ಯೆಗಳಿಗೆ ಬಿಳಿ ಬಣ್ಣ ನ್ಯಾಯ ಒದಗಿಸುತ್ತದೆ. ಬಿಳಿ ಬಣ್ಣದ ಮ್ಯಾಕ್ಸಿ ಥರದ ಡ್ರೆಸ್‌ಗಳು, ಕುರ್ತಾ ಪೈಜಾಮ, ಪಲಾಜೊ ಪ್ಯಾಂಟ್‌ಗಳು ಧರಿಸಲು ಹೆಚ್ಚು ಸೂಕ್ತ ಎನ್ನಿಸುತ್ತವೆ. ಅದರಲ್ಲೂ ಪಫ್ ಸ್ಲೀವ್ಸ್ ಹಾಗೂ ಪಾಪ್ಲಿನ್ ಬಟ್ಟೆಯ ದಿರಿಸುಗಳನ್ನು ಮದುವೆಯಂತಹ ಕಾರ್ಯಕ್ರಮಗಳಿಗೂ ತೊಡಬಹುದು. ಮಿಡಿ, ಮಿನಿ ಡ್ರೆಸ್‌ಗಳು ಬೇಸಿಗೆಯಲ್ಲಿ ಧರಿಸಲು ಇಷ್ಟವಾಗುತ್ತದೆ. ಅಲ್ಲದೇ ಈ ತರಹದ ಸಾಧಾರಣ ಉಡುಪಿನೊಂದಿಗೆ ಹೆಚ್ಚು ಆಭರಣ ಧರಿಸಿದರೆ ಅಂದವಾಗಿ ಕಾಣಬಹುದು.

ಮನೆಯಲ್ಲಿ ಧರಿಸುವ ಉಡುಪುಗಳು

ಬೇಸಿಗೆಯಲ್ಲಿ ಮನೆಯಲ್ಲಿ ಧರಿಸಲು ನೈಟ್‌ಗೌನ್‌ನಂತಹ ದಿರಿಸು ಹೆಚ್ಚು ಸೂಕ್ತ ಎನ್ನಿಸುತ್ತವೆ. ಅಗಲ ಪೈಜಾಮದಂತಹ ಕಾಟನ್ ಪ್ಯಾಂಟ್‌ಗಳು ಧರಿಸಲು ಆರಾಮದಾಯಕ ಎನ್ನಿಸುತ್ತವೆ. ಉದ್ದನೆಯ ಹಾಗೂ ಗಿಡ್ಡನೆಯ ಡ್ರೆಸ್‌ಗಳು ಸುಂದರವಾಗಿ ಕಾಣುತ್ತವೆ. ರಫಲ್ ಕೇಪ್ಡ್ ಸ್ಲೀವ್ಸ್, ರೌಂಡ್ ನೆಕ್‌ನ ಹತ್ತಿ ಹಾಗೂ ಲೆನಿನ್ ಟಾಪ್‌ಗಳು ಹೆಚ್ಚು ಸೂಕ್ತ.

ರ‍್ಯಾಪ್ ದಿರಿಸು

ಕಟ್ಟಿಕೊಳ್ಳುವಂತಿರುವ ಅಥವಾ ಸುತ್ತಿಕೊಳ್ಳುವಂತಹ ದಿರಿಸುಗಳು ಕಚೇರಿ ಕೆಲಸಕ್ಕೆ, ವಾರಾಂತ್ಯದಲ್ಲಿ ಹೊರ ಹೋಗಲು ಹೆಚ್ಚು ಉಪಯುಕ್ತ ಎನ್ನಿಸುತ್ತವೆ. ಇವು ಧರಿಸಲು ಸುಲಭ ಹಾಗೂ ಧರಿಸಿದಾಗ ಟ್ರೆಂಡಿ ಲುಕ್ ನೀಡುತ್ತವೆ.

ನೆರಿಗೆಯ ಮ್ಯಾಕ್ಸಿ

ಗಿಡ್ಡನೆಯ ಫ್ರಾಕ್ ಬೇಸಿಗೆಯಲ್ಲಿ ಹೆಚ್ಚು ಸೂಕ್ತ ಉಡುಪು. ಅದರಲ್ಲೂ ಹೆಚ್ಚು ತಿಳಿಬಣ್ಣದ ಡ್ರೆಸ್ ಅನ್ನು ತೊಡಬೇಕು. ಹೆಚ್ಚು ನೆರಿಗೆಗಳಿರುವ ಮ್ಯಾಕ್ಸಿ ಡ್ರೆಸ್ ಕೂಡ ಸೌಂದರ್ಯವನ್ನು ಹೆಚ್ಚಿಸುತ್ತದೆ.

ವರ್ಕ್ ಫ್ರಂ ಹೋಂ ಉಡುಪು

ಈಗ ಕೊರೊನಾ ಹೆಚ್ಚುತ್ತಿರುವ ಕಾರಣ ಇನ್ನಷ್ಟು ಕಾಲ ಮನೆಯಿಂದಲೇ ಕಚೇರಿ ಕೆಲಸ ಮಾಡುವುದು ಅನಿವಾರ್ಯವಾಗಿದೆ. ಝೂಮ್‌ನಲ್ಲಿ ಮೀಟಿಂಗ್ ಸೇರಿದಂತೆ ಇತರ ಕೆಲಸಗಳನ್ನು ಮಾಡಬೇಕಿದೆ. ಚೆನ್ನಾಗಿ ಕಾಣಿಸುವ ಹಾಗೂ ಬೇಸಿಗೆಗೆ ಹೊಂದುವ ಟೀ ಶರ್ಟ್‌ಗಳನ್ನು ಧರಿಸುವುದು ಉತ್ತಮ. ಬೇಸಿಗೆಯಲ್ಲಿ ಶಾರ್ಟ್ ಸ್ಲೀವ್ಸ್ ಹಾಗೂ ಸ್ಲೀವ್‌ಲೆಸ್ ಡ್ರೆಸ್‌ಗಳು ಹೆಚ್ಚು ಹೊಂದುತ್ತವೆ.

ಪೋಲ್ಕಾ ಡಾಟ್ ಉಡುಪು

ಪೋಲ್ಕಾ ಡಾಟ್ ಇರುವ ಚಿಕ್ಕ ಫ್ರಾಕ್‌ನಂತಹ ಉಡುಪುಗಳು ಮನೆಯಲ್ಲಿ ಮಾತ್ರವಲ್ಲ, ಹೊರಗಡೆ ಹೋಗುವಾಗಲೂ ಹೊಂದುತ್ತವೆ. ❖

GRT JEWELLERS Since 1964
GRT JEWELLERS SWARNA UGADI
ಚಿನ್ನದಿಂದ ಸೌಭಾಗ್ಯವನ್ನು ಪಡೆಯಿರಿ
ಈ ಯುಗಾದಿಯನ್ನು ಹೊಚ್ಚಹೊಸದಾಗಿ ಹೊಳಪುಗಳಿಂದ ಆರಂಭಿಸಿ. ಈ ವರ್ಷವೆಲ್ಲವೂ ಅಮೂಲ್ಯವಾದ ಆಭರಣಗಳೊಂದಿಗೆ, ಅದ್ಭುತವಾದ ಆಫರ್‌ಗಳಿಂದ ಕಂಗೊಳಿಸಿ.
ರೂ.50* ಡಿಸ್ಕೌಂಟ್ ಚಿನ್ನದ ಆಭರಣಗಳ ಮೇಲೆ ಪ್ರತಿ ಗ್ರಾಂಗೆ (7% ಗಿಂತಾ ಕಡಿಮೆಯ VA ಇರುವ ಆಭರಣಗಳಿಗೆ ಅನ್ವಯಿಸುವುದಿಲ್ಲ)
25%* ಡಿಸ್ಕೌಂಟ್ ಬೆಳ್ಳಿ ಸಾಮಾಗ್ರಿಗಳ ಮಜೂರಿಯ ಮೇಲೆ
HDFC BANK We understand your world | UPTO ₹5000 CASHBACK# on HDFC Bank Credit Cards. | #Min. transaction: ₹50,000 Offer - 2% cashback Valid till 18th April '2021. T&C apply. Discount not valid for UPI and Online transactions.
*Offer does not apply to gold coins and bars. This offer cannot be combined with any other offers. Limited period offer. Terms and conditions apply.
FLAGSHIP SHOWROOM: BENGALURU: JAYANAGAR: 4TH BLOCK, PH: 080-2665 1515
KAMMANAHALLI: PH: 080-2546 1515 | MALLESWARAM: PH: 080-2292 1515
MARATHAHALLI: PH: 080-2540 1515
TAMIL NADU | PUDUCHERRY | ANDHRA PRADESH | TELANGANA || SINGAPORE
Shop online at: www.oriana.com | mail@grtjewels.com | GRT LIVE VIDEO SHOPPING Shop from the comfort of your home

ಹೌದು, ನಾವು ಬಳೆಗಳನ್ನು ತೊಡುತ್ತೇವೆ.
Bangle Utsav The Shine Of Strength
SENCO GOLD & DIAMONDS www.sencogoldanddiamonds.com
₹150 OFF* ಪ್ರತಿ ಗ್ರಾಮ್ ಚಿನ್ನದ ಮೇಲೆ | UPTO 20% OFF* ವಜ್ರಗಳ ಮೌಲ್ಯದ ಮೇಲೆ
Classic Karigari Gold Bala ₹ 70,600/pc. GBL-D000572324
Filigree Kalash Mukh Bala Bangles ₹ 97,700/pc. GBL-D000572302
Surya Gold Kankan Bangle ₹ 85,050/pc. GCH-D000571581
The Bloom Charm Gold Bracelet ₹ 58,000/pc. GCH-D000572320
Crown Gold Bangles ₹ 1,04,150/pc. GCH-D000576259
Mayur Pankh Gold Kankan Bangles ₹ 1,82,300 GCH-D000572316
Diamond Love Gold Bangle ₹ 1,25,900/pc. GCH-D000572318
Pearl Floral Gold Bangle ₹ 96,055/pc. GMT-D000572331
Love Birds Gold Bala ₹ 2,21,850/pc. GBL-D000572325
Flying Wing Pearl Retro Bracelet ₹ 78,445/pc. GHT-D000572311
Summer Bloom Nakshi Gold Bala Bangles ₹ 1,40,900 GBL-D000572336
Surya Day Gold Bangle ₹ 1,71,550 GCH-D000572307
Morderna Diamond Bracelet ₹ 44,729/pc. DBR-D000523504
Retro Paisley Diamond Bracelet ₹ 46,430/pc. DBR-D000576004
Dew Drop Diamond Bracelet ₹ 49,101/pc. DBR-D000570411
Sparkling Eye Diamond Bracelet ₹ 53,551/pc. DBR-D000575877
Bloom Diamond Bracelet ₹ 53,884/pc. DBR-D000568866
Treasure Diamond Bracelet ₹ 56,519/pc. DNB-D000571982
Circle Of Life Platinum Bracelet ₹ 56,110/pc. PDB-D000530778
Royal Twin Platinum Bracelet ₹ 67,486/pc. PDB-D000530790
India's 2nd Most Trusted Jewellery Brand 2020
Buy costume and fashion jewellery at mygossip.in
Like & Follow us at
Franchisee enquiry: 9874453366
Corporate order enquiry: 7595089191
ಸಂಪೂರ್ಣ ಸಂಗ್ರಹವನ್ನು ವೀಕ್ಷಿಸಲು ಭೇಟಿ ನೀಡಿ: www.sencogoldanddiamonds.com ಅಥವಾ MySenco App ಅನ್ನು ಡೌನ್‌ಲೋಡ್ ಮಾಡಿ. ಹೆಚ್ಚಿನ ವಿವರಗಳಿಗಾಗಿ ಕರೆ ಮಾಡಿ: 1800 103 0017
BENGALURU: KORAMANGALA: 605, 4th Block, 100 ft. Road, Wildcraft Building, Landmark-Sony Signal, Koramangala. Ph.: 080-41141197 | PHOENIX MALL: Phoenix Market City, Unit no. G56, Ground Floor, Bengaluru East. Mahadevpura. Ph.: 08067266340.

ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್
ಯಾವುದೇ ಅಡ್ಡಪರಿಣಾಮವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ
Before / After
ಲೈಂಗಿಕ ರೋಗಗಳು | ಉದ್ರೇಕದ ಸಮಸ್ಯೆ
ಲೈಂಗಿಕ ನಿರಾಸಕ್ತಿ | ನಿದ್ರಾ ಸ್ಖಲನ
ಶೀಘ್ರ ಸ್ಖಲನ | ಲಿಂಗ ಚಿಕ್ಕದಾಗುವುದು
ನರ ದೌರ್ಬಲ್ಯ | ಅವಧಿಗೆ ಮೊದಲೇ ಸ್ಖಲನ
ಆತಂಕ, ದೌರ್ಬಲ್ಯ | ಕಡಿಮೆ ವೀರ್ಯಾಣು
ಮುಷ್ಠಿ ಮೈಥುನದ ಅಡ್ಡಪರಿಣಾಮ
NO SIDE EFFECTS 100%
ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ
1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ
Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259

50ಕ್ಕೂ ಹೆಚ್ಚು ಕೊಡುಗೆಗಳು
1mg
asianpaints
rapido
SPAR
Faasos
AJIO
H&M
BEARDO
TATA CLiQ
firstcry.com
Lenovo
boAt
igp.com
COOLWINKS.com
Oven Story
make my trip
SHOPCLUES.com
plum be good

ಪ್ರಜಾವಾಣಿ ವಾರೆವ್ಹಾ ವಾರಾಂತ್ಯ
ಸೂಪರ್ ಬ್ರ್ಯಾಂಡ್‌ಗಳ ಬಂಪರ್ ಕೊಡುಗೆಗಳು ಇದೀಗ ನಿಮಗಾಗಿ!
ವಾರಾಂತ್ಯದ ಪುರುಸೊತ್ತಿನಲ್ಲಿ ನಿಮಗಾಗಿ ಭರ್ಜರಿ ಕೊಡುಗೆಗಳು ಕಾದಿವೆ. ನೀರೂರಿಸುವ ಭೋಜನ, ತಿಂಗಳ ದಿನಸಿಯಿಂದ ಹಿಡಿದು ಪ್ರಯಾಣ ಮತ್ತು ಮನರಂಜನೆಯವರೆಗೂ, ಭರ್ಜರಿ ಕೊಡುಗೆಗಳ ಸುರಿಮಳೆಯೇ ಸುರಿಯಲಿದೆ.
ಕೂಪನ್ ಪಾರ್ಟನರ್: GrabOn SAVE ON EVERYTHING
ಇನ್ನಷ್ಟು ಆಕರ್ಷಕ ಕೊಡುಗೆಗಳಿಗೆ ಇಲ್ಲಿ ಸ್ಕ್ಯಾನ್ ಮಾಡಿ

ಕೋವಿಡ್ ಪೀಡಿತರಿಗೆ 'ಸೀಲ್' ಇಂದಿನಿಂದ

ಪ್ರಜಾವಾಣಿ ವಾರ್ತೆ

ಗೌರವ್ ಗುಪ್ತ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಕೊರೊನಾ ಸೋಂಕು ಉಲ್ಬಣಗೊಳ್ಳುತ್ತಿದೆ. ಕೋವಿಡ್ ಸೋಂಕು ದೃಢಪಟ್ಟವರಿಗೆ ಶನಿವಾರದಿಂದಲೇ ಮೊಹರು (ಸೀಲ್) ಹಾಕುವ ಕಾರ್ಯವನ್ನು ಪ್ರಾರಂಭಿಸಲಾಗುತ್ತದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹೇಳಿದರು.

ಬಿಬಿಎಂಪಿಯ ಎಂಟು ವಲಯಗಳಲ್ಲಿ ಕೋವಿಡ್ ಸಿದ್ಧತೆ ಕುರಿತು ಶುಕ್ರವಾರ ಅಧಿಕಾರಿಗಳ ಸಭೆ ನಡೆಸಿದ ಅವರು, 'ಸೀಲ್ ಹಾಕಲು ಬೇಕಾದ ಶಾಯಿ(ಇಂಕ್)ಯನ್ನು ಎಲ್ಲ ವಲಯಗಳಿಗೂ ಕೂಡಲೇ ವ್ಯವಸ್ಥೆ ಮಾಡಬೇಕು' ಎಂದು ಮುಖ್ಯ ಆರೋಗ್ಯಾಧಿಕಾರಿಗೆ ಸೂಚನೆ ನೀಡಿದರು.

'ಸರ್ಕಾರದ ಆದೇಶದಂತೆ ಖಾಸಗಿ ಆಸ್ಪತ್ರೆಗಳಲ್ಲಿ ಮೀಸಲಿಡಬೇಕಿರುವ ಹಾಸಿಗೆ ಸಾಮರ್ಥ್ಯವನ್ನು ಇನ್ನೂ ಹೆಚ್ಚಳವಾಗುವಂತೆ ಕ್ರಮವಹಿಸಬೇಕು. ಬೂತ್ ಮಟ್ಟದ ತಂಡಗಳ ಕಾರ್ಯನಿರ್ವಹಣೆಯನ್ನು ಸಕ್ರಿಯವಾಗಿಸಿ ಸಂಪರ್ಕ ಪತ್ತೆ ಕಾರ್ಯ ಸರಿಯಾಗಿ ಮಾಡಬೇಕು, ಎಲ್ಲ ವಲಯಗಳಲ್ಲಿಯೂ ಕಂಟೈನ್‌ಮೆಂಟ್ ಝೋನ್ ಒಂದೇ ಮಾದರಿಯಲ್ಲಿರಬೇಕು' ಎಂದೂ ಹೇಳಿದರು.

ಆರೈಕೆ ಕೇಂದ್ರ ತೆರೆಯಿರಿ: 'ಮನೆಗಳಲ್ಲಿ ಪ್ರತ್ಯೇಕವಾಸವಿದ್ದು ಚಿಕಿತ್ಸೆ ಪಡೆಯುತ್ತಿರುವವರ ಮನೆಗೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಬೇಕು.ನಗರದಲ್ಲಿ ಸದ್ಯ ಗುರುತಿಸಿರುವ ಕೋವಿಡ್ ಆರೈಕೆ ಕೇಂದ್ರಗಳನ್ನು ತ್ವರಿತವಾಗಿ ತೆರೆಯಬೇಕು' ಎಂದೂ ಹೇಳಿದರು.

ಹಾಸಿಗೆ ನಿಯೋಜನೆ ವಿಕೇಂದ್ರೀಕರಣ: 'ಸದ್ಯ ಪಾಲಿಕೆ ವ್ಯಾಪ್ತಿಯಲ್ಲಿ ಹಾಸಿಗೆ ನಿಯೋಜನೆ (ಬೆಡ್ ಅಲಾಟ್‌ಮೆಂಟ್) ವ್ಯವಸ್ಥೆಯನ್ನು ವಿಕೇಂದ್ರೀಕರಣಗೊಳಿಸಿದ್ದು, ಎಲ್ಲಿಯೂ ಹಾಸಿಗೆಗಳ ಕೊರತೆ ಕಂಡು ಬರದಂತೆ ಕ್ರಮವಹಿಸಲಾಗಿದೆ' ಎಂದೂ ಗೌರವ್ ಗುಪ್ತ ಹೇಳಿದರು.

'ಪ್ರಯೋಗಾಲಯಗಳಲ್ಲಿ ತ್ವರಿತ ಫಲಿತಾಂಶ ಬರುವಂತೆ ಮಾಡಲಾಗಿದೆ. ಬೂತ್ ಮಟ್ಟದ ಅಧಿಕಾರಿಗಳನ್ನು ಸರಿಯಾಗಿ ಬಳಸಿಕೊಂಡು ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರನ್ನು ಪತ್ತೆಮಾಡಿ ಕೋವಿಡ್ ಪರೀಕ್ಷೆ ಮಾಡಲಾಗುತ್ತಿದೆ' ಎಂದೂ ಹೇಳಿದರು.

ನಗರದ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ (ಮೆಜೆಸ್ಟಿಕ್) ಹೊರ ರಾಜ್ಯದಿಂದ ಬಂದ ಪ್ರಯಾಣಿಕರು ಹಾಗೂ ಸಾರ್ವಜನಿಕರಿಗೆ ಕೋವಿಡ್ ಪರೀಕ್ಷೆ ನಡೆಸುವ ಸಂಬಂಧ ಆರೋಗ್ಯ ಸಿಬ್ಬಂದಿ ಮಾದರಿಗಳನ್ನು ಸಂಗ್ರಹಿಸಿದರು. ಪ್ರಜಾವಾಣಿ ಚಿತ್ರ

'ದಾಸರಹಳ್ಳಿಗೆ ಕೋವಿಡ್ ಕೇಂದ್ರ ಅಗತ್ಯ'

ಬೆಂಗಳೂರು: 'ಇತ್ತೀಚೆಗೆ ದಾಸರಹಳ್ಳಿ ವಲಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಪ್ರತಿ ಆರೋಗ್ಯ ಕೇಂದ್ರದಲ್ಲೂ ಕೋವಿಡ್ ಪರೀಕ್ಷೆ, ಲಸಿಕೆ ವಿತರಣೆ ಸಮರ್ಪಕವಾಗಿ ನಡೆಯಬೇಕು' ಎಂದು ಶಾಸಕ ಆರ್. ಮಂಜುನಾಥ್ ಅಧಿಕಾರಿಗಳಿಗೆ ಸೂಚಿಸಿದರು.

ದಾಸರಹಳ್ಳಿ ವಲಯ ಬಿಬಿಎಂಪಿ ಕಚೇರಿಯಲ್ಲಿ ದಾಸರಹಳ್ಳಿ ವಲಯ ಕೋವಿಡ್ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಹಾಗೂ ಅಧಿಕಾರಿಗಳೊಂದಿಗೆ ಶುಕ್ರವಾರ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

'ದಾಸರಹಳ್ಳಿ ಭಾಗದ ಆಸ್ಪತ್ರೆಗಳಲ್ಲಿ ವೆಂಟಿಲೇಟರ್ ಹಾಗೂ ಆಕ್ಸಿಜನ್ ಇರುವ ಬೆಡ್‌ಗಳ ಸಮಸ್ಯೆ ಹೆಚ್ಚಾಗಿ ಕಾಡುತ್ತಿದೆ. ಇದೇ ರೀತಿ ಕೋವಿಡ್ ಪ್ರಕರಣಗಳು ಹೆಚ್ಚಾದರೆ, ದಾಸರಹಳ್ಳಿ ವಲಯಕ್ಕೆ ಒಂದು ಪ್ರತ್ಯೇಕ ಕೋವಿಡ್ ಚಿಕಿತ್ಸಾ ಕೇಂದ್ರದ ಅಗತ್ಯವಿದೆ' ಎಂದು ಸಚಿವ ಗೋಪಾಲಯ್ಯ ಅವರಿಗೆ ತಿಳಿಸಿದರು.

ಸಭೆಯಲ್ಲಿ ದಾಸರಹಳ್ಳಿ ವಲಯ ವಿಶೇಷ ಆಯುಕ್ತ ರವೀಂದ್ರ, ಜಂಟಿ ಆಯುಕ್ತ ನರಸಿಂಹಮೂರ್ತಿ, ವೈದ್ಯಾಧಿಕಾರಿಗಳಾದ ಲೋಕೇಶ್, ಸುರೇಶ್ ರುದ್ರಪ್ಪ , ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಹಾಗೂ ಇತರರು ಭಾಗವಹಿಸಿದ್ದರು.

'ಜ್ವರ ತಪಾಸಣಾ ಕೇಂದ್ರ ಹೆಚ್ಚಳ'

ಬೆಂಗಳೂರು: ನಗರದ ಪೂರ್ವ ವಲಯ ಮತ್ತು ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೋವಿಡ್ ಪರಿಹಾರ ಕ್ರಮಗಳ ಕುರಿತು ಸಚಿವ ವಿ. ಸೋಮಣ್ಣ ಬಿಬಿಎಂಪಿ ಅಧಿಕಾರಿಗಳ ಜೊತೆಗೆ ಶುಕ್ರವಾರ ಸಭೆ ನಡೆಸಿದರು.

'ಸೋಂಕು ವ್ಯಾಪಕವಾಗಿ ಹರಡುತ್ತಿರುವುದರಿಂದ ಪರೀಕ್ಷಾ ಸಂಖ್ಯೆಯನ್ನೂ ಹೆಚ್ಚು ಮಾಡಬೇಕಾಗಿದೆ. ಜ್ವರ ತಪಾಸಣಾ ಕೇಂದ್ರಗಳನ್ನು ಹೆಚ್ಚಿಸಲು ಕ್ರಮ ವಹಿಸಲಾಗುತ್ತಿದೆ. ಪ್ರತಿ ವಾರ್ಡ್‌ನಲ್ಲಿ ಎರಡು ಅಥವಾ ಎರಡಕ್ಕಿಂತ ಹೆಚ್ಚು ಜ್ವರ ತಪಾಸಣಾ ಕೇಂದ್ರ ಪ್ರಾರಂಭಿಸಲಾಗುವುದು' ಎಂದು ಅವರು ಹೇಳಿದರು.

'ಈ ಹಿಂದೆ ನಗರದಲ್ಲಿ ಸ್ಯಾನಿಟೈಸ್ ಮಾಡುತ್ತಿದ್ದ ಮಾದರಿಯಲ್ಲೇ ಮತ್ತೆ ಸೋಂಕು ಮುಕ್ತ ದ್ರಾವಣ ಸಿಂಪಡಿಸುವ ಕೆಲಸ ಪ್ರಾರಂಭಿಸಲಾಗುವುದು. ಈ ಸಂಬಂಧ ಜಲಮಂಡಳಿ ಹಾಗೂ ಅಗ್ನಿಶಾಮಕ ದಳದ ಅಧಿಕಾರಿಗಳೊಂದಿಗೆ ಮಾತನಾಡಿ ಶನಿವಾರದಿಂದಲೇ ನಗರದಲ್ಲಿ ಸ್ಯಾನಿಟೈಸ್ ಕಾರ್ಯ ಪ್ರಾರಂಭಿಸಲಾಗುವುದು' ಎಂದರು.

ಸಂಖ್ಯೆಗಾಗಿ ಕಾಯಬೇಕಿಲ್ಲ: ಕೊರೊನಾ ಸೋಂಕು ದೃಢಪಟ್ಟವರು ಹಾಗೂ ತುರ್ತು ಚಿಕಿತ್ಸೆಯ ಅವಶ್ಯಕತೆ ಇರುವವರಿಗೆ ರೋಗಿ ಸಂಖ್ಯೆ (ಬಿಯು–ಬೆಂಗಳೂರು ಅರ್ಬನ್) ನೀಡಲಾಗುತ್ತದೆ. ಆದರೆ, ಈ ಸಂಖ್ಯೆಗಾಗಿ ಕಾಯುವ ಅವಶ್ಯಕತೆ ಇಲ್ಲ. ಆಸ್ಪತ್ರೆಗಳೂ ಸಹ ತುರ್ತು ಚಿಕಿತ್ಸೆ ಅವಶ್ಯಕತೆ ಇರುವವರಿಗೆ ಬಿಯು ಸಂಖ್ಯೆ ಇಲ್ಲದೆ ಇದರೂ, ಕೂಡಲೇ ಸ್ಪಂದಿಸಬೇಕು. ಈ ಸಂಬಂಧ ಆಯುಕ್ತರು ನಿರ್ದೇಶನ ನೀಡಲಿದ್ದಾರೆ ಎಂದು ಹೇಳಿದರು.

3 ಲಕ್ಷ ಲಸಿಕೆ: 'ನಗರಕ್ಕೆ ಅಗತ್ಯವಿರುವಷ್ಟು ಕೋವಿಡ್ ಲಸಿಕೆ ನೀಡುವಂತೆ ಮನವಿ ಮಾಡಲಾಗಿದೆ. ರಾಜ್ಯಕ್ಕೆ 10 ಲಕ್ಷ ಕೋವಿಡ್ ಲಸಿಕೆ ಬರಲಿದ್ದು, ಇದರಲ್ಲಿ 3 ಲಕ್ಷ ಕೋವಿಡ್ ಲಸಿಕೆ ನಗರಕ್ಕೆ ನೀಡುವಂತೆ ಮನವಿ ಮಾಡಲಾಗಿದೆ' ಎಂದು ಮಾಹಿತಿ ನೀಡಿದರು.

ಸಂಸದ ಪಿ.ಸಿ.ಮೋಹನ್, ಶಾಸಕರಾದ ಕೆ.ಜೆ. ಜಾರ್ಜ್, ಎನ್.ಎ ಹ್ಯಾರಿಸ್, ರಿಜ್ವಾನ್ ಅರ್ಷದ್, ಬಿ.ಎಸ್. ಸುರೇಶ್, ಅಖಂಡ ಶ್ರೀನಿವಾಸ್ ಮೂರ್ತಿ, ವಿಧಾನ ಪರಿಷತ್ ಸದಸ್ಯ ಕೆ.ಗೋವಿಂದರಾಜು, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ವಲಯ ಆಯುಕ್ತರಾದ ಮನೋಜ್ ಜೈನ್, ಬಸವರಾಜು, ವಲಯ ಸಂಯೋಜಕರಾದ ಮನೋಜ್ ಕುಮಾರ್ ಮೀನಾ, ಉಜ್ವಲ್ ಘೋಷ್, ಜಂಟಿ ಆಯುಕ್ತರಾದ ಪಲ್ಲವಿ ಹಾಗೂ ಶಿವಸ್ವಾಮಿ ಹಾಜರಿದ್ದರು.

'ಕ್ಷೇತ್ರಕ್ಕೊಂದು ಕೋವಿಡ್ ವಾರ್‌ರೂಮ್'

'ನಗರದಲ್ಲಿ ಕೋವಿಡ್ ಪ್ರಕರಣ ಹೆ ಕೊರೊನಾ ಸೋಂಕು ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವ ಕಾರಣ ಪ್ರತಿ ವಿಧಾನಸಭಾ ಕ್ಷೇತ್ರವಾರು ಕೋವಿಡ್ ವಾರ್‌ರೂಮ್ ಪ್ರಾರಂಭಿಸಲಾಗುವುದು' ಎಂದು ಸಚಿವ ವಿ. ಸೋಮಣ್ಣ ತಿಳಿಸಿದರು.

'ಕೆಲವೇ ದಿನಗಳಲ್ಲಿ ವಾರ್‌ರೂಮ್ ಸಿದ್ಧವಾಗಲಿದೆ. ಅತ್ಯಾಧುನಿಕ ವೈದ್ಯಕೀಯ ವ್ಯವಸ್ಥೆ ಇರುವ ಚರಕ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ 150 ಹಾಸಿಗೆಗಳನ್ನು ಕೊರೊನಾ ಸೋಂಕಿತರ ಚಿಕಿತ್ಸೆಗೆ ಬಳಸಿಕೊಳ್ಳಲು ನಿರ್ಧರಿಸಲಾಗಿದೆ. ಡಾ.ಬಿ ಆರ್. ಅಂಬೇಡ್ಕರ್ ಮೆಡಿಕಲ್ ಕಾಲೇಜಿಗೆ ಸರ್ಕಾರದಿಂದ 10 ವೆಂಟಿಲೇಟರ್ ವ್ಯವಸ್ಥೆ ಕಲ್ಪಿಸಲಾಗುತ್ತಿದೆ' ಎಂದು ಹೇಳಿದರು.

'3ನೇ ಅಲೆ ತಪ್ಪಿಸಲು ಲಸಿಕೆ ಹಾಕಿಸಿಕೊಳ್ಳಿ'

ಬೆಂಗಳೂರು: ಕೋವಿಡ್ ಮೂರನೇ ಅಲೆ ತಪ್ಪಿಸಲು ಸಾರ್ವಜನಿಕರು ಕಡ್ಡಾಯವಾಗಿ ಲಸಿಕೆಯನ್ನು ಹಾಕಿಸಿಕೊಳ್ಳಬೇಕು ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರು ಮನವಿ ಮಾಡಿದ್ದಾರೆ.

ಲಸಿಕೆ ಹಾಕಿಸಿಕೊಳ್ಳುವ ಬಗ್ಗೆ ಉದಾಸೀನತೆ ಬಿಡಬೇಕು. ಇಲ್ಲವಾದರೆ ಮೂರನೇ ಅಲೆ ತಡೆಯಲು ಸಾಧ್ಯವಿಲ್ಲ ಎಂದು ಅವರು ಸುದ್ದಿಗಾರರಿಗೆ ಶುಕ್ರವಾರ ತಿಳಿಸಿದರು.

'ಲಸಿಕೆ ಹಾಕಿಸಿಕೊಂಡರೆ ಕೋವಿಡ್ ಸೋಂಕು ತಗುಲುವುದಿಲ್ಲ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ. ಸಾವಿನ ಪ್ರಮಾಣವೂ ಕಡಿಮೆಯಾಗುತ್ತದೆ. ಹಲವು ದೇಶಗಳಲ್ಲಿ ಈಗಾಗಲೇ ಮೂರನೇ ಅಲೆ ಕಾಣಿಸಿಕೊಂಡಿದೆ. ನಮ್ಮಲ್ಲಿ ಅದನ್ನು ತಡೆಯಬೇಕಿದ್ದರೆ, ಎಲ್ಲರೂ ಲಸಿಕೆ ಹಾಕಿಸಿಕೊಳ್ಳಬೇಕು' ಎಂದರು.

ಸುದ್ದಿ 2 ನಿಮಿಷ

ಬಿಡಿಎ ನೌಕರರ ಸಂಘಕ್ಕೆ ಜಾಗ ಮಂಜೂರು ಅಕ್ರಮ: ಹೈಕೋರ್ಟ್

ಬೆಂಗಳೂರು: ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ 33 ಎಕರೆ 2 ಗುಂಟೆ ಜಾಗ ಮಂಜೂರು ಮಾಡಿರವುದು ಅಕ್ರಮ ಎಂದು ಹೈಕೋರ್ಟ್ ಹೇಳಿದೆ.

ಬಿ.ವಿ. ಶಿವಸ್ವಾಮಿ ಎಂಬುವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

'ಬೆಂಗಳೂರು ದಕ್ಷಿಣ ತಾಲ್ಲೂಕಿನ ದೊಡ್ಡಕಲ್ಲಸಂದ್ರ ಗ್ರಾಮದಲ್ಲಿ ಸಂಘಕ್ಕೆ 2006ರ ನವೆಂಬರ್‌ನಲ್ಲಿ ಭೂಮಿ ನೀಡಲಾಗಿದೆ. ರಾಜ್ಯ ಸರ್ಕಾರದ ಪೂರ್ವಾನುಮತಿ ಪಡೆಯದೆ ಇರುವುದು ಕಾನೂನಿನ ಉಲ್ಲಂಘನೆ' ಎಂದು ಅರ್ಜಿದಾರರು ದೂರಿದ್ದಾರೆ.

ಐದು ಎಕರೆಗಿಂತ ಹೆಚ್ಚಿನ ಭೂಮಿಯನ್ನು ಯಾವುದೇ ಸಂಘ ಅಥವಾ ಸಂಸ್ಥೆಗೆ ನೀಡಬೇಕೆಂದರೆ ಅದಕ್ಕೆ ಸರ್ಕಾರದ ಪೂರ್ವಾನುಮತಿ ಅಗತ್ಯ ಎಂದು ಪೀಠ ಹೇಳಿತು.

ಪ್ಲಾಟ್‌ಫಾರಂ ಟಿಕೆಟ್ ದರ ₹50ಕ್ಕೆ ಏರಿಕೆ : ಇಂದಿನಿಂದಲೇ ಜಾರಿ

ಬೆಂಗಳೂರು: ಟಿಕೆಟ್ ಕೌಂಟರ್‌ಗಳ ಮುಂದೆ ಹಾಗೂ ಪ್ಲಾಟ್ ಫಾರಂಗಳಲ್ಲಿ ಹೆಚ್ಚು ಜನ ಸೇರುವುದನ್ನು ತಡೆಯುವ ಉದ್ದೇಶದಿಂದ ರೈಲ್ವೆ ಇಲಾಖೆಯು ಪ್ಲಾಟ್ ಫಾರಂ ಟಿಕೆಟ್ ದರವನ್ನು ₹10ರಿಂದ ₹50ಕ್ಕೆ ಹೆಚ್ಚಿಸಿದೆ.

ಬೆಂಗಳೂರು ನಗರದ ನಾಲ್ಕು ರೈಲ್ವೆ ನಿಲ್ದಾಣಗಳಲ್ಲಿ ಇದೇ 17ರಿಂದ 30ರವರೆಗೆ ಇದು ಜಾರಿಯಲ್ಲಿರಲಿದೆ.

'ಪ್ಲಾಟ್ ಫಾರಂ ಟಿಕೆಟ್‌ಗಳಿಗೆ ಹೆಚ್ಚಿನ ಬೇಡಿಕೆ ಇದೆ. ಇವುಗಳನ್ನು ಕೊಳ್ಳಲು ಜನ ಸಾಲುಗಟ್ಟಿ ನಿಲ್ಲುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ದರ ಏರಿಕೆಯ ನಿರ್ಧಾರ ಕೈಗೊಳ್ಳಲಾಗಿದೆ. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಯಶವಂತಪುರ, ಬೆಂಗಳೂರು ಕಂಟೋನ್ಮೆಂಟ್ ಮತ್ತು ಕೃಷ್ಣರಾಜಪುರಂ ರೈಲ್ವೆ ನಿಲ್ದಾಣಗಳಲ್ಲಿ ಇದು ಜಾರಿಯಲ್ಲಿರಲಿದೆ. ಕೋವಿಡ್ ಎರಡನೇ ಅಲೆ ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ' ಎಂದು ದಕ್ಷಿಣ ರೈಲ್ವೆಯ ಬೆಂಗಳೂರು ವಿಭಾಗದ ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ ಕನ್ನಡ ಧ್ವನಿ
ಪ್ರಜಾವಾಣಿ
'ಕನ್ನಡ ಧ್ವನಿ' ಪಾಡ್‌ಕಾಸ್ಟ್ ಚಾನೆಲ್‌ನ
ಪ್ರತಿ ಶನಿವಾರದ 'ಹರಟೆ ಕಟ್ಟೆ'
ಕನ್ನಡ ಶಾಲೆಗಳು ಅಭಿವೃದ್ಧಿಯಾಗಬೇಕು, ಜೊತೆಗೆ ಇಂಗ್ಲಿಷೂ ಬೇಕು
ವಿಷಯ ಕುರಿತ ಈ ದಿನದ ಚರ್ಚೆಯಲ್ಲಿ
ವಸಂತ ಶೆಟ್ಟಿ
ಮುನ್ನೋಟ ಸಂಸ್ಥೆ

ಡಾ.ವಿ.ಪಿ. ನಿರಂಜನಾರಾಧ್ಯ
ಅಭಿವೃದ್ಧಿ ಶಿಕ್ಷಣ ತಜ್ಞ

ಮಧ್ಯಾಹ್ನ 4 ಗಂಟೆಗೆ
ನೀವೂ ಆಲಿಸಿರಿ, ಸ್ನೇಹಿತರಿಗೂ ಕೇಳಿಸಿರಿ
https://www.prajavani.net/podcast

ಬೆಳಿಗ್ಗೆಯಿಂದ ಮಧ್ಯರಾತ್ರಿಯವರೆಗೆ ದುಡಿಯುತ್ತಿರುವ ಚಿತಾಗಾರ ಸಿಬ್ಬಂದಿ

'ಶವಸಂಸ್ಕಾರದ ವೇಳೆ ಸೋಂಕು ಹರಡುವಿಕೆ ತೀವ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತಾಗಾರದ ಮುಂದೆ ಸಾಲುಗಟ್ಟಿ ನಿಂತಿರುವ ಕೋವಿಡ್ ಶವದ ವಾಹನಗಳು, ಶವಗಳನ್ನು ಸರಿಯಾಗಿ 'ಕವರ್' ಮಾಡಿ ಕಳುಹಿಸದ ಆಸ್ಪತ್ರೆಗಳು, ಕೊನೆಯ ಬಾರಿ ಮುಖ ನೋಡಬೇಕು ಎಂದು ಸೇರುತ್ತಿರುವ ವಾಹನಗಳು, ಮಾಸ್ಕ್, ಗ್ಲೌಸ್‌ಗಳು ಇಲ್ಲದೆ ಕೆಲಸ ಮಾಡುತ್ತಿರುವ ಚಿತಾಗಾರದ ಸಿಬ್ಬಂದಿ...

ನಗರದಲ್ಲಿ ಕೋವಿಡ್ ಶವಗಳ ಸಂಸ್ಕಾರಕ್ಕೆ ಮೀಸಲಾಗಿಟ್ಟಿರುವ ವಿದ್ಯುತ್ ಚಿತಾಗಾರದ ಮುಂದೆ ಕಂಡು ಬರುವ ದೃಶ್ಯಗಳು ಇವು. ಒಂದೊಂದು ಚಿತಾಗಾರದಲ್ಲಿ ದಿನಕ್ಕೆ 20ರಿಂದ 25 ಶವಗಳನ್ನು ದಹಿಸಲಾಗುತ್ತಿದೆ. ಬೆಳಿಗ್ಗೆ 4ಕ್ಕೆ ಮನೆ ಬಿಡುವ ಚಿತಾಗಾರ ಸಿಬ್ಬಂದಿ, ರಾತ್ರಿ 12ರ ನಂತರ ಮನೆ ಸೇರುತ್ತಿದ್ದಾರೆ.

'ಬೆಳಿಗ್ಗೆ 7 ಗಂಟೆಯ ವೇಳೆಗೆ ಚಿತಾಗಾರದ ಮುಂದೆ ಶವಗಳ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ. ಒಂದು ಶವ ಸಂಪೂರ್ಣವಾಗಿ ದಹನವಾಗಲು ಒಂದರಿಂದ ಒಂದೂವರೆ ತಾಸು ಸಮಯ ಬೇಕಾಗುತ್ತದೆ. ಊಟ, ತಿಂಡಿ ಮಾಡಲು ಕೂಡ ಸಮಯ ಸಿಗುತ್ತಿಲ್ಲ' ಎಂದು ಕೆಂಗೇರಿ ಚಿತಾಗಾರದಲ್ಲಿ ಕಾರ್ಯನಿರ್ವಹಿಸುವ ಕೃಷ್ಣಮೂರ್ತಿ 'ಪ್ರಜಾವಾಣಿ'ಗೆ ಹೇಳಿದರು.

'ಕಳೆದ ವರ್ಷ ಕೋವಿಡ್ ಶವಗಳನ್ನು ಸರಿಯಾಗಿ 'ಪ್ಯಾಕ್' ಮಾಡಿ ಕಳುಹಿಸುತ್ತಿದ್ದರು. ಈಗ ಬಿಳಿ ಬಟ್ಟೆಯಲ್ಲೋ, ಪೇಪರ್‌ನಲ್ಲಿಯೋ ಸುತ್ತಿ ಕಳುಹಿಸುತ್ತಿದ್ದಾರೆ. ಈ ಬಾರಿ ನಮಗೆ ಇನ್ನೂ ಸರಿಯಾಗಿ ಗ್ಲೌಸ್, ಮಾಸ್ಕ್ ಹಾಗೂ ಪಿಪಿಇ ಕಿಟ್ ಕೊಟ್ಟಿಲ್ಲ. ಕಳೆದ ಬಾರಿ ಕೊಟ್ಟಿರುವುದನ್ನೇ ಬಳಸುತ್ತಿದ್ದೇವೆ' ಎಂದು ಅವರು ಹೇಳಿದರು.

ಆಂಬುಲೆನ್ಸ್ ಸಿಬ್ಬಂದಿ ಕೂಡ ಶವಗಳನ್ನು ತರುವಾಗ ಗ್ಲೌಸ್ ಮತ್ತು ಮಾಸ್ಕ್‌ಗಳನ್ನು ಹಾಕಿಕೊಂಡಿರುವುದಿಲ್ಲ. ಮೃತರ ಸಂಬಂಧಿಗಳ ಸಂಖ್ಯೆ ಕೂಡ ಜಾಸ್ತಿ ಇರುತ್ತದೆ. ಕಳೆದ ವರ್ಷ ಕೋವಿಡ್ ಬಗ್ಗೆ ಆತಂಕ ಹೆಚ್ಚಾಗಿದ್ದು, ಬಹುತೇಕರು ಶವದ ಹತ್ತಿರ ಹೋಗುತ್ತಿರಲಿಲ್ಲ. ಆದರೆ, ಈ ವರ್ಷ ಹೆಚ್ಚು ಜನ ಕಾಣುತ್ತಿದ್ದು, ಇವರಲ್ಲಿ ಬಹುತೇಕರು ಮಾಸ್ಕ್, ಗ್ಲೌಸ್ ಹಾಕಿಕೊಳ್ಳದೇ ಇರುವುದು ಎದ್ದು ಕಾಣುತ್ತಿದೆ.

'ಕೊನೆಯ ಬಾರಿ ಮುಖ ತೋರಿಸಿ ಎಂದು ಮೃತರ ಸಂಬಂಧಿಕರು ಗೋಗರೆಯುತ್ತಾರೆ. ಬೇಡ ಎಂದರೂ ಕೇಳುವುದಿಲ್ಲ. ನಿಮಗೆ ಕರುಣೆಯೇ ಇಲ್ಲವೇ, ಮಾನವೀಯತೆ ಇಲ್ಲವೇ ಎಂದು ಬೈಯುತ್ತಾರೆ. ಮುಖ ನೋಡುವುದು ಮಾತ್ರವಲ್ಲದೆ, ಪೂಜೆ–ಪುನಸ್ಕಾರ ಎಲ್ಲ ಮಾಡುತ್ತಾರೆ.ಇದರಿಂದ ಶವಸಂಸ್ಕಾರದ ವೇಳೆ ಸೋಂಕು ಹರಡುತ್ತದೆ ಎಂಬ ಆತಂಕ ಕಾಡುತ್ತಿದೆ' ಎಂದು ಚಿತಾಗಾರದ ಮತ್ತೊಬ್ಬ ಸಿಬ್ಬಂದಿ ಹೇಳಿದರು.

ಆಂಬುಲೆನ್ಸ್‌ನಲ್ಲಿ ಮೂರು ಶವ: ಕೆಂಗೇರಿಯ ಚಿತಾಗಾರಕ್ಕೆ ಗುರುವಾರ ಒಂದೇ ಆಂಬುಲೆನ್ಸ್‌ನಲ್ಲಿ ಮೂರು ಶವಗಳನ್ನು ಕರೆ ತರಲಾಗಿದೆ. ಶವಗಳನ್ನು ಈ ರೀತಿ ತಂದಾಗ ಚಿತಾಗಾರದ ಸಿಬ್ಬಂದಿಗೆ ತೊಂದರೆಯಾಗುತ್ತದೆಯಲ್ಲದೆ, ಸುರಕ್ಷತಾ ಮಾರ್ಗಸೂಚಿಗಳನ್ನು ಸರಿಯಾಗಿ ಪಾಲಿಸಲು ಕಷ್ಟವಾಗುತ್ತದೆ.

'ಬೇರೆ ಬೇರೆ ಆಸ್ಪತ್ರೆಗಳಿಂದ ಮೂರು ಶವಗಳನ್ನು ಚಾಲಕರು ಒಂದೇ ಆಂಬುಲೆನ್ಸ್‌ನಲ್ಲಿ ತಂದಿದ್ದರು. ವಿಳಂಬವಾಗುತ್ತದೆ, ಆಂಬುಲೆನ್ಸ್ ಕೊರತೆ ಇದೆ ಎಂಬ ಕಾರಣ ಹೇಳುತ್ತಾರೆ. ಆದರೆ, ಚಿತಾಗಾರದ ಸಿಬ್ಬಂದಿಗೂ ತೊಂದರೆಯಾಗುತ್ತದೆ ಎಂಬುದನ್ನು ಗಮನಿಸಬೇಕು' ಎಂದು ಸಿಬ್ಬಂದಿಯೊಬ್ಬರು ಹೇಳಿದರು.

ಗಂಭೀರವಾಗಿ ಅಸ್ವಸ್ಥಗೊಂಡ ಕೋವಿಡ್ ಪೀಡಿತರಿಗೆ ಹಾಸಿಗೆ ಮೀಸಲಿಡಲು ವಿಕ್ಟೋರಿಯಾ ಆಸ್ಪತ್ರೆಯ ಆರೋಗ್ಯ ಸಿಬ್ಬಂದಿ ಚೇತರಿಸಿಕೊಂಡ ಕೊರೊನಾ ಸೋಂಕಿತರನ್ನು ಬೇರೆ ಕಟ್ಟಡಕ್ಕೆ ಸ್ಥಳಾಂತರ ಮಾಡಿದರು. – ಪ್ರಜಾವಾಣಿ ಚಿತ್ರ

ಶವ ಸಂಸ್ಕಾರಕ್ಕೂ 'ಪ್ರಭಾವ' ಬಳಕೆ

ಕೋವಿಡ್‌ನಿಂದ ಸಾವಿಗೀಡಾಗುತ್ತಿರುವವ ಸಂಖ್ಯೆ ಹೆಚ್ಚಾಗುತ್ತಿದ್ದಂತೆ, ಚಿತಾಗಾರದ ಮುಂದೆ ಶವಗಳ ಸಾಲು ಕೂಡ ಉದ್ದವಾಗುತ್ತಿದೆ.

'ಆಸ್ಪತ್ರೆಯಿಂದ ಶವವನ್ನು ಚಿತಾಗಾರಕ್ಕೆ ತಂದು, ಅಂತ್ಯಸಂಸ್ಕಾರ ಮುಗಿಯುವುದರೊಳಗೆ ಎರಡರಿಂದ ಮೂರು ತಾಸು ಬೇಕಾಗುತ್ತದೆ. ಹೆಚ್ಚು ಶವಗಳು ಇದ್ದರೆ, ಇನ್ನೂ ಜಾಸ್ತಿ ಸಮಯ ಹಿಡಿಯುತ್ತದೆ. ಈ ವೇಳೆ, 'ನಿರ್ದಿಷ್ಟ' ಶವಗಳ ಸಂಸ್ಕಾರವನ್ನು ಮೊದಲು ಮುಗಿಸುವಂತೆ 'ಪ್ರಭಾವಿ'ಗಳಿಂದಲೂ ಕರೆ ಬರುತ್ತಿರುತ್ತದೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಸಿಬ್ಬಂದಿಯೊಬ್ಬರು ಹೇಳಿದರು.

'ಮನೆಯಲ್ಲಿ ಮಕ್ಕಳಿವೆ, ಹಿರಿಯರು ಇದ್ದಾರೆ. ಹೆಚ್ಚು ಹೊತ್ತು ನಿಲ್ಲುವುದಕ್ಕಾಗುವುದಿಲ್ಲ. ಬೇಗ ಸಂಸ್ಕಾರ ಮುಗಿಸಿ ಎಂದೂ ಅನೇಕರು ಒತ್ತಾಯ ಮಾಡುತ್ತಿರುತ್ತಾರೆ' ಎಂದೂ ಅವರು ಹೇಳಿದರು.

'ನಗರದಲ್ಲಿ 7 ಕಡೆ ಮಾತ್ರ ಕೋವಿಡ್ ಶವಗಳ ದಹನಕ್ಕೆ ವ್ಯವಸ್ಥೆ ಮಾಡಲಾಗಿದೆ. ಮತ್ತಷ್ಟು ಚಿತಾಗಾರಗಳನ್ನು ಕೋವಿಡ್ ಶವಸಂಸ್ಕಾರಕ್ಕೆ ಮೀಸಲಿಡಬೇಕು' ಎಂದು ನಾಗರಿಕರೊಬ್ಬರು ಕೋರಿದರು.

'ಗುರುತಿನ ಚೀಟಿ ವಿತರಿಸಿ'

'ಚಿತಾಗಾರಕ್ಕೆ ಬಂದ ಎಲ್ಲ ಶವಗಳ ಸಂಸ್ಕಾರ ಮುಗಿಸಿ ಮನೆ ತಲುಪುವಷ್ಟರಲ್ಲಿ ಮಧ್ಯರಾತ್ರಿ ಆಗುತ್ತದೆ. ನಗರದಲ್ಲಿ ಈಗ ಕರ್ಫ್ಯೂ ಜಾರಿಯಲ್ಲಿದೆ. ಪೊಲೀಸರು ವಿಚಾರಿಸುತ್ತಾರೆ. ಬಿಬಿಎಂಪಿಯ ಸಹಿ ಮತ್ತು ಮೊಹರು ಇರುವ ಒಂದು ಗುರುತಿನ ಚೀಟಿಯನ್ನು ನೀಡಿದರೆ ಅನುಕೂಲವಾಗುತ್ತದೆ' ಎಂದು ಸುಮನಹಳ್ಳಿ ಚಿತಾಗಾರದ ಸಿಬ್ಬಂದಿಯೊಬ್ಬರು ಹೇಳಿದರು.

'ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಮಾತ್ರ ಶವಸಂಸ್ಕಾರ ನಡೆಸುವಂತೆ ಬಿಬಿಎಂಪಿ ಸೂಚಿಸಿದೆ. ಆದರೆ, ರಾತ್ರಿ 10 ಗಂಟೆಯಾದರೂ ಶವದ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ. ಯಾವ ಶವವನ್ನೂ ವಾಪಸ್ ಕಳುಹಿಸಲು ಆಗುವುದಿಲ್ಲ. ಎಲ್ಲವುಗಳ ಸಂಸ್ಕಾರ ಮುಗಿಸುವುದರೊಳಗೆ ಮಧ್ಯರಾತ್ರಿ ಆಗುತ್ತದೆ' ಎಂದು ಅವರು ಹೇಳಿದರು.

ಸಾರ್ವಜನಿಕರ ಪ್ರವೇಶ ನಿಷೇಧ

ಪ್ರಜಾವಾಣಿ ವಾರ್ತೆ

ನಂಜನಗೂಡು: ಕೋವಿಡ್ ಸೋಂಕು ಹರಡುತ್ತಿರುವುದರಿಂದ, ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿ ದೇವಾಲಯಕ್ಕೆ ಒಂದು ತಿಂಗಳ ಕಾಲ ಸಾರ್ವಜನಿಕರ ಪ್ರವೇಶವನ್ನು ನಿಷೇಧಿಸಲಾಗಿದೆ.

ಕೇಂದ್ರ ಪುರಾತತ್ವ ಇಲಾಖೆಯ ಆದೇಶದ ಹಿನ್ನೆಲೆಯಲ್ಲಿ ಏ.16ರ ಶುಕ್ರವಾರದಿಂದ ಮೇ 15 ರವರೆಗೆ ಭಕ್ತರ ಪ್ರವೇಶಕ್ಕೆ ನಿರ್ಬಂಧ ವಿಧಿಸಲಾಗಿದೆ ಎಂದು ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ರವೀಂದ್ರ ತಿಳಿಸಿದರು.

'ಚಿತಾಗಾರ ಸಿಬ್ಬಂದಿಗೆ ವೇತನ ಪಾವತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸ್ಮಶಾನ ಮತ್ತು ವಿದ್ಯುತ್ ಚಿತಾಗಾರದ ಸಿಬ್ಬಂದಿ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳ ನಂತರ, ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗವು ಶುಕ್ರವಾರ ಕಲ್ಲಹಳ್ಳಿ ವಿದ್ಯುತ್ ಚಿತಾಗಾರಕ್ಕೆ ಭೇಟಿ ನೀಡಿ, ಸಿಬ್ಬಂದಿಯ ಅಹವಾಲು ಆಲಿಸಿತು.

ಆಯೋಗದ ಸದಸ್ಯ, ವಕೀಲ ಎಚ್. ವೆಂಕಟೇಶ ದೊಡ್ಡೇರಿ ಅವರು, ಚಿತಾಗಾರ ಸಿಬ್ಬಂದಿ ಮತ್ತು ಅವರ ಕುಟುಂಬದವರೊಂದಿಗೆ ಮಾತನಾಡಿ, ಸಮಸ್ಯೆ ಆಲಿಸಿದರು.

'ನೌಕರರಿಗೆ ಸಂಬಳ ನೀಡಬೇಕು, ಅವರಿಗೆ ಉದ್ಯೋಗ ಭದ್ರತೆ ಒದಗಿಸಬೇಕು. ಅವರ ಮಕ್ಕಳ ಶಿಕ್ಷಣಕ್ಕೆ ವ್ಯವಸ್ಥೆ ಮಾಡುವುದರ ಜೊತೆಗೆ, ಕಾಯಂ ವಸತಿ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಬೇಕು' ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದರು.

'ಕೋವಿಡ್ ಶವಗಳ ಸಂಸ್ಕಾರದ ವೇಳೆ ಬೇಕಾಗುವ ಅಗತ್ಯ ಸುರಕ್ಷಾ ಪರಿಕರಗಳನ್ನು ಸಿಬ್ಬಂದಿಗೆ ಒದಗಿಸಬೇಕು' ಎಂದೂ ಅವರು ಹೇಳಿದರು.

ಬಿಬಿಎಂಪಿ ವಿಶೇಷ ಆಯುಕ್ತ ಡಿ. ರಂದೀಪ್, 'ಬಿಬಿಎಂಪಿಯಲ್ಲಿ ಸ್ಮಶಾನ ಮತ್ತು ವಿದ್ಯುತ್ ಚಿತಾಗಾರ ಸಿಬ್ಬಂದಿಯ ಪೈಕಿ ಶೇ 95 ಮಂದಿಗೆ ವೇತನ ಬಿಡುಗಡೆ ಮಾಡಲಾಗಿದೆ. ಉಳಿದ ಶೇ 5ರಷ್ಟು ಸಿಬ್ಬಂದಿಗೆ ಕೂಡಲೇ ವೇತನ ನೀಡಲಾಗುವುದು' ಎಂದರು.

'ಚಿತಾಗಾರ ಸಿಬ್ಬಂದಿಗೆ ಸಮವಸ್ತ್ರ ನೀಡುವುದು, ಅವರಿಗೆ ವಸತಿ ಸೌಲಭ್ಯ ಕಲ್ಪಿಸುವ ಕುರಿತು ನೀತಿ ರೂಪಿಸಲಾಗುವುದು' ಎಂದು ಭರವಸೆ ನೀಡಿದರು.

ಬಿಬಿಎಂಪಿ ಉಪ ಆಯುಕ್ತ ರಂಗನಾಥ, ಸ್ಮಶಾನ ನೌಕರರ ಸಂಘದ ಅಧ್ಯಕ್ಷ ಆ. ಸುರೇಶ್, ಕಾರ್ಯದರ್ಶಿ ರಾಜು ಕಲ್ಲಹಳ್ಳಿ ಇದ್ದರು.

ಚಿತಾಗಾರ ಸಿಬ್ಬಂದಿಗೆ 10 ತಿಂಗಳಿನಿಂದ ವೇತನ ಪಾವತಿಯಾಗದಿರುವ ಮತ್ತು ಅವರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ 'ಪ್ರಜಾವಾಣಿ' ವರದಿ ಪ್ರಕಟಿಸಿತ್ತು.

ವೆಂಕಟೇಶ ದೊಡ್ಡೇರಿ ಅವರು ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು. ವಿಶೇಷ ಆಯುಕ್ತ ಡಿ.ರಂದೀಪ್ ಇತರರು ಇದ್ದಾರೆ

'ಸಭೆ ಸಮಾರಂಭಗಳಿಂದ ದೂರವಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಲಸಿಕೆ ಪಡೆದರೆ ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ಕೊರೊನಾ ಸೋಂಕಿನ ಅಪಾಯದಿಂದ ಪಾರಾಗಲು ಲಸಿಕೆ ಸಹಕಾರಿ. ಹೀಗಾಗಿ 45 ವರ್ಷ ಮೇಲ್ಪಟ್ಟವರೆಲ್ಲಾ ಲಸಿಕೆ ಹಾಕಿಸಿಕೊಳ್ಳಲು ಮುಂದಾಗಬೇಕು' ಎಂದು ಮಣಿಪಾಲ ಆಸ್ಪತ್ರೆಯ ವೈದ್ಯ ಡಾ.ಸತ್ಯನಾರಾಯಣ ಮೈಸೂರು ಶುಕ್ರವಾರ ತಿಳಿಸಿದರು.

ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೊರೊನಾ ನಿಯಂತ್ರಣ ಕುರಿತು ಹಮ್ಮಿಕೊಂಡಿದ್ದ ಆನ್‌ಲೈನ್ ಸಂವಾದದಲ್ಲಿ ಅವರು ಮಾತನಾಡಿದರು.

'ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಸತಿ ಸಮುಚ್ಚಯಗಳಿಗೆ ಭೇಟಿ ನೀಡಿ ಅಲ್ಲಿನ ನಿವಾಸಿಗಳ ಆರೋಗ್ಯ ತಪಾಸಣೆ ಮಾಡಬೇಕು. ಯಾರು ಲಸಿಕೆ ಪಡೆದಿಲ್ಲವೊ ಅಂತಹವರನ್ನು ಗುರುತಿಸಿ ಅವರಿಗೆ ಮೊದಲು ಲಸಿಕೆ ನೀಡುವ ಕಾರ್ಯವಾಗಬೇಕು. ಯಾರು ರೋಗದ ತೀವ್ರತೆಯಿಂದ ಬಳಲುತ್ತಿದ್ದಾರೆ, ಯಾರಿಗೆ ತುರ್ತು ಚಿಕಿತ್ಸೆಯ ಅಗತ್ಯವಿದೆ ಎಂಬುದನ್ನು ಗುರುತಿಸಿ ಅಂತಹವರಿಗೆ ಆದ್ಯತೆಯ ಮೇರೆಗೆ ಚಿಕಿತ್ಸೆ ಒದಗಿಸಬೇಕು. ವೈದ್ಯರ ಸಲಹೆ ಮೇರೆಗೆ ಅಗತ್ಯ ಮಾತ್ರೆಗಳನ್ನು ಶಾಸಕರ ಕಚೇರಿಯಿಂದಲೇ ಪೂರೈಸಬೇಕು' ಎಂದು ಸಲಹೆ ನೀಡಿದರು.

'ಮಹಾಲಕ್ಷ್ಮಿ ಲೇಔಟ್ ಕ್ಷೇತ್ರ ವ್ಯಾಪ್ತಿಯಲ್ಲಿರುವ ಆಸ್ಪತ್ರೆ, ನರ್ಸಿಂಗ್ ಹೋಂ ಹಾಗೂ ಕೋವಿಡ್ ಕೇಂದ್ರಗಳ ಮಾಹಿತಿ ಪಡೆದುಕೊಳ್ಳಬೇಕು. ಶಾಸಕರ ಕಚೇರಿಯಲ್ಲೇ ಕಾಲ್ ಸೆಂಟರ್ ತೆರೆದು ಅಲ್ಲಿಂದ ಎಲ್ಲಾ ಆಸ್ಪತ್ರೆಗಳಿಗೆ ಕೋವಿಡ್ ದೃಢಪಟ್ಟವರ ಮಾಹಿತಿ ರವಾನಿಸಬೇಕು. ಇದರಿಂದ ರೋಗಿಗಳು ಆಸ್ಪತ್ರೆಗಳಿಗೆ ಅಲೆಯುವುದನ್ನು ತಪ್ಪಿಸಬಹುದು. 60 ವರ್ಷ ಮೇಲ್ಪಟ್ಟವರು, ಕ್ಯಾನ್ಸರ್ ಚಿಕಿತ್ಸೆ ಪಡೆಯುತ್ತಿರುವವರು, ಮೂತ್ರಪಿಂಡ ಹಾಗೂ ಹೃದ್ರೋಗ ಸಮಸ್ಯೆಯಿಂದ ಬಳಲುತ್ತಿರುವವರು ಮನೆಯಲ್ಲಿ ಪ್ರತ್ಯೇಕ ವಾಸದಲ್ಲಿರುವುದು ಸೂಕ್ತವಲ್ಲ. ಉಸಿರಾಟದ ತೊಂದರೆ ಇರುವವರು ಆಸ್ಪತ್ರೆಗೆ ದಾಖಲಾಗಬೇಕು' ಎಂದರು.

ಮಣಿಪಾಲ್ ಆಸ್ಪತ್ರೆಯ ವೈದ್ಯ ಕೆ.ಎಸ್.ಸತೀಶ್ 'ಮಧುಮೇಹ, ಅಧಿಕ ರಕ್ತದೊತ್ತಡದಿಂದ ಬಳಲುತ್ತಿರುವವರಿಗೆ ತೊಂದರೆ ಜಾಸ್ತಿ. ಎರಡನೇ ಅಲೆಯಲ್ಲಿ ಸೋಂಕು ವ್ಯಾಪಕವಾಗಿ ಹರಡುತ್ತದೆ. ಹೀಗಾಗಿ ಸಭೆ, ಸಮಾರಂಭಗಳಿಂದ ದೂರ ಉಳಿಯಬೇಕು. ಲಸಿಕೆ ಪಡೆದರೆ ಕೋವಿಡ್ ಬರಲ್ಲ ಎಂಬುದು ತಪ್ಪು ತಿಳಿವಳಿಕೆ. ಲಸಿಕೆ ಹಾಕಿಸಿಕೊಂಡ ನಂತರವೂ ಕೋವಿಡ್ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು' ಎಂದು ತಿಳಿಸಿದರು.

ಆರೋಗ್ಯ ಇಲಾಖೆಯ ಆಯುಕ್ತ ಡಾ.ಕೆ.ವಿ.ತ್ರಿಲೋಕ್ ಚಂದ್ರ 'ಬೆಂಗಳೂರಿನಲ್ಲಿ ಈಗ ಹೆಚ್ಚೆಚ್ಚು ಪ್ರಕರಣಗಳು ಪತ್ತೆಯಾಗುತ್ತಿವೆ. ರೋಗ ಲಕ್ಷಣಗಳು ಕಾಣಿಸಿಕೊಂಡ ತಕ್ಷಣವೇ ಆಸ್ಪತ್ರೆಗೆ ಹೋಗಿ ತಪಾಸಣೆ ಮಾಡಿಸಿಕೊಳ್ಳಬೇಕು. ಎಲ್ಲರಿಗೂ ಲಸಿಕೆಯ ಮಹತ್ವದ ಬಗ್ಗೆ ಅರಿವು ಮೂಡಿಸಬೇಕು' ಎಂದರು.

ಸಚಿವ ಕೆ.ಗೋಪಾಲಯ್ಯ 'ಜನರು ಭಯಪಡುವ ಅಗತ್ಯವಿಲ್ಲ. ಏನೇ ಸಮಸ್ಯೆ ಇದ್ದರೂ ನನ್ನ ಗಮನಕ್ಕೆ ತನ್ನಿ. ಒಂದೊಮ್ಮೆ ನಾನು ಅಲಭ್ಯನಾದರೆ ಶಾಸಕರ ಕಚೇರಿಗೆ ಭೇಟಿ ನೀಡಿ ಅಲ್ಲಿರುವ ಸಿಬ್ಬಂದಿ ಜೊತೆ ಚರ್ಚಿಸಿ ಸಮಸ್ಯೆ ಪರಿಹರಿಸಿಕೊಳ್ಳಬೇಕು. ಮಹಾಲಕ್ಷ್ಮಿ ಎಜುಕೇಷನ್ ಟ್ರಸ್ಟ್ ಮೂಲಕ ಸೋಮವಾರದಿಂದಲೇ ಜನರಿಗೆ ಅಗತ್ಯ ಮಾತ್ರೆ ಹಾಗೂ ಇತರ ಪರಿಕರಗಳನ್ನು ಪೂರೈಸುವ ಕೆಲಸ ಮಾಡಲಿದ್ದೇವೆ' ಎಂದು ಹೇಳಿದರು.

ಚಿತ್ರಾವಳಿ

'ಗರ್ಭಗುಡಿ ಐವಿಎಫ್ ಆಸ್ಪತ್ರೆ'ಯ 10ನೇ ವಾರ್ಷಿಕೋತ್ಸವದ ಅಂಗವಾಗಿ ಶುಕ್ರವಾರ ಹಮ್ಮಿಕೊಂಡಿದ್ದ 100 ಬಡ ದಂಪತಿಗೆ ಕೃತಕ ವೀರ್ಯಾಣು ಧಾರಣೆ ಉಚಿತ ಚಿಕಿತ್ಸಾ ಶಿಬಿರದ ಉದ್ಘಾಟನಾ ಕಾರ್ಯಕ್ರಮದಲ್ಲಿ (ಎಡದಿಂದ) ಸಂಸ್ಥೆಯ ನಿರ್ದೇಶಕ ಹರಿ ಶ್ರೀನಿವಾಸನ್, ಕಾರ್ಯಾಚರಣೆ ವಿಭಾಗದ ನಿರ್ದೇಶಕಿ ಎಂ.ಎಸ್ ಪುಷ್ಪಲತಾ, ಸಂಸ್ಥಾಪಕಿ ಡಾ.ಆಶಾ ಎಸ್.ವಿಜಯ್ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವಿಜಯ್ ಕುಮಾರ್ ಶೇಷಾದ್ರಿ ಭಾಗವಹಿಸಿದ್ದರು.


ಕನ್ನಡ ಸಾಹಿತ್ಯ ಪರಿಷತ್ತು ನಗರದಲ್ಲಿ ಶುಕ್ರವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ (ಕುಳಿತಿರುವವರು ಎಡದಿಂದ) ಚಲನಚಿತ್ರ ನಟ, ನಿರ್ಮಾಪಕ ಬಸಂತಕುಮಾರ್ ಪಾಟೀಲ ಮತ್ತು ರಂಗಭೂಮಿ ಕಲಾವಿದ ಕೆ. ನರಸಿಂಹಯ್ಯ ಅವರಿಗೆ 'ಡಾ. ರಾಜ್‌ಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿ' ನೀಡಿ ಗೌರವಿಸಲಾಯಿತು. (ಎಡದಿಂದ) ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಪದ್ಮರಾಜ ದಂಡಾವತಿ, ಅಧ್ಯಕ್ಷ ಮನು ಬಳಿಗಾರ್, ನಿರ್ಮಾಪಕ ಎಸ್.ಎ ಚಿನ್ನೇಗೌಡ, ಪರಿಷತ್ತಿನ ಗೌರವ ಕೋಶಾಧ್ಯಕ್ಷ ಪಿ. ಮಲ್ಲಿಕಾರ್ಜುನಪ್ಪ ಹಾಗೂ ಗೌರವ ಕಾರ್ಯದರ್ಶಿ ಕೆ. ರಾಜಕುಮಾರ್ ಇದ್ದರು. ಪ್ರಜಾವಾಣಿ ಚಿತ್ರ

ನಿರ್ಬಂಧ ಮಾರ್ಗಸೂಚಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಹೆಚ್ಚುತ್ತಿರುವ ಕಾರಣ ನ್ಯಾಯಾಲಯದಲ್ಲಿ ಸದ್ಯ ಅನುಸರಿಸುತ್ತಿರುವ ಮಾರ್ಗಸೂಚಿಗಳನ್ನು ಮೇ 29ರವರೆಗೆ ಮುಂದುವರಿಸುವಂತೆ ಹೈಕೋರ್ಟ್ ಆದೇಶಿಸಿದೆ.

ನ್ಯಾಯಾಲಯಗಳಲ್ಲಿ ಕಲಾಪಗಳು ಹೇಗೆ ನಡೆಯಬೇಕು ಎಂಬುದರ ಕುರಿತು ಹೊರಡಿಸಿದ್ದ ಮಾರ್ಗಸೂಚಿ ಏಪ್ರಿಲ್‌ನಲ್ಲಿ ಕೊನೆಗೊಳ್ಳಲಿದ್ದು, ಅದನ್ನು ಮೇ 29ರವರೆಗೆ ವಿಸ್ತರಿಸಿ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಮಧ್ಯಂತರ ಆದೇಶ ಹೊರಡಿಸಿತು.

ಯಾವುದೇ ಕಟ್ಟಡಗಳ ತೆರವು ರೀತಿಯ ಆದೇಶಗಳನ್ನು ಮೇ 29ರವರೆಗೆ ತಡೆಹಿಡಿಯಬೇಕು. ಅದನ್ನು ಪ್ರಶ್ನಿಸಿ ನ್ಯಾಯಾಲಯಕ್ಕೆ ಬರುವವರ ಸಂಖ್ಯೆ ಕಡಿಮೆ ಮಾಡುವುದು ಇದರ ಉದ್ದೇಶ. ಒಂದು ಸಾವಿರಕ್ಕೂ ಹೆಚ್ಚು ಕೋವಿಡ್ ಪ್ರಕರಣಗಳು ದಾಖಲಾಗುತ್ತಿರುವ ಜಿಲ್ಲೆಗಳ ನ್ಯಾಯಾಲಯಗಳಲ್ಲೂ ಇದೇ ರೀತಿಯ ನಿರ್ಬಂಧಗಳನ್ನು ಅನುಸರಿಸಬೇಕು ಎಂದು ಪೀಠ ತಿಳಿಸಿತು.

ಲಸಿಕೆ ಪರಿಣಾಮ: ಕಾಂಗ್ರೆಸ್–ಬಿಜೆಪಿ ಟ್ವೀಟ್ ಸಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಲಸಿಕೆಗಳ ಪರಿಣಾಮದ ಬಗ್ಗೆ ನಾವು ಅನುಮಾನ ವ್ಯಕ್ತಪಡಿಸಿದ್ದಕ್ಕೆ ಇಂದು ಪುರಾವೆ ಸಿಕ್ಕಿದೆಯಲ್ಲ' ಎಂದು ಕಾಂಗ್ರೆಸ್ ವ್ಯಂಗ್ಯವಾಡಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಕೋವಿಡ್ ದೃಢಪಟ್ಟ ಬೆನ್ನಲ್ಲೇ ಕಾಂಗ್ರೆಸ್ ಟ್ವೀಟ್ ಮೂಲಕ ಲೇವಡಿ ಮಾಡಿದ್ದು, 'ಲಸಿಕೆಗಳು ನಿಜಕ್ಕೂ ಪರಿಣಾಮಕಾರಿಯಾಗಿದ್ದರೆ, ಲಸಿಕೆ ಪಡೆದಿದ್ದ ಯಡಿಯೂರಪ್ಪ ಅವರಿಗೆ ಸೋಂಕು ತಗುಲಿದ್ದು ಹೇಗೆ ಮತ್ತು ಏಕೆ' ಎಂದು ಪ್ರಶ್ನಿಸಿದೆ.

'ಕೋವಿಡ್‌ಗೆ ಲಸಿಕೆ ಮದ್ದಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಿ. ಅದು ರೋಗ ನಿರೋಧಕ ಶಕ್ತಿ ವೃದ್ಧಿಸಿ ಸೋಂಕು ಕಡಿಮೆ ಮಾಡಬಹುದು' ಎಂದು ಹೇಳಿದೆ.

ಬಿಜೆಪಿ ತಿರುಗೇಟು: ಇದಕ್ಕೆ ತಿರುಗೇಟು ನೀಡಿರುವ ಬಿಜೆಪಿ, 'ಕಾಂಗ್ರೆಸ್ ಪಕ್ಷ ಜವಾಬ್ದಾರಿಯಿಂದ ನಡೆದುಕೊಳ್ಳುವುದು ಯಾವಾಗ? ಆರಂಭದಿಂದಲೇ ಲಸಿಕೆಯ ಪರಿಣಾಮದ ಬಗ್ಗೆ ಸುಳ್ಳು ಸುದ್ದಿಗಳನ್ನು ಹಬ್ಬಿಸುತ್ತಾ ಬಂದಿದ್ದು, ಈಗ ಲಸಿಕೆ ಕೊರತೆ ಇದೆ. ಜನರಿಗೆ ಕೊಡುವುದಿಲ್ಲವೆ ಎಂದು ಪ್ರಶ್ನಿಸುತ್ತಿರುವುದು ಎಷ್ಟು ಸರಿ' ಎಂದು ಕೇಳಿದೆ.

'ಸುಳ್ಳನ್ನೇ ವೈಭವೀಕರಿಸುತ್ತಿರುವ ಕಾಂಗ್ರೆಸ್ ಪಕ್ಷವು ಸರ್ಕಾರದ ಜೊತೆ ನಿಂತು ದೇಶದ ಜನರಲ್ಲಿ ಭರವಸೆ ಮೂಡಿಸುವುದನ್ನು ಬಿಟ್ಟು, ಸುಳ್ಳು ಮಾಹಿತಿಯನ್ನು ಹಬ್ಬಿಸುತ್ತಿದೆ' ಎಂದು ಕಿಡಿ ಕಾರಿದೆ.

'ಭಾರತ ಲಸಿಕೆ ಕಂಡು ಹಿಡಿದಾಗ ಮತ್ತು ಲಸಿಕಾ ಅಭಿಯಾನ ನಡೆದಾಗ ಕಾಂಗ್ರೆಸ್ ಪಕ್ಷದ ಮುಖಂಡರು ಬಿಜೆಪಿ ಲಸಿಕೆ ಎಂದು ಟೀಕಿಸಿದ್ದರು. ಈಗ ದೇಶದ ಎಲ್ಲ ಜನರಿಗೂ ಲಸಿಕೆ ಕೊಡಿ ಎನ್ನುತ್ತಿದ್ದಾರೆ. ಕಾಂಗ್ರೆಸ್ ನಿಲುವುಗಳಲ್ಲಿ ಇಷ್ಟೊಂದು ವ್ಯತ್ಯಾಸ ಏಕೆ? ದೇಶದ ಪರವಾಗಿ ಕಾಂಗ್ರೆಸ್ ನಿಲ್ಲುವುದು ಯಾವಾಗ' ಎಂದು ಪ್ರಶ್ನಿಸಿದೆ.

ಕಾರ್ಪೊರೇಟ್ ಆಸ್ಪತ್ರೆಗಳಿಗೆ ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ ಸೂಚನೆ • ಹೆಚ್ಚು ಸಮಸ್ಯೆ ಇರುವವರನ್ನು ಮಾತ್ರ ಆಸ್ಪತ್ರೆಗೆ ದಾಖಲಿಸಲು ನಿರ್ಧಾರ

ಕೋವಿಡ್ ಚಿಕಿತ್ಸೆಗಾಗಿ ಹೋಟೆಲ್‌ಗಳಲ್ಲಿ ತಾತ್ಕಾಲಿಕ ಆಸ್ಪತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧ್ಯಮ ಮತ್ತು ಸಣ್ಣ ಪ್ರಮಾಣದ ರೋಗ ಲಕ್ಷಣಗಳುಳ್ಳ ಕೋವಿಡ್ ಸೋಂಕಿತರ ಚಿಕಿತ್ಸೆಗಾಗಿ ತಕ್ಷಣವೇ ಹೋಟೆಲ್‌ಗಳ ಜತೆ ಒಡಂಬಡಿಕೆ ಮಾಡಿಕೊಂಡು ತಾತ್ಕಾಲಿಕ ಆಸ್ಪತ್ರೆಗಳನ್ನು ಆರಂಭಿಸುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕಾರ್ಪೊರೇಟ್ ಆಸ್ಪತ್ರೆಗಳಿಗೆ ಸೂಚನೆ ನೀಡಿದ್ದಾರೆ.

ಕೋವಿಡ್ ನಿಯಂತ್ರಣ ಹಾಗೂ ಸೋಂಕಿತರ ಚಿಕಿತ್ಸೆಗೆ ಸಂಬಂಧಿಸಿದಂತೆ ಶುಕ್ರವಾರ ತಮ್ಮ ನಿವಾಸದಲ್ಲಿ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಮತ್ತು ಖಾಸಗಿ ಆಸ್ಪತ್ರೆಗಳ ಪ್ರತಿನಿಧಿಗಳ ಜತೆ ದೀರ್ಘ ಕಾಲ ಸಭೆ ನಡೆಸಿದರು.

ಸಭೆಯ ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಸುಧಾಕರ್, 'ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಶೇಕಡ 95ರಷ್ಟು ಮಂದಿಗೆ ಕಡಿಮೆ ರೋಗ ಲಕ್ಷಣಗಳು ಇರುತ್ತವೆ. ಶೇ 5ರಷ್ಟು ಜನರು ಮಾತ್ರ ಆಸ್ಪತ್ರೆಗೆ ದಾಖಲಾಗಿ, ಚಿಕಿತ್ಸೆ ಪಡೆಯಬೇಕಾಗುತ್ತದೆ. ಹೆಚ್ಚು ಸಮಸ್ಯೆ ಇರುವವರಿಗಷ್ಟೇ ಆಸ್ಪತ್ರೆಗೆ ಪ್ರವೇಶ ನೀಡಬೇಕು. ಉಳಿದವರಿಗೆ ಹೋಟೆಲ್‌ಗಳಲ್ಲಿ ಆರೈಕೆ ಕೇಂದ್ರ ತೆರೆದು, ಚಿಕಿತ್ಸೆ ನೀಡುವಂತೆ ಸೂಚಿಸಲಾಗಿದೆ' ಎಂದರು.

ರೋಗ ಲಕ್ಷಣ ಇಲ್ಲದವರನ್ನು ಮನೆಗಳಲ್ಲೇ ಪ್ರತ್ಯೇಕವಾಸದಲ್ಲಿ ಇರಿಸುವುದು ಅಥವಾ ಸಾಂಸ್ಥಿಕ ಕ್ವಾರಂಟೈನ್‌ನಲ್ಲಿ ಇರಿಸುವುದಕ್ಕೆ ಸಿದ್ಧತೆ ಮಾಡುವಂತೆ ಸೂಚಿಸಲಾಗಿದೆ. ಕ್ವಾರಂಟೈನ್‌ನಲ್ಲಿ ಇರುವವರು ಹೊರಗೆ ಸುತ್ತಾಡದಂತೆ ತಡೆಯಲು ಅಳಿಸಲಾಗದ ಶಾಯಿಯಿಂದ ಮೊಹರು ಹಾಕಲಾಗುವುದು. ಕಂಟೈನ್ಮೆಂಟ್ ವಲಯ ಮತ್ತು ಕಿರು ಕಂಟೈನ್ಮೆಂಟ್ ವಲಯಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದಕ್ಕೂ ತಾಕೀತು ಮಾಡಲಾಗಿದೆ ಎಂದು ಹೇಳಿದರು.

ಎಲ್ಲ ಖಾಸಗಿ ಆಸ್ಪತ್ರೆಗಳಲ್ಲಿ ಶೇ 50ರಷ್ಟು ಹಾಸಿಗೆಗಳನ್ನು ಸರ್ಕಾರದಿಂದ ದಾಖಲಿಸುವ ಕೋವಿಡ್ ಸೋಂಕಿತರ ಚಿಕಿತ್ಸೆಗೆ ಮೀಸಲಿಡಲು ಸೂಚಿಸಲಾಗಿದೆ. ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 1,000 ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ 5,000 ಹಾಸಿಗೆಗಳನ್ನು ಕೋವಿಡ್ ರೋಗಿಗಳ ಚಿಕಿತ್ಸೆಗೆ ಕಾಯ್ದಿರಿಸುವಂತೆ ನಿರ್ದೇಶನ ನೀಡಲಾಗಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ರೋಗಿಗಳ ದಾಖಲಾತಿ ಮತ್ತು ಚಿಕಿತ್ಸೆ ಮೇಲೆ ನಿಗಾ ಇಡಲು ಹಿರಿಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಮುಖ್ಯಾಂಶಗಳು

- ಕೋವಿಡ್ ಪತ್ತೆ ಪರೀಕ್ಷಾ ವರದಿ 24 ಗಂಟೆಗಳೊಳಗೆ ನೀಡಲು ಕ್ರಮ
- 5,000 ಆಮ್ಲಜನಕ ಸಿಲಿಂಡರ್ ಪೂರೈಸಲು ಕೇಂದ್ರಕ್ಕೆ ಬೇಡಿಕೆ
- ಜಿಲ್ಲಾ ಆಸ್ಪತ್ರೆಗಳಲ್ಲಿ ಆಮ್ಲಜನಕ ಉತ್ಪಾದನಾ ಘಟಕ ಆರಂಭಿಸಲು ಕ್ರಮ

ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು ಬೆಂಗಳೂರಿನ ಆಸ್ಪತ್ರೆಯಲ್ಲಿ ಶುಕ್ರವಾರ ಕೋವಿಡ್ ಲಸಿಕೆ ಪಡೆದರು.

ಆಮ್ಲಜನಕ ಸಿಲಿಂಡರ್‌ಗೆ ಬೇಡಿಕೆ: '5,000 ಆಮ್ಲಜನಕ ಸಿಲಿಂಡರ್ ಪೂರೈಸುವಂತೆ ಕೇಂದ್ರ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಲು ತೀರ್ಮಾನಿಸಲಾಗಿದೆ. ದೀರ್ಘ ಕಾಲ ಆಮ್ಲಜನಕ ಪೂರೈಸುವುದಕ್ಕೆ ಅನುಕೂಲವಾಗುವಂತೆ ಜಂಬೋ ಸಿಲಿಂಡರ್‌ಗಳ ಖರೀದಿಗೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ ಆಮ್ಲಜನಕ ಉತ್ಪಾದನಾ ಘಟಕಗಳನ್ನು ತ್ವರಿತವಾಗಿ ಪ್ರಾರಂಭಿಸಲು ಸೂಚನೆ ನೀಡಿದ್ದಾರೆ' ಎಂದು ಸುಧಾಕರ್ ಹೇಳಿದರು.

24 ಗಂಟೆಗಳಲ್ಲೇ ವರದಿ: ಕೋವಿಡ್ ಪತ್ತೆ ಪರೀಕ್ಷಾ ವರದಿಯನ್ನು 24 ಗಂಟೆಗಳೊಳಗೆ ನೀಡುವ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು. ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ನರ್ಸ್‌ಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವುದಕ್ಕೂ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದರು.

ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಸಭೆಯಲ್ಲಿದ್ದರು.

20ಕ್ಕೂ ಅಧಿಕ ತಾರಾ ಹೋಟೆಲ್‌ಗಳಲ್ಲಿ ಆರೈಕೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪೀಡಿತರ ಸಂಖ್ಯೆ ಏರಿಕೆ ಕಾಣುತ್ತಿರುವುದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಮಸ್ಯೆ ತಲೆದೋರಿದೆ. ಹೀಗಾಗಿ, ಸರ್ಕಾರದ ಸೂಚನೆ ಅನುಸಾರ ಖಾಸಗಿ ಆಸ್ಪತ್ರೆಗಳು 20ಕ್ಕೂ ಅಧಿಕ ತಾರಾ ಹೋಟೆಲ್‌ಗಳಲ್ಲಿ 2 ಸಾವಿರ ಹಾಸಿಗೆಗಳನ್ನು ಸಜ್ಜುಗೊಳಿಸಲು ಮುಂದಾಗಿವೆ.

ಕೆಲ ದಿನಗಳಿಂದ ಆಸ್ಪತ್ರೆಗಳಿಗೆ ದಾಖಲಾಗುವವರ ಸಂಖ್ಯೆ ಏರಿಕೆ ಕಂಡಿದೆ. ಇದರಿಂದಾಗಿ ಬಹುತೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗಳು ಭರ್ತಿಯಾಗಿವೆ. ಹೀಗಾಗಿ, ಕೆಲ ಸೋಂಕಿತರು ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಸಮಸ್ಯೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸರ್ಕಾರವು ಖಾಸಗಿ ಆಸ್ಪತ್ರೆಗಳ ಜತೆಗೆ ಮಾತುಕತೆ ನಡೆಸಿ, ಶಿಫಾರಸು ಮಾಡುವ ರೋಗಿಗಳಿಗೆ ಈ ಮೊದಲಿನಂತೆ ಶೇ 50 ರಷ್ಟು ಹಾಸಿಗೆಗಳನ್ನು ಮೀಸಲಿಡುವಂತೆ ಸೂಚಿಸಿದೆ. ಅದೇ ರೀತಿ, ಸೋಂಕು ಲಕ್ಷಣಗಳು ಅಷ್ಟಾಗಿ ಗೋಚರಿಸದವರಿಗೆ ಹೋಟೆಲ್‌ಗಳಲ್ಲಿ ವ್ಯವಸ್ಥೆ ಮಾಡುವಂತೆ ನಿರ್ದೇಶನ ನೀಡಿದೆ. ಅದರಂತೆ ಖಾಸಗಿ ಆಸ್ಪತ್ರೆಗಳು ಹತ್ತಿರದ ಹೋಟೆಲ್‌ಗಳನ್ನು ಸಂಪರ್ಕಿಸಿ, ಕೋವಿಡ್ ಆರೈಕೆ ಕೇಂದ್ರಗಳನ್ನು ನಿರ್ಮಿಸಲಾರಂಭಿಸಿವೆ.

ಕೋವಿಡ್ ಕಾಣಿಸಿಕೊಂಡ ಬಳಿಕ ವ್ಯಾಪಾರ ವ್ಯವಹಾರ ಸಂಬಂಧ ವಿದೇಶ ಹಾಗೂ ಅನ್ಯ ರಾಜ್ಯಗಳಿಂದ ಇಲ್ಲಿಗೆ ಬರುವ ಪ್ರತಿನಿಧಿಗಳ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದೆ. ವಾಣಿಜ್ಯ ಸಭೆಗಳು ಕೂಡ ಆನ್‌ಲೈನ್ ಮೂಲಕವೇ ನಡೆಯುತ್ತಿದೆ. ಇದರಿಂದಾಗಿ ತಾರಾ ಹೋಟೆಲ್‌ಗಳಲ್ಲಿ ಬಹುತೇಕ ಕೊಠಡಿಗಳು ಖಾಲಿಯಿವೆ. ಹಾಗಾಗಿ, ಕೋವಿಡ್ ಚಿಕಿತ್ಸೆಗೆ ಹಾಸಿಗೆ ಒದಗಿಸಲು ಹೋಟೆಲ್‌ಗಳ ಮುಖ್ಯಸ್ಥರು ಕೂಡ ಆಸಕ್ತಿ ತೋರಿದ್ದಾರೆ. ಸುಗುಣ, ಪೀಪಲ್ ಟ್ರೀ, ಸಂಜೀವಿನಿ, ಅಪೋಲೊ, ಕೊಲಂಬಿಯಾ ಏಷ್ಯಾ, ಆಸ್ಟರ್ ಸಿಎಂಐ ಸೇರಿದಂತೆ ನಗರದ ಪ್ರಮುಖ ಆಸ್ಪತ್ರೆಗಳು ಈಗಾಗಲೇ ಕೆಲ ಹೋಟೆಲ್‌ಗಳನ್ನು ಗುರುತಿಸಿ, ಸೇವೆಗೆ ಸಜ್ಜುಗೊಳಿಸುತ್ತಿವೆ. ಎಲ್ಲ ಸೌಲಭ್ಯಗಳೊಂದಿಗೆ ವಿಧಿಸಬಹುದಾದ ಗರಿಷ್ಠ ಶುಲ್ಕವನ್ನು ಸರ್ಕಾರವು ಕಳೆದ ವರ್ಷ ನಿಗದಿಮಾಡಿತ್ತು. ಅದೇ ದರ ಮುಂದುವರಿಯಲಿದೆ.

ಹತ್ತಿರದ ಹೋಟೆಲ್‌ಗೆ ಆದ್ಯತೆ: ಸದ್ಯ ಖಾಸಗಿ ಆಸ್ಪತ್ರೆಗಳು ಸರ್ಕಾರಿ ಕೋಟಾದಡಿ 1,565 ಹಾಸಿಗೆಗಳನ್ನು ಮೀಸಲಿರಿಸಿವೆ. ಅದರಲ್ಲಿ 639 ಹಾಸಿಗೆಗಳು ಖಾಲಿಯಿವೆ. ನೇರವಾಗಿ ಬಂದು ಚಿಕಿತ್ಸೆ ಪಡೆದುಕೊಳ್ಳುವವರಿಗೆ 5,499 ಹಾಸಿಗೆಗಳನ್ನು ಆಸ್ಪತ್ರೆಗಳು ಗುರುತಿಸಿವೆ. ಸರ್ಕಾರಿ ಆಸ್ಪತ್ರೆಗಳಲ್ಲಿ 65 ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ 5 ಹಾಸಿಗೆಗಳು ಮಾತ್ರ ಖಾಲಿಯಿವೆ.

'ಮಣಿಪಾಲ್, ಅಪೋಲೊ, ನಾರಾಯಣ ಹೃದಯಾಲಯ ಸೇರಿದಂತೆ 5 ಆಸ್ಪತ್ರೆಗಳು ಈಗಾಗಲೇ ಹೋಟೆಲ್‌ಗಳನ್ನು ಕೋವಿಡ್ ಆರೈಕೆ ಕೇಂದ್ರಗಳನ್ನಾಗಿ ಪರಿವರ್ತಿಸಿವೆ. ಇನ್ನಷ್ಟು ಆಸ್ಪತ್ರೆಗಳು ಹೋಟೆಲ್‌ಗಳನ್ನು ಗುರುತಿಸಿ, ಅಗತ್ಯ ವ್ಯವಸ್ಥೆ ಮಾಡಿಕೊಳ್ಳುತ್ತಿವೆ. ಆಸ್ಪತ್ರೆಯ ಹತ್ತಿರವಿರುವ ಹೋಟೆಲ್‌ಗಳಿಗೆ ಆದ್ಯತೆ ನೀಡಲಾಗುತ್ತಿದೆ. ದೂರವಾದಲ್ಲಿ ವೈದ್ಯಕೀಯ ಸೌಲಭ್ಯ ಒದಗಿಸುವುದು ಕಷ್ಟವಾಗುತ್ತದೆ. ಹೋಟೆಲ್‌ಗಳ ಮಾಲೀಕರಿಂದ ಉತ್ತಮ ಸಹಕಾರ ಸಿಗುತ್ತಿದೆ' ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫಾನಾ) ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ತಿಳಿಸಿದರು.

'ಬೇಡಿಕೆ ಅನುಸಾರ ಹಾಸಿಗೆ ವ್ಯವಸ್ಥೆ'

'ಖಾಸಗಿ ಆಸ್ಪತ್ರೆಗಳ ಜತೆಗಿನ ಒಪ್ಪಂದದ ಅನುಸಾರ ಕೋವಿಡ್ ಪೀಡಿತರಿಗೆ ಚಿಕಿತ್ಸೆ ಒದಗಿಸಲು ಹೋಟೆಲ್‌ಗಳನ್ನು ನೀಡಲಾಗುತ್ತಿದೆ. ಸೋಂಕಿತರಿಗೆ ಚಿಕಿತ್ಸೆ ಒದಗಿಸುವ ಹೋಟೆಲ್‌ಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ಕೂಡ ಲಸಿಕೆ ನೀಡುವಂತೆ ಬಿಬಿಎಂಪಿಗೆ ಮನವಿ ಮಾಡಿದ್ದೇವೆ. ಎರಡು ಸ್ಟಾರ್ ಮತ್ತು ಮೂರು ಸ್ಟಾರ್ ಹೋಟೆಲ್‌ಗಳನ್ನು ಮಾತ್ರ ಕೋವಿಡ್ ಆರೈಕೆ ಕೇಂದ್ರಗಳನ್ನಾಗಿ ಮಾರ್ಪಡಿಸಲಾಗುತ್ತದೆ. ಆಸ್ಪತ್ರೆಗಳಲ್ಲಿ ಸಾಮಾನ್ಯ ಹಾಸಿಗೆಗೆ ಇರುವ ಎಲ್ಲ ಸೌಲಭ್ಯ ಇರುತ್ತದೆ. ದಾಖಲಾದವರಿಗೆ ಹೋಟೆಲ್‌ಗಳಲ್ಲಿಯೇ ತಿಂಡಿ–ಊಟವನ್ನು ತಯಾರಿಸಿ, ಒದಗಿಸಲಾಗುತ್ತದೆ' ಎಂದು ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಅಧ್ಯಕ್ಷ ಪಿ.ಸಿ. ರಾವ್ ತಿಳಿಸಿದರು.

ಕೊರೊನಾ ಸಾಂತ್ವನ

'ಕೋವಿಡ್: ಸಾಮಾಜಿಕ ಜವಾಬ್ದಾರಿ ಮರೆತರೆ ಅಪಾಯ'

ಮಧುಮೇಹ, ಅಧಿಕ ರಕ್ತದೊತ್ತಡದಂತಹ ಕಾಯಿಲೆಯು ವ್ಯಕ್ತಿಗೆ ಮಾತ್ರ ಸೀಮಿತವಾಗಿರುತ್ತದೆ. ಆದರೆ, ಕೋವಿಡ್ ವ್ಯಕ್ತಿಯಿಂದ ವ್ಯಕ್ತಿಗೆ ಹರಡುತ್ತದೆ. ಹಾಗಾಗಿ, ಈ ಸಂದರ್ಭದಲ್ಲಿ ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿ ಅರಿತು ನಡೆದುಕೊಳ್ಳಬೇಕು. ಕೋವಿಡ್ ಬಗ್ಗೆ ಭಯ ಪಡುವ ಬದಲು ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು.

ರೂಪಾಂತರಗೊಂಡ ಕೊರೊನಾ ವೈರಾಣು ವೇಗವಾಗಿ ಹರಡುವ ಸಾಮರ್ಥ್ಯ ಹೊಂದಿದೆ. ಆದರೆ, ಅದರ ತೀವ್ರತೆ ಮೊದಲಿನಷ್ಟೇ ಇರಲಿದೆ. ಜನರು ಎಚ್ಚೆತ್ತುಕೊಂಡರೆ ಮುಂಬರುವ ಮೇ ಅಂತ್ಯಕ್ಕೆ ಪ್ರಕರಣಗಳು ಕಡಿಮೆಯಾಗಲಿವೆ. ಯಾವುದೇ ಸಾಂಕ್ರಾಮಿಕ ಕಾಯಿಲೆ ಎರಡು ವರ್ಷಗಳು ಮಾತ್ರ ಇರುತ್ತದೆ.

40 ವರ್ಷದ ವೈದ್ಯ ವೃತ್ತಿಯ ಅನುಭವದಲ್ಲಿ ಈ ರೀತಿ ಕಾಯಿಲೆಯನ್ನು ಮೊದಲ ಬಾರಿ ನೋಡುತ್ತಿದ್ದೇನೆ. 1919ರಲ್ಲಿ ಸ್ಪ್ಯಾನಿಶ್ ಫ್ಲೂ ಎಂಬ ಕಾಯಿಲೆ ಕಾಣಿಸಿಕೊಂಡಿತ್ತು. ಆ ಕಾಯಿಲೆಯು ಎರಡನೇ ಅಲೆಯ ಅವಧಿಯಲ್ಲಿ ಹೆಚ್ಚಿನ ಅಪಾಯ ಉಂಟುಮಾಡಿತ್ತು. ಕೋವಿಡ್ ಮೊದಲ ಮತ್ತು ಎರಡನೇ ಅಲೆಯ ನಡುವೆ ಅಂತಹ ವ್ಯತ್ಯಾಸವಿಲ್ಲ. ವೈರಾಣುಗಳು ಯಾವಾಗಲೂ ರೂಪಾಂತರವಾಗುತ್ತವೆ. ಸೋಂಕಿತ ವ್ಯಕ್ತಿ ಕೆಮ್ಮಿದಾಗ ಮತ್ತು ಸೀನಿದಾಗ ಹೊರಹೊಮ್ಮುವ ತುಂತುರು ಹನಿಗಳಿಂದ ವೈರಾಣು ಮತ್ತೊಬ್ಬರ ದೇಹ ಸೇರುವ ಸಾಧ್ಯತೆ ಇರುತ್ತದೆ. ಹಾಗಾಗಿಯೇ, ಮುಖಗವಸು ಧರಿಸಲು ಹಾಗೂ ಪರಸ್ಪರ ಮೂರು ಅಡಿ ಅಂತರ ಕಾಯ್ದುಕೊಳ್ಳಲು ಸಾರಿ ಸಾರಿ ಹೇಳಲಾಗುತ್ತಿದೆ.

ಸೋಂಕು ನಿವಾರಕ ದ್ರಾವಣದಿಂದ ಆಗಾಗ ಕೈಗಳನ್ನು ಸ್ವಚ್ಛಪಡಿಸಿಕೊಳ್ಳಬೇಕು. ಮನೆಗೆ ಬಂದ ಬಳಿಕ ಕೈಗಳನ್ನು ಸೋಪು ನೀರಿನಿಂದ ತೊಳೆದುಕೊಳ್ಳಬೇಕು. ಮೊದಲನೆ ಅಲೆ ಬಂದಾಗ ಲಸಿಕೆ ಇರಲಿಲ್ಲ. ಆದರೆ, ಈಗ ನಮ್ಮ ಬಳಿ ಲಸಿಕೆ ಇದೆ. ಹಾಗಾಗಿ, ಫಲಾನುಭವಿಗಳು ಆದಷ್ಟು ಬೇಗ ಲಸಿಕೆಯನ್ನು ಪಡೆದುಕೊಳ್ಳಬೇಕು. ಸದ್ಯ ನೀಡಲಾಗುತ್ತಿರುವ ಲಸಿಕೆ ಸುರಕ್ಷಿತವಾಗಿವೆ.

ಕಳೆದ ವರ್ಷ ಕೋವಿಡ್ ಏರಿಕೆ ಕಂಡ ಬಳಿಕ ಮದುವೆ ಸೇರಿದಂತೆ ವಿವಿಧ ಸಮಾರಂಭಗಳಲ್ಲಿ ಜನರು ನಿರ್ಬಂಧಗಳನ್ನು ಪಾಲಿಸಿದರು. ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡ ಬಳಿಕ ನಿರ್ಲಕ್ಷ್ಯ ತೋರಿ, ನಿಯಮಗಳನ್ನು ಗಾಳಿಗೆ ತೂರಿದರು. ಅದರ ಪರಿಣಾಮವನ್ನು ಈಗ ನಾವು ಕಾಣುತ್ತಿದ್ದೇವೆ.

ಪೊಲೀಸರು ದಂಡ ಹಾಕುತ್ತಾರೆ ಎಂಬ ಕಾರಣಕ್ಕೆ ಕೆಲವರು ಮುಖಗವಸು ಧರಿಸುತ್ತಾರೆ. ಕೋವಿಡ್ ಎಂಬುದು ಇಲ್ಲವೇ ಇಲ್ಲ. ಅದನ್ನು ಸೃಷ್ಟಿಸಲಾಗಿದೆ ಎನ್ನುವವರೂ ನಮ್ಮಲ್ಲಿ ಇದ್ದಾರೆ. ಇಂತಹ ಮನೋಭಾವದಿಂದಲೇ ಸಮಸ್ಯೆಯನ್ನು ನಾವು ತಂದೊಡ್ಡಿಕೊಂಡಿದ್ದೇವೆ. ವಿಜ್ಞಾನದಲ್ಲಿ ಅಡ್ಡದಾರಿಯಿಲ್ಲ ಎನ್ನುವುದನ್ನು ಅರಿತುಕೊಳ್ಳಬೇಕು.

ಡಾ.ಟಿ.ಎಚ್. ಆಂಜನಪ್ಪ, ಹಿರಿಯ ಶಸ್ತ್ರಚಿಕಿತ್ಸ ತಜ್ಞ

ಕೋವಿಡ್: ಮೃತರ ಸಂಖ್ಯೆ ಮತ್ತಷ್ಟು ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪೀಡಿತರ ಜತೆಗೆ ಸೋಂಕಿಗೆ ಗಂಭೀರವಾಗಿ ಅಸ್ವಸ್ಥಗೊಂಡು, ಸಾವಿಗೀಡಾಗುವವರ ಸಂಖ್ಯೆ ಸಹ ಏರಿಕೆ ಕಂಡಿದೆ. ಶುಕ್ರವಾರ ಬೆಂಗಳೂರಿನಲ್ಲಿ 57 ಮಂದಿ ಸೇರಿದಂತೆ ರಾಜ್ಯದಲ್ಲಿ 78 ಮಂದಿ ಕೋವಿಡ್‌ಗೆ ಮೃತಪಟ್ಟಿರುವುದು ದೃಢಪಟ್ಟಿದೆ.

ಕಳೆದ ಆರು ತಿಂಗಳ ಬಳಿಕ ವರದಿಯಾದ ಗರಿಷ್ಠ ಮರಣ ಪ್ರಕರಣಗಳು ಇವಾಗಿವೆ. ಸದ್ಯ ಮರಣ ಪ್ರಮಾಣ ದರ ಶೇ 0.52ರಷ್ಟಿದೆ. ಈ ತಿಂಗಳಲ್ಲಿಯೇ 623 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ. ಈವರೆಗೆ ಸೋಂಕಿಗೆ ಮೃತಪಟ್ಟವರ ಸಂಖ್ಯೆ 13,190ಕ್ಕೆ ಏರಿಕೆಯಾಗಿದೆ. 24 ಗಂಟೆಯ ಅವಧಿಯಲ್ಲಿ ಮತ್ತೆ 14,859 ಮಂದಿ ಸೋಂಕಿತರಾಗಿದ್ದಾರೆ. ಕೇವಲ ಎರಡು ದಿನಗಳಲ್ಲಿ 29,597 ಪ್ರಕರಣಗಳು ವರದಿಯಾಗಿವೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 1.07 ಲಕ್ಷಕ್ಕೆ ಏರಿಕೆಯಾಗಿದೆ. ಈವರೆಗೆ ಕೋವಿಡ್ ಪೀಡಿತರಾದವರ ಸಂಖ್ಯೆ 11.24 ಲಕ್ಷ ದಾಟಿದೆ.

ಬೆಂಗಳೂರಿನಲ್ಲಿ 9,917 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಕಲಬುರ್ಗಿ (488), ತುಮಕೂರು (432), ಮೈಸೂರು (415), ಬೀದರ್ (326), ಬಳ್ಳಾರಿ (279), ದಕ್ಷಿಣ ಕನ್ನಡ (256), ಹಾಸನ (244), ವಿಜಯಪುರ (207) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ರಾಜ್ಯದಲ್ಲಿ ಸೋಂಕು ದೃಢ ಪ್ರಮಾಣ ಶೇ 11.11ಕ್ಕೆ ತಲುಪಿದೆ.

ಸೋಂಕಿತರಲ್ಲಿ ಮೈಸೂರಿನಲ್ಲಿ ಐವರು, ಕಲಬುರ್ಗಿಯಲ್ಲಿ ಮೂವರು, ಬೀದರ್ ಮತ್ತು ತುಮಕೂರಿನಲ್ಲಿ ತಲಾ ಇಬ್ಬರು, ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಮಂಡ್ಯ, ರಾಮನಗರ, ಶಿವಮೊಗ್ಗ, ಉಡುಪಿ, ಉತ್ತರ ಕನ್ನಡ ಹಾಗೂ ಯಾದಗಿರಿಯಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಶುಕ್ರವಾರ ದೃಢಪಟ್ಟ ಮರಣ ಪ್ರಕರಣಗಳಲ್ಲಿ 53 ಮಂದಿ ಖಾಸಗಿ ಆಸ್ಪತ್ರೆಯಲ್ಲಿಯೇ ಸಾವಿಗೀಡಾಗಿದ್ದಾರೆ.

ಒಂದು ದಿನದಲ್ಲಿ 1.33 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ತೀವ್ರ ನಿಗಾ ಘಟಕಕ್ಕೆ ದಾಖಲಾಗುವವರ ಸಂಖ್ಯೆ ಹೆಚ್ಚಳವಾಗಿದ್ದು, ಸದ್ಯ 577 ಮಂದಿ ಐಸಿಯುನಲ್ಲಿ ಇದ್ದಾರೆ. ಕೋವಿಡ್ ಪೀಡಿತರಲ್ಲಿ 4,031 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 10.03 ಲಕ್ಷಕ್ಕೆ ಏರಿದೆ. ರಾಜ್ಯದಲ್ಲಿ ಶುಕ್ರವಾರ 4,061 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ನೀಡಲಾಗಿದೆ. ಈವರೆಗೆ 64.01 ಲಕ್ಷ ಡೋಸ್ ಲಸಿಕೆಯನ್ನು ನೀಡಲಾಗಿದೆ.

ಕೊರತೆ: ಲಸಿಕೆ ಕಾರ್ಯಕ್ರಮಕ್ಕೆ ಹಿನ್ನಡೆ

ನವದೆಹಲಿ (ರಾಯಿಟರ್ಸ್/ಪಿಟಿಐ): ಭಾರತದಲ್ಲಿ ಕೋವಿಡ್-19 ಲಸಿಕೆ ಕಾರ್ಯಕ್ರಮವು ವೇಗ ಕಳೆದುಕೊಂಡಿದೆ. ಲಸಿಕೆಯ ಕೊರತೆಯ ಕಾರಣ ಜನರಿಗೆ ನಿರೀಕ್ಷಿತ ಮಟ್ಟದಲ್ಲಿ ಲಸಿಕೆ ನೀಡಲು ಸಾಧ್ಯವಾಗುತ್ತಿಲ್ಲ. ಲಸಿಕೆ ತಯಾರಿಕೆಗೆ ಅಗತ್ಯವಾದ ಕಚ್ಚಾವಸ್ತುಗಳ ಮೇಲಿನ ರಫ್ತು ನಿರ್ಬಂಧವನ್ನು ತೆರವು ಮಾಡುವಂತೆ ಭಾರತದ ಲಸಿಕೆ ತಯಾರಕರು ಅಮೆರಿಕಕ್ಕೆ ಮನವಿ ಮಾಡಿದ್ದಾರೆ.

ಭಾರತವು ಹಲವು ದೇಶಗಳಿಗೆ ಬಹಳ ಉತ್ಸುಕತೆಯಿಂದ ಕೋಟ್ಯಂತರ ಡೋಸ್‌ಗಳಷ್ಟು ಲಸಿಕೆಯನ್ನು ನೀಡಿತ್ತು. ಆದರೆ ಈಗ ದೇಶದಲ್ಲೇ ಲಸಿಕೆ ಕೊರತೆ ಕಾಡುತ್ತಿದೆ. ಇದರ ಪರಿಣಾಮವಾಗಿ ಭಾರತದ ಲಸಿಕೆ ನೀಡಿಕೆ ಕಾರ್ಯಕ್ರಮಕ್ಕೂ ಹಿನ್ನಡೆಯಾಗಿದೆ. ಏಪ್ರಿಲ್ ಮೊದಲ ವಾರದಲ್ಲಿ ಪ್ರತಿದಿನ ಸರಾಸರಿ 45 ಲಕ್ಷ ಡೋಸ್‌ನಷ್ಟು ಲಸಿಕೆ ನೀಡಲಾಗಿತ್ತು. ಈಗ ಈ ಸರಾಸರಿ ಸಂಖ್ಯೆ 30 ಲಕ್ಷಕ್ಕೆ ಕುಸಿದಿದೆ.

ಆಸ್ಟ್ರಾಜೆನೆಕಾ ಕಂಪನಿಯ ಕೋವಿಶೀಲ್ಡ್, ಭಾರತ್ ಬಯೊಟೆಕ್‌ನ ಕೋವ್ಯಾಕ್ಸಿನ್ ಲಸಿಕೆಯನ್ನು ಈಗ ನೀಡಲಾಗುತ್ತಿದೆ. ರಷ್ಯಾದ ಸ್ಪುಟ್ನಿಕ್-ವಿ ಲಸಿಕೆಯ ಬಳಕೆಗೆ ಅನುಮತಿ ದೊರೆತಿದೆ. ಬೇರೆ ದೇಶಗಳ ಲಸಿಕೆ ಬಳಕೆಗೂ ಅನುಮತಿ ನೀಡುವ ಪ್ರಕ್ರಿಯೆ ನಡೆಯುತ್ತಿದೆ. ಹೀಗಾಗಿ ಲಸಿಕೆ ಲಭ್ಯತೆ ಸುಧಾರಿಸಬಹುದು ಎಂದು ನಿರೀಕ್ಷಿಸಲಾಗಿದೆ.

ಕೋವ್ಯಾಕ್ಸಿನ್ ತಯಾರಿಕೆ ಹೆಚ್ಚಳಕ್ಕೆ ಕ್ರಮ: ಸಂಪೂರ್ಣ ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಕೋವಿಡ್-19 ತಡೆ ಲಸಿಕೆ ಕೋವ್ಯಾಕ್ಸಿನ್‌ನ ತಯಾರಿಕೆ ಸಾಮರ್ಥ್ಯವನ್ನು ಹೆಚ್ಚಿಸಲು ಕೇಂದ್ರ ಸರ್ಕಾರವು ಸಾರ್ವಜನಿಕ ವಲಯದ ಕಂಪನಿಗಳ ಜತೆ ಮಾತುಕತೆ ನಡೆಸಿದೆ.

ಭಾರತ್ ಬಯೊಟೆಕ್ ಈ ಲಸಿಕೆ ಅಭಿವೃದ್ಧಿಪಡಿಸಿದೆ. ಕಂಪನಿಯು ಪ್ರತಿತಿಂಗಳು ಗರಿಷ್ಠ 1 ಕೋಟಿ ಡೋಸ್‌ನಷ್ಟು ಲಸಿಕೆ ತಯಾರಿಸುವ ಸಾಮರ್ಥ್ಯ ಹೊಂದಿದೆ. ಈ ಸಾಮರ್ಥ್ಯವನ್ನು ಸೆಪ್ಟೆಂಬರ್ ಅಂತ್ಯದ ವೇಳೆಗೆ 10 ಕೋಟಿಗೆ ಹೆಚ್ಚಿಸುವ ಗುರಿ ಹಾಕಿಕೊಳ್ಳಲಾಗಿದೆ ಎಂದು ಕೇಂದ್ರ ಸರ್ಕಾರದ ಜೈವಿಕ ತಂತ್ರಜ್ಞಾನ ವಿಭಾಗವು ಹೇಳಿದೆ.

ಈ ಸಂಬಂಧ ಮಹಾರಾಷ್ಟ್ರ ಸರ್ಕಾರದ ಅಧೀನ ಸಂಸ್ಥೆ ಎಚ್‌ಪಿಸಿಎಲ್‌ಗೆ ಕೋವ್ಯಾಕ್ಸಿನ್ ತಯಾರಿಕೆಗೆ ಅನುಮತಿ ನೀಡಲಾಗಿದೆ. ಕಂಪನಿಗೆ ₹ 65 ಲಕ್ಷ ಮೊತ್ತದ ಆರ್ಥಿಕ ನೆರವನ್ನೂ ಒದಗಿಸಲಾಗಿದೆ.

ತಮಿಳು ಹಾಸ್ಯನಟ ವಿವೇಕ್‌ಗೆ ತೀವ್ರ ಹೃದಯಾಘಾತ



ವಿವೇಕ್

ಚೆನ್ನೈ (ಪಿಟಿಐ): ತಮಿಳು ಚಿತ್ರರಂಗ ಖ್ಯಾತ ಹಾಸ್ಯನಟ ವಿವೇಕ್ ಅವರಿಗೆ ಶುಕ್ರವಾರ ತೀವ್ರ ಹೃದಯಾಘಾತವಾಗಿದೆ. ಅವರನ್ನು ಚೆನ್ನೈನ ಎಸ್‌ಐಎಂಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

'ವಿವೇಕ್ ಅವರಿಗೆ ಕೃತಕ ಉಸಿರಾಟ ವ್ಯವಸ್ಥೆ (ಇಸಿಎಂಒ) ಅಳವಡಿಸಿ, ಚಿಕಿತ್ಸೆ ನೀಡಲಾಗುತ್ತಿದೆ. 24 ಗಂಟೆ ಕಾಲ ಅವರ ಆರೋಗ್ಯದ ಮೇಲೆ ನಿಗಾ ಇಡಲಾಗಿದೆ' ಎಂದು ಆಸ್ಪತ್ರೆಯ ಉಪಾಧ್ಯಕ್ಷ ಡಾ. ರಾಜು ಶಿವಸ್ವಾಮಿ ಹೇಳಿದರು.

'ಕೋವ್ಯಾಕ್ಸಿನ್ ಲಸಿಕೆಗೂ, ವಿವೇಕ್ ಅವರ ಆರೋಗ್ಯದಲ್ಲಾಗಿರುವ ಏರುಪೇರಿಗೂ ಯಾವುದೇ ಸಂಬಂಧ ಇಲ್ಲ' ಎಂದೂ ಸ್ಪಷ್ಟಪಡಿಸಿದರು.

ಗುರುವಾರವಷ್ಟೇ ಅವರು ಕೋವಿಡ್ ಲಸಿಕೆ ಕೋವ್ಯಾಕ್ಸಿನ್ ಪಡೆದುಕೊಂಡಿದ್ದಾರೆ.

ಲಕ್ಷ್ಮಿ ಹೆಬ್ಬಾಳಕರ, ಆನಂದ ಮಾಮನಿಗೆ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಗ್ರಾಮೀಣ ಕ್ಷೇತ್ರದ ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಮತ್ತು ಅವರ ಸಹೋದರ, ಹರ್ಷಾ ಶುಗರ್ಸ್ ವ್ಯವಸ್ಥಾಪಕ ನಿರ್ದೇಶಕ ಚನ್ನರಾಜ ಹಟ್ಟಿಹೊಳಿ ಅವರಿಗೆ ಕೋವಿಡ್–19 ದೃಢಪಟ್ಟಿದೆ.

ಶುಕ್ರವಾರ ಬೆಳಿಗ್ಗೆ ಪರೀಕ್ಷೆ ಮಾಡಿಸಿಕೊಂಡಿದ್ದು, ಪಾಸಿಟಿವ್ ಬಂದಿರುವುದರಿಂದ ವೈದ್ಯರ ಸಲಹೆಯ ಮೇರೆಗೆ ಹೋಂ ಕ್ವಾರಂಟೈನ್ ಆಗಿದ್ದಾರೆ. 'ನಮ್ಮ ಸಂಪರ್ಕಕ್ಕೆ ಬಂದವರು ಪರೀಕ್ಷೆ ಮಾಡಿಸಿಕೊಳ್ಳಬೇಕು ಮತ್ತು ಆದಷ್ಟು ಜಾಗರೂಕತೆಯಿಂದ ಇರಬೇಕು' ಎಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

ಮಾಮನಿಗೆ ಕೋವಿಡ್ (ಸವದತ್ತಿ ವರದಿ): ವಿಧಾನಸಭೆ ಉಪಸಭಾಧ್ಯಕ್ಷರೂ ಆಗಿರುವ ಜಿಲ್ಲೆಯ ಸವದತ್ತಿ- ಯಲ್ಲಮ್ಮ ಕ್ಷೇತ್ರದ ಶಾಸಕ ಆನಂದ ಮಾಮನಿ ಅವರಿಗೆ ಕೋವಿಡ್-19 ಶುಕ್ರವಾರ ದೃಢಪಟ್ಟಿದೆ.

ಈ ಬಗ್ಗೆ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ. 'ವೈದ್ಯರು 17 ದಿನ ಮನೆಯಲ್ಲಿ ಪ್ರತ್ಯೇಕವಾಗಿ ಇರುವಂತೆ ಸೂಚಿಸಿದ್ದಾರೆ. ನನ್ನ ಸಂಪರ್ಕಕ್ಕೆ ಬಂದವರು ತಪಾಸಣೆ ಮಾಡಿಸಿಕೊಳ್ಳಬೇಕು' ಎಂದು ಕೋರಿದ್ದಾರೆ. ಬೆಳಗಾವಿ ಲೋಕಸಭಾ ಉಪಚುನಾವಣೆಯ ಪ್ರಚಾರ ಕಾರ್ಯಕ್ರಮದಲ್ಲಿ ಈಚೆಗೆ ಮುಖ್ಯಮಂತ್ರಿ ಯಡಿಯೂರಪ್ಪ ಅವರೊಂದಿಗೆ ವೇದಿಕೆ ಹಂಚಿಕೊಂಡಿದ್ದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	13.99 ಕೋಟಿ ▲	1.44 ಕೋಟಿ ▲
ಸಕ್ರಿಯ ಪ್ರಕರಣ	1.80 ಕೋಟಿ ▼	16.65 ಲಕ್ಷ ▲
ಗುಣಮುಖ	11.89 ಕೋಟಿ ▲	1.26 ಕೋಟಿ ▲
ಸಾವು	30.03 ಲಕ್ಷ ▲	1.754 ಲಕ್ಷ ▲

ದಿನದ ಏರಿಕೆ

	ವಿಶ್ವ	ಭಾರತ
ಹೊಸ ಪ್ರಕರಣ	8.45 ಲಕ್ಷ ▲	2.07 ಲಕ್ಷ ▲
ಗುಣಮುಖ	6.09 ಲಕ್ಷ ▲	1.05 ಲಕ್ಷ ▲
ಸಾವು	13,858 ▲	1,120 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರೆಜಿಲ್	ಅಮೆರಿಕ	ಫ್ರಾನ್ಸ್
80,529 ▲	74,479 ▼	38,045

ಎಲ್ಲಿ ಹೆಚ್ಚು ಸಾವು

ಮಹಾರಾಷ್ಟ್ರ	59,551 ▲
ತಮಿಳುನಾಡು	13,032 ▲
ದೆಹಲಿ	11,793 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಫ್ರಾನ್ಸ್	ಬ್ರೆಜಿಲ್
68.75 ▲	10.79 ▼	11.44 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	37.02 ▲
ಕೇರಳ	12.07 ▲
ಆಂಧ್ರಪ್ರದೇಶ	9.71 ▲

ಪ್ರಜಾವಾಣಿ ಗ್ರಾಫಿಕ್ಸ್

ಪರೀಕ್ಷೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಮತ್ತು ಸಾರಿಗೆ ನೌಕರರ ಮುಷ್ಕರದ ಕಾರಣ, ಬೆಂಗಳೂರು ವಿಶ್ವವಿದ್ಯಾಲಯವು ಪರೀಕ್ಷೆಗಳನ್ನು ಮುಂದೂಡಿದೆ.

'ಏ.19ರಂದು ನಿಗದಿಯಾಗಿದ್ದ ಪದವಿ, ಸ್ನಾತಕೋತ್ತರ ಪದವಿ ಮತ್ತು ಎಂಜಿನಿಯರಿಂಗ್ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಈ ಪರೀಕ್ಷೆಗಳ ದಿನಾಂಕವನ್ನು ನಂತರದಲ್ಲಿ ತಿಳಿಸಲಾಗುವುದು' ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ.ಆರ್. ವೇಣುಗೋಪಾಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉತ್ತರ ಪ್ರದೇಶ: ಭಾನುವಾರ ಲಾಕ್‌ಡೌನ್

ಲಖನೌ (ಪಿಟಿಐ): ಕೋವಿಡ್ ನಿಯಂತ್ರಿಸಲು ಉತ್ತರ ಪ್ರದೇಶ ರಾಜ್ಯದಾದ್ಯಂತ ಮೇ 15ರವರೆಗೆ ಪ್ರತಿ ಭಾನುವಾರ ಲಾಕ್‌ಡೌನ್ ಹೇರಲಾಗಿದೆ. ತುರ್ತು ಸೇವೆಗಳಿಗೆ ಮಾತ್ರ ಅವಕಾಶ ನೀಡಲಾಗಿದೆ. ಅಲ್ಲದೆ ಮಾಸ್ಕ್ ಧರಿಸದವರಿಗೆ ₹1,000 ದಂಡ ಮತ್ತು ಮಾಸ್ಕ್ ಧರಿಸದೇ ಎರಡನೇ ಬಾರಿ ಸಿಲುಕಿಕೊಂಡವರಿಗೆ ₹10,000 ದಂಡ ವಿಧಿಸಲು ಸೂಚಿಸಲಾಗಿದೆ.

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

5,22,438 ಒಟ್ಟು ಸೋಂಕಿತರು

4,37,801 ಗುಣಮುಖರಾದವರು

79,616 ಸಕ್ರಿಯ ಪ್ರಕರಣ

5,020 ಸಾವು

ಶುಕ್ರವಾರದ ಏರಿಕೆ

9,917 ದೃಢಪಟ್ಟ ಪ್ರಕರಣ

2,071 ಗುಣಮುಖ

57 ಸಾವು

ರಮೇಶ ಜಾರಕಿಹೊಳಿಗೆ ಎಸ್‌ಐಟಿ ನೋಟಿಸ್

ಬೆಳಗಾವಿ: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಸಿ.ಡಿ. ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ)ದ ಇಬ್ಬರು ಅಧಿಕಾರಿಗಳು ಜಿಲ್ಲೆಯ ಗೋಕಾಕಕ್ಕೆ ಶುಕ್ರವಾರ ಭೇಟಿ ನೀಡಿದ್ದರು.

ಏ.20ರ ಸಂಜೆ 4ಕ್ಕೆ ವಿಚಾರಣೆಗೆ ಹಾಜರಾಗುವಂತೆ ರಮೇಶ ಜಾರಕಿಹೊಳಿ ಅವರಿಗೆ ನೋಟಿಸ್ ನೀಡಿದ್ದಾರೆ. ಖುದ್ದು ಭೇಟಿಯಾಗಿ ನೋಟಿಸ್ ತಲುಪಿಸಲು ಬಂದಿದ್ದ ಅಧಿಕಾರಿಗಳಿಗೆ ಶಾಸಕರು ಲಭ್ಯವಾಗಲಿಲ್ಲ. ಕೋವಿಡ್–19 ಕಾರಣದಿಂದ ಅವರು ಗೃಹ ಕಚೇರಿಗೆ ಬಂದಿಲ್ಲ ಎಂದು ಅಲ್ಲಿನ ಸಿಬ್ಬಂದಿ ತಿಳಿಸಿದ್ದಾರೆ. ಹೀಗಾಗಿ, ಶಾಸಕ ಬಾಲಚಂದ್ರ ಜಾರಕಿಹೊಳಿ ಅವರ ಕಚೇರಿಗೆ ತೆರಳಿ ನೋಟಿಸ್ ತಲುಪಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎಸ್‌ಐಟಿಯ ಇಬ್ಬರು ಅಧಿಕಾರಿಗಳು ಏ.6ರಂದು ಗೋಕಾಕದ ತಾಲ್ಲೂಕು ಆಸ್ಪತ್ರೆಗೆ ಭೇಟಿ ನೀಡಿ, ಕೋವಿಡ್–19ನಿಂದಾಗಿ ದಾಖಲಾಗಿದ್ದ ರಮೇಶ ಅವರ ಆರೋಗ್ಯ ಸ್ಥಿತಿ ಕುರಿತು ವೈದ್ಯರಿಂದ ಮಾಹಿತಿ ಪಡೆದಿದ್ದರು. ಅವರ ಆರೋಗ್ಯ ವರದಿ ಪರಿಶೀಲಿಸಿದ್ದರು. ಆಸ್ಪತ್ರೆಯಿಂದ ಬಿಡುಗಡೆಗೂ ಮುನ್ನವೇ ಮಾಹಿತಿ ನೀಡಬೇಕು ಎಂದು ವೈದ್ಯಾಧಿಕಾರಿಗೆ ಸೂಚಿಸಿದ್ದರು. ಏ.7ರಂದು ರಮೇಶ ಆಸ್ಪತ್ರೆಯಿಂದ ಬಿಡುಗಡೆಯಾಗಿ ಮನೆಗೆ ತೆರಳಿದ್ದರು.

ರಾಷ್ಟ್ರಮಟ್ಟದಲ್ಲಿ ಶ್ರಮಿಸುತ್ತಿರುವ ಕನ್ನಡಿಗ ಬಿ.ವಿ. ಶ್ರೀನಿವಾಸ್

ಕೊರೊನಾ ಸೋಂಕಿತರಿಗೆ ಯುವ ಕಾಂಗ್ರೆಸ್ ನೆರವು

• ಸಿದ್ದಯ್ಯ ಹಿರೇಮಠ

ನವದೆಹಲಿ: ತುರ್ತು ಚಿಕಿತ್ಸೆ ಸೇರಿದಂತೆ ವಿವಿಧ ಸೌಲಭ್ಯ ದೊರೆಯದೆ ಸಂಕಷ್ಟ ಎದುರಿಸುತ್ತಿರುವ ಕೊರೊನಾ ಸೋಂಕಿತರಿಗೆ ಯುವ ಕಾಂಗ್ರೆಸ್ ಕಾರ್ಯಕರ್ತರು ಸಹಾಯಹಸ್ತ ಚಾಚಿದ್ದಾರೆ.

ದೇಶದ ಯಾವುದೇ ಭಾಗದಲ್ಲಿ ಆಸ್ಪತ್ರೆಗಳಲ್ಲಿ ಆಮ್ಲಜನಕ ಸೌಲಭ್ಯ ಸಹಿತ ಹಾಸಿಗೆ, ರೆಮ್‌ಡಿಸೀವಿರ್ ಇಂಜಕ್ಷನ್, ಪ್ಲಾಸ್ಮಾ ದೊರೆಯದೆ ಪರದಾಡುತ್ತಿರುವ ರೋಗಿಗಳಿಗೆ ನೆರವಾಗಲು ಸಾವಿರಾರು ಜನ ಯುವ ಕಾರ್ಯಕರ್ತರು ಶ್ರಮಿಸುತ್ತಿದ್ದಾರೆ.

ಇಲ್ಲಿನ ರೈಸಿನಾ ರಸ್ತೆಯಲ್ಲಿರುವ ಕಾಂಗ್ರೆಸ್ ಯುವ ಘಟಕದ ರಾಷ್ಟ್ರೀಯ ಕಚೇರಿಯಲ್ಲಿ ಈ ಸಂಬಂಧ 'ಸಹಾಯವಾಣಿ' ಕೇಂದ್ರ ಆರಂಭಿಸಲಾಗಿದೆ. ಸಾಮಾಜಿಕ ಜಾಲತಾಣದ ಮೂಲಕ ಸಹಾಯ ಕೋರುವವರನ್ನು ತಕ್ಷಣ ಸಂಪರ್ಕಿಸಿ ನೆರವು ನೀಡಲೆಂದೇ ಏಳೆಂಟು ಜನ ಕಾರ್ಯಕರ್ತರು ದಿನವಿಡೀ ಕಾರ್ಯ ನಿರ್ವಹಿಸುತ್ತಿದ್ದಾರೆ.



ಕೊರೊನಾ 'ಸಹಾಯವಾಣಿ' ಕೇಂದ್ರದಲ್ಲಿನ ಕಾರ್ಯಕರ್ತರೊಂದಿಗೆ ಸಮಾಲೋಚನೆ ನಡೆಸುತ್ತಿರುವ ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್

ಇವರ ಮಾನವೀಯ ಸೇವೆಗೆ ಸಾಮಾಜಿಕ ಜಾಲತಾಣದಲ್ಲಿ ಮೆಚ್ಚುಗೆಯೂ ವ್ಯಕ್ತವಾಗಿದೆ.

ಲಾಕ್‌ಡೌನ್‌ನಿಂದ ಕಳೆದ ವರ್ಷ ಸಮಸ್ಯೆಗೆ ಒಳಗಾದ ವಲಸೆ ಕಾರ್ಮಿಕರಿಗೆ ಊಟ–ತಿಂಡಿ, ವಾಹನ ವ್ಯವಸ್ಥೆ ಕಲ್ಪಿಸುವ ಮಾನವೀಯ ಕಾರ್ಯಕ್ಕೆ ಚಾಲನೆ ನೀಡಿದ್ದ ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ, ಕನ್ನಡಿಗ ಬಿ.ವಿ. ಶ್ರೀನಿವಾಸ್, ಇದೀಗ ಕೋವಿಡ್ ಮಹಾಮಾರಿಗೆ ನಲುಗಿರುವವರ ನೆರವಿಗಾಗಿ ಕಾರ್ಯಕರ್ತರ ಪಡೆಯನ್ನು ಸನ್ನದ್ಧಗೊಳಿಸಿದ್ದಾರೆ.

10 ದಿನಗಳ ಹಿಂದೆ ಆರಂಭಿಸಲಾದ 'ಸಹಾಯವಾಣಿ' ಕೇಂದ್ರದ ಮೂಲಕ ದೇಶದಾದ್ಯಂತ 12ಸಾವಿರಕ್ಕೂ ಅಧಿಕ ರೋಗಿಗಳಿಗೆ ಸಹಾಯ ಒದಗಿಸಲಾಗಿದೆ. ಕೊರೊನಾದಿಂದ ಮೃತಪಟ್ಟವರ ಶವ ಸಂಸ್ಕಾರಕ್ಕೂ ಪರದಾಡುತ್ತಿರುವ ಕುಟುಂಬ ಸದಸ್ಯರ ನೆರವಿಗೂ ಧಾವಿಸಲಾಗಿದೆ.

'ಕೊರೊನಾದ ದ್ವಿತೀಯ ಅಲೆ ಆರಂಭವಾಗಿದ್ದೇ ತಡ, ದೇಶದ ವಿವಿಧ ಭಾಗಗಳ 40 ಸಾವಿರಕ್ಕೂ ಅಧಿಕ ಜನ ಸಾಮಾಜಿಕ ಜಾಲತಾಣ ಮತ್ತು ಫೋನ್ ಕರೆಯ ಮೂಲಕ ಸಹಾಯ ಕೋರಿದ್ದಾರೆ. ಆ ಪೈಕಿ 12 ಸಾವಿರಕ್ಕೂ ಅಧಿಕ ಜನರ ಸಂಕಷ್ಟದಲ್ಲಿ ಭಾಗಿಯಾಗಿದ್ದೇವೆ' ಎಂದು ಭದ್ರಾವತಿ ಮೂಲದ ಶ್ರೀನಿವಾಸ್ 'ಪ್ರಜಾವಾಣಿ'ಗೆ ತಿಳಿಸಿದರು.

'ಸೋಂಕು ಹರಡುತ್ತಿರುವುದರಿಂದ ರೋಗಿಗಳ ಸಂಖ್ಯೆಯೂ ಹೆಚ್ಚುತ್ತಿದೆ. ಅನೇಕ ಆಸ್ಪತ್ರೆಗಳಲ್ಲಿ ಹಾಸಿಗೆ ಸೌಲಭ್ಯ ಇಲ್ಲದೆ, ಆಂಬುಲೆನ್ಸ್ ಸಿಗದೆ ಪರದಾಡುವ ರೋಗಿಗಳು ನೆರವಿಗಾಗಿ ಮನವಿ ಸಲ್ಲಿಸುತ್ತಿದ್ದಾರೆ. ಸಮೀಪದ ಅಥವಾ ಪಕ್ಕದೂರಿನ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಲು ನಮ್ಮ ಕಾರ್ಯಕರ್ತರು ಶ್ರಮಿಸುತ್ತಿದ್ದಾರೆ' ಎಂದು ಅವರು ಹೇಳಿದರು.

'ಅನಕ್ಷರಸ್ಥರಿಗೆ ಲಸಿಕೆ ಹಾಕಿಸಿಕೊಳ್ಳಲೂ ನೆರವಾಗುತ್ತಿದ್ದೇವೆ. ಪ್ಲಾಸ್ಮಾ ದಾನ ಮಾಡುವುದರಿಂದ ಸಮಸ್ಯೆ ಇಲ್ಲ ಎಂದು ಈಗಾಗಲೇ ಕೊರೊನಾ ಸೋಂಕಿಗೆ ಒಳಗಾಗಿ ಗುಣಮುಖ ಆದವರಿಗೆ ಮನವರಿಕೆ ಮಾಡಿ ಅಗತ್ಯ ಇರುವವರಿಗೆ ನೆರವಾಗುವಂತೆ ಮಾಡಿದ್ದೇವೆ' ಎಂದು ಅವರು ವಿವರಿಸಿದರು.

ಒಂದು ವರ್ಷದಿಂದ ವಲಸೆ ಕಾರ್ಮಿಕರಿಗೆ, ಬಡ ಜನತೆಗೆ ಎಲ್ಲ ರೀತಿಯಲ್ಲೂ ಸಹಾಯ ಒದಗಿಸಲಾಗಿದೆ. ಈಗಲೂ ದೇಶದಾದ್ಯಂತ ಯಾವುದೇ ಭಾಗದಲ್ಲಾಗಲಿ, ರೋಗಿಗಳು ಸಹಾಯ ಕೋರಿ ಯುವ ಕಾಂಗ್ರೆಸ್ ಕಾರ್ಯಕರ್ತರನ್ನು ಸಂಪರ್ಕಿಸಿದಲ್ಲಿ ತಕ್ಷಣ ಅವರ ನೆರವಿಗೆ ಧಾವಿಸಲಾಗುವುದು ಎಂದು ಅವರು ತಿಳಿಸಿದರು.

ಕುಂಭಮೇಳ ಭಿನ್ನಾಭಿಪ್ರಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಹರಿದ್ವಾರದಲ್ಲಿ ನಡೆಯುತ್ತಿರುವ ಕುಂಭಮೇಳವನ್ನು ನಿಲ್ಲಿಸುವ ಸಂಬಂಧ ವಿವಿಧ ಹಿಂದೂ ಅಖಾಡಗಳ ಮಧ್ಯೆ ಭಿನ್ನಾಭಿಪ್ರಾಯ ಮೂಡಿದೆ. ಕೋವಿಡ್ ವಿಪರೀತ ಮಟ್ಟದಲ್ಲಿ ಏರಿಕೆ ಆಗುತ್ತಿರುವ ಕಾರಣ, ಕುಂಭಮೇಳದಿಂದ ಏಪ್ರಿಲ್ 17ರಂದು ನಿರ್ಗಮಿಸುವುದಾಗಿ ನಿರಂಜನಿ ಅಖಾಡ ಗುರುವಾರ ಘೋಷಿಸಿತ್ತು. ಕೆಲವು ಅಖಾಡಗಳು ಇದಕ್ಕೆ ಬೆಂಬಲ ಸೂಚಿಸಿವೆ. ಕೆಲವು ಅಖಾಡಗಳು ವಿರೋಧ ವ್ಯಕ್ತಪಡಿಸಿವೆ.

ನಿರಂಜನಿ ಅಖಾಡದ ನಿರ್ಧಾರವನ್ನು ಶ್ರೀ ಪಂಚಾಯತಿ ಅಖಾಡ ಮತ್ತು ಆನಂದ್ ಅಖಾಡಗಳು ಬೆಂಬಲಿಸಿವೆ. ಏಪ್ರಿಲ್ 17ಕ್ಕೆ ಕುಂಭಮೇಳ ಮುಗಿಸಲು ಈ ಮೂರೂ ಅಖಾಡಗಳು ನಿರ್ಧರಿಸಿವೆ. ಆದರೆ, 'ನಿರಂಜನಿ ಅಖಾಡವು ಈ ನಿರ್ಧಾರವನ್ನು ಏಕಪಕ್ಷೀಯವಾಗಿ ತೆಗೆದುಕೊಂಡಿದೆ' ಎಂದು ನಿರ್ವಾಣಿ ಅಖಾಡವು ಆಕ್ಷೇಪ ವ್ಯಕ್ತಪಡಿಸಿದೆ. ನಿರ್ಮೋಹಿ ಅಖಾಡ ಮತ್ತು ದಿಗಂಬರ ಅಖಾಡವು ಈ ಆಕ್ಷೇಪವನ್ನು ಬೆಂಬಲಿಸಿವೆ.

'ಕುಂಭಮೇಳ ಯಾವಾಗ ಆರಂಭವಾಗಬೇಕು ಮತ್ತು ಯಾವಾಗ ಮುಕ್ತಾಯವಾಗಬೇಕು ಎಂಬುದನ್ನು ಗ್ರಹಗತಿಗಳು ನಿರ್ಧರಿಸುತ್ತವೆ. ಪೂರ್ವನಿಗದಿಯಂತೆ ಏಪ್ರಿಲ್ 27ರಂದೇ ಕುಂಭಮೇಳ ಮುಕ್ತಾಯವಾಗಲಿದೆ' ಎಂದು ನಿರ್ವಾಣಿ ಅಖಾಡವು ಘೋಷಿಸಿದೆ.

ಸಂತ ಸಾವು: ಕುಂಭಮೇಳದಲ್ಲಿ ಭಾಗವಹಿಸಿದ್ದ ಅಖಾಡವೊಂದರ ಮುಖ್ಯಸ್ಥ ಮಹಾಮಂಡಲೇಶ್ವರ ಕಪಿಲ ದೇವ ದಾಸ್ ಅವರು ಕೋವಿಡ್‌ನಿಂದ ಗುರುವಾರ ತಡರಾತ್ರಿ ಮೃತಪಟ್ಟಿದ್ದಾರೆ. ಅವರನ್ನು ಮಂಗಳವಾರವಷ್ಟೇ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರ ಜತೆಗಾರರಲ್ಲಿ ಹಲವರಿಗೆ ಸೋಂಕು ತಗುಲಿದೆ.

ಕುಂಭಮೇಳದಲ್ಲಿ ಈವರೆಗೆ 29 ಲಕ್ಷಕ್ಕೂ ಹೆಚ್ಚು ಜನರು ಭಾಗಿಯಾಗಿದ್ದು, ಈ ಮೇಳವು 'ಸೂಪರ್ ಸ್ಪ್ರೆಡರ್' (ವ್ಯಾಪಕವಾಗಿ ಸೋಂಕು ಹರಡಲು ಕಾರಣ) ಆಗುವ ಅಪಾಯವಿದೆ. ಇಲ್ಲಿಂದ ಹಿಂತಿರುಗಿದವರೆಲ್ಲರೂ ತಮ್ಮ ಊರು, ಪಟ್ಟಣಗಳಿಗೆ ಸೋಂಕು ಹರಡಿಸುತ್ತಾರೆ ಎಂದು ಕೆಲವು ಅಖಾಡಗಳು ಆತಂಕ ವ್ಯಕ್ತಪಡಿಸಿವೆ.

ಪೌರತ್ವ ನಿರಾಕರಿಸಿದ ಮಮತಾ: ಶಾ ಆರೋಪ • ಕೋವಿಡ್ ಹಬ್ಬಲು ಬಿಜೆಪಿ ಕಾರಣ: ಮಮತಾ ಆಕ್ರೋಶ

ಪಶ್ಚಿಮ ಬಂಗಾಳ: ಆರೋಪ–ಪ್ರತ್ಯಾರೋಪ ತೀವ್ರ

ತೆಹಟ್ಟ (ಪಶ್ಚಿಮ ಬಂಗಾಳ) (ಪಿಟಿಐ): ವಿಧಾನಸಭೆ ಚುನಾವಣೆ ನಡೆಯುತ್ತಿರುವ ಪಶ್ಚಿಮ ಬಂಗಾಳದ ಪ್ರಚಾರ ಕಣದಲ್ಲಿ ಆರೋಪ–ಪ್ರತ್ಯಾರೋಪ ತೀವ್ರಗೊಂಡಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಹಾಗೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ಶುಕ್ರವಾರ ಪುನಃ ವಾಗ್ದಾಳಿ ನಡೆಸಿದ್ದಾರೆ.

'ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿವೆ, ಬಿಜೆಪಿಯವರು ಚುನಾವಣಾ ಪ್ರಚಾರಕ್ಕಾಗಿ ಹೊರರಾಜ್ಯದಿಂದ ಜನರನ್ನು ಕರೆತಂದಿದ್ದೇ ಕಾರಣ' ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

ತೆಹಟ್ಟದಲ್ಲಿ ಆಯೋಜಿಸಿದ್ದ ಚುನಾವಣಾ ಪ್ರಚಾರ ರ‍್ಯಾಲಿಯಲ್ಲಿ ಮಾತನಾಡಿದ ಅಮಿತ್ ಶಾ, 'ದಲಿತ ಮತುವಾ ಹಾಗೂ ನಾಮಶೂದ್ರ ಸಮುದಾಯಗಳಿಗೆ ಮಮತಾ ಅವರು ಪೌರತ್ವ ನಿರಾಕರಿಸಿದ್ದಾರೆ' ಎಂದು ಶಾ ಆರೋಪಿಸಿದರು.

ಈ ಎರಡು ಸಮುದಾಯಗಳು ಪಶ್ಚಿಮ ಬಂಗಾಳದಲ್ಲಿ ಸಾಕಷ್ಟು ಸಂಖ್ಯಾಬಲವನ್ನು ಹೊಂದಿದ್ದು, ಕನಿಷ್ಠ 100 ಕ್ಷೇತ್ರಗಳಲ್ಲಿ ನಿರ್ಣಾಯಕ ಎನಿಸಿವೆ.

'ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಈ ಎರಡು ಸಮುದಾಯಗಳ ಅಭಿವೃದ್ಧಿಗಾಗಿ ಕನಿಷ್ಠ ₹100 ಕೋಟಿ ಮೀಸಲಿಡಲಾಗುವುದು. ಕನಿಷ್ಠ ಐದಾರು ದಶಕಗಳಿಂದ ಈ ಸಮುದಾಯಗಳು ಇಲ್ಲಿ ನೆಲೆಸಿವೆ. ಇಲ್ಲಿಯೇ ಮೂರು ತಲೆಮಾರುಗಳನ್ನು ಕಂಡಿವೆ. ಆದರೆ ಅವರು ಪೌರತ್ವ ಪಡೆಯಲಾರರು ಎಂದು ದೀದಿ ಹೇಳುತ್ತಾರೆ. ಇವರಿಗೆ ಪೌರತ್ವ ನೀಡುವುದನ್ನು ಮಮತಾ ಅವರ ವೋಟ್‌ಬ್ಯಾಂಕ್ ಸಹಿಸುವುದಿಲ್ಲ ಎಂಬುದೇ ಇದಕ್ಕೆ ಕಾರಣ' ಎಂದರು.

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರನ್ನು 'ಪ್ರವಾಸಿ ರಾಜಕಾರಣಿ' ಎಂದು ಲೇವಡಿ ಮಾಡಿದ ಶಾ, 'ಚುನಾವಣೆಗಳು ಬಹುತೇಕ ಮುಗಿಯುತ್ತಿರುವ ಸಂದರ್ಭದಲ್ಲಿ ಒಬ್ಬ ಪ್ರವಾಸಿ ರಾಜಕಾರಣಿ ರಾಜ್ಯವನ್ನು ಪ್ರವೇಶಿಸಿ, ನಮ್ಮ ಡಿಎನ್‌ಎ ಬಗ್ಗೆ ಪ್ರಶ್ನೆ ಮಾಡಿದ್ದಾರೆ. ಅಭಿವೃದ್ಧಿ, ರಾಷ್ಟ್ರೀಯತೆ ಹಾಗೂ ಆತ್ಮನಿರ್ಭರ ಭಾರತವೇ ಬಿಜೆಪಿಯ ಡಿಎನ್‌ಎ' ಎಂದರು.

ನಾದಿಯಾ ಜಿಲ್ಲೆಯಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಶುಕ್ರವಾರ ಮಾತನಾಡಿದ ಮಮತಾ, 'ಪ್ರಧಾನಿ ಮೋದಿ ಅವರ ಪ್ರಚಾರ ಸಭೆಗಳಿಗೆ ಪೆಂಡಾಲ್ ಹಾಕಲು, ವೇದಿಕೆ ನಿರ್ಮಿಸಲು ಗುಜರಾತ್‌ನಂಥ ರಾಜ್ಯಗಳಿಂದ ಬಿಜೆಪಿಯವರು ಜನರನ್ನು ಕರೆತಂದಿದ್ದರು. ಬಂಗಾಳದಲ್ಲಿ ಕೋವಿಡ್ ಪಸರಿಸಲು ಇವರೇ ಕಾರಣ. ಚುನಾವಣಾ ಪ್ರಚಾರಕ್ಕಾಗಿ ಮೋದಿ ಅಥವಾ ಇತರ ನಾಯಕರು ರಾಜ್ಯಕ್ಕೆ ಬರುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ, ಕೋವಿಡ್ ಪೀಡಿತ ರಾಜ್ಯಗಳಿಂದ ಜನರನ್ನೇಕೆ ಕರೆತರಬೇಕು' ಎಂದು ಅವರು ಪ್ರಶ್ನಿಸಿದ್ದಾರೆ.

ಹೊರಗಿನಿಂದ ಜನರನ್ನು ಕರೆತರುವುದನ್ನು ನಿಲ್ಲಿಸುವಂತೆ ಬಿಜೆಪಿಗೆ ಸೂಚಿಸಬೇಕು ಎಂದು ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸುವುದಾಗಿ ಅವರು ಹೇಳಿದ್ದಾರೆ.

ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯಲ್ಲಿ ಕೇಂದ್ರದ ಗೃಹಸಚಿವ ಅಮಿತ್ ಶಾ ಅವರು ಶುಕ್ರವಾರ ಚುನಾವಣಾ ಪ್ರಚಾರ ನಡೆಸಿದರು –ಪಿಟಿಐ ಚಿತ್ರ

ನಾದಿಯಾ ಜಿಲ್ಲೆಯ ನವದ್ವೀಪ್‌ನಲ್ಲಿ ಮಮತಾ ಬ್ಯಾನರ್ಜಿ ಪ್ರಚಾರ ಸಭೆ –ಪಿಟಿಐ ಚಿತ್ರ

ಐದನೇ ಹಂತದ ಮತದಾನ ಇಂದು

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆಗೆ ಐದನೇ ಹಂತದ ಮತದಾನವು ಶನಿವಾರ ನಡೆಯಲಿದೆ. ಒಟ್ಟು 45 ವಿಧಾನಸಭಾ ಕ್ಷೇತ್ರಗಳ 342 ಅಭ್ಯರ್ಥಿಗಳ ಭವಿಷ್ಯವನ್ನು ಮತದಾರರು ನಿರ್ಧರಿಸಲಿದ್ದಾರೆ. ಈ ಕ್ಷೇತ್ರಗಳಲ್ಲಿ ಸುಮಾರು ಒಂದು ಕೋಟಿ ಅರ್ಹ ಮತದಾರರಿದ್ದಾರೆ.

ಎಡಪಂಥೀಯ ಮುಖಂಡ, ಸಿಲಿಗುರಿಯ ಮೇಯರ್ ಅಶೋಕ್ ಭಟ್ಟಾಚಾರ್ಯ, ಸಚಿವರಾದ ಗೌತಮ್‌ದೇವ್ ಮತ್ತು ಬ್ರತ್ಯ ಬಸು ಹಾಗೂ ಬಿಜೆಪಿಯ ಸಮಿಕ್ ಭಟ್ಟಾಚಾರ್ಯ ಅವರು ಕಣದಲ್ಲಿರುವ ಪ್ರಮುಖರಾಗಿದ್ದಾರೆ.

ತೃಣಮೂಲ ಕಾಂಗ್ರೆಸ್‌ಗೆ ಈ ಹಂತವು ಅತ್ಯಂತ ಮಹತ್ವದ್ದಾಗಿದೆ. 2016ರ ಚುನಾವಣೆಯಲ್ಲಿ ಈ ಭಾಗದ 32 ಕ್ಷೇತ್ರಗಳನ್ನು ಟಿಎಂಸಿ ಮತ್ತು 10 ಸ್ಥಾನಗಳನ್ನು ಕಾಂಗ್ರೆಸ್– ಎಡಪಕ್ಷಗಳ ಮೈತ್ರಿ ಕೂಟವು ಗೆದ್ದುಕೊಂಡಿತ್ತು. ಈ ಬಾರಿ ಬಿಜೆಪಿಯು ಇಲ್ಲಿನ ಕೆಲವು ಕ್ಷೇತ್ರಗಳನ್ನು ಕಸಿದುಕೊಳ್ಳುವ ನಿರೀಕ್ಷೆಯಲ್ಲಿದೆ.

'ಹಿಂದಿನ ನಾಲ್ಕು ಹಂತದ ಮತದಾನದ ಸಂದರ್ಭಗಳಲ್ಲಿ ಅಲ್ಲಲ್ಲಿ ಗಲಭೆಗಳು ನಡೆದಿರುವುದರಿಂದ, ಐದನೇ ಹಂತದ ಮತದಾನಕ್ಕೆ ಒಳಗಾಗಲಿರುವ ಕ್ಷೇತ್ರಗಳಲ್ಲಿ ಬಿಗಿ ಭದ್ರತಾ ವ್ಯವಸ್ಥೆ ಮಾಡಲಾಗಿದೆ. ಕೇಂದ್ರೀಯ ಭದ್ರತಾ ಪಡೆಗಳ 853 ತುಕಡಿಗಳನ್ನು ಭದ್ರತಾ ಕಾರ್ಯಕ್ಕೆ ನಿಯೋಜಿಸಲಾಗಿದೆ. ಮತದಾನದ ಸಂದರ್ಭದಲ್ಲಿ ಕೋವಿಡ್ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುವುದು' ಎಂದು ಚುನಾವಣಾ ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಇನ್ನೂ ಮೂರು ಹಂತದ ಚುನಾವಣೆಗಳು ಬಾಕಿ ಇವೆ.

12 ರಾಜ್ಯಗಳಲ್ಲಿ ಉಪಚುನಾವಣೆ

ದೇಶದ 12 ರಾಜ್ಯಗಳಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ ಎರಡು ಲೋಕಸಭಾ ಕ್ಷೇತ್ರ ಹಾಗೂ 14 ವಿಧಾನಸಭಾ ಕ್ಷೇತ್ರಗಳಿಗೆ ಶನಿವಾರ ಉಪಚುನಾವಣೆ ನಡೆಯಲಿದೆ.

ಆಂಧ್ರಪ್ರದೇಶದ ತಿರುಪತಿ ಹಾಗೂ ಕರ್ನಾಟಕದ ಬೆಳಗಾವಿ ಲೋಕಸಭಾ ಕ್ಷೇತ್ರಗಳು ಮತ್ತು ರಾಜಸ್ಥಾನ (3), ಕರ್ನಾಟಕ (2), ಗುಜರಾತ್, ಜಾರ್ಖಂಡ್, ಮಧ್ಯಪ್ರದೇಶ, ಮಹಾರಾಷ್ಟ್ರ, ಮಿಜೋರಾಂ, ನಾಗಾಲ್ಯಾಂಡ್, ಒಡಿಶಾ, ರಾಜಸ್ಥಾನ, ತೆಲಂಗಾಣ ಹಾಗೂ ಉತ್ತರಾಖಂಡದ (ತಲಾ 1) ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಲಿದೆ.

ಐವರು ಅಭ್ಯರ್ಥಿಗಳಿಗೆ ಕೋವಿಡ್

'ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿರುವ ವಿವಿಧ ಪಕ್ಷಗಳ ಕನಿಷ್ಠ ಐವರು ಅಭ್ಯರ್ಥಿಗಳಿಗೆ ಕೋವಿಡ್ ದೃಢಪಟ್ಟಿದೆ' ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಕೋವಿಡ್ ದೃಢಪಟ್ಟ ಐವರಲ್ಲಿ ಮೂವರು ತೃಣಮೂಲ ಕಾಂಗ್ರೆಸ್ ಪಕ್ಷದವರು. ಬಿಜೆಪಿ ಹಾಗೂ ಆರ್‌ಎಸ್‌ಪಿಯ ತಲಾ ಒಬ್ಬ ಅಭ್ಯರ್ಥಿಗೆ ಸೋಂಕು ದೃಢಪಟ್ಟಿದೆ.

ಕೋವಿಡ್ ದೃಢಪಟ್ಟವರು ಪ್ರಚಾರ ಕಾರ್ಯದಲ್ಲಿ ಪಾಲ್ಗೊಳ್ಳುವಂತಿಲ್ಲ. ಅವರು ಕೂಡಲೇ ಮನೆಯಲ್ಲಿ ಪ್ರತ್ಯೇಕವಾಸ ಆರಂಭಿಸಬೇಕು ಅಥವಾ ಆಸ್ಪತ್ರೆಗೆ ದಾಖಲಾಗಬೇಕು ಎಂದು ಮುಖ್ಯ ಚುನಾವಣಾಧಿಕಾರಿ ಸೂಚಿಸಿದ್ದಾರೆ.

ಒಂದೇಹಂತದ ಮತದಾನಕ್ಕೆ ಆಕ್ಷೇಪ

ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ, ಬಾಕಿ ಇರುವ ಕೊನೆಯ ಮೂರು ಹಂತದ ಚುನಾವಣೆಗಳನ್ನು ಒಂದೇ ಹಂತದಲ್ಲಿ ನಡೆಸಬೇಕು ಎಂಬ ಟಿಎಂಸಿಯ ಪ್ರಸ್ತಾವನ್ನು ಬಿಜೆಪಿ ಹಾಗೂ ಎಡಪಕ್ಷಗಳು ವಿರೋಧಿಸಿವೆ.

ಕೆಲವು ದಿನಗಳ ಹಿಂದೆಯೇ ಮುಖ್ಯ ಚುನಾವಣಾ ಆಯೋಗವನ್ನು ಭೇಟಿಮಾಡಿದ್ದ ಟಿಎಂಸಿಯ ಪ್ರಧಾನ ಕಾರ್ಯದರ್ಶಿ ಪಾರ್ಥ ಚಟರ್ಜಿ ಅವರು ಬಾಕಿ ಇರುವ ಎಲ್ಲಾ ಚುನಾವಣೆಗಳನ್ನು ಒಂದೇ ಹಂತದಲ್ಲಿ ಮುಗಿಸಬೇಕು ಎಂದು ಮನವಿ ಮಾಡಿದ್ದರು. ಅಂಥ ಯಾವುದೇ ಯೋಚನೆ ಇಲ್ಲ ಎಂದು ಚುನಾವಣಾ ಆಯೋಗ ಗುರುವಾರ ಹೇಳಿತ್ತು.

ಆದರೆ, ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಕೋವಿಡ್ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಕಲ್ಕತ್ತಾ ಹೈ ಕೋರ್ಟ್ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿರುವ ಕಾರಣಕ್ಕೆ ಚುನಾವಣಾ ಆಯೋಗವು ಶುಕ್ರವಾರ ವರ್ಚುವಲ್ ಮಾಧ್ಯಮದಲ್ಲಿ ಸರ್ವಪಕ್ಷ ಸಭೆ ಆಯೋಜಿಸಿತ್ತು.

ಬಿಜೆಪಿ ವಿರೋಧ: ಬಾಕಿ ಇರುವ ಮೂರು ಹಂತಗಳ ಮತದಾನವನ್ನು ಒಂದೇ ಹಂತದಲ್ಲಿ ನಡೆಸಿದರೆ ಮತದಾರರು, ಅಭ್ಯರ್ಥಿಗಳು ಸೇರಿದಂತೆ ಎಲ್ಲರಿಗೂ ತೊಂದರೆಯಾಗುತ್ತದೆ. ಆ ಕಾರಣಕ್ಕೆ ನಾವು ಇದನ್ನು ವಿರೋಧಿಸಿದ್ದೇವೆ ಎಂದು ಸಭೆಯಲ್ಲಿ ಬಿಜೆಪಿಯ ಪರವಾಗಿ ಹಾಜರಿದ್ದ ಸ್ವಪನ್‌ದಾಸ್ ಗುಪ್ತಾ ತಿಳಿಸಿದ್ದಾರೆ.

'ಒಂದೇ ಹಂತದಲ್ಲಿ ಚುನಾವಣೆ ನಡೆಸುವ ವಿಚಾರವಾಗಿ ನಾವೇನೂ ಹೇಳಿಲ್ಲ. ಬದಲಿಗೆ, ಚುನಾವಣೆ ಎಂಟು ಹಂತಗಳಲ್ಲೇ ನಡೆಯಲಿದೆ, ನಾವು ಕೋವಿಡ್ ನಿಯಮಾವಳಿಗಳಿಗೆ ಬದ್ಧರಾಗಿರುತ್ತೇವೆ ಎಂಬ ಭರವಸೆ ನೀಡಿದ್ದೇವೆ' ಎಂದು ಅವರು ತಿಳಿಸಿದರು.

ವೇಳಾಪಟ್ಟಿ ಅನುಸರಿಸಿ: ಚುನಾವಣಾ ಪ್ರಕ್ರಿಯೆ ಈಗಾಗಲೇ ಜಾರಿಯಲ್ಲಿದೆ. ಯಾವುದೇ ಬದಲಾವಣೆಗೆ ಈಗ ಅವಕಾಶ ಇಲ್ಲ. ವೇಳಾಪಟ್ಟಿಯಂತೆಯೇ ಎಲ್ಲವೂ ನಡೆಯಬೇಕು ಎಂದು ಎಡಪಕ್ಷಗಳು ಸಹ ಹೇಳಿವೆ. 'ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಕೋವಿಡ್ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಎಲ್ಲರೂ ಒಪ್ಪಿದ್ದೇವೆ' ಎಂದು ಸಿಪಿಎಂ ಮುಖಂಡ ವಿಕಾಸ್ ಭಟ್ಟಾಚಾರ್ಯ ಹೇಳಿದ್ದಾರೆ.

ಮರಾಠಿ ಭಾಷಿಕ ಅಭ್ಯರ್ಥಿ ವಿರುದ್ಧ ಫಡಣವೀಸ್ ಪ್ರಚಾರ

ಫಡಣವೀಸ್

ಮುಂಬೈ (ಪಿಟಿಐ): ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಮರಾಠಿ ಮಾತನಾಡುವ ಅಭ್ಯರ್ಥಿ ವಿರುದ್ಧ ಪ್ರಚಾರ ನಡೆಸಿದ ಬಿಜೆಪಿ ನಾಯಕ ದೇವೇಂದ್ರ ಫಡಣವೀಸ್ ಅವರ ಕ್ರಮವನ್ನು ಶಿವಸೇನಾ ಮತ್ತು ಎನ್‌ಸಿಪಿ ಟೀಕಿಸಿದೆ.

ಬೆಳಗಾವಿಯಲ್ಲಿ ಮರಾಠಿ ಭಾಷಿಕ ಅಭ್ಯರ್ಥಿ ವಿರುದ್ಧ ಮಹಾರಾಷ್ಟ್ರದ ನಾಯಕರು ಪ್ರಚಾರ ಮಾಡಬಾರದಿತ್ತು ಎಂದು ಶಿವಸೇನಾ ಮುಖಂಡ ಸಂಜಯ್ ರಾವುತ್ ಹೇಳಿದ್ದಾರೆ.

'ಈ ರೀತಿ ಪ್ರಚಾರ ಮಾಡುವ ಮೂಲಕ ಬೆಳಗಾವಿಯ ಮರಾಠಿಗರಿಗೆ ಬಿಜೆಪಿಯು ದ್ರೋಹ ಬಗೆದಿದೆ' ಎಂದು ಎನ್‌ಸಿಪಿ ಅಧ್ಯಕ್ಷ ಹಾಗೂ ರಾಜ್ಯ ಜಲ ಸಂಪನ್ಮೂಲ ಖಾತೆ ಸಚಿವ ಜಯಂತ್ ಪಾಟೀಲ್ ಅಭಿಪ್ರಾಯಪಟ್ಟಿದ್ದಾರೆ.

ಉಪ ಚುನಾವಣೆ ಕರ್ತವ್ಯದಲ್ಲಿದ್ದಾಗ ಎಎಸ್‌ಐ ಜೆ.ಬಿ. ಪೂಜಾರ ಸಾವು

ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆ ಕರ್ತವ್ಯದಲ್ಲಿದ್ದ ಎಎಸ್‌ಐ ಹೃದಯಾಘಾತದಿಂದ ಶುಕ್ರವಾರ ನಿಧನರಾದರು.

ಪೂಜಾರ (57) ಮೃತರು. ಅವರು ಹುಕ್ಕೇರಿ ತಾಲ್ಲೂಕು ಯಮಕನ ಮರಡಿ ಪೊಲೀಸ್ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದರು. ಗೋಕಾಕ ವಿಧಾನಸಭಾ ಕ್ಷೇತ್ರದ ಸೆಕ್ಟರ್ ಅಧಿಕಾರಿಯಾಗಿ ಅವರನ್ನು ನೇಮಿಸಲಾಗಿತ್ತು. ಮತಗಟ್ಟೆಯಲ್ಲಿ ಪರಿಶೀಲನೆ ನಡೆಸುವ ವೇಳೆ ಕುಸಿದುಬಿದ್ದರು. ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ಮಾಹಿತಿ ನೀಡಿದ್ದಾರೆ.

ಹಣ ಹಂಚಿಕೆ: ಗ್ರಾಮಸ್ಥರಿಂದ ಚಪ್ಪಲಿ ಏಟು

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ತಾಲ್ಲೂಕಿನ ತ್ರಿಪುರಾಂತ ಗ್ರಾಮದಲ್ಲಿ ಶುಕ್ರವಾರ ವ್ಯಕ್ತಿಯೊಬ್ಬರು ಮತದಾರರಿಗೆ ಹಣ ಹಂಚಲು ಬಂದಾಗ ಗ್ರಾಮಸ್ಥರು ಚಪ್ಪಲಿಯಿಂದ ಹೊಡೆದಿದ್ದಾರೆ.

'ರಾಜಕೀಯ ಪಕ್ಷಗಳೇ ಮತದಾರರನ್ನು ಭ್ರಷ್ಟರನ್ನಾಗಿ ಮಾಡುತ್ತಿವೆ. ನಮ್ಮಲ್ಲಿ ಹಣ ಇಲ್ಲವೆ? ನಿಮ್ಮ ಹಣ ನಮಗೆ ಏಕೆ ಕೊಡುತ್ತಿದ್ದೀರಿ' ಎನ್ನುತ್ತ ವ್ಯಕ್ತಿಯ ಕೈಯಲ್ಲಿದ್ದ ನೋಟುಗಳನ್ನು ಕಿತ್ತುಕೊಂಡ ಗ್ರಾಮಸ್ಥರು ಅವುಗಳನ್ನು ಗಾಳಿಯಲ್ಲಿ ತೂರಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಚುನಾವಣಾ ವೀಕ್ಷಕರಿಗೆ ಕರೆ ಮಾಡಿ ಮಾಹಿತಿ ನೀಡಿದ ನಂತರ ಫ್ಲೈಯಿಂಗ್ ಸ್ಕ್ವಾಡ್, ಪೊಲೀಸರು ಸ್ಥಳಕ್ಕೆ ಬಂದು ವ್ಯಕ್ತಿಯನ್ನು ವಶಕ್ಕೆ ತೆಗೆದುಕೊಂಡರು.

ಹಣ ಹಂಚಿಕೆ ಹಾಗೂ ವ್ಯಕ್ತಿಯ ಮೇಲೆ ಹಲ್ಲೆ ಮಾಡಿದ ದೃಶ್ಯವನ್ನು ಕೆಲವರು ಮೊಬೈಲ್‌ನಲ್ಲಿ ಸೆರೆ ಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಿದ್ದಾರೆ. ವಿಡಿಯೊ ವೈರಲ್ ಆಗಿದೆ.

ಹಣ ಹಂಚಿಕೆ ವಿಡಿಯೊ ವೈರಲ್ ಆಗುತ್ತಿದ್ದಂತೆಯೇ ಪ್ರಮುಖ ರಾಜಕೀಯ ಪಕ್ಷಗಳು ಪರಸ್ಪರ ಆರೋಪ ಮಾಡಿವೆ.

ಬಿಜೆಪಿ ಅಭ್ಯರ್ಥಿ ಶರಣು ಸಲಗರ ಸ್ಥಳಕ್ಕೆ ಬಂದಾಗ ಅಲ್ಲಿದ್ದ ಪೊಲೀಸ್ ಅಧಿಕಾರಿ, ನೀವು ಮಧ್ಯ ಪ್ರವೇಶಿಸಬೇಡಿ ಎನ್ನುತ್ತಾರೆ. 'ನಾನು ಬಿಜೆಪಿ ಅಭ್ಯರ್ಥಿ ಇದ್ದೇನೆ. ಅವರ ಪರವಾಗಿ ಬಂದಿಲ್ಲ. ಹಣ ಹಂಚಿದ್ದರೆ ದೂರು ಕೊಡಿ, ಅವರನ್ನು ಹೊಡೆಯಬೇಡಿ' ಎಂದು ಶರಣು ಹೇಳಿರುವುದು ವಿಡಿಯೊದಲ್ಲಿದೆ.

'ಫ್ಲೈಯಿಂಗ್ ಸ್ಕ್ವಾಡ್ ಗ್ರಾಮಕ್ಕೆ ತೆರಳಿ ಮಾಹಿತಿ ಪಡೆದಿದೆ. ಯಾವ ಪಕ್ಷದವರು ಹಣ ಹಂಚುತ್ತಿದ್ದರು ಎನ್ನುವ ಬಗ್ಗೆ ಸ್ಪಷ್ಟ ಮಾಹಿತಿ ದೊರಕಿಲ್ಲ. ವಿಚಾರಣೆ ನಡೆಸಲಾಗುತ್ತಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ.ಎಲ್.ನಾಗೇಶ ತಿಳಿಸಿದ್ದಾರೆ.

ಬಸವಕಲ್ಯಾಣ ತಾಲ್ಲೂಕಿನ ತ್ರಿಪುರಾಂತ ಗ್ರಾಮದಲ್ಲಿ ಹಣ ಹಂಚುತ್ತಿದ್ದರು ಎನ್ನಲಾದ ವ್ಯಕ್ತಿಯನ್ನು ಗ್ರಾಮಸ್ಥರು ಥಳಿಸಿದರು

ಅಭ್ಯರ್ಥಿಗಳ ಹಣೆಬರಹ ನಿರ್ಧಾರ ಇಂದು

ಒಂದನೇ ಪುಟದಿಂದ...

ಒಟ್ಟು 2,06,429 ಮತದಾರರಿದ್ದಾರೆ. ಮಹಿಳಾ ಮತದಾರರು (1,05,076) ಹೆಚ್ಚು ಇರುವುದು ಈ ಕ್ಷೇತ್ರದ ವಿಶೇಷ. ಒಟ್ಟು 305 ಮತಗಟ್ಟೆಗಳಿದ್ದು, 1,504 ಸಿಬ್ಬಂದಿಯನ್ನು ಚುನಾವಣಾ ಕಾರ್ಯಕ್ಕೆ ನಿಯೋಜಿಸಲಾಗಿದೆ.

ಈ ಎಲ್ಲ ಕ್ಷೇತ್ರಗಳ ಮತ ಎಣಿಕೆ ಮೇ 2ರಂದು ನಡೆಯಲಿದೆ.

ಅಂಚೆ ಮತದಾನದ ವಿಶೇಷ ಸೌಲಭ್ಯ: 80 ವರ್ಷ ಮೇಲ್ಪಟ್ಟವರಿಗೆ, ಅಂಗವಿಕಲರಿಗೆ ಹಾಗೂ ಕೋವಿಡ್ ಪೀಡಿತರಿಗೆ ಅಂಚೆ ಮತದಾನ ಮಾಡುವುದಕ್ಕೆ ಅವಕಾಶ ನೀಡಲಾಗಿತ್ತು. ಮಸ್ಕಿ ಕ್ಷೇತ್ರದಲ್ಲಿ ಇಂತಹ 280 ಅಂಚೆ ಮತಗಳು ಚಲಾವಣೆ ಆಗಿವೆ.

ಬೆಳಗಾವಿ– 10 ಅಭ್ಯರ್ಥಿಗಳು ಕಣದಲ್ಲಿ: ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ 10 ಮಂದಿ ಕಣದಲ್ಲಿದ್ದರೂ, ಬಿಜೆಪಿಯ ಮಂಗಲಾ ಸುರೇಶ ಅಂಗಡಿ ಹಾಗೂ ಕಾಂಗ್ರೆಸ್‌ನ ಸತೀಶ ಜಾರಕಿಹೊಳಿ ನಡುವೆ ಸಮಬಲದ ಹೋರಾಟ ನಿರೀಕ್ಷಿಸಲಾಗಿದೆ.

ಶುಕ್ರವಾರ, ಪ್ರಮುಖ ಅಭ್ಯರ್ಥಿಗಳಾದ ಮಂಗಲಾ ಅವರು ನಗರದ ವಿವಿಧೆಡೆ ಹಾಗೂ ಸತೀಶ, ಗೋಕಾಕ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ಮನೆ ಮನೆಗೆ ತೆರಳಿ ಮತ ಯಾಚಿಸಿದರು.

ಕೋವಿಡ್–19 ಎರಡನೇ ಅಲೆಯ ಕಾರಣ ಜಿಲ್ಲಾಡಳಿತದಿಂದ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಒಟ್ಟು 18,13,567 ಮತದಾರರಿದ್ದಾರೆ. 2,566 ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, ಈ ಪೈಕಿ 1,283ರಲ್ಲಿ ವೆಬ್‌ಕಾಸ್ಟಿಂಗ್ ಮತ್ತು 159ರಲ್ಲಿ ವಿಡಿಯೊಗ್ರಫಿ ವ್ಯವಸ್ಥೆ ಮಾಡಲಾಗಿದೆ.

ನ್ಯಾಯಾಂಗ ಬಂಧನಕ್ಕೆ ಖಾಜಿ

ಮುಂಬೈ (ಪಿಟಿಐ): ಉದ್ಯಮಿ ಮುಕೇಶ್ ಅಂಬಾನಿ ಮನೆಯ ಬಳಿ ಸ್ಫೋಟಕಗಳಿದ್ದ ವಾಹನ ಪತ್ತೆ ಪ್ರಕರಣ ಸಂಬಂಧ ಬಂಧಿತರಾಗಿರುವ ಪೊಲೀಸ್ ಅಧಿಕಾರಿ ರಿಯಾಜ್ ಖಾಜಿ (ಸೇವೆಯಿಂದ ಅಮಾನತುಗೊಂಡಿದ್ದಾರೆ) ಅವರನ್ನು ಕೋರ್ಟ್ ಇದೇ 23ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಎಸಿಪಿ ಖಾಜಿ ಅವರನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಏಪ್ರಿಲ್ 11ರಂದು ಬಂಧಿಸಿತ್ತು.

ಕೇರಳ: ಸಿಎಂ ವಿರುದ್ಧ ಹೇಳಿಕೆ ನೀಡಲು ಒತ್ತಾಯಿಸಿದ ಪ್ರಕರಣ

ಅಧಿಕಾರಿಗಳ ವಿರುದ್ಧದ ಎಫ್‌ಐಆರ್ ವಜಾ

ಕೊಚ್ಚಿ (ಪಿಟಿಐ): ಚಿನ್ನ ಕಳ್ಳ ಸಾಗಣೆ ಪ್ರಕರಣದಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ವಿರುದ್ಧ ಹೇಳಿಕೆ ನೀಡುವಂತೆ ಬಲವಂತಪಡಿಸಿದ ಆರೋಪದ ಮೇಲೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳ ವಿರುದ್ಧ ರಾಜ್ಯ ಪೊಲೀಸರು ದಾಖಲಿಸಿದ್ದ ಎರಡು ಎಫ್‌ಐಆರ್‌ಗಳನ್ನು ಕೇರಳ ಹೈಕೋರ್ಟ್ ಶುಕ್ರವಾರ ರದ್ದುಪಡಿಸಿದೆ.

ಎಫ್‌ಐಆರ್ ರದ್ದುಗೊಳಿಸಿದ ನ್ಯಾಯಾಲಯ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಅಕ್ರಮ ಹಣ ವರ್ಗಾವಣೆ ಪ್ರಕರಣಗಳ ವಿಚಾರಣೆ ನಡೆಸುವ ವಿಶೇಷ ನ್ಯಾಯಾಲಯದ ಮೊರೆ ಹೋಗುವಂತೆ ಸೂಚಿಸಿತು.

ಇದೇ ವೇಳೆ ನ್ಯಾಯಾಲಯ, ತನಿಖೆ ಅವಧಿಯಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಗ್ರಹಿಸಿದ ಎಲ್ಲ ಮಾಹಿತಿಗಳನ್ನು ಮುಚ್ಚಿದ ಲಕೋಟೆಯಲ್ಲಿಟ್ಟು ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸುವಂತೆ ತನಿಖಾಧಿಕಾರಿಗೆ ನಿರ್ದೇಶಿಸಿತು.

ಚಿನ್ನ ಕಳ್ಳ ಸಾಗಣೆ ಪ್ರಕರಣದ ಪ್ರಮುಖ ರೂವಾರಿ ಸ್ವಪ್ನಾ ಸುರೇಶ್ ಅವರ ಆಡಿಯೊ ಹೇಳಿಕೆಯೊಂದು ಇತ್ತೀಚೆಗೆ ವೈರಲ್ ಆಗಿತ್ತು. ಅದರಲ್ಲಿ ಪ್ರಕರಣದಲ್ಲಿ ಪಿಣರಾಯಿ ವಿಜಯನ್ ಅವರನ್ನು ಸಿಲುಕಿಸುವಂತೆ ಇ.ಡಿ ಅಧಿಕಾರಿಗಳು ತಮಗೆ ಬಲವಂತ ಮಾಡಿದ್ದರು ಎಂದು ಹೇಳಲಾಗಿತ್ತು. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ಪೊಲೀಸರು ಇ.ಡಿ ವಿರುದ್ಧ ಕೇಸು ದಾಖಲಿಸಿಕೊಂಡಿದ್ದರು.

ಪೊಲೀಸರು ದಾಖಲಿಸಿದ್ದ ಎರಡು ಎಫ್‌ಐಆರ್‌ಗಳನ್ನು ರದ್ದುಗೊಳಿಸುವಂತೆ ಇ.ಡಿ ಅಧಿಕಾರಿಗಳು ನ್ಯಾಯಾಲಯದ ಮೊರೆ ಹೋಗಿದ್ದರು.

ಕಲ್ಲಿದ್ದಲು ಹಗರಣದ ವಿಚಾರಣೆ: ಸರ್ಕಾರಿ ವಕೀಲರ ನೇಮಕ

ನವದೆಹಲಿ (ಪಿಟಿಐ): ಬಹುಕೋಟಿ ಕಲ್ಲಿದ್ದಲು ಹಗರಣದ ವಿಚಾರಣೆಗೆ ಸಂಬಂಧಿಸಿದಂತೆ ಮಾಜಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಮಣಿಂದರ್ ಸಿಂಗ್ ಮತ್ತು ವಕೀಲ ರಾಜೇಶ್ ಬಾತ್ರಾ ಅವರನ್ನು ವಿಶೇಷ ಸರ್ಕಾರಿ ವಕೀಲರನ್ನಾಗಿ ಸುಪ್ರೀಂ ಕೋರ್ಟ್ ನೇಮಿಸಿದೆ.

ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ ನೇತೃತ್ವದ ಪೀಠವು ಈ ನೇಮಕ ಮಾಡಿದೆ. ಜಾರಿ ನಿರ್ದೇಶನಾಲಯವು ವಕೀಲರನ್ನು ನೇಮಕ ಮಾಡುವಂತೆ ನ್ಯಾಯಾಲಯಕ್ಕೆ ಕೋರಿತ್ತು.

2014ರಲ್ಲಿ ನೇಮಿಸಲಾಗಿದ್ದ ಹಿರಿಯ ವಕೀಲ ಆರ್.ಎಸ್. ಚೀಮಾ ಅವರು ವಯೋಮಾನದ ಕಾರಣ ತಮ್ಮನ್ನು ಜವಾಬ್ದಾರಿಯಿಂದ ಮುಕ್ತಗೊಳಿಸಬೇಕು ಎಂದು ಕೋರಿದ್ದರು.

'ಚೀಮಾ ಅವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗುವುದು. ಚೀಮಾ ಅವರ ಕಾರ್ಯಕ್ಕೆ ನ್ಯಾಯಾಲಯ ಮೆಚ್ಚುಗೆ ವ್ಯಕ್ತಪಡಿಸುತ್ತದೆ' ಎಂದು ಪೀಠವು ಹೇಳಿದೆ.

ರಾಮಮಂದಿರ ನಿರ್ಮಾಣ: ದೇಣಿಗೆ ನೀಡಿದ್ದ ಚೆಕ್‌ಗಳು ಬೌನ್ಸ್

ಅಯೋಧ್ಯೆ (ಪಿಟಿಐ): ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕಾಗಿ ವಿಶ್ವ ಹಿಂದೂ ಪರಿಷತ್ ದೇಶದಾದ್ಯಂತ ದೇಣಿಗೆಯಾಗಿ ಸಂಗ್ರಹಿಸಿರುವ ₹22 ಕೋಟಿ ಮೊತ್ತದ ವಿವಿಧ ಬ್ಯಾಂಕ್‌ಗಳ 15 ಸಾವಿರ ಚೆಕ್‌ಗಳು ಬೌನ್ಸ್ ಆಗಿವೆ!

ಮಂದಿರ ನಿರ್ಮಾಣದ ಜವಾಬ್ದಾರಿ ಹೊತ್ತಿರುವ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಆಡಿಟ್ ವರದಿಯ ಪ್ರಕಾರ, 'ಬ್ಯಾಂಕ್ ಖಾತೆಗಳಲ್ಲಿ ಹಣದ ಕೊರತೆ ಅಥವಾ ತಾಂತ್ರಿಕ ದೋಷದಿಂದಾಗಿ ಚೆಕ್‌ಗಳು ಬೌನ್ಸ್ ಆಗಿವೆ'. ಇದರಲ್ಲಿ ಎರಡು ಸಾವಿರದಷ್ಟು ಚೆಕ್‌ಗಳು ಅಯೋಧ್ಯೆಯಿಂದಲೇ ಸಂಗ್ರಹವಾಗಿವೆ.

'ತೊಂದರೆ ಪರಿಹರಿಸುತ್ತಿರುವ ಬ್ಯಾಂಕ್‌ಗಳು, ಕೆಲವರಿಗೆ ಪುನಃ ದೇಣಿಗೆ ನೀಡುವಂತೆ ತಿಳಿಸುತ್ತಿವೆ' ಎಂದು ಟ್ರಸ್ಟ್ ಸದಸ್ಯ ಡಾ. ಅನಿಲ್ ಮಿಶ್ರಾ ಹೇಳಿದ್ದಾರೆ.

ನವೋದಯ ವಿದ್ಯಾಲಯ ಸಮಿತಿ
ಶಿಕ್ಷಣ ಸಚಿವಾಲಯದ ಅಧೀನ ಸ್ವಾಯತ್ತ ಸಂಸ್ಥೆ
ಬಿ–15, ಸೆಕ್ಟರ್ –62, ನೋಯ್ಡ.
ಜಿಲ್ಲೆ ಜಿ.ಬಿ.ನಗರ. ಉತ್ತರ ಪ್ರದೇಶ ಪಿನ್–201309

ಅಧಿಸೂಚನೆ
ಜವಾಹರ ನವೋದಯ ವಿದ್ಯಾಲಯ ಪ್ರವೇಶ ಪರೀಕ್ಷೆ – 2021 ನ್ನು ವಿದ್ಯಾರ್ಥಿಗಳ 6ನೇ ತರಗತಿಗೆ ಜವಾಹರ ನವೋದಯ ವಿದ್ಯಾಲಯ 2021–22ನೇ ಸಾಲಿನ ದಾಖಲಾತಿಗಾಗಿ ಈ ಮೊದಲು " 16ನೇ ಮೇ 2021 (ರವಿವಾರ)" ಎಂದು ನಿಗದಿಪಡಿಸಲಾಗಿತ್ತು. ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಿಜೋರಾಮ್, ಮೇಘಾಲಯ ಮತ್ತು ನಾಗಾಲ್ಯಾಂಡ್‌ಗಳನ್ನು ಹೊರತುಪಡಿಸಿ ಆಡಳಿತಾತ್ಮಕ ಕಾರಣಗಳಿಂದಾಗಿ ಈ ದಿನಾಂಕವನ್ನು ಮುಂದೂಡಲಾಗಿದೆ. ಮುಂದಿನ ಆಯ್ಕೆ ಪರೀಕ್ಷೆ ದಿನಾಂಕವನ್ನು ಆಯ್ಕೆ ಪರೀಕ್ಷೆಯ 15 ದಿನಗಳ ಮುಂಚಿತವಾಗಿ ಪ್ರಕಟಣೆಯ ಮೂಲಕ ತಿಳಿಸಲಾಗುವುದು.
ಉಪ ಆಯುಕ್ತರು (ಪರೀಕ್ಷಾ)

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN - UO4010KA2002SGC030438)
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಬೆವಿಕಂ 11 ಕೆವಿ 200 ಆ್ಯಂಪ್ಸ್ ಜಿ ಒ ಎಸ್ (ವಿಚಾರಣೆ ಸಂಖ್ಯೆ: ಬಿಸಿಪಿ–1268/2021–22) ಮತ್ತು 11 ಕೆವಿ 400 ಆ್ಯಂಪ್ಸ್ ಜಿ ಒ ಎಸ್ (ವಿಚಾರಣೆ ಸಂಖ್ಯೆ: ಬಿಸಿಪಿ–1269/2021–22) ಗಳನ್ನು ಖರೀದಿಸಲು ಟೆಂಡರ್‌ನ್ನು ಆಹ್ವಾನಿಸಿದೆ. ಬಿಡ್ ದಾಖಲೆಗಳ ಲಭ್ಯತೆ: 19.04.2021 ರಿಂದ 18.05.2021, 15.00 ಗಂಟೆವರೆಗೆ. ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18.05.2021, 15:00 ಗಂಟೆಯವರೆಗೆ. ಬಿಡ್ ದಾಖಲೆಗಳನ್ನು ತೆರೆಯುವುದು: 19.05.2021 ರ 15.15 ಗಂಟೆಗೆ. ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ http://eproc.karnataka.gov.in ನಿಂದ ಪಡೆಯಬಹುದು. ಆಸಕ್ತ ಬಿಡ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ಬಿಡ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 8046010000, +91–8068948777, support@eprochelpdesk.com ಮೂಲಕ ಸಹಾಯ ಪಡೆಯಬಹುದು.
ಸಹಿ/– ಪ್ರಧಾನ ವ್ಯವಸ್ಥಾಪಕರು, ವಿದ್ಯುತ್, ಖರೀದಿ,
ಬೆವಿಕಂ, 4ನೇ ಮಹಡಿ, ಕೆ.ಆರ್.ವೃತ್ತ, ಬೆಂಗಳೂರು–560001.
ದೂರವಾಣಿ : 080–22354939, ಫ್ಯಾಕ್ಸ್: 080–22352485.
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912
ಬೆಸ್ಕಾಂ ಮಿತ್ರ MOBILE APP ಡೌನ್‌ಲೋಡ್ ಮಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ತುಮಕೂರು
ದೂರವಾಣಿ: 0816–2281105 ಇ–ಮೇಲ್: eemitmk@gmail.com
ಐ.ಎಫ್.ಟಿ ಸಂಖ್ಯೆ: 01/2021–22 ಕೆ.ಡಬ್ಲ್ಯೂ–1&4 (ಎಕ ಲಕೋಟೆ & ದ್ವಿ ಲಕೋಟೆ) ದಿನಾಂಕ: 15.04.2021
ಅಲ್ಪಾವಧಿ ಟೆಂಡರ್ ಪ್ರಕಟಣೆ ದಿನಾಂಕ: 15.04.2021
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ತುಮಕೂರು ವ್ಯಾಪ್ತಿಯಲ್ಲಿ 2021–22 ನೇ ಸಾಲಿನ ಪಟ್ಟಿಯಲ್ಲಿ ಲೆಕ್ಕ ಶೀರ್ಷಿಕೆ: 4702–ಕೆರೆಗಳ ಆಧುನೀಕರಣ ಪ್ರಧಾನ ಕಾಮಗಾರಿಗಳು ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಐಟಂವಾರು ಟೆಂಡರುಗಳನ್ನು ಈ ಕಛೇರಿ ಟೆಂಡರು **ಪ್ರಕಟಣೆ ಸಂಖ್ಯೆ: 01/2021–22, ದಿ: 15–04–2021 ರಂದು ಆಹ್ವಾನಿಸಲಾಗಿದೆ,** ಟೆಂಡರು ಪ್ರಕ್ರಿಯೆ ದಿನಾಂಕ ಮತ್ತು ವಿವರಗಳನ್ನು ಟೆಂಡರ್‌ನ ನಿಗಧಿತ ನಮೂನೆಯಲ್ಲಿ ವೆಬ್‌ಸೈಟ್ http//eproc.karnataka.gov.in ನಲ್ಲಿ ಅವಶ್ಯಕ ಮಾಹಿತಿಗಳೊಂದಿಗೆ, ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ.ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರು ಪ್ರಕ್ರಿಯೆಯ ದಿನಾಂಕಗಳು ಈ ಕೆಳಕಂಡಂತಿವೆ:
1. ಟೆಂಡರ್ ಪ್ರಕಟಣೆಯನ್ನು **ದಿನಾಂಕ: 19.04.2021** ರಂದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಪ್ರಕಟಿಸಲಾಗುವುದು. 2. ಆವಶ್ಯ ಟೆಂಡರ್ ಮಾಹಿತಿ/ಸ್ಪಷ್ಟೀಕರಣವನ್ನು ಪಡೆಯಲು **ದಿನಾಂಕ: 26.04.2021 ಸಾಯಂಕಾಲ 4.00 ಗಂಟೆಯುವರೆಗೆ** ಸ್ವೀಕರಿಸಲಾಗುವುದು. 3. ಗುತ್ತಿಗೆದಾರರಿಂದ ಟೆಂಡರ್‌ನ್ನು "ಇ" ಪ್ರೊಕ್ಯೂರ್‌ಮೆಂಟ್ ಮೂಲಕ **ದಿನಾಂಕ: 27.04.2021 ಸಾಯಂಕಾಲ 5.00 ಗಂಟೆಯವರೆಗೆ** ಸ್ವೀಕರಿಸಲಾಗುವುದು. 4. ತಾಂತ್ರಿಕ ಬಿಡ್ಡನ್ನು **ದಿನಾಂಕ: 29.04.2021 ಬೆಳ್ಳಗ್ಗೆ 11.00 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲೆ ತಿಳಿಸಿದ ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ತುಮಕೂರು.
ವಾಸಾಸಂಇ/ತುಮಕೂರು/ಶಿರಡಿ ಸಾಯಿ/07/2021–22
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ:ಬ.ಬಾಗೇವಾಡಿ, ಜಿ:ವಿಜಯಪುರ.
ದೂರವಾಣಿ:08426–281027.ಇಮೇಲ್:dam_division@rediffmail.com
ಸಂ:ಕೃಭಾಜನಿನಿ/ಡಿ.ಬಿ/ಟೆಂಡರ್/2021–22/66–68 ದಿನಾಂಕ:12.04.2021
ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ, ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ **(1) Indent No. 20630 for Rs. 149.43 Lakhs (2) Indent No. 20598 for Rs. 89.22 Lakhs (3) Indent No. 20629 for Rs. 52.22 Lakhs** ಶೇಕಡಾವಾರು ದ್ವಿ–ಲಕೋಟೆಗಳಲ್ಲಿ ಕೆ.ಟಿ.ಪಿ.ಪಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಆಹ್ವಾನಿಸಿದ್ದು, ಗುತ್ತಿಗೆದಾರರುಗಳು ತಮ್ಮ ಬಿಡ್ಡುಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಸಲ್ಲಿಸಬಹುದಾಗಿದೆ. ಮೊದಲ ಲಕೋಟೆಯು ತಾಂತ್ರಿಕ ಬಿಡ್‌ದಾಗಿದ್ದು, ಅಗತ್ಯವಿರುವ ದಾಖಲೆಗಳನ್ನು ಒಳಗೊಂಡಿದ್ದು ಪ್ಯಾರಾ 1.1 ರಂತೆ, ಎರಡನೇ ಲಕೋಟೆಯು ಆರ್ಥಿಕ ಬಿಡ್‌ದಾಗಿದ್ದು ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದವರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.
1) ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ **ದಿನಾಂಕ: 16.04.2021 ರಿಂದ 27.04.2021 ಸಾಯಂಕಾಲ 5.00 ಘಂಟೆಯವರೆಗೆ. 2)** ಪ್ರೀ–ಬಿಡ್ ಮೀಟಿಂಗ್ (ಇಂಡೆಂಟ್ ನಂ. 20630 ಗೆ ಮಾತ್ರ) **ದಿನಾಂಕ: 22.04.2021 ಮುಂಜಾನೆ 11.00 ಗಂಟೆಗೆ ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ ಕಚೇರಿಯಲ್ಲಿ. 3)** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:29.04.2021 ಮುಂಜಾನೆ 11.00 ಘಂಟೆಗೆ. 4)** ಆರ್ಥಿಕ ಬಿಡ್ ತೆರೆಯುವ **ದಿನಾಂಕ:03.05.2021** ಮುಂಜಾನೆ 11.00 ಘಂಟೆಗೆ.
ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. http://www.eproc.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.
ವಾಸಾಸಂಇ/ವಿಜಯಪುರ/27/ಎಂಸಿಎ/2021–22

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಕೇಂದ್ರೀಯ ಉಗ್ರಾಣ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560027.
ಸಂಖ್ಯೆ:ಬೆಂ.ಮ.ಸಾ.ಸಂ./ಕೇಕ/ಉಖನಿ/ಟೆಂಡರ್/02/2021–22 ದಿನಾಂಕ: 16–04–2021
ಟೆಂಡರ್ ಆಹ್ವಾನ ಪ್ರಕಟಣೆ
ಕೆಳಕಂಡ ಸೇವೆಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಿದೆ.
ನಿಯಮಿತ ಟೆಂಡರ್: 1) ಟೆಂಡರ್ ಸಂಖ್ಯೆ: ಬಿಎಂಟಿಸಿ/2021/012 ದಿನಾಂಕ: 12–04–2021. **ವಿವರ:** ಬೆ.ಮ.ಸಾ.ಸಂಸ್ಥೆಗೆ ಸ್ವಯಂ ಚಾಲಿತ ಶುಲ್ಕ ಸಂಗ್ರಹ ವ್ಯವಸ್ಥೆಯ (ಎ.ಎಫ್.ಸಿ.ಎಸ್) ವಿನ್ಯಾಸ, ಅಭಿವೃದ್ಧಿ, ಸರಬರಾಜು, ಅನುಷ್ಠಾನ, ಏಕೀಕರಣ ಮತ್ತು ನಿರ್ವಹಣೆಗಾಗಿ ಸಿಸ್ಟಮ್ ಇಂಟಿಗ್ರೇಟರ್ ಆಯ್ಕೆ, ಟೆಂಡರ್‌ನ ಮೊತ್ತ ಅಂದಾಜು (ರೂ. ಲಕ್ಷಗಳಲ್ಲಿ): **5337.00,** ಬಿಡ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: **21–05–2021ರಂದು 14.30 ಗಂಟೆವರೆಗೆ.**
ಅಲ್ಪಾವಧಿ ಟೆಂಡರ್: 2) ಟೆಂಡರ್ ಸಂಖ್ಯೆ: ಬಿಎಂಟಿಸಿ/2021/013 ದಿನಾಂಕ: 12–04–2021. **ವಿವರ:** ನಿರ್ಭಯಾ ಯೋಜನೆಯಡಿಯಲ್ಲಿ ಪ್ರಿಂಟರ್‌ಗಳ ಮತ್ತು ಸರ್ವರ್‌ಗಳ ಖರೀದಿಯ ಬಗ್ಗೆ, ಟೆಂಡರ್‌ನ ಮೊತ್ತ ಅಂದಾಜು (ರೂ. ಲಕ್ಷಗಳಲ್ಲಿ): 54.00, ಬಿಡ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: **26–04–2021ರಂದು 14.30 ಗಂಟೆವರೆಗೆ.**
ವಿವರಗಳನ್ನು **www.eproc.karnataka.gov.in** ನಿಂದ ಪಡೆಯಬಹುದು.
ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು
(ಟೆಂಡರ್ ಕರೆಯುವ ಪ್ರಾಧಿಕಾರ)
ವಾಸಾಸಂಇ/ಬೆಂ.ನ/ಅಡ್ವರ್ಟೋರ್/160/2021–22
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

MANGALURU SMART CITY
ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್
ವಿಳಾಸ: ಎಮ್.ಜಿ. ರಸ್ತೆ, ಲಾಲ್‌ಭಾಗ್, ಮಂಗಳೂರು–575003, ದಕ್ಷಿಣ ಕನ್ನಡ, ಕರ್ನಾಟಕ.
CIN: U74999KA2017PLC102010 Phone: 0824-2986321
Email id: smartcitymangaluru@gmail.com Website: www.mangalurusmartcity.net
ಇ–ಟೆಂಡರ್ಅಧಿಸೂಚನನಂಬ್ರ UDD/2021-22/OW/WORK_INDENT 1326
ದಿನಾಂಕ: 12/04/2021 ಮತ್ತು
UDD/2021-22/BD/WORK_INDENT1327 Date:15/04/2021
ಜಾಹಿರಾತು ನಂ: 105/2021-22
ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ನಯೋಜನೆಯಡಿ **"ಡೆವೆಲಪ್ಮೆಂಟ್ ಆಫ್ ವಾಟರ್ ಮೆಟ್ರೊ ಸ್ಟೇಶನ್ (ಹಂತ–೧) ಆಟ್ ಜೆಪ್ಪು, ಮಂಗಳೂರು"** ಮತ್ತು **"ಕಲ್ಚರಲ್ ಸೆಂಟರ್ ಆಟ್ ಬೋಳಾರ್ ಸೀ ಫೇಸ್"** ಯೋಜನೆಗಾಗಿ ಟೆಂಡರ್ ಅಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು http://www.eproc.karnataka.gov.in ಯಿಂದ ಪಡೆಯಬಹುದಾಗಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ಮಂಗಳೂರು
DIPR/ADM/MCA/53/21-22 dt.16.4.2021

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ
KIDWAI MEMORIAL INSTITUTE OF ONCOLOGY
(ಕರ್ನಾಟಕ ಸರ್ಕಾರದ ಸ್ವಯತ್ತತಾ ಸಂಸ್ಥೆ)
ಡಾ. ಎಂ.ಹೆಚ್. ಮರಿಗೌಡ ರಸ್ತೆ, ಬೆಂಗಳೂರು–560 029.
ದೂರವಾಣಿ: 91-80-26560722 (Dir), 26094000 ಫ್ಯಾಕ್ಸ್: 080-26560723
No.: KMIO/SME(1)/Tender/CW/OT/242/2021-22 Date: 16.04.2021
ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಈ ಕೆಳಗಿನ ವೈದ್ಯಕೀಯ ಸಲಕರಣೆಗಳ ಪೂರೈಕೆಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

Sl. No.	Tender Notification No. & Date	Particulars
1.	No. KMIO/SME(1)/Tender/CW/OT/242/ 2021-22 dated: 16.04.2021 (1st Call)	Additional works for the BDA Complex OT 6 & 7 Scurb Room, Converting the Corridor in front into Sterile Corridor and other works at Major O.T. Complex, KMIO, Bengaluru.
2	No. KMIO/SME(1)/Tender/CW/NM/243/ 2021-22 dated: 16.04.2021 (1st Call)	Providing and Fixing of False Ceiling for Entrance Foyer of Old Cobalt Wing and at Ground and First Floors of Nuclear Medicine Department (New Building), KMIO, Bengaluru.
3	No. KMIO/SME(1)/Tender/OT/Cloths/244/ 2021-22 dated: 16.04.2021	Supply of Uniforms & Disposable Uniforms to Operation Theatre of KMIO, Bengaluru.
4	No. KMIO/SME(1)/Tender/OT/Pipeline/ 245/ 2021-22 dated: 16.04.2021 (1st Call)	Oxygen Pipeline to OT 1 to 5 in Ground Floor of KMIO, Bengaluru.
5	No. KMIO/SME(1)/Tender/M. Equip/130/ 2021-22 dated: 16.04.2021 (3rd Call)	Supply & Installation of Tissue Processor to KMIO, Bengaluru.
6	No. KMIO/SME(1)/Tender/M. Equip/224/ 2021-22 dated: 16.04.2021 (2nd Call)	Supply & Installation of Digital Pathology Scanner to KMIO, Bengaluru.

ಆನ್‌ಲೈನ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ ದಿನಾಂಕ: **19.04.2021 ರಿಂದ 26.04.2021**ರವರೆಗೆ. ಬಿಡ್ ದಾಖಲೆಗಳನ್ನು ಬಿಡ್ಡರ್‌ಗಳು ವೆಬ್‌ಸೈಟ್ **https://eproc.karnataka.gov.in** ನಿಂದ ನೋಡಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ–ಪೋರ್ಟಲ್ ಶುಲ್ಕ ರೂ. 500/–ನ್ನು ಪಾವತಿಸಿ ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ: **26.04.2021 ರಂದು ಮಧ್ಯಾಹ್ನ 3:00 ಗಂಟೆ**ಯವರೆಗೆ. ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರನ್ನು ಸ್ವೀಕರಿಸುವ / ತಿರಸ್ಕರಿಸುವ / ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.
ಸಹಿ/–
ನಿರ್ದೇಶಕರು
DIPR/DDU/170/2021-22
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಆಲೂಗಡ್ಡೆಯನ್ನು ಹಸಿಯಾಗಿ ಸಿಪ್ಪೆ ಸಹಿತ ಚೆನ್ನಾಗಿ ಅಗಿದು ನಿತ್ಯ ತಿನ್ನುತ್ತಿದ್ದರೆ ಮಲಬದ್ಧತೆಯು ನಿವಾರಣೆಯಾಗುವುದಲ್ಲದೆ ಹೊಟ್ಟೆಯ ಹುಣ್ಣೂ ಸಹ ನಿವಾರಣೆಯಾಗುತ್ತದೆ.

ಕೀಲು ನೋವಿಗೆ ಸರ್ಜರಿ ಮಾತ್ರ ಪರಿಹಾರ ಎಂದುಕೊಂಡಿದ್ದೀರಾ?

ಅತ್ಯುತ್ತಮ ಕಾನ್ಸ್ಟಿಟ್ಯೂಷನಲ್ ಹೋಮಿಯೋಕೇರ್ ಚಿಕಿತ್ಸೆಯ ಮೂಲಕ ಯಾವುದೇ ಅಡ್ಡಪರಿಣಾಮವಿಲ್ಲದೆ ನೈಸರ್ಗಿಕವಾಗಿ ಕೀಲು ನೋವಿನಿಂದ ಮುಕ್ತರಾಗಿರಿ.

ಡೌನ್‌ಲೋಡ್ ಹೋಮಿಯೋಕೇರ್ ಮೊಬೈಲ್ ಆ್ಯಪ್ ಮತ್ತು ಉಚಿತ ಚಿಕಿತ್ಸೆ ಪಡೆಯಿರಿ.*

ವೈಶಿಷ್ಟ್ಯಮಯ ಫಲಿತಾಂಶಗಳು

ಆಸ್ಟಿಯೊ ಆರ್ಥ್ರೈಟಿಸ್ | ಕತ್ತು ನೋವು
ಬೆನ್ನು ನೋವು | ಮಂಡಿ ನೋವು
ಸರ್ವಿಕಲ್ ಸ್ಪಾಂಡಿಲೋಸಿಸ್
ಡಿಸ್ಕ್ ಸಮಸ್ಯೆಗಳು
ರ್‍ಯುಮಟಾಯ್ಡ್ ಆರ್ಥ್ರೈಟಿಸ್
ಗೌಟ ಆರ್ಥ್ರೈಟಿಸ್

www.homeocare.in

HOMEOCARE INTERNATIONAL

ಹೋಮಿಯೋಕೇರ್® ಇಂಟರ್‌ನ್ಯಾಷನಲ್

ವರ್ಲ್ಡ್-ಕ್ಲಾಸ್ ಹೋಮಿಯೋಪತಿ

ಟೋಲ್ ಫ್ರೀ 1800-108-1212

50+ ಕ್ಲಿನಿಕ್ಸ್ – ಕರ್ನಾಟಕ । ತೆಲಂಗಾಣ । ಆಂಧ್ರಪ್ರದೇಶ । ತಮಿಳುನಾಡು । ಪುದುಚೆರಿ

ಶೀತಲ ಪೆಟ್ಟಿಗೆಯಲ್ಲಿ ತಾಯ್ತನದ ನಿರೀಕ್ಷೆಯಲ್ಲಿ..

ಡಾ. ವೈಶಾಲಿ ಎಂ.

ಮುಂಬೈನ 34ರ ಹರೆಯದ ಅವಿವಾಹಿತೆ, ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್ ರೋಶನಿ ಪಟೇಲ್ (ಹೆಸರು ಬದಲಾಯಿಸಲಾಗಿದೆ) ಈ ಕೋವಿಡ್ ಸಂದರ್ಭದಲ್ಲಿ ವಿಚಿತ್ರವಾದ, ಆದರೆ ಮಹತ್ವವಾದ ನಿರ್ಧಾರ ಕೈಗೊಂಡಳು. ಅಲ್ಲಿಯ ಫಲವಂತಿಕೆ ಕೇಂದ್ರದ ತಜ್ಞರ ಸಲಹೆ ಪಡೆದು ಹಾರ್ಮೋನ್ ಉತ್ಪಾದನೆ ಉತ್ತೇಜಿಸುವಂತಹ ಚುಚ್ಚುಮದ್ದು ತೆಗೆದುಕೊಂಡಳು; ಬಿಡುಗಡೆಗೆ ಸಿದ್ಧವಾದ ಅಂಡಾಣುಗಳನ್ನು ವೈದ್ಯಕೀಯ ಪ್ರಕ್ರಿಯೆ ಮೂಲಕ ಹೊರತೆಗೆದು ಅದನ್ನು 'ಅಂಡಾಣು ಕಾಪಿಡುವ ಕೇಂದ್ರ (ಎಗ್ ಫ್ರೀಜಿಂಗ್ ಕೇಂದ್ರ)'ದಲ್ಲಿ ಕಾದಿರಿಸಿದಳು. ಇದಕ್ಕಾಗಿ ಆಕೆ ಇದುವರೆಗೆ ಖರ್ಚು ಮಾಡಿದ್ದು ಸುಮಾರು ಎರಡೂವರೆ ಲಕ್ಷ ರೂಪಾಯಿ.

> ಕಳೆದೊಂದು ವರ್ಷದಿಂದ ಮದುವೆಯಾಗದ, ಮೂವತ್ತೈದರ ಆಜೂಬಾಜು ಇರುವಂತಹ ಹೆಣ್ಣುಮಕ್ಕಳು ಅಂಡಾಣುಗಳನ್ನು ಕಾದಿರಿಸುತ್ತಿರುವ ವಿದ್ಯಮಾನ ಜಾಸ್ತಿಯಾಗಿದೆ. ಇದಕ್ಕೆ ಕಾರಣಗಳೇನು?

ಇದು ರೋಶನಿಯೊಬ್ಬಳ ಕತೆ ಮಾತ್ರವಲ್ಲ, ಈ ಕೋವಿಡ್–19 ಸಂದರ್ಭದಲ್ಲಿ ಅಂಡಾಣುಗಳನ್ನು ಶೀತಲ ಕೇಂದ್ರಗಳಲ್ಲಿ ಕಾದಿರಿಸುವ ಪ್ರಕರಣಗಳು ಹೆಚ್ಚಾಗುತ್ತಿವೆ. ಮಹಾನಗರಗಳಲ್ಲಿ ವೀರ್ಯಾಣು ಬ್ಯಾಂಕ್‌ಗಳು ಸಾಕಷ್ಟಿದ್ದರೂ ಅಂಡಾಣುಗಳನ್ನು ಈ ರೀತಿ ಕಾದಿರಿಸುವ ಕೇಂದ್ರಗಳು ಬೆರಳೆಣಿಕೆಯಲ್ಲಿವೆ. ಹೆಚ್ಚಾಗಿ ಕ್ಯಾನ್ಸರ್ ಅಥವಾ ಲೂಪಸ್‌ನಂತಹ ಕೆಲವು ಕಾಯಿಲೆಗಳಿಗೆ ಚಿಕಿತ್ಸೆ ಪಡೆಯುತ್ತಿರುವವರು ಆರೋಗ್ಯ ಸುಧಾರಿಸಿದ ನಂತರ ಮಗುವನ್ನು ಪಡೆಯುವ ಸಲುವಾಗಿ ಈ ರೀತಿ ಅಂಡಾಣುಗಳನ್ನು ಮುನ್ನೆಚ್ಚರಿಕೆ ಕ್ರಮವಾಗಿ ಕಾದಿರಿಸುವ ಪರಿಪಾಠವಿತ್ತು. ಆದರೆ ಈಗ ಕೋವಿಡ್ ತಂದಿರುವ ಆತಂಕ, ಅನಿಶ್ಚಿತ ಪರಿಸ್ಥಿತಿಯಿಂದಾಗಿ ಉಳ್ಳವರು ಇಂತಹ ವಿಧಾನಗಳ ಮೊರೆ ಹೋಗುತ್ತಿರುವುದು ಸ್ಪಷ್ಟ.

ರೋಶನಿಯನ್ನು ಈ ಬಗ್ಗೆ ಪ್ರಶ್ನಿಸಿದರೆ, 'ಓದು, ಉದ್ಯೋಗ ಎಂದು ಈಗಾಗಲೇ 34 ದಾಟಿಬಿಟ್ಟಿದ್ದೇನೆ. ಕಳೆದ ವರ್ಷ ನಾನು ಮೆಚ್ಚಿದ ಹುಡುಗನ ಜೊತೆ ಮದುವೆ ನಿಶ್ಚಯವಾಗಿತ್ತು. ಆದರೆ ಕೋವಿಡ್‌ನಿಂದಾಗಿ ಆತ ಉದ್ಯೋಗ ಕಳೆದುಕೊಂಡಿದ್ದು, ಮದುವೆಯಾಗಲು ಒಪ್ಪುತ್ತಿಲ್ಲ. ಸದ್ಯ ಇನ್ನೊಬ್ಬನನ್ನು ಹುಡುಕುವ ಮನಸ್ಥಿತಿಯಲ್ಲಿ ನಾನಿಲ್ಲ. ನನಗೂ ವಯಸ್ಸಾಗುತ್ತಿದೆ. ಸಹೋದರ ತಾನು, ತನ್ನ ಸಂಸಾರ ಎಂದು ಆರಾಮಾಗಿದ್ದಾನೆ. ನಾನೇನು ಮಾಡಲಿ ಹೇಳಿ? ಹೀಗಾಗಿ ಮುನ್ನೆಚ್ಚರಿಕೆ ಕ್ರಮವಾಗಿ ಅಂಡಾಣು ಫ್ರೀಜ್ ಮಾಡಿಸಿದ್ದೇನೆ' ಎನ್ನುತ್ತಾಳೆ.

ಹೆಚ್ಚುತ್ತಿರುವ 'ಎಗ್ ಫ್ರೀಜಿಂಗ್'

ಅಂಡಾಣು ಕಾದಿರಿಸುವವರು ಯಾರು?

ಇದುವರೆಗೆ ನಲ್ವತ್ತರ ಅಂಚಿನಲ್ಲಿರುವವರು, ಎಲ್ಲಾ ಬಗೆಯ ಚಿಕಿತ್ಸೆಯ ನಂತರವೂ ಮಕ್ಕಳಾಗದೇ ನಿರಾಶೆ ಹೊಂದಿದವರು ಫಲವಂತಿಕೆ ಚಿಕಿತ್ಸಾ ಕೇಂದ್ರಗಳಲ್ಲಿ ಐವಿಎಫ್‌ಗೆಂದು ಇಂತಹ ಪ್ರಕ್ರಿಯೆ ಮಾಡಿಸಿಕೊಳ್ಳುವುದು ಸಾಮಾನ್ಯವಾಗಿತ್ತು. ಆದರೆ ಕಳೆದೊಂದು ವರ್ಷದಿಂದ ಮದುವೆಯಾಗದ, ಮೂವತ್ತೈದರ ಆಜೂಬಾಜು ಇರುವಂತಹ ಹೆಣ್ಣುಮಕ್ಕಳು ಕೂಡ ಐವಿಎಫ್ ಕೇಂದ್ರ, ಅಂಡಾಣು ಕಾದಿರಿಸುವ ಕೇಂದ್ರಗಳನ್ನು ಎಡತಾಕುವುದು ಜಾಸ್ತಿಯಾಗಿದೆ ಎನ್ನುತ್ತಾರೆ ನನ್ನ ಸಹೋದ್ಯೋಗಿಗಳು. ದೆಹಲಿ, ಮುಂಬೈ, ಬೆಂಗಳೂರಿನಂತಹ ದೊಡ್ಡ ನಗರಗಳಲ್ಲಿ ತಮ್ಮ ಉದ್ಯೋಗ, ಹಣ ಗಳಿಕೆಗೆ ಹೆಚ್ಚು ಗಮನ ನೀಡಿದ ಹೆಣ್ಣುಮಕ್ಕಳ ಸಂಖ್ಯೆ ಜಾಸ್ತಿ ಇದೆ. ಅದರಲ್ಲೂ ಮನರಂಜನೆ, ಫ್ಯಾಷನ್, ಹಣಕಾಸು ವಲಯಗಳಲ್ಲಿ ಉದ್ಯೋಗ ನಿರ್ವಹಿಸುತ್ತಿರುವ ಹೆಣ್ಣುಮಕ್ಕಳು ಸದ್ಯಕ್ಕೆ ತಮ್ಮ ವೃತ್ತಿಯ ಬಗ್ಗೆ, ಮದುವೆ, ಸಂಸಾರದ ಕುರಿತು ಆತಂಕಗೊಂಡಿರುವುದು ಸಹಜ. ಸಿನಿಮಾ, ಟಿವಿ ಧಾರಾವಾಹಿ ಎಂದು ಮನರಂಜನೆ ಉದ್ಯಮದಲ್ಲಿರುವ ಸೆಲೆಬ್ರಿಟಿಗಳೂ ಕೂಡ ರಿಪ್ರೊಡಕ್ಟಿವ್ ಕೇಂದ್ರಗಳಿಗೆ ಎಡತಾಕುವುದು ಗುಟ್ಟಾಗೇನೂ ಉಳಿದಿಲ್ಲ.

> ಅಂಡಾಣುವನ್ನು ಕಾದಿರಿಸುವ ಮುನ್ನ ತಜ್ಞರ ಜೊತೆ ಮಾತನಾಡುವುದು ಸೂಕ್ತ. ವಯಸ್ಸು ಜಾಸ್ತಿಯಾದಷ್ಟೂ ಅಂಡಾಣುವಿನ ಗುಣಮಟ್ಟ ಕಡಿಮೆಯಾಗುವುದಲ್ಲದೇ, ಮುಂದೆ ಇದನ್ನು ಬಳಸಿ ಮಗು ಪಡೆಯುವ ಸಾಧ್ಯತೆಯೂ ಕಡಿಮೆಯಾಗುತ್ತ ಹೋಗುತ್ತದೆ. 35 ವರ್ಷಕ್ಕಿಂತ ಕಡಿಮೆ ವಯಸ್ಸಿನಲ್ಲಿ ಇದನ್ನು ಕಾದಿರಿಸುವುದು ಉತ್ತಮ.

ಕಳೆದ 10–15 ವರ್ಷಗಳಿಂದ ಈ ಅಂಡಾಣು ಕಾದಿರಿಸುವಿಕೆ ತಂತ್ರಜ್ಞಾನದಲ್ಲಿ ಅಗಾಧ ಬೆಳವಣಿಗೆ ಸಾಧಿಸಲಾಗಿದೆ. ಇದರ ಪ್ರಕ್ರಿಯೆಯೂ ಸರಳ. 15 ದಿನಗಳಿಗಿಂತ ಮುಂಚೆ ಹಾರ್ಮೋನ್ ಉತ್ತೇಜಿಸುವ ಚುಚ್ಚುಮದ್ದು ನೀಡಲಾಗುವುದು. ಇದರಿಂದ ಅಂಡಾಣುಗಳು ಹೆಚ್ಚಿನ ಸಂಖ್ಯೆಯಲ್ಲಿ ಬೆಳವಣಿಗೆ ಹೊಂದುತ್ತವೆ. ನಂತರ ಸ್ಕ್ಯಾನಿಂಗ್ ಮೂಲಕ ಅಂಡಾಣು ಬೆಳವಣಿಗೆ ಗಮನಿಸಿ ಸೂಜಿಯನ್ನು ಜನನಾಂಗದ ಮೂಲಕ ಹಾಯಿಸಿ ಅಂಡಾಶಯದಿಂದ ಅಂಡಾಣುಗಳನ್ನು ಹೊರ ತೆಗೆಯಲಾಗುವುದು. ಉತ್ತಮ ಫಲಿತಾಂಶಕ್ಕಾಗಿ 15– 20 ಅಂಡಾಣುಗಳನ್ನು 3–4 ಸೈಕಲ್‌ಗಳಲ್ಲಿ ಸಂಗ್ರಹಿಸಲಾಗುವುದು. ಇವೆಲ್ಲ ಪ್ರಕ್ರಿಯೆಗೆ ಅಂದಾಜು ಒಂದೂವರೆಯಿಂದ ಎರಡು ಲಕ್ಷ ರೂಪಾಯಿ ಖರ್ಚು ತಗುಲಬಹುದು. ನಂತರ ಶೀತಲ ಪೆಟ್ಟಿಗೆಗಳಲ್ಲಿ ಸಂಗ್ರಹಿಸಲು ಪ್ರತ್ಯೇಕವಾಗಿ ವೆಚ್ಚ ಭರಿಸಬೇಕು. ದೀರ್ಘಾವಧಿ ಇಡುವುದಾದರೆ ಖರ್ಚು ಹೆಚ್ಚು. ಇದು ವರ್ಷಕ್ಕೆ ₹ 50 ಸಾವಿರದಿಂದ ಒಂದು ಲಕ್ಷದವರೆಗೂ ಇದೆ. ಕೆಲವು ಕೇಂದ್ರಗಳು ₹ 20– 30 ಸಾವಿರ ವಿಧಿಸುವುದೂ ಇದೆ. ಕೆಲವು ಕೇಂದ್ರಗಳು ಪ್ಯಾಕೇಜ್ ಕೂಡ ನೀಡುತ್ತವೆ.

ವಿದೇಶಗಳಲ್ಲಿ ಇದೊಂದು ಉದ್ಯಮ

ಭಾರತದಲ್ಲೇ ಈ ವಿದ್ಯಮಾನವಿರುವಾಗ, ಅಮೆರಿಕ, ಯೂರೋಪ್‌ನ ದೇಶಗಳಲ್ಲಿ ಇದು ಹೇಗಿರಬೇಡ! ಅಲ್ಲಿ ಮಹಿಳೆಯರು ಉನ್ನತ ಶಿಕ್ಷಣ, ಉದ್ಯೋಗದಲ್ಲಿ ಉನ್ನತ ಸ್ಥಾನದ ಮಹತ್ವಾಕಾಂಕ್ಷೆಯ ಜೊತೆಗೆ ಸರಿಯಾದ ಸಂಗಾತಿ ಸಿಗುವವರೆಗೂ ಕಾಯುವ ಪರಿಪಾಠವಿದೆ. ಆದರೆ ಮಕ್ಕಳು ಬೇಕು ಎಂಬ ಆಸೆ ಬಹುತೇಕ ಎಲ್ಲರಲ್ಲೂ ಇರುವುದು ಸಹಜವೇ. ಹೀಗಾಗಿ ಅಂಡಾಣು ಕಾದಿರಿಸುವ ಮಹಿಳೆಯರ ಸಂಖ್ಯೆ ಅಲ್ಲಿ ಹೆಚ್ಚಿನ ಪ್ರಮಾಣದಲ್ಲಿದೆ. ಹಾಗೆಯೇ ಇದೊಂದು ಉದ್ಯಮವಾಗೂ ಹೊರಹೊಮ್ಮಿದೆ. ಜೊತೆಗೆ ಗೂಗಲ್, ಆ್ಯಪಲ್, ಫೇಸ್‌ಬುಕ್‌ನಂತಹ ಕಂಪನಿಗಳು ತಮ್ಮ ಮಹಿಳಾ ಉದ್ಯೋಗಿಗಳಿಗೆ ಅಂಡಾಣು ಕಾದಿರಿಸುವಿಕೆಯನ್ನು ಪ್ಯಾಕೇಜ್ ಭಾಗವಾಗಿ ನೀಡುತ್ತಿವೆ. ಮಕ್ಕಳನ್ನು ಹೊಂದುವ ತಮ್ಮ ಸಾಮರ್ಥ್ಯವನ್ನು ತ್ಯಾಗ ಮಾಡದೆ ವೃತ್ತಿಯಲ್ಲಿ ಎಲ್ಲಾ ರೀತಿಯ ಸಾಧನೆ ಮಾಡುವುದಕ್ಕೆ ಇದೊಂದು ಕೊಡುಗೆ ಎಂಬುದು ಹಲವರ ತರ್ಕ.

ಅಂಡಾಣು ಮಾತ್ರವಲ್ಲ, ಅಂಡಾಶಯದ ಭಾಗವನ್ನು ಕೂಡ ಶೀತಲೀಕರಿಸಿ ಕಾದಿರಿಸುವ ತಂತ್ರಜ್ಞಾನವೂ ಬಂದಿದ್ದು, ಇದು ಭಾರತದಲ್ಲಿ ಅಷ್ಟು ಅಭಿವೃದ್ಧಿ ಹೊಂದಿಲ್ಲ.

'ಅಂಡಾಣು ಕಾದಿರಿಸಿದ ನಂತರ ಒತ್ತಡ ಸಾಕಷ್ಟು ಕಮ್ಮಿಯಾಗಿದೆ. ಸಂಗಾತಿ ಸಿಗದಿದ್ದರೂ ವೀರ್ಯ ದಾನ ಪಡೆದು ಮಗು ಮಾಡಿಕೊಳ್ಳಬಹುದು ಎಂಬ ಪ್ಲ್ಯಾನ್ ಬಿ ಕೂಡ ಇದೆ' ಎನ್ನುವ ರೋಶನಿ ಮಾತಿನಲ್ಲಿ ಆತ್ಮವಿಶ್ವಾಸ ತುಂಬಿ ತುಳುಕುತ್ತಿತ್ತು.

ಹಾಗಂತ ಅಂಡಾಣು ಕಾದಿರಿಸಿದರೂ ಮುಂದೆ ಅದರಿಂದ ತಾಯ್ತನದ ಸುಖ ಅನುಭವಿಸುವ ಸಾಧ್ಯತೆ ನೂರಕ್ಕೆ ನೂರು ಗ್ಯಾರಂಟಿ ಏನಿಲ್ಲ. ಆದರೆ ನೈಸರ್ಗಿಕವಾಗಿ ಪಡೆಯುವ ಅವಕಾಶವಿಲ್ಲದಿದ್ದಾಗ ಇದೊಂದು ವಿಧಾನವನ್ನು ಯತ್ನಿಸಬಹುದು ಎಂಬ ಆಶಾಕಿರಣವೇ ಸಾಕು ಎಂಬ ಭಾವನೆ ಹಲವರಲ್ಲಿದೆ.

ವಿವಾಹಿತನನ್ನು ಮದುವೆಯಾಗಬಹುದೇ?

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

27ರ ವಿಚ್ಛೇದಿತ ಮಹಿಳೆ. ನಾನು ಪ್ರೀತಿಸುತ್ತಿರುವ ವ್ಯಕ್ತಿಗೆ ಮದುವೆಯಾಗಿದೆ. 'ನಿನ್ನನ್ನೂ ಮದುವೆಯಾಗಿ ಚೆನ್ನಾಗಿ ನೋಡಿಕೊಳ್ಳುತ್ತೇನೆ, ಮನೆಯವರನ್ನೂ ಒಪ್ಪಿಸುತ್ತೇನೆ, ಎಲ್ಲರೂ ಒಟ್ಟಿಗೆ ಇರೋಣ' ಎನ್ನುತ್ತಿದ್ದಾರೆ. ನನಗೆ ಅವರ ಮೇಲೆ ನಂಬಿಕೆಯಿದೆ. ಆದರೆ ಮನೆಯವರು ಒಪ್ಪುತ್ತಿಲ್ಲ. ಏನು ಮಾಡಬೇಕೆಂದು ತಿಳಿಯುತ್ತಿಲ್ಲ. ಪರಿಹಾರ ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ವಿಚ್ಛೇದಿತರಾಗಿ ಸಂಗಾತಿಯ ಹುಡುಕಾಟದಲ್ಲಿರುವ ನಿಮ್ಮ ಮನಸ್ಥಿತಿಯನ್ನು ಅರ್ಥ ಮಾಡಿಕೊಳ್ಳುತ್ತಲೇ ಕೆಲವು ವಾಸ್ತವಾಂಶಗಳ ಕಡೆಗೆ ನಿಮ್ಮ ಗಮನ ಸೆಳೆಯುತ್ತೇನೆ. ನಿಮ್ಮ ಪ್ರಿಯಕರನ ಪತ್ನಿಯ ಜೊತೆ ನೇರವಾಗಿ ಮಾತನಾಡಿ ಅವರ ಒಪ್ಪಿಗೆ ಪಡೆದಿದ್ದೀರಾ? ಆ ಮಹಿಳೆಯ ಸ್ಥಾನದಲ್ಲಿ ನೀವಿದ್ದಿದ್ದರೆ ಪತಿಗೆ ಎರಡನೇ ಮದುವೆಯಾಗಲು ಒಪ್ಪಿಗೆ ಕೊಡುತ್ತಿದ್ದಿರಾ? ಇಸ್ಲಾಂ ಧರ್ಮದವರ ಹೊರತಾಗಿ ಉಳಿದವರಿಗೆ ಭಾರತದಲ್ಲಿ ಬಹುಪತ್ನಿತ್ವ ಕಾನೂನುಬಾಹಿರ ಎನ್ನುವುದು ಗೊತ್ತಿದೆಯೇ? ಹಾಗೊಮ್ಮೆ ನೀವು ಮದುವೆಯಾದರೆ ನಿಮ್ಮ ಪತಿಗೆ ಶಿಕ್ಷೆಯಾಗುವುದಲ್ಲದೆ ನಿಮಗೆ ಪತ್ನಿಯ ಸ್ಥಾನವೂ ದೊರಕುವುದಿಲ್ಲ. ಕಾನೂನುಬದ್ಧವಾಗಿ ಮದುವೆಯಾಗದೆ ಜೊತೆಯಲ್ಲಿದ್ದರೆ ನಿಮಗೆ ಸಿಗುವುದು ಸಾಮಾಜಿಕ ಮನ್ನಣೆಯಿಲ್ಲದ ಉಪಪತ್ನಿಯ ಸ್ಥಾನ ಮಾತ್ರ. ಇದು ನಿಮಗೆ ಒಪ್ಪಿಗೆಯೇ? ನಿಮಗೆ ಹುಟ್ಟುವ ಮಕ್ಕಳಿಗೆ ಅಪ್ಪನ ಹೆಸರನ್ನು ಹೇಗೆ ಕೊಡುತ್ತೀರಿ? ಇನ್ನೂ 27 ವರ್ಷದವರಾಗಿರುವ ನೀವು ಹತಾಶರಾಗಿ ಇಂತಹ ಅವಾಸ್ತವ ಆಕರ್ಷಣೆಗೆ ಒಳಗಾಗುವುದರ ಬದಲು ವಿದ್ಯೆ, ಉದ್ಯೋಗ, ಹವ್ಯಾಸಗಳ ಮೂಲಕ ಗಟ್ಟಿಯಾದ ಸ್ವಂತ ವ್ಯಕ್ತಿತ್ವನ್ನು ರೂಪಿಸಿಕೊಂಡರೆ ಹೇಗಿರುತ್ತದೆ? ಮುಂದೆ ನಿಮ್ಮನ್ನು ಪ್ರೀತಿಸುವ, ಗೌರವಿಸುವ, ಸಾಮಾಜಿಕ ಸ್ಥಾನಮಾನ ನೀಡುವ ಜೊತೆಗಾರ ಸಿಗಲೇಬೇಕಲ್ಲವೇ?

- **23 ವರ್ಷದ ಯುವಕ. ಪೊಲೀಸ್ ಕಾನ್‌ಸ್ಟೇಬಲ್. ನಾನು ಪ್ರೀತಿಸುತ್ತಿರುವ ಹುಡುಗಿ ಬೇರೆ ಜಾತಿಯವಳಾದ್ದರಿಂದ ಇಬ್ಬರ ಮನೆಯಲ್ಲಿಯೂ ಒಪ್ಪುತ್ತಿಲ್ಲ. ಇದರಿಂದ ನೆಮ್ಮದಿ ಕಳೆದುಕೊಂಡು ಸ್ಪರ್ಧಾತ್ಮಕ ಪರೀಕ್ಷೆಗೆ ಓದಲಾಗುತ್ತಿಲ್ಲ. ಹಾಗಾಗಿ ನನ್ನ ಆಸೆಗಳೆಲ್ಲಾ ಮಣ್ಣುಪಾಲಾಗುತ್ತದೆ ಎನ್ನುವ ಭಯ. ಪರಿಹಾರವೇನು?**

ಹೆಸರು, ಊರು ತಿಳಿಸಿಲ್ಲ

ನೀವೊಬ್ಬ ಪೊಲೀಸ್ ಕಾನ್‌ಸ್ಟೇಬಲ್ ಅಲ್ಲವೇ? ಮುಂದೆ ಸಬ್‌ಇನ್‌ಸ್ಪೆಕ್ಟರ್ ಆಗುತ್ತೀರಿ. ಕಾನೂನುಬದ್ಧವಾಗಿ ಮದುವೆಗೆ ಅರ್ಹರಿರುವ ಇಬ್ಬರು ಯುವಪ್ರೇಮಿಗಳು ನಿಮ್ಮ ಸಹಾಯ ಕೇಳಿದರೆ ಪೊಲೀಸ್ ಆಗಿ ಏನು ಮಾಡುತ್ತೀರಿ? ಅದನ್ನೇ ನೀವೂ ಮಾಡಿ. ಕುಟುಂಬದವರ ಸಂಬಂಧ ಕಡಿದುಕೊಳ್ಳದೆ ಮುಂದುವರೆಸಿ. ನಿಧಾನವಾಗಿ ಅವರ ಮನಸ್ಸು ಬದಲಾಗುತ್ತದೆ.

- **50 ವರ್ಷದ ಪುರುಷ. ನನಗೆ ಮುಖಮೈಥುನ ಮತ್ತು ಹೆಚ್ಚಿನ ಲೈಂಗಿಕಸುಖ ಬೇಕೆನ್ನಿಸುತ್ತದೆ. ಆದರೆ ಹೆಂಡತಿ ಸಹಕರಿಸುತ್ತಿಲ್ಲ. ಸಲಹೆ ನೀಡಿ.**

ಹೆಸರಿಲ್ಲ, ಗದಗ

ನಿಮಗೆ ಹೆಚ್ಚಿನ ಮತ್ತು ವೈವಿಧ್ಯಮಯ ಲೈಂಗಿಕ ಸುಖ ಬೇಕೆನ್ನಿಸುವುದು ಸಹಜ. ಇದನ್ನು ಪತ್ನಿಯಿಂದ ನಿರೀಕ್ಷಿಸುವುದಾದರೆ ಅದು ಅವರಿಗೂ ಆಕರ್ಷಕ ಅನ್ನಿಸಬೇಕಲ್ಲವೇ? ಅದಕ್ಕಾಗಿ ಅವರ ಜೊತೆ ಮಾತನಾಡಿದ್ದೀರಾ? ಅವರ ಆಸಕ್ತಿ, ಆತಂಕಗಳ ಕುರಿತಾಗಿ ಗೌರವದಿಂದ ಚರ್ಚೆ ಮಾಡಿದ್ದೀರಾ? ಲೈಂಗಿಕತೆಯ ಹೊರತಾಗಿ ಇಬ್ಬರ ನಡುವಿನ ಆತ್ಮೀಯತೆ ಹೇಗಿದೆ? ಇಬ್ಬರೂ ಯುವಪ್ರೇಮಿಗಳಂತಾದರೆ ಲೈಂಗಿಕ ಸುಖ ಹೆಚ್ಚಾಗಬಹುದಲ್ಲವೇ? ಹಾಗಾಗುವುದು ಹೇಗೆ ಎಂದು ಯೋಚಿಸಿ ಕಾರ್ಯಪ್ರವೃತ್ತರಾಗಿ. ನಂತರ ನಿಮಗೆ ಬೇಕಾದ ಎಲ್ಲಾ ಸುಖವೂ ದೊರೆಯುತ್ತದೆ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ.
bhoomika@prajavani.co.in

ವೈದ್ಯಕೀಯ ಗರ್ಭಪಾತ ಮಹಿಳೆಯರಿಗೆ ಎಷ್ಟು ಪ್ರಯೋಜನ?

ಡಾ. ರತ್ನಮಾಲಾ ಎಂ. ದೇಸಾಯಿ, ಸುಜಾತಾ ಎಸ್. ಆನಿಶೆಟ್ಟರ

ಐದು ತಿಂಗಳ ಗರ್ಭಿಣಿ ಲಕ್ಷ್ಮಿ ತಪಾಸಣೆಗೆಂದು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋದಾಗ ವೈದ್ಯರು ಸ್ಕ್ಯಾನ್ ಮಾಡಿಸಿಕೊಳ್ಳಲು ಸಲಹೆ ನೀಡಿದರು. ಸ್ಕ್ಯಾನ್ ಮಾಡಿಸಿದಾಗ 26 ವಾರಗಳ ಭ್ರೂಣದಲ್ಲಿ ಅನನ್‌ಸೆಫೆಲಿ (ಮಿದುಳು ಬೆಳವಣಿಗೆಯಾಗದೇ ಇರುವ) ನ್ಯೂನ್ಯತೆ ಇದೆಯೆಂದು ವರದಿ ಬಂತು. ಅನನ್‌ಸೆಫೆಲಿ ನ್ಯೂನ್ಯತೆ ಹೊಂದಿದ ಮಗು ಜೀವಂತವಾಗಿರುವುದಿಲ್ಲ ಮತ್ತು 20 ವಾರದ ಅವಧಿ ಮೀರಿರುವುದರಿಂದ ಇದನ್ನು ಗರ್ಭಪಾತ ಕೂಡ ಮಾಡಲು ಸಾಧ್ಯವಿಲ್ಲ ಎಂದು ಸ್ತ್ರೀ ರೋಗ ಹಾಗೂ ಪ್ರಸೂತಿ ವೈದ್ಯರು ಹೇಳಿದಾಗ ಹಳ್ಳಿಯವಳಾದ ಲಕ್ಷ್ಮಿಗೆ ಆಘಾತವಾಯಿತು. ಆದರೆ ಕಳೆದ ಮಾರ್ಚ್‌ನಲ್ಲಿ ಅಂಗೀಕರಿಸಲಾಗಿರುವ ಗರ್ಭಪಾತ ತಿದ್ದುಪಡಿ ಕಾಯ್ದೆಯಿಂದಾಗಿ ಇಂತಹ ನ್ಯೂನ್ಯತೆ ಹೊಂದಿದ ಭ್ರೂಣವನ್ನು ತೆಗೆಸಲು ಯಾವುದೇ ನಿರ್ಬಂಧ ಇಲ್ಲ. ಆದರೆ ರಾಜ್ಯ ವೈದ್ಯಕೀಯ ಮಂಡಳಿ ಈ ಗರ್ಭಪಾತ ಮಾಡುವ ಅಗತ್ಯವಿದೆ ಎಂದು ದೃಢೀಕರಿಸಬೇಕಾಗುತ್ತದೆ.

* * *

ರಿಯಾ ತನ್ನ ಸ್ನೇಹಿತನೊಂದಿಗೆ ಲಿವ್–ಇನ್ ಸಂಬಂಧದಲ್ಲಿರುವ ಯುವತಿ. ಮುನ್ನೆಚ್ಚರಿಕೆ ವಹಿಸಿದರೂ ಗರ್ಭ ನಿರೋಧಕದ ವೈಫಲ್ಯದಿಂದ ಆಕೆಗೆ ಗರ್ಭ ನಿಂತಿತು. ಆದರೆ ಅವಳು ಅವಿವಾಹಿತಳಾಗಿರುವುದರಿಂದ ವೈದ್ಯಕೀಯ ಗರ್ಭಪಾತ ಕಾಯ್ದೆಯ ಪ್ರಕಾರ ಗರ್ಭಪಾತಕ್ಕೆ ಅರ್ಹಳಲ್ಲ ಎಂದು ವೈದ್ಯರು ಹೇಳಿ ಕಳಿಸಿದ್ದರು. ಈಗ ಹೊಸ ಕಾಯ್ದೆ ತಿದ್ದುಪಡಿಯಲ್ಲಿ 'ವಿವಾಹಿತ ಮಹಿಳೆ' ಎಂಬ ಕರಾರನ್ನು ತೆಗೆದು ಹಾಕಲಾಗಿದೆ. ಹೀಗಾಗಿ ಗರ್ಭನಿರೋಧಕ ವೈಫಲ್ಯದಿಂದ ಗರ್ಭಿಣಿಯಾದ ಯಾವುದೇ ಮಹಿಳೆ ಕಾನೂನುಬದ್ಧವಾಗಿ ಗರ್ಭಪಾತ ಮಾಡಿಸಿಕೊಳ್ಳಬಹುದು.

* * *

16 ವರ್ಷದ ಹುಡುಗಿಯೊಬ್ಬಳು ಅತ್ಯಾಚಾರಕ್ಕೆ ಒಳಗಾದಳು. ಹೆದರಿಕೆಯಿಂದ ಈ ವಿಷಯವನ್ನು ತನ್ನ ತಾಯಿಗೆ ಹೇಳದೆ ಮುಚ್ಚಿಟ್ಟಳು. ಕೆಲವು ತಿಂಗಳುಗಳ ನಂತರ ತಾಯಿ ಮಗಳಲ್ಲಾದ ದೈಹಿಕ ಬದಲಾವಣೆಗಳನ್ನು ಗಮನಿಸಿ ಹತ್ತಿರದ ಆಸ್ಪತ್ರೆಗೆ ಕರೆದುಕೊಂಡು ಹೋದಳು. ತಪಾಸಣೆ ಮಾಡಿದಾಗ ಆವಳು 22 ವಾರ ತುಂಬಿದ ಗರ್ಭಿಣಿ ಎಂದು ಗೊತ್ತಾಯಿತು. 1971ರ ವೈದ್ಯಕೀಯ ಗರ್ಭಪಾತ ಕಾಯ್ದೆ ಅಡಿ ಗರ್ಭಧಾರಣೆ 20 ವಾರಕ್ಕಿಂತ ಹೆಚ್ಚಿದ್ದರೆ ಗರ್ಭಪಾತ ಮಾಡಲು ಸಾಧ್ಯವಿಲ್ಲ. ಆದರೆ ಹೊಸ ತಿದ್ದುಪಡಿಯಿಂದ ಇಂಥವರು ಕಾನೂನುಬದ್ಧವಾಗಿ ಸುರಕ್ಷಿತ ಗರ್ಭಪಾತ ಸೇವೆಯನ್ನು ಪಡೆಯಬಹುದು. ಅತ್ಯಾಚಾರಕ್ಕೆ ಒಳಗಾದವರು, ನಿಷಿದ್ಧವಾದ ರಕ್ತಸಂಬಂಧಿಗಳೊಡನೆ ಸಂಭೋಗಕ್ಕೆ ಬಲಿಪಶುವಾದವರು ಮತ್ತು ಇತರ ದುರ್ಬಲ ಮಹಿಳೆಯರು (ವಿಭಿನ್ನ ಸಾಮರ್ಥ್ಯವುಳ್ಳ ಮಹಿಳೆಯರು) ಮೊದಲಾದವರಿಗೆ ಈ ತಿದ್ದುಪಡಿ ಕಾಯ್ದೆಯಲ್ಲಿ 20 ವಾರದಿಂದ 24 ವಾರದವರೆಗೆ ಗರ್ಭಪಾತ ಅವಧಿ ಹೆಚ್ಚಿಸಲಾಗಿದೆ.

* * *

1971 ರಲ್ಲಿ ಜಾರಿಯಾದ ವೈದ್ಯಕೀಯ ಗರ್ಭಪಾತ ಕಾಯ್ದೆಯು ಭಾರತದಲ್ಲಿ ಗರ್ಭಪಾತವನ್ನು ಕಾನೂನುಬದ್ಧಗೊಳಿಸಿತು. ಈ ಕಾಯ್ದೆ ಬರುವ ಮೊದಲು ಎಲ್ಲ ಮಹಿಳೆಯರು ಯೋಜಿತವಲ್ಲದ/ ಬೇಡವಾದ ಗರ್ಭಧಾರಣೆಯನ್ನು ತೆಗೆಸಲು ಅಸುರಕ್ಷಿತವಾಗಿ ಕಾನೂನು ಬಾಹಿರ ಗರ್ಭಪಾತಕ್ಕೆ ಒಳಗಾಗುತ್ತಿದ್ದರು. ಇದರಿಂದ ಸೋಂಕು, ತೀವ್ರವಾದ ಅಸ್ವಸ್ಥತೆ ಮತ್ತು ಇನ್ನು ಕೆಲವೊಮ್ಮೆ ಜೀವವನ್ನೇ ಕಳೆದುಕೊಳ್ಳುತ್ತಿದ್ದರು. ತಾಯಿ ಜೀವಕ್ಕೆ ಅಪಾಯವಿದ್ದರೆ; ಇದರಿಂದ ತಾಯಿಗೆ ದೈಹಿಕ ಅಥವಾ ಮಾನಸಿಕ ಆರೋಗ್ಯಕ್ಕೆ ತೀವ್ರವಾದ ಧಕ್ಕೆ ಉಂಟಾಗುತ್ತಿದ್ದರೆ; ಇದರಿಂದ ಹುಟ್ಟಿದ ಮಗು ತೊಂದರೆಗಳಿಂದ ಮುಂದೆ ದೈಹಿಕ ಅಥವಾ ಮಾನಸಿಕ ನ್ಯೂನ್ಯತೆಗಳಿಗೆ ಒಳಗಾಗಿ ವಿಕಲತೆ ಹೊಂದುವುದಿದ್ದರೆ; ಅತ್ಯಾಚಾರಕ್ಕೆ ಒಳಗಾಗಿ ಗರ್ಭಿಣಿಯಾಗಿದ್ದರೆ ಮತ್ತು ಗರ್ಭನಿರೋಧಕ ವೈಫಲ್ಯದಿಂದ ವಿವಾಹಿತ ಮಹಿಳೆ ಗರ್ಭಿಣಿಯಾದರೆ ವೈದ್ಯಕೀಯ ಗರ್ಭಪಾತಕ್ಕೆ ಅನುಮತಿ ಇತ್ತು.

ಕಳೆದ ಮಾರ್ಚ್ 16ರಂದು ಈ ಕಾಯ್ದೆಗೆ ತಂದ ತಿದ್ದುಪಡಿಗಳಿಗೆ ಅಂಕಿತ ದೊರಕಿದ್ದು, ಗರ್ಭಪಾತ ಅವಶ್ಯವಿರುವ ಮಹಿಳೆಯರಿಗೆ ಸುರಕ್ಷಿತ ಗರ್ಭಪಾತಕ್ಕೆ ಅವಕಾಶ ಕಲ್ಪಿಸಿಕೊಟ್ಟಿದೆ. ಇದಕ್ಕೆ ರಾಜ್ಯ ವೈದ್ಯಕೀಯ ಮಂಡಳಿಯ ಅನುಮತಿ ಅವಶ್ಯ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

(ಎಲ್ಲ ಹೆಸರುಗಳನ್ನು ಬದಲಾಯಿಸಲಾಗಿದೆ)

(ಡಾ. ರತ್ನಮಾಲಾ ಎಮ್. ದೇಸಾಯಿ: ಅಧ್ಯಕ್ಷರು, ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ ಮತ್ತು ಪ್ರಾಂಶುಪಾಲರು, ಎಸ್‌ಡಿಎಂ ವೈದ್ಯಕೀಯ ಮಹಾವಿದ್ಯಾಲಯ, ಧಾರವಾಡ

ಸುಜಾತ ಎಸ್. ಆನಿಶೆಟ್ಟರ: ಶಾಖಾ ವ್ಯವಸ್ಥಾಪಕರು, ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ, ಧಾರವಾಡ ಶಾಖೆ)

ಚಿಕನ್ ಕೊಂಡಾಟಂ, ಮೊಟ್ಟೆ ಉರುವಲ್

ನಳಪಾಕ

ರಂಜಿತಾ ಎನ್. ಶೆಟ್ಟಿ

ಪ್ರಜಾವಾಣಿ ನೋಡಿಯೊ — ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಗ್ರೀನ್ ಚಿಕನ್ ಸುಕ್ಕ

ಬೇಕಾಗುವ ಸಾಮಗ್ರಿಗಳು: ಕೋಳಿ ಮಾಂಸ - ಅರ್ಧ ಕೆ.ಜಿ., ಕೊಬ್ಬರಿ ಎಣ್ಣೆ, ಮೆಂತ್ಯೆ - ಅರ್ಧ ಚಮಚ, ಕಾಳುಮೆಣಸು -1 ಚಮಚ, ಜೀರಿಗೆ - ಅರ್ಧ ಚಮಚ, ಬೆಳ್ಳುಳ್ಳಿ - 5 ಎಸಳು, ಕೊತ್ತಂಬರಿ ಬೀಜ - 4 ಚಮಚ, ಈರುಳ್ಳಿ - 2, ಸ್ವಲ್ಪ ಶುಂಠಿ, ಪುದಿನ - ಒಂದು ಹಿಡಿ, ಹಸಿ ಮೆಣಸಿನ ಕಾಯಿ - 9, ಹುಣಸೆಹಣ್ಣು – ಸ್ವಲ್ಪ, ಅರಿಸಿನ ಪುಡಿ - ಅರ್ಧ ಚಮಚ, ತೆಂಗಿನತುರಿ - ಒಂದೂವರೆ ಕಪ್, ಗರಂ ಮಸಾಲೆ - ಅರ್ಧ ಚಮಚ, ಕರಿಬೇವು – 1 ಎಸಳು, ಕೊತ್ತಂಬರಿ ಸೊಪ್ಪು.

ತಯಾರಿಸುವ ವಿಧಾನ: ಒಂದು ಬಾಣಲೆ ಬಿಸಿ ಮಾಡಿ ಅದಕ್ಕೆ ಸ್ವಲ್ಪ ಕೊಬ್ಬರಿ ಎಣ್ಣೆ ಹಾಕಿ ಮೆಂತ್ಯೆ, ಕಾಳುಮೆಣಸು, ಜೀರಿಗೆ, ಬೆಳ್ಳುಳ್ಳಿ, ಕೊತ್ತಂಬರಿ ಬೀಜ, ಈರುಳ್ಳಿ ಹಾಕಿ ಹುರಿದಿಟ್ಟುಕೊಳ್ಳಬೇಕು. ಮಿಕ್ಸಿ ಜಾರ್‌ಗೆ 7 ಹಸಿಮೆಣಸು, ಕೊತ್ತಂಬರಿ ಸೊಪ್ಪು, ಪುದಿನ, ಕರಿಬೇವು, ಶುಂಠಿ, ಹುಣಸೆಹಣ್ಣು, ಅರಿಸಿನ ಪುಡಿ ಹಾಕಿಕೊಂಡು ಅದಕ್ಕೆ ಹುರಿದಿಟ್ಟುಕೊಂಡ ಮಸಾಲೆ ಪದಾರ್ಥ, ನೀರು ಸೇರಿಸಿ ರುಬ್ಬಿಕೊಳ್ಳಬೇಕು. ರುಬ್ಬಿದ ಮಸಾಲೆಯನ್ನು ಕೋಳಿ ಮಾಂಸಕ್ಕೆ ಸೇರಿಸಿ ಉಪ್ಪು ಹಾಕಿಕೊಂಡು ಮಿಶ್ರಣ ಮಾಡಿ 30 ನಿಮಿಷ ಮುಚ್ಚಿಡಬೇಕು. ಒಂದು ಬಾಣಲೆ ಬಿಸಿ ಮಾಡಿ, ಕೊಬ್ಬರಿ ಎಣ್ಣೆ ಹಾಕಿ ಹಸಿ ಮೆಣಸಿನಕಾಯಿ, ಒಂದು ಹೆಚ್ಚಿದ ಈರುಳ್ಳಿ, ಕರಿಬೇವು ಹಾಕಿ ಚೆನ್ನಾಗಿ ಹುರಿದುಕೊಳ್ಳಬೇಕು. ಬಳಿಕ ಅದಕ್ಕೆ ಮಸಾಲೆ ಮಿಶ್ರಿತ ಕೋಳಿ ಮಾಂಸವನ್ನು ಸೇರಿಸಿ ಕಲೆಸಿಕೊಳ್ಳಬೇಕು. ಸ್ವಲ್ಪ ನೀರು ಸೇರಿಸಿ ಚೆನ್ನಾಗಿ ಬೇಯಿಸಿ. ಇನ್ನೊಂದು ಬಾಣಲೆಯಲ್ಲಿ ಸ್ವಲ್ಪ ಕೊಬ್ಬರಿ ಎಣ್ಣೆ ಬಿಸಿ ಮಾಡಿ ಅದಕ್ಕೆ ಅರ್ಧ ಹೆಚ್ಚಿದ ಈರುಳ್ಳಿ, ಕಾಯಿ ಮೆಣಸು, ಕರಿಬೇವು, 1 ಎಸಳು ಬೆಳ್ಳುಳ್ಳಿ, ತೆಂಗಿನತುರಿ ಹಾಕಿ ಹುರಿಯಬೇಕು. ಇದನ್ನು ಗರಂ ಮಸಾಲೆ ಜತೆ ಬೆಂದ ಕೋಳಿಮಾಂಸಕ್ಕೆ ಸೇರಿಸಿ ಕಲೆಸಿಕೊಳ್ಳಬೇಕು. ಈಗ ಗ್ರೀನ್ ಚಿಕನ್ ಸುಕ್ಕ ಸಿದ್ಧ.

ಚಿಕನ್ ಕೊಂಡಾಟಂ

ಬೇಕಾಗುವ ಸಾಮಗ್ರಿಗಳು: ಕೋಳಿ ಮಾಂಸ - ಅರ್ಧ ಕೆ.ಜಿ., ಶುಂಠಿ-ಬೆಳ್ಳುಳ್ಳಿ ಪೇಸ್ಟ್ - ಎರಡು ಚಮಚ, ಅರಿಸಿನ ಪುಡಿ - ಮುಕ್ಕಾಲು ಚಮಚ, ಕಾಶ್ಮೀರಿ ಮೆಣಸಿನ ಪುಡಿ - 4 ಚಮಚ, ಈರುಳ್ಳಿ - 1, ಹಸಿ ಮೆಣಸಿನಕಾಯಿ - 2, ಕೊತ್ತಂಬರಿ ಪುಡಿ - 2 ಚಮಚ, ಕಾಳುಮೆಣಸಿನ ಪುಡಿ - ಅರ್ಧ ಚಮಚ, ಚಿಲ್ಲಿ ಫ್ಲೇಕ್ಸ್ - 3 ಚಮಚ, ಟೊಮೆಟೊ ಸಾಸ್ - 2 ಚಮಚ, ಗರಂ ಮಸಾಲೆ – ಅರ್ಧ ಚಮಚ, ನಿಂಬೆರಸ, ಕೊಬ್ಬರಿ ಎಣ್ಣೆ, ಕರಿಬೇವು.

ತಯಾರಿಸುವ ವಿಧಾನ: ಕೋಳಿ ಮಾಂಸಕ್ಕೆ ಉಪ್ಪು, ಶುಂಠಿ- ಬೆಳ್ಳುಳ್ಳಿ ಪೇಸ್ಟ್ (1ಚಮಚ), ಅರಿಸಿನ ಪುಡಿ (ಅರ್ಧ ಚಮಚ), ಕಾಶ್ಮೀರಿ ಮೆಣಸಿನ ಪುಡಿ (3 ಚಮಚ), ನಿಂಬೆರಸ ಬೆರೆಸಿ ಚೆನ್ನಾಗಿ ಮಿಶ್ರಣ ಮಾಡಿ 30 ನಿಮಿಷ ಮುಚ್ಚಿಡಬೇಕು. ಬಳಿಕ ಬಾಣಲೆಗೆ ಕೊಬ್ಬರಿ ಎಣ್ಣೆ ಹಾಕಿ ಕೋಳಿ ಮಾಂಸವನ್ನು ಕರಿದಿಟ್ಟುಕೊಳ್ಳಬೇಕು. ಅದೇ ಎಣ್ಣೆಗೆ ಹೆಚ್ಚಿದ ಈರುಳ್ಳಿ, ಕರಿಬೇವು, ಉಪ್ಪು, ಹಸಿ ಮೆಣಸಿನಕಾಯಿ ಹಾಕಿ ಚೆನ್ನಾಗಿ ಹುರಿಯಬೇಕು. ಜೊತೆಗೆ ಕೊತ್ತಂಬರಿ ಪುಡಿ, ಕಾಳು ಮೆಣಸಿನ ಪುಡಿ, ಚಿಲ್ಲಿ ಫ್ಲೇಕ್ಸ್, ಟೊಮೆಟೊ ಸಾಸ್ ಕೂಡ ಸೇರಿಸಬೇಕು. ಬಳಿಕ ಅರ್ಧ ಕಪ್ ನೀರು ಮತ್ತು ಗರಂ ಮಸಾಲೆ ಹಾಕಿ ಚೆನ್ನಾಗಿ ಕುದಿಸಬೇಕು. ಕರಿದಿಟ್ಟುಕೊಂಡ ಕೋಳಿ ಮಾಂಸವನ್ನು ಸೇರಿಸಿ ಬೇಯಿಸಿದರೆ ಚಿಕನ್ ಕೊಂಡಾಟಂ ಸಿದ್ಧ. ಚಪಾತಿ ಅಥವಾ ಪರೋಟ ಜತೆ ನಂಜಿಕೊಳ್ಳಲು ಇದು ರುಚಿಕರವಾಗಿರುತ್ತದೆ.

ಮೊಟ್ಟೆ ಉರುವಲ್

ಬೇಕಾಗುವ ಸಾಮಗ್ರಿಗಳು: ಬ್ಯಾಡಗಿ ಮೆಣಸು - 7, ಮೊಟ್ಟೆ - 4, ತುಪ್ಪ- 4 ಚಮಚ, ಕಾಳುಮೆಣಸಿನ ಪುಡಿ - ಅರ್ಧ ಚಮಚ, ಅರಿಸಿನ ಪುಡಿ - ಅರ್ಧ ಚಮಚ, ಗರಂ ಮಸಾಲೆ – 1 ಚಮಚ, ಶುಂಠಿ-ಬೆಳ್ಳುಳ್ಳಿ ಪೇಸ್ಟ್ - 1 ಚಮಚ, ನಿಂಬೆರಸ, ಗೋಡಂಬಿ, ಕರಿಬೇವು

ತಯಾರಿಸುವ ವಿಧಾನ: ಬ್ಯಾಡಗಿ ಮೆಣಸನ್ನು ಸ್ವಲ್ಪ ನೀರು ಸೇರಿಸಿ ಬೇಯಿಸಿಟ್ಟುಕೊಳ್ಳಬೇಕು. ಆರಿದ ಮೇಲೆ ರುಬ್ಬಿಕೊಂಡು ಪೇಸ್ಟ್ ತಯಾರಿಸಿಕೊಳ್ಳಬೇಕು. ಬಾಣಲೆಗೆ ಸ್ವಲ್ಪ ತುಪ್ಪ ಸುರಿದು ಅದಕ್ಕೆ ಮೊಟ್ಟೆಗಳನ್ನು ಒಡೆದು ಹಾಕಿ ಕರಿಯಬೇಕು. ರುಚಿಗೆ ತಕ್ಕಷ್ಟು ಉಪ್ಪು, ಕರಿಮೆಣಸಿನ ಪುಡಿ ಸೇರಿಸಿಕೊಳ್ಳಬೇಕು. ಬಳಿಕ ಕರಿದ ಮೊಟ್ಟೆಗಳನ್ನು ಸಣ್ಣ ತುಂಡುಗಳನ್ನಾಗಿ ಮಾಡಿ ಅದಕ್ಕೆ ಅರಿಸಿನ ಪುಡಿ, ಗರಂ ಮಸಾಲೆ, ಶುಂಠಿ-ಬೆಳ್ಳುಳ್ಳಿ ಪೇಸ್ಟ್, ನಿಂಬೆರಸ ಸೇರಿಸಿ ಚೆನ್ನಾಗಿ ಮಿಶ್ರ ಮಾಡಿ 15 ನಿಮಿಷ ಮುಚ್ಚಿಡಬೇಕು. ಬಾಣಲೆಗೆ ಮೂರು ಚಮಚ ತುಪ್ಪ ಸುರಿದು ಅದಕ್ಕೆ ಗೋಡಂಬಿ, ಕರಿಬೇವು, ಒಣಮೆಣಸು ಹಾಕಿ ಹುರಿಯಬೇಕು. ಬಳಿಕ ಅದನ್ನು ಬೇರೆ ಪಾತ್ರೆಗೆ ಬದಲಿಸಿ. ಅದೇ ಬಾಣಲೆಗೆ ರುಬ್ಬಿ ಸಿದ್ಧವಾಗಿಟ್ಟುಕೊಂಡ ಮೆಣಸಿನ ಪೇಸ್ಟ್ ಹಾಕಿ, ಸ್ವಲ್ಪ ನೀರು ಹಾಗೂ ರುಚಿಗೆ ತಕ್ಕಷ್ಟು ಉಪ್ಪು ಸೇರಿಸಬೇಕು. ಕುದಿ ಬರುವಾಗ ಮಸಾಲೆ ಮಿಶ್ರ ಮಾಡಿಟ್ಟ ಮೊಟ್ಟೆಯನ್ನು ಸೇರಿಸಿ ಬೇಯಿಸಿಕೊಳ್ಳಬೇಕು. ಅದಕ್ಕೆ ಕರಿದ ಗೋಡಂಬಿ, ಕರಿಮೆಣಸು, ಒಣಮೆಣಸು ಸೇರಿಸಿದರೆ ಮೊಟ್ಟೆ ಉರುವಲ್ ಸಿದ್ಧ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

❦ ಸುಭಾಷಿತ ❦

ದುರಾಸೆ ಎಂಬುದು ಮನುಷ್ಯರ ಆತ್ಮಗಳಿಗೆ ವಿಷವುಣಿಸಿದೆ.
–ಚಾರ್ಲಿ ಚಾಪ್ಲಿನ್

ಕೋವಿಡ್ ನಿಯಂತ್ರಣ: ಹೈಕೋರ್ಟ್ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸಿ

ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಉಲ್ಲಂಘಿಸುವವರ ವಿರುದ್ಧ ಯಾವುದೇ ಮುಲಾಜಿಲ್ಲದೆ ಎಫ್‌ಐಆರ್ ದಾಖಲಿಸಬೇಕು ಎಂದು ಹೈಕೋರ್ಟ್ ವಿಭಾಗೀಯ ಪೀಠ ಸೂಚಿಸಿರುವುದು ಸ್ವಾಗತಾರ್ಹ. ರಾಜಕಾರಣಿಗಳು, ಧಾರ್ಮಿಕ ಮುಖಂಡರು ನಿಯಮಗಳನ್ನು ಪಾಲಿಸುವ ಮೂಲಕ ಜನಸಾಮಾನ್ಯರಿಗೆ ಮಾದರಿಯಾಗಬೇಕಿತ್ತು. ಅದು ಆಗುತ್ತಿಲ್ಲ. ನಿಯಮ ಉಲ್ಲಂಘಿಸಿದವರಲ್ಲಿ ಅಂತಹವರೂ ಇರುವ ಕಾರಣದಿಂದಲೇ, ಕರ್ನಾಟಕ ಸಾಂಕ್ರಾಮಿಕ ರೋಗಗಳ ನಿಯಂತ್ರಣ ಕಾಯ್ದೆ–2020ರ ಪ್ರಕಾರ ಕ್ರಮ ಕೈಗೊಳ್ಳಲು ಪೊಲೀಸರು ಹಿಂಜರಿಯುತ್ತಿರುವಂತಿದೆ. ಇದು ಸರಿಯಲ್ಲ. ಹೀಗಾಗಿ ಪ್ರಭಾವಿಗಳ ವಿರುದ್ಧವೇ ತ್ವರಿತವಾಗಿ ಕ್ರಮ ಜರುಗಿಸಬೇಕು ಎಂದು ಹೇಳಿರುವುದು ಸರಿಯಾಗಿಯೇ ಇದೆ. ಬೆಂಗಳೂರಿನಲ್ಲಿ ನಡೆದ ಕೆಲವು ಸಭೆ–ಸಮಾರಂಭಗಳಲ್ಲಿ ಕೋವಿಡ್ ನಿಯಂತ್ರಣ ಮಾರ್ಗಸೂಚಿ ಉಲ್ಲಂಘನೆ ಆಗಿದ್ದು, ಇದಕ್ಕಾಗಿ ಆಯೋಜಕರ ವಿರುದ್ಧವಷ್ಟೇ ಕ್ರಮ ಜರುಗಿಸಿರುವುದು ಸರಿಯಲ್ಲ. ಪಾಲ್ಗೊಳ್ಳುವವರ ವಿರುದ್ಧವೂ ಕ್ರಮ ಜರುಗಿಸಬೇಕು ಎಂಬ ಕೋರ್ಟ್ ಸೂಚನೆಯನ್ನು ಪೊಲೀಸರು ಕಟ್ಟುನಿಟ್ಟಾಗಿ ಪಾಲಿಸಬೇಕಿದೆ. ಸಭೆ, ಸಮಾರಂಭಗಳಲ್ಲಿ ಮುಖಗವಸು ಧರಿಸದ, ವೈಯಕ್ತಿಕ ಅಂತರ ಕಾಯ್ದುಕೊಳ್ಳದ ಎಲ್ಲರ ವಿರುದ್ಧವೂ ಎಫ್‌ಐಆರ್ ದಾಖಲಿಸಲು ಸಂಬಂಧಿಸಿದ ಪೊಲೀಸ್ ಅಧಿಕಾರಿಗಳಿಗೆ ತಕ್ಷಣ ಸೂಚಿಸಿ ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠವು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಆದೇಶ ನೀಡಿದೆ. ಕೋವಿಡ್ ನಿಯಮಗಳನ್ನು ಉಲ್ಲಂಘಿಸಿದವರ ವಿರುದ್ಧ ಕೈಗೊಂಡ ಕ್ರಮಗಳ ಉಸ್ತುವಾರಿ ನೋಡಿಕೊಳ್ಳಲು ಉನ್ನತ ಅಧಿಕಾರಿಗಳ ವಿಶೇಷ ತಂಡವನ್ನು ರಚಿಸುವಂತೆಯೂ ಕೋರ್ಟ್ ಸೂಚಿಸಿದೆ. ಕೆಲವು ದಿನಗಳಿಂದ ರಾಜ್ಯದಲ್ಲಿ ಒಂದೇ ಸಮನೆ ಏರುತ್ತಿರುವ ಕೋವಿಡ್ ಸೋಂಕು ಪ್ರಕರಣಗಳ ಹಿನ್ನೆಲೆಯಲ್ಲಿ, ಸ್ವಯಂಸೇವಾ ಸಂಸ್ಥೆಯೊಂದು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ನ್ಯಾಯಾಲಯವೇ ಪೊಲೀಸ್ ಮುಖ್ಯಸ್ಥರಿಗೆ ನೇರ ಆದೇಶ ನೀಡಿರುವುದು ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಆಡಳಿತ ವ್ಯವಸ್ಥೆ ಎಡವಿದೆ ಎನ್ನುವುದನ್ನು ಸೂಚಿಸುತ್ತದೆ. ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ ಕೈಗೊಳ್ಳುತ್ತೇವೆಂದು ಸಚಿವರೊಬ್ಬರು ಇತ್ತ ಪದೇ ಪದೇ ಹೇಳಿಕೆ ನೀಡುತ್ತಿದ್ದ ಸಂದರ್ಭದಲ್ಲಿಯೇ ಅತ್ತ ಸಚಿವರು, ಶಾಸಕರ ದಂಡೇ ಉಪಚುನಾವಣೆಯ ಪ್ರಚಾರದ ನೆಪದಲ್ಲಿ ಭಾರಿ ಜನಜಂಗುಳಿಯ ರಾಜಕೀಯ ಸಭೆಗಳನ್ನು ನಡೆಸುತ್ತಿದ್ದುದು ವಿಪರ್ಯಾಸವೇ ಸರಿ. ಇತರ ರಾಜಕೀಯ ಪಕ್ಷಗಳ ನಾಯಕರೂ ಇದಕ್ಕೆ ಹೊರತಾಗಿರಲಿಲ್ಲ. ಬಹುತೇಕ ರಾಜಕೀಯ ಸಭೆಗಳಲ್ಲಿ ಜನರು ಮುಖಗವಸು ಹಾಕಿದ್ದಾಗಲೀ ವೈಯಕ್ತಿಕ ಅಂತರ ಪಾಲಿಸಿದ್ದಾಗಲೀ ಕಂಡು ಬರಲಿಲ್ಲ. ಖುದ್ದಾಗಿ ಹೀಗೆ ನಿಯಮಗಳನ್ನು ಉಲ್ಲಂಘಿಸುವ ಅಧಿಕಾರಸ್ಥರಿಗೆ ಜನಸಾಮಾನ್ಯರಿಗೆ ಬುದ್ಧಿ ಹೇಳುವ ನೈತಿಕ ಅಧಿಕಾರವಾದರೂ ಎಲ್ಲಿ ಉಳಿಯುತ್ತದೆ? ಧಾರ್ಮಿಕ ಸಭೆಗಳ ಮೂಲಕ ಹಲವು ಧಾರ್ಮಿಕ ಮುಖಂಡರೂ ಕೊರೊನಾ ಸೋಂಕು ಪ್ರಸಾರಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಗಣ್ಯರು, ಪ್ರಭಾವಿಗಳು ನಿಯಮ ಉಲ್ಲಂಘಿಸುವುದನ್ನು ಮೂಕ ಪ್ರೇಕ್ಷಕರಂತೆ ನೋಡುವ ಪೊಲೀಸರು, ಜನಸಾಮಾನ್ಯರ ಮೇಲೆ ಮಾತ್ರ ಮುಗಿಬೀಳುತ್ತಿರುವುದು ಕೊರೊನಾ ನಿಯಂತ್ರಣ ಪ್ರಕ್ರಿಯೆಯನ್ನೇ ನಗೆಪಾಟಲಿಗೆ ಈಡುಮಾಡಿದಂತೆ ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ಕೋರ್ಟ್ ಕಟ್ಟಾಜ್ಞೆ ಸರಿಯಾಗಿಯೇ ಇದೆ. ರಾಜ್ಯದಲ್ಲಿ ಗುರುವಾರ 14,738 ಹೊಸ ಸೋಂಕು ಪ್ರಕರಣಗಳು ಪತ್ತೆಯಾಗಿದ್ದು, 66 ಜನ ಮರಣ ಹೊಂದಿದ್ದಾರೆ. ಇದು ಒಂದು ದಿನದಲ್ಲಿ ದಾಖಲಾದ ಅತ್ಯಧಿಕ ಪ್ರಕರಣಗಳ ಸಂಖ್ಯೆ ಎನ್ನುವ ಹಿನ್ನೆಲೆಯಲ್ಲಿ ಸರ್ಕಾರ ಕಠಿಣ ಕ್ರಮಗಳನ್ನು ಜಾರಿಗೊಳಿಸುವ ಅನಿವಾರ್ಯ ಇದೆ. ಬೆಂಗಳೂರು, ಬೆಳಗಾವಿ, ಕಲಬುರ್ಗಿ ಮತ್ತು ಹಾಸನದಲ್ಲಿ ಕೊರೊನಾ ಲಸಿಕೆಯ ಕೊರತೆ ಇದೆ ಎಂದು ವರದಿಯಾಗಿದೆ. ಕೊರತೆ ನೀಗಲು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು. ರಾಜ್ಯದ ಇತರ ನಗರಗಳಲ್ಲೂ ಈ ಕೊರತೆ ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು.

ಕೊರೊನಾ ಸೋಂಕಿನ ಅತ್ಯಧಿಕ ಪ್ರಕರಣಗಳು ದಾಖಲಾಗುತ್ತಿರುವ ಹಿನ್ನೆಲೆಯಲ್ಲಿ ನಿಯಂತ್ರಣ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು ಅಗತ್ಯ

ದೇಶದಲ್ಲೂ ಸತತ ಎರಡನೇ ದಿನ ಸೋಂಕುಪೀಡಿತರ ಸಂಖ್ಯೆ ಎರಡು ಲಕ್ಷ ದಾಟಿರುವುದು ಆರೋಗ್ಯ ತುರ್ತುಪರಿಸ್ಥಿತಿಯ ಲಕ್ಷಣಗಳನ್ನು ಸೂಚಿಸುವಂತಿದೆ. ಜನರ ಆರೋಗ್ಯಕ್ಕಿಂತ ಚುನಾವಣೆಗಳೇ ಮುಖ್ಯ ಎಂದು ಭಾವಿಸುವ ನಮ್ಮ ರಾಜಕಾರಣಿಗಳ ಧೋರಣೆ ಹೇವರಿಕೆ ಹುಟ್ಟಿಸುತ್ತಿದೆ. ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಹಾಸಿಗೆಯ ಕೊರತೆ, ಮುನ್ನೆಚ್ಚರಿಕೆಯಾಗಿ ನೀಡಬೇಕಾದ ಲಸಿಕೆಗಳ ಕೊರತೆ, ಸ್ಮಶಾನದಲ್ಲಿ ಅಂತ್ಯಸಂಸ್ಕಾರಕ್ಕೆ ನೂಕುನುಗ್ಗಲು ಉಂಟಾಗಿರುವ ಪರಿಸ್ಥಿತಿ ಕಣ್ಣಮುಂದಿದೆ. ಇಂತಹ ಆತಂಕಕಾರಿ ಸನ್ನಿವೇಶದಲ್ಲಿ ಚುನಾವಣಾ ಭಾಷಣದ ಹೆಸರಲ್ಲಿ ಸಾವಿರಾರು ಜನರನ್ನು ಒಂದೆಡೆ ಸೇರಿಸುವುದು, ಧಾರ್ಮಿಕ ಸಮಾವೇಶದ ನೆಪದಲ್ಲಿ ಲಕ್ಷಾಂತರ ಮಂದಿ ಒಂದೆಡೆ ಸೇರುವುದು ಎಷ್ಟು ಸರಿ? ಸೋಂಕು ತಗುಲಿದರೆ ಅಧಿಕಾರಸ್ಥರಿಗೆ ಮತ್ತು ಗಣ್ಯರಿಗೆ ಸುಸಜ್ಜಿತ ಆಸ್ಪತ್ರೆಗಳಲ್ಲಿ ವಿಶೇಷ ಚಿಕಿತ್ಸೆ ದೊರೆಯುತ್ತದೆ. ಆದರೆ ಅತ್ತ ದುಡಿಮೆಯೂ ಇಲ್ಲದೆ, ಇತ್ತ ಚಿಕಿತ್ಸೆ ಪಡೆಯಲು ಆರ್ಥಿಕ ಸಾಮರ್ಥ್ಯವೂ ಇಲ್ಲದೆ ನರಳುತ್ತಿರುವ ಜನಸಾಮಾನ್ಯರನ್ನು ಉಳಿಸುವವರು ಯಾರು?

ದಿನದ ಟ್ವೀಟ್

ಎಚ್ಚರ ವಹಿಸೋಣ

ಮನುಷ್ಯರಿಂದ ಆವಿಷ್ಕಾರಗೊಂಡಿರುವ ಪ್ಲಾಸ್ಟಿಕ್‌ನಿಂದ ಪ್ರಾಣಿಗಳು ಹಾನಿಗೊಳಗಾಗುತ್ತಿವೆ. ಪ್ಲಾಸ್ಟಿಕ್‌ಮುಕ್ತ ಜೀವನಶೈಲಿಯನ್ನು ಅಳವಡಿಸಿಕೊಳ್ಳಿ. ಈ ಕಾರ್ಯವನ್ನು ನೀವು ಯಾವಾಗ ಬೇಕಾದರೂ ಪ್ರಾರಂಭಿಸಬಹುದು. ನಮ್ಮ ಗ್ರಹಿಕೆಯ ವಿಧಾನವನ್ನು ಬದಲಿಸಿಕೊಳ್ಳುವ ಮೂಲಕ ನಾವು ಬದಲಾವಣೆ ತಂದುಕೊಳ್ಳಬಹುದು. ಪರಿಸರದ ಆರೋಗ್ಯದ ಬಗ್ಗೆ ನಮಗೆ ಅರಿವಿದ್ದರೆ ಪ್ಲಾಸ್ಟಿಕ್ ಮಾಲಿನ್ಯದ ಬಗ್ಗೆ ಎಚ್ಚರ ವಹಿಸೋಣ.

#PlasticPoison

ಮೋನಾ ಪಟೇಲ್, ವನ್ಯಜೀವಿ ಜಾಗೃತಿ ಕಾರ್ಯಕ್ರಮಗಳ ಮೇಲ್ವಿಚಾರಕಿ, ಬೆಜಾಯ ಗ್ರೂಪ್ ಆಫ್ ಕಂಪನೀಸ್

25 ವರ್ಷಗಳ ಹಿಂದೆ

ಬುಧವಾರ, 17-4-1996

● **ಹೊಸ ಆರ್ಥಿಕ ನೀತಿ ತಂದ ಪ್ರಗತಿ: ರಾವ್**

ಮಂಗಳೂರು, ಏ. 16– ಹೊಸ ಆರ್ಥಿಕ ನೀತಿಯಿಂದ ಕಳೆದ ಐದು ವರ್ಷಗಳಲ್ಲಿ ದೇಶ ಉತ್ತಮ ಪ್ರಗತಿ ಸಾಧಿಸುತ್ತಿದ್ದು, ಈ ಪ್ರಕ್ರಿಯೆ ಇದೇ ರೀತಿ ಮುಂದುವರಿದಲ್ಲಿ ಇನ್ನು ಕೆಲವೇ ವರ್ಷಗಳಲ್ಲಿ ಭಾರತ ವಿಶ್ವಮಟ್ಟದಲ್ಲಿ ಬಲಿಷ್ಠ ರಾಷ್ಟ್ರವಾಗುವುದರಲ್ಲಿ ಸಂದೇಹವಿಲ್ಲ ಎಂದು ಕಾಂಗ್ರೆಸ್ ಅಧ್ಯಕ್ಷರೂ ಆದ ಪ್ರಧಾನಿ ಪಿ.ವಿ.ನರಸಿಂಹ ರಾವ್ ಅವರು ಇಂದು ಇಲ್ಲಿ ಹೇಳಿದರು.

ಕರ್ನಾಟಕದ ತಮ್ಮ ಪ್ರಥಮ ಲೋಕಸಭಾ ಚುನಾವಣಾ ಪ್ರಚಾರ ಭಾಷಣವನ್ನು ಇಲ್ಲಿಯ ನೆಹರೂ ಮೈದಾನದಲ್ಲಿ ಆರಂಭಿಸಿ ಅವರು ಮಾತನಾಡಿದರು.

● **ಬಾಗಲಕೋಟೆ ಮುಳುಗಡೆ ಜನರ ಸ್ಥಳಾಂತರಕ್ಕೆ ಹೈಕೋರ್ಟ್ ತಡೆಯಾಜ್ಞೆ**

ಬೆಂಗಳೂರು, ಏ. 16– ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಬಾಗಲಕೋಟೆಯ ಮುಳುಗಡೆ ಆಗಲಿರುವ ಪ್ರದೇಶದ ಜನರನ್ನು, ಪುನರ್ವಸತಿಯ ‘ನವನಗರ’ವು ನಾಗರಿಕ ಸೌಲಭ್ಯಗಳೊಂದಿಗೆ ಸಿದ್ಧವಾಗುವವರೆಗೆ ಸ್ಥಳಾಂತರ ಮಾಡಬಾರದು ಎಂದು ಹೈಕೋರ್ಟ್ ಇಂದು ಸರ್ಕಾರಕ್ಕೆ ಆದೇಶಿಸಿತು.

50 ವರ್ಷಗಳ ಹಿಂದೆ

ಶನಿವಾರ, 17-4-1971

● **ಲಂಚದ ಮೂಲಗಳ ಮೇಲೆ ದೃಷ್ಟಿ**

ಬೆಂಗಳೂರು, ಏ. 16– ‘ಎತ್ತಿನ ಗಾಡಿ ಓಡಿಸಲೂ ಬರದವನಿಗೆ ಡ್ರೈವಿಂಗ್ ಲೈಸೆನ್ಸ್ ಕೊಡಲಾಗಿದೆ’.

ಲಂಚದ ಹಾವಳಿಯನ್ನು ಪತ್ರಿಕಾಗೋಷ್ಠಿಯಲ್ಲಿ ಇಂದು ಈ ರೀತಿ ವರ್ಣಿಸಿದ ರಾಜ್ಯಪಾಲ ಶ್ರೀ ಧರ್ಮವೀರ ಅವರು ‘ಆರ್‌ಟಿಒ, ಅಬ್ಕಾರಿ, ಎಂ.ಎಸ್.ಆರ್.ಟಿ.ಸಿ, ವಿದ್ಯುಚ್ಛಕ್ತಿ ಮಂಡಳಿ ಮೊದಲಾದ ಎಲ್ಲ ಕಡೆ ಲಂಚದ ದೂರಿದೆ. ಇದನ್ನೆಲ್ಲ ಯಾರು ತನಿಖೆ ಮಾಡುತ್ತಿದ್ದಾರೆ’ ಎಂದು ಪ್ರಶ್ನಿಸಿದರು.

● **ಕಾರು ಬೆಲೆ ಏರಿಕೆಗೆ ಅನುಮತಿ**

ನವದೆಹಲಿ, ಏ. 16– ಸರ್ಜೂ ಪ್ರಸಾದ್ ಆಯೋಗ ಶಿಫಾರಸು ಮಾಡಿರುವ ಬೆಲೆಗೆ ಫಿಯಟ್, ಅಂಬಾಸಡರ್ ಮತ್ತು ಸ್ಟ್ಯಾಂಡರ್ಡ್ ಕಾರುಗಳನ್ನು ಮಾರಾಟ ಮಾಡಲು ಅನುಮತಿ ನೀಡಿ ಸುಪ್ರೀಂ ಕೋರ್ಟ್ ಇಂದು ತಾತ್ಕಾಲಿಕ ಆಜ್ಞೆ ಹೊರಡಿಸಿದೆ.

ಕಾರುಗಳ ಬೆಲೆ ಏರಿಕೆ ನಿಷೇಧಿಸಿ ಕೇಂದ್ರ ಹೊರಡಿಸಿರುವ ಆಜ್ಞೆಯ ಕ್ರಮಬದ್ಧತೆಯನ್ನು ಪ್ರಶ್ನಿಸಿ ಈ ಕಾರುಗಳ ತಯಾರಿಕಾ ಸಂಸ್ಥೆಗಳು ರಿಟ್ ಅರ್ಜಿ ಸಲ್ಲಿಸಿದ್ದವು.

ಆಕಾಶವಾಣಿಯು ಈಗ ಇಟ್ಟಿರುವ ಕೆಟ್ಟ ಹೆಜ್ಜೆಗಳನ್ನು ಹಿಂಪಡೆಯುವುದು ಔಚಿತ್ಯಪೂರ್ಣ

ಬಹುತ್ವಕ್ಕೆ ಮಾರಕವಾಗುತ್ತಿದೆ ಆಕಾಶವಾಣಿ

ವಿಶ್ಲೇಷಣೆ

ಡಾ. ಬಸವರಾಜ ಸಾದರ

‘ಈಗ ಬದಲಾವಣೆಯ ಸಮಯ; ಯುಗಾದಿಯ ಸಂಭ್ರಮಕ್ಕೆ ಹೊಸ ಕಾರ್ಯಕ್ರಮಗಳು’ ಎಂಬ ಜಿಂಗಲ್, ಕೆಲವು ದಿನಗಳಿಂದ ರೇಡಿಯೊದಲ್ಲಿ ಕೇಳಿಬರತೊಡಗಿದಾಗ ಕುತೂಹಲ ಕೆರಳಿತ್ತು. ಬದಲಾದ ಆಕಾಶವಾಣಿಯ ಕಾರ್ಯಕ್ರಮಗಳನ್ನು ಕೇಳುವ ಆಸಕ್ತಿಯೂ ಮೊಳಕೆಯೊಡೆಯಿತು. ಆದರೆ, ಕೇಳಿದಾಗ ಅಷ್ಟೇ ಆಘಾತವಾಯಿತು. ಕಾರಣವೆಂದರೆ, ಈಗ ಮಾಡಲಾಗಿರುವ ಬದಲಾವಣೆಗಳು, ಇಡೀ ರಾಜ್ಯದ ಸಾಂಸ್ಕೃತಿಕ ವೈವಿಧ್ಯವನ್ನು ಸಂಪೂರ್ಣ ನಾಶ ಮಾಡಿ, ಕೇಂದ್ರೀಕೃತ ಕೀರಲ ದನಿಯನ್ನು ಕರ್ನಾಟಕದ ಎಲ್ಲ ಕೇಂದ್ರಗಳಿಂದ ಪ್ರಸಾರ ಮಾಡುವ ಹುನ್ನಾರದವೇ ಆಗಿರುವುದು.

ಹಣಕಾಸಿನ ಮತ್ತು ಕಾರ್ಯಕ್ರಮ ಅಧಿಕಾರಿಗಳ ಕೊರತೆಯ ನೆಪವೊಡ್ಡಿ, ಇಡೀ ರಾಜ್ಯದ ಬಹುಮುಖಿ ಸಂಸ್ಕೃತಿಯನ್ನು ಹಾಳುಮಾಡಲು ಹೊರಟಿರುವ ಈ ಕುತಂತ್ರವು ಹಲವಾರು ಒಳಸಂಚುಗಳನ್ನು ಹೊಂದಿರುವುದು ಸುಳ್ಳಲ್ಲ. ಭಾರತದ ಆಕಾಶವಾಣಿಗೆ ನೂರು ವರ್ಷ ಆಯಸ್ಸು ತುಂಬುವ ಮೊದಲೇ ಸಂಭವಿಸುತ್ತಿರುವ ಇಂಥ ಸಾಂಸ್ಕೃತಿಕ ಅವಸಾನವು ದೇಶದ ಇಂದಿನ ಒಟ್ಟು ಚಹರೆಯ ಸ್ಪಷ್ಟ ನಿದರ್ಶನದಂತೆಯೇ ಭಾಸವಾಗುತ್ತಿದೆ.

ಕರ್ನಾಟಕದ ಎಲ್ಲ ಆಕಾಶವಾಣಿ ಕೇಂದ್ರಗಳು, ಅವು ಆರಂಭವಾದ ದಿನದಿಂದ ‘ಕೃಷಿರಂಗ’ ಕಾರ್ಯಕ್ರಮವನ್ನು ಪ್ರತಿನಿತ್ಯ ಪ್ರಸಾರ ಮಾಡುತ್ತಿವೆ. ರೈತರು ಹೊಲದ ಕೆಲಸ ಮುಗಿಸಿ ಮನೆಗೆ ಬಂದು, ವಿಶ್ರಮಿಸುತ್ತ ಕೃಷಿ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಅನುಕೂಲಕರವಾದ ಹೊತ್ತಿನಲ್ಲಿ, ಸಾಯಂಕಾಲ 6.50ಕ್ಕೆ ಈ ಕಾರ್ಯಕ್ರಮ ಮೂಡಿಬರುತ್ತಿತ್ತು. ಈಗ ಈ ‘ಬದಲಾವಣೆ’ಯ ವೀರರು ಅದನ್ನು ಸಂಜೆಯ 5.30ಕ್ಕೆ ನಿಗದಿ ಮಾಡಿದ್ದಾರೆ! ಆ ಹೊತ್ತಲ್ಲಿ ರೈತರು ಹೊಲದಲ್ಲೇ ಇರುತ್ತಾರೆಂಬ ಸಾಮಾನ್ಯ ಜ್ಞಾನವೂ ಇಲ್ಲದ ಅಧಿಕಾರಿಗಳು ಮಾತ್ರ ಇಂಥ ಕೆಲಸಕ್ಕೆ ಕೈ ಹಾಕಲು ಸಾಧ್ಯ.

ಇನ್ನೂ ಅಚ್ಚರಿಯೆಂದರೆ, ಈವರೆಗೆ ಇದು ‘ಕೃಷಿರಂಗ’ ಆಗಿತ್ತು. ಅದನ್ನೀಗ ‘ರೈತನೇ ರಾಜ’ ಎಂದು ಬದಲಿಸಿ, ರೈತನಿಗೆ ರಾಜನ ಪಟ್ಟ ಕಟ್ಟಿದ್ದಾರೆ! ಈ ಶೀರ್ಷಿಕೆ ರೈತನನ್ನು ವ್ಯಂಗ್ಯ ಮಾಡುತ್ತಿದೆಯಷ್ಟೇ ಅಲ್ಲ, ಅಪಮಾನವನ್ನೂ ಮಾಡುವಂತಿದೆ. ಇನ್ನು ಮುಂದೆ ಇಲ್ಲಿ, ‘ಕರಿಯೆತ್ತ ಕಾಳಿಂಗ, ಬಿಳಿ ಎತ್ತ ಮಾಲಿಂಗ, ಸರಕಾರದೆತ್ತ ಸಾರಂಗೋ’ ಎಂಬ ದೇಶಿ ದನಿಸೂಚಿ ಇರದೆ, ಬೆಂಗಳೂರು ಕೇಂದ್ರದ ದನಿಸೂಚಿ ಇರುತ್ತದೆ. ಇದನ್ನೇ ಬಹುತೇಕ ಕೇಂದ್ರಗಳು ಸಹಪ್ರಸಾರ ಮಾಡಬೇಕು.

ರಾಜ್ಯದ ಎಲ್ಲ 14 ಕೇಂದ್ರಗಳೂ ಇನ್ನು ಬಹುತೇಕ ಕಾರ್ಯಕ್ರಮಗಳನ್ನು ಬೆಂಗಳೂರಿನಿಂದಲೇ ಸಹಪ್ರಸಾರ ಮಾಡಬೇಕಿದೆ. ಇದರಲ್ಲಿ ಕೆಲವೊಂದು ಕಾರ್ಯಕ್ರಮಗಳ ಹೆಸರು ಬದಲಿಸಿ, ಹೊಸ ನಾಮಕರಣ ಮಾಡಿದ್ದಾರೆ. ಅವು ಕನ್ನಡ ಭಾಷೆಗೆ ಅಪಚಾರ ಮಾಡುವಂತಿವೆಯಷ್ಟೇ ಅಲ್ಲ, ನಗೆಯನ್ನೂ ಹುಟ್ಟಿಸುವಂತಿವೆ. ಈವರೆಗೆ ಇದ್ದ ಸಾಹಿತ್ಯ ಕಾರ್ಯಕ್ರಮ ಈಗ ‘ಲಿಟರರಿ ಗುರು’ ಎಂದಾಗಿದೆ. ಕರ್ನಾಟಕದ ಎಲ್ಲ ಕೇಂದ್ರಗಳ ಬಹುದೊಡ್ಡ ಕೊಡುಗೆಯಾಗಿದ್ದ ಸಂಗೀತ ಕಾರ್ಯಕ್ರಮಗಳಿಗೆ ಕೊಕ್ಕೆ ಹಾಕಿ, ಅಳಿದುಳಿದ ಅಷ್ಟಿಷ್ಟು ಕಾರ್ಯಕ್ರಮಕ್ಕೆ ಈಗ ‘ಮ್ಯೂಸಿಕ್ ಗುರು’ ಎಂಬ ಶೀರ್ಷಿಕೆ ದಯಪಾಲಿಸಿದ್ದಾರೆ. ಜೊತೆಗೆ ‘ಟೆಕ್ ಗುರು’ ಬಂದಿದ್ದಾನೆ, ‘ಅಗ್ರಿ ಬುಲೆಟಿನ್’ ಬಂದಿದೆ. ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಾ ಬಂದ ಕರ್ನಾಟಕದ ಆಕಾಶವಾಣಿ ಕೇಂದ್ರಗಳ ಕಾರ್ಯಕ್ರಮಗಳು ಹೀಗೆ ‘ಕಂಗ್ಲಿಷೀಕರಣ’ಗೊಂಡದ್ದು, ಅವೆಲ್ಲಕ್ಕೂ ಹಂಡಬಂಡ ಬಣ್ಣ ಬಳಿದಂತಾಗಿದೆ.

ಕೃಷಿ, ಸಾಹಿತ್ಯ, ಸಂಗೀತ, ಜಾನಪದ, ಆರೋಗ್ಯದ ಸಮಸ್ಯೆಗಳು, ಶೈಕ್ಷಣಿಕ ವಿದ್ಯಮಾನಗಳು, ಗ್ರಾಮೀಣ ಬದುಕಿನ ಚಿತ್ರಗಳು- ಹೀಗೆ ವೈವಿಧ್ಯಮಯ ಕಾರ್ಯಕ್ರಮಗಳ ನಿರ್ಮಾಣಕ್ಕೆ ಇನ್ನುಮುಂದೆ ಪ್ರಾದೇಶಿಕ ಕೇಂದ್ರಗಳಿಗೆ ಹೆಚ್ಚು ಅವಕಾಶವಿಲ್ಲ. ಸ್ಥಳೀಯ ಸಾಹಿತಿಗಳು, ಸಂಗೀತಗಾರರು, ಜನಪದ ಕಲಾವಿದರು, ವಿದ್ಯಾರ್ಥಿಗಳು, ಮಹಿಳೆಯರು, ಮಕ್ಕಳು, ರೈತರು, ಕಾರ್ಮಿಕರು- ಇನ್ನು ಆಕಾಶವಾಣಿ ಕೇಂದ್ರಗಳ ಕಡೆಗೆ ಕಾಲು ಹಾಕುವಂತಿಲ್ಲ. ಹೀಗೆ ಬಹುಜನತೆಗೆ ಮೋಸ ಮಾಡಿ, ಕೆಲವರಿಗೇ ಮಣೆ ಹಾಕಹೊರಟಿರುವ ಈ ಕುತಂತ್ರವು, ಆಕಾಶವಾಣಿಯ ‘ಬಹುಜನ ಹಿತಾಯ, ಬಹುಜನ ಸುಖಾಯ’ ಎಂಬ ಧ್ಯೇಯವಾಕ್ಯವನ್ನೇ ಅಣಕಿಸುವಂತಿದೆ.

ಮಹಾನಿರ್ದೇಶನಾಲಯವೊಂದೇ ಆಕಾಶವಾಣಿಯ ಕಾರ್ಯಚಟುವಟಿಕೆಗಳನ್ನೆಲ್ಲ ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದ ಕಾಲವೊಂದಿತ್ತು. ಅದರ ಮೇಲೆ ಯಾವಾಗ ಪ್ರಸಾರ ಭಾರತಿ ವಕ್ಕರಿಸಿತೋ (1997) ಅಂದಿನಿಂದಲೇ ಈ ಮಾಧ್ಯಮದ ಸಾಂಸ್ಕೃತಿಕ ಚಹರೆಯೇ ವಿರೂಪಗೊಳ್ಳತೊಡಗಿತು. ಆಕಾಶವಾಣಿಯನ್ನು ಸಂಪೂರ್ಣ ವಾಣಿಜ್ಯೀಕರಣಗೊಳಿಸಿದ ಪ್ರಸಾರ ಭಾರತಿಯು, ಕಾರ್ಯಕ್ರಮ ನಿರ್ಮಾಣದ ಚಟುವಟಿಕೆ ಯನ್ನು ಕಡೆಗಣಿಸಿತು. ಅಗತ್ಯವಿರುವ ಸಿಬ್ಬಂದಿಯ ನೇಮಕಾತಿಯನ್ನು ಮಾಡಲಿಲ್ಲ. ಇರುವವರಿಗೆ ಬಡ್ತಿ ಕೊಡಲಿಲ್ಲ. ಈಗ ಬಹುತೇಕ ಕೇಂದ್ರಗಳಲ್ಲಿ ಕೆಲಸ ಮಾಡಲು ಜನರೇ ಇಲ್ಲ, ಜನರಿದ್ದರೆ ಹಣವಿಲ್ಲ ಎನ್ನಲಾಗುತ್ತಿದೆ. ಈ ಕಾರಣಗಳನ್ನೇ ಮುಂದೆ ಮಾಡಿಕೊಂಡು, ಪ್ರಾದೇಶಿಕ ಕೇಂದ್ರಗಳಲ್ಲಿ ಕಾರ್ಯಕ್ರಮ ನಿರ್ಮಾಣದ ಚಟುವಟಿಕೆಯನ್ನು ಸ್ಥಗಿತಗೊಳಿಸಿ, ಇರುವ ಕೆಲವೇ ಅಧಿಕಾರಿಗಳು ಬೆಂಗಳೂರು ಕೇಂದ್ರದಲ್ಲಿ ನಿರ್ಮಿಸುವ ಕಾರ್ಯಕ್ರಮಗಳನ್ನು ಎಲ್ಲ ಕೇಂದ್ರಗಳಿಂದಲೂ ಪ್ರಸಾರ ಮಾಡಿಸುವ ಹುನ್ನಾರ ನಡೆದಿದೆ.

ಪ್ರಸಾರ ಭಾರತಿಯ ಅಧ್ಯಕ್ಷರಾದವರಲ್ಲಿ ಕನ್ನಡಿಗರದೇ ಸಿಂಹಪಾಲಿದೆ. ಅವರಲ್ಲಿ ಯಾರಾದರೂ ಈ ಸಂಸ್ಥೆಯ ಉಳಿವು- ಉನ್ನತಿಗೆ ಹೊಸ ಯೋಜನೆಗಳನ್ನು ರೂಪಿಸುವ ಪ್ರಯತ್ನ ಮಾಡಿದ್ದರೂ ಈಗಿನ ಸ್ಥಿತಿ ಬರುತ್ತಿರಲಿಲ್ಲ. ‘ಆಕಾಶವಾಣಿ’ ಎಂಬ ಹೆಸರನ್ನು ಕೊಟ್ಟು, ದೇಶದ ಮೊದಲ ಪ್ರಾಂತೀಯ ರೇಡಿಯೊ ಕೇಂದ್ರವನ್ನು ಆರಂಭಿಸಿದ ಕರ್ನಾಟಕದ ಡಾ. ಎಂ.ವಿ.ಗೋಪಾಲಸ್ವಾಮಿಯವರ ದೂರದೃಷ್ಟಿಯನ್ನು ಗಮನಿಸಿದರೆ, ಈಗ ರಾಜ್ಯದ ಆಕಾಶವಾಣಿ ಕೇಂದ್ರಗಳಿಗೆ ಬಂದಿರುವ ದುಃಸ್ಥಿತಿಯು ನಿಜಕ್ಕೂ ನೋವುಂಟು ಮಾಡುತ್ತದೆ.

ಇಂಥದ್ದೇ ವಿಪತ್ತು ಬಂದೊದಗಿದಾಗ, ಕೇರಳ, ತಮಿಳುನಾಡಿನ ಜನಪ್ರತಿನಿಧಿಗಳು ಪ್ರಬಲವಾಗಿ ಪ್ರತಿಭಟಿಸಿ, ಅಲ್ಲಿನ ಆಕಾಶವಾಣಿ ಕೇಂದ್ರಗಳಿಂದ ಆಗುವ ಅನಾಹುತ ತಪ್ಪಿಸಿದ್ದಾರೆ. ಆದರೆ ಕರ್ನಾಟಕದ ಜನಪ್ರತಿನಿಧಿಗಳು ಮೌನವಾಗಿದ್ದಾರೆ. ಆಕಾಶವಾಣಿಯ ಅಧಿಕಾರಿ ವರ್ಗದವರು ಕಾರ್ಯಕ್ರಮಗಳಿಗೆ ‘ಹಂಡಬಂಡ’ ಹೆಸರುಗಳನ್ನು ಕೊಡುತ್ತ, ಇದೇ ಮಹಾಬದಲಾವಣೆಯ ಸಾಧನೆಯೆಂದು ಬೀಗುತ್ತ, ಎಲ್ಲ ಕೇಂದ್ರಗಳ ಅಸ್ಮಿತೆಯನ್ನು ಹಾಳುಮಾಡುತ್ತಿದ್ದಾರೆ. ಇದು ಒಟ್ಟಾರೆ ಆಕಾಶವಾಣಿಯ ಅವನತಿಯ ಸೂಚನೆಯಲ್ಲದೆ ಬೇರಲ್ಲ.

‘ಯಾರನ್ನಾದರೂ ಕೊಲ್ಲುವ ಉದ್ದೇಶವಿದ್ದರೆ ಒಮ್ಮೆಲೇ ಕೊಂದು ಅಪರಾಧಿಯಾಗಬೇಡ, ಅನ್ನ ನೀರು ಕೊಡದೇ ಉಪವಾಸ ಕೆಡವುತ್ತ ಹೋಗು, ನಿಧಾನವಾಗಿ ತಂತಾನೇ ಸಾಯುತ್ತಾರೆ’ ಎಂಬ ಕೆಟ್ಟ ರಾಜತಂತ್ರದ ಮಾತೊಂದನ್ನು ಓದಿದ ನೆನಪಾಗುತ್ತಿದೆ. ಸೂಚನಾ ಮತ್ತು ಪ್ರಸಾರ ಸಚಿವಾಲಯದಡಿಯಲ್ಲಿರುವ ಪ್ರಸಾರ ಭಾರತಿಯು ಈಗ ಆಕಾಶವಾಣಿಯ ವಿಷಯದಲ್ಲಿ ಇಟ್ಟಿರುವ ಹೆಜ್ಜೆ ಖಂಡಿತವಾಗಿ ಇದೇ ಕ್ರಮದ್ದಾಗಿದೆ. ದೇಶದ ವೈವಿಧ್ಯದ ದನಿಯೇ ಆಗಿರುವ ಆಕಾಶವಾಣಿಯ ಕುತ್ತಿಗೆಯನ್ನು ಹಿಚುಕುವ ಇಂಥ ಕುತಂತ್ರ ನಡೆಯುತ್ತಿರುವುದು ದುರಂತವಲ್ಲದೆ ಬೇರಲ್ಲ.

ಸಾಂಸ್ಕೃತಿಕ ಬಹುತ್ವದ ವಿಕಾಸಕ್ಕಾಗಿ ಪ್ರಸಾರ ಜಾಲವನ್ನು ವಿಸ್ತರಿಸುತ್ತಲೇ ಹೋಗಬೇಕೆಂಬುದು ಹಿಂದಿನ ಮಾಧ್ಯಮ ತಜ್ಞರ ಕನಸಾಗಿತ್ತು. ಆದರೆ ಈಗಿನ ಪರಿಣತರು, ಇರುವ ಕೇಂದ್ರಗಳ ಬಾಯಿ ಮುಚ್ಚಿಸುವ ಹುನ್ನಾರದಲ್ಲಿದ್ದಾರೆ. ಕಟ್ಟುತ್ತ ಹೋಗುವವರು ಆಗ ಇದ್ದರು, ಕೆಡವುತ್ತ ಹೋಗುತ್ತಿದ್ದಾರೆ ಈಗಿನವರು!

‘ಪ್ರಜಾಪ್ರಭುತ್ವ ವ್ಯವಸ್ಥೆಗೆ ಹೇಳಿ ಮಾಡಿಸಿದ ಮಾಧ್ಯಮ ಆಕಾಶವಾಣಿ’ ಎಂಬುದು ಮಾಧ್ಯಮ ತಜ್ಞರ ಅಭಿಪ್ರಾಯ. ಒಕ್ಕೂಟ ವ್ಯವಸ್ಥೆಯ ನಿರ್ವಹಣೆಯಲ್ಲಿ ಆಕಾಶವಾಣಿಯ ಮಹತ್ವದ ಪಾತ್ರ ವಹಿಸಬಲ್ಲದೆಂಬುದು ಕಳೆದ 95 ವರ್ಷಗಳಿಂದ ಸಾಬೀತಾಗುತ್ತ ಬಂದಿದೆ. ಜೊತೆಗೇ, ಜಗತ್ತಿನಲ್ಲೇ ಅತ್ಯಂತ ಬೃಹತ್ತಾದ ಪ್ರಸಾರ ಜಾಲವೆಂಬ ಖ್ಯಾತಿಯನ್ನೂ ಪಡೆದಿದೆ. ಇಂಥ ಮಾಧ್ಯಮದ ಕುತ್ತಿಗೆ ಹಿಚುಕಿ, ಅದರ ದನಿಯನ್ನೇ ಅಡಗಿಸುವ ಕ್ರೌರ್ಯ ನಡೆದಿರುವುದು ಸಾಂಸ್ಕೃತಿಕ ಅವಸಾನದ ಸೂಚಕ. ಬಹುತ್ವವೇ ಭಾರತದ ಸೊಗಸು, ಅದೇ ಅದರ ಸೌಂದರ್ಯ. ಅದನ್ನೇ ಅಳಿಸಿಹಾಕಿದರೆ, ಉಳಿಯುವುದು ವಿರೂಪಗೊಂಡ ಅಥವಾ ಮುಖವಾಡ ಧರಿಸಿದ ವಿಕೃತ ಮುಖ ಮಾತ್ರ. ಆ ಚಿತ್ರವು ಕಾಣಬಾರದೆಂದರೆ, ಆಕಾಶವಾಣಿಯು ಈಗ ಇಟ್ಟಿರುವ ಕೆಟ್ಟ ಹೆಜ್ಜೆಗಳನ್ನು ಹಿಂಪಡೆಯುವುದು ಔಚಿತ್ಯಪೂರ್ಣ. ಇಲ್ಲದಿದ್ದರೆ ‘ವಿವಿಧತೆಯಲ್ಲಿ ಏಕತೆ’ ಎಂಬ ದೇಶದ ಘೋಷಣೆಯೇ ನಗೆಪಾಟಲಿಗೀಡಾಗುತ್ತದೆ.

ಲೇಖಕ: ಆಕಾಶವಾಣಿ ಬೆಂಗಳೂರು ಕೇಂದ್ರದ ನಿವೃತ್ತ ನಿರ್ದೇಶಕ

ಚುರುಮುರಿ

ಯಾರು ‘ಗಣ್ಯೋಜ’?

● ಸುಧೀಂದ್ರ

‘ಆದಿಕವಿಗಳ ಬಿರುದನ್ನು ಸಿಕ್ಕವರಿಗೆಲ್ಲಾ ಕೊಟ್ಟು ಯೂನಿವರ್ಸಿಟಿ ಮಾನ ಹರಾಜು ಹಾಕ್ತಿದ್ದೀರಿ’ ಅಂತ ಕುಲಪತಿಗಳನ್ನು ಸಿಂಡಿಕೇಟ್ ಮೀಟಿಂಗಲ್ಲಿ ಮೆಂಬರುಗಳು ಬೆಂಡೆತ್ತಿದರು. ರಿಜಿಸ್ಟ್ರಾರ್ ಅಧ್ಯಕ್ಷತೆಯಲ್ಲೇ ಕಮಿಟಿ ಮಾಡಿ, ಬದಲಿ ಪ್ರಶಸ್ತಿಗಳ ಪಟ್ಟಿ ರೆಡಿ ಮಾಡಲು ಆದೇಶ ಹೊರಟಿತು.

ಕಮಿಟಿ ಮೀಟಿಂಗ್ ಶುರುವಾಯಿತು. ಹಿಂದೆ ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟಲ್ಲಿ ಕೆಎಎಸ್ ಅಧಿಕಾರಿಯಾಗಿದ್ದ ರಿಜಿಸ್ಟ್ರಾರ್, ಗಣಿ ಉದ್ದಿಮೆದಾರರನ್ನೂ ಪುರಸ್ಕಾರಕ್ಕೆ ಪರಿಗಣಿಸಬೇಕೆಂದು ಠರಾವು ಮಂಡಿಸಿದರು. ಆ ಪುರಸ್ಕಾರಕ್ಕೆ ‘ಗಣ್ಯೋಜ’ ಅನ್ನೋಣವೇ ಎಂಬ ಕಲಾ ನಿಕಾಯದ ಡೀನ್ ಪ್ರಶ್ನೆಗೆ, ಕನ್ನಡ ಪ್ರಾಧ್ಯಾಪಕರು ‘ಗಣ್ಯೋಜಿ’ ಹೆಚ್ಚು ಸೂಕ್ತವೆಂದರು. ಹಿಂದಿ ಪ್ರಬೋಧಕರಿಗೆ ದಿಲ್‌ಖುಷ್ ಆಗಿ, ತಮ್ಮ ‘ಡೆಲ್ಲಿ ದೋಸ್ತ್’ಗಳಿಗೂ ಈ ಸಮ್ಮಾನ್ ಕೊಡಿಸಬಹುದೆಂದು ನಿಲುವಳಿಯನ್ನು ಅನುಮೋದಿಸಿದರು.

ಮರಳು ಮರಳು ತುಪ್ಪದ ಮೈಸೂರುಪಾಕ್ ತಿನ್ನುತ್ತಿದ್ದ ಸಿಂಡಿಕೇಟ್ ಸದಸ್ಯರು ಎದ್ದು ನಿಂತರು. ‘ಮರಳೇ ಇಲ್ಲದ್ರೆ ಈ ಯೂನಿವರ್ಸಿಟಿ ಕಟ್ಟಕ್ಕಾಗ್ತಿತ್ತಾ? ಅಂದ್ರು. ‘ಮರಳೋಜ’ವನ್ನೂ ಅಂಗೀಕರಿಸಬಹುದೆಂದು ರಿಜಿಸ್ಟ್ರಾರ್ ಅಂದ್ರು. ಸಂಖ್ಯಾಜ್ಯೋತಿಷ್ಯ ಪ್ರವೀಣ, ಜನಪದ ಪ್ರೊಫೆಸರ್, ಪ್ರಶಸ್ತಿ ಮೂರಕ್ಷರಕ್ಕೇ ಸೀಮಿತಗೊಳಿಸೋಕ್ಕೆ ಹೇಳಿದ್ರು. ಅದಕ್ಕೆ ಇಂಗ್ಲಿಷ್ ಪ್ರೊಫೆಸರ್, ‘ಸ್ಯಾಂಡೋಜ’ ಸೂಕ್ತ, ಕಂಗ್ಲಿಷ್ ಯುವಜನರನ್ನೂ ಯೂನಿವರ್ಸಿಟಿಯತ್ತ ಸೆಳೆಯಲಿದು ಅನುಕೂಲ ಎಂದರು.

ಇತ್ತ ಒಂದಲ್ಲಾ ಒಂದು ವಿಷಯ ಹಿಡ್ಕೊಂಡು ವಿ.ವಿ.ಯಲ್ಲಿ ಚಳವಳಿ ಮಾಡುವ ಡೌನ್‌ವಿತ್ ತಂಡಕ್ಕೆ ಕೂಗಾಡಲು ಮತ್ತೊಂದು ಅವಕಾಶ ಸಿಕ್ಕಿತ್ತು. ಇದನ್ನೇ ಬಿಗ್ ಬ್ರೇಕಿಂಗ್ ಎಕ್ಸ್‌ಪ್ಲೋಸಿವ್ ಎಂದು ಸಿಡಿಸಲು ಟಿ.ವಿಯವರು ಬಂದಿದ್ದರು. ‘ಯೂನಿವರ್ಸಿಟಿ ಪುರಸ್ಕಾರ, ನಡೀತಿದ್ಯಾ ಹುನ್ನಾರ?’, ‘ಯಾರಾಗ್ತಾರೆ ರತ್ನಜ, ಯಾರಿದ್ದಾರೆ ರೈಲೋಜ ರೇಸಲ್ಲಿ?’, ‘ಉಕ್ಕೋಜ ಬೀಳತ್ತಾ, ಬಿಂದಾಲ್ ಕೊರಳಿಗೆ?’ -ಎಕ್ಸ್‌ಕ್ಲೂಸಿವ್ ಹೆಡ್‌ಲೈನ್‌ಗಳು ಓಡುತ್ತಿದ್ದವು.

ಬೆಳಗಾವಿ ಜೈಲಿಂದಲೇ ‘ಬೇಕಾಬಿಟ್ಟಿ ಅವಾರ್ಡ್‌ಗಳ ವಿರುದ್ಧದ ಚಳವಳಿ’ಯ ನೇತೃತ್ವ ತಾವು ವಹಿಸಿಕೊಳ್ಳುತ್ತಿರುವುದಾಗಿ ‘ಬಂದೋಜ’ ಪುರಸ್ಕೃತ ಸುಂದ್ರಶೇಖರ್ ಘೋಷಿಸಿದರು.

ಸಂಗತ

ಅಂಬೇಡ್ಕರ್ ಎಂಬ ಪತ್ರಕರ್ತ

ಇಂದು ಬಹುಪಾಲು ಮಾಧ್ಯಮರಂಗದಲ್ಲಿ ಏನೆಲ್ಲ ಕಾಣುತ್ತಿದ್ದೇವೆಯೋ ಅವೆಲ್ಲ ಅಂಬೇಡ್ಕರ್ ಹೊಂದಿದ್ದ ಆಶಯಗಳಿಗೆ ಸಂಪೂರ್ಣವಾಗಿ ವಿರುದ್ಧ ದಿಕ್ಕಿನಲ್ಲಿವೆ

● ಡಾ. ಸಿಬಂತಿ ಪದ್ಮನಾಭ ಕೆ.ವಿ.

ಡಾ. ಬಿ.ಆರ್.ಅಂಬೇಡ್ಕರ್ ಅವರನ್ನು ‘ಸಂವಿಧಾನ ಶಿಲ್ಪಿ’ಯಾಗಿ, ದಮನಿತ ವರ್ಗಗಳ ಸಬಲೀಕರಣದ ನೇತಾರನಾಗಿ ಕಂಡವರೇ ಹೆಚ್ಚು. ಅದು ಸಹಜವೇ ಆಗಿದೆ. ಆದರೆ ಅವರ ಒಟ್ಟಾರೆ ವ್ಯಕ್ತಿತ್ವದ ಬಹುಮುಖ್ಯ ಭಾಗವಾಗಿ ಪತ್ರಿಕಾವೃತ್ತಿ ಕೂಡ ಇತ್ತು ಎಂಬುದು ಗಮನಾರ್ಹ. ಶಿಕ್ಷಣ- ಸಂಘಟನೆ- ಪ್ರತಿಭಟನೆಗಳೆಂಬ ತಮ್ಮ ಪ್ರಧಾನ ಚಿಂತನೆಯು ಸಮಾಜದ ವಿವಿಧ ಸ್ತರಗಳಿಗೆ ಇಳಿಯುವಲ್ಲಿ ಅವರು ನಡೆಸುತ್ತಿದ್ದ ಪತ್ರಿಕೆಗಳ ಪಾತ್ರ ಮಹತ್ವದ್ದು.

ಮೂಕನಾಯಕ (1920), ಬಹಿಷ್ಕೃತ ಭಾರತ (1927), ಸಮತಾ (1928), ಜನತಾ (1930), ಪ್ರಬುದ್ಧ ಭಾರತ (1956)- ಇವು ಅಂಬೇಡ್ಕರ್ ಅವರು ತಮ್ಮ ಸಾಮಾಜಿಕ ಆಂದೋಲನದ ಬಲವರ್ಧನೆಗಾಗಿ ಆರಂಭಿಸಿದ ಐದು ಪತ್ರಿಕೆಗಳು. ‘ಮೂಕನಾಯಕ’ದಲ್ಲಿ ಅಂಬೇಡ್ಕರ್ ಅವರು ಪ್ರತ್ಯಕ್ಷವಾಗಿ ಕಾಣಿಸಿಕೊಳ್ಳದಿದ್ದರೂ ಅದರ ಹಿಂದಿನ ಶಕ್ತಿ ಅವರೇ ಆಗಿದ್ದರು. ಮೂಕನಾಯಕ ಎಂಬ ಪದವೇ ಧ್ವನಿಯಿಲ್ಲದ ವರ್ಗಗಳ ಅಂತರಂಗದ ಒತ್ತಾಸೆಗಳ ಮಹಾಪ್ರತಿಮೆಯಂತೆ ಇತ್ತು. ರಾಜಕೀಯದಲ್ಲಿ ದಲಿತರ ಮುಖವಾಣಿಯಾಗಿ ಪ್ರಮುಖ ಪಾತ್ರ ವಹಿಸಿದ ‘ಮೂಕನಾಯಕ’, ಜಾತಿ ಪದ್ಧತಿಯ ಅರ್ಥಹೀನತೆ, ಮಹಿಳೆಯರು ಹಾಗೂ ಅಸ್ಪೃಶ್ಯರನ್ನು ಮುಖ್ಯವಾಹಿನಿಗೆ ಸೇರಿಸುವ ಅವಶ್ಯಕತೆಗಳ ಬಗ್ಗೆ ದಿಟ್ಟ ದನಿಯೆತ್ತಿತ್ತು.

‘ಬಹಿಷ್ಕೃತ ಭಾರತ’ದಲ್ಲಿ ಅಂಬೇಡ್ಕರ್ ಪ್ರತ್ಯಕ್ಷವಾಗಿಯೇ ಕಾಣಿಸಿಕೊಂಡರು. ಅಂದಿನ ಪ್ರಬಲ ಜಾತಿ ಹಿಂದೂಗಳ ನಡವಳಿಕೆಯನ್ನು ಪತ್ರಿಕೆ ಮೂಲಕ ತೀವ್ರ ಟೀಕೆಗೆ ಒಳಪಡಿಸಿದರು. ಮಹದ್ ಸತ್ಯಾಗ್ರಹದ ಬೆನ್ನಿಗೇ ಪತ್ರಿಕೆ ಆರಂಭವಾದ್ದರಿಂದ ಅದರ ಮೊದಲ ಮೂರು ಸಂಪಾದಕೀಯಗಳು ಪ್ರತಿಭಟನೆಯ ಕುರಿತಾಗಿಯೇ ಇದ್ದವು. ಸಾರ್ವಜನಿಕ ಕೆರೆಗಳು ದಲಿತರ ಬಳಕೆಗೂ ಮುಕ್ತವಾಗಿ ದೊರೆಯಬೇಕೆಂಬ ಹಕ್ಕೊತ್ತಾಯದ ನಂತರ ಸವರ್ಣೀಯ ಹಿಂದೂಗಳು, ಬ್ರಿಟಿಷ್ ಸರ್ಕಾರ ಹಾಗೂ ಅಸ್ಪೃಶ್ಯರ ಜವಾಬ್ದಾರಿ ಏನು ಎಂಬುದನ್ನೇ ಸಂಪಾದಕೀಯಗಳು ಪ್ರಮುಖವಾಗಿ ಚರ್ಚಿಸಿದ್ದವು.

1928ರಲ್ಲಿ ಆರಂಭವಾದ ‘ಸಮತಾ’, ಸಾಮಾಜಿಕ ಸುಧಾರಣೆಗಾಗಿ ಅಂಬೇಡ್ಕರ್ ಸ್ಥಾಪಿಸಿದ ಸಮತಾ ಸಂಘದ ಮುಖವಾಣಿಯಾಗಿದ್ದರೆ, ಅದರ ನಂತರ ಬಂದ ‘ಜನತಾ’ 26 ವರ್ಷಗಳ ಕಾಲ ಆ ಕೆಲಸವನ್ನು ಮುಂದುವರಿಸಿತು.

1956ರಲ್ಲಿ ಅದಕ್ಕೇ ‘ಪ್ರಬುದ್ಧ ಭಾರತ’ವೆಂದು ಮರುನಾಮಕರಣ ಮಾಡಲಾಯಿತು. ಇದಕ್ಕೆ ಅಂಬೇಡ್ಕರ್ ಅವರು ಬೌದ್ಧಮತವನ್ನು ಸ್ವೀಕರಿಸುವ ಹಿನ್ನೆಲೆಯೂ ಇತ್ತು. ಅವರ ನಿಧನಾನಂತರ ಪುತ್ರ ಯಶವಂತ ಅಂಬೇಡ್ಕರ್ ನೇತೃತ್ವದಲ್ಲಿ ಅದು ನಾಲ್ಕು ವರ್ಷ ನಡೆಯಿತು. ಕೆಲವು ಸಮಾನಮನಸ್ಕರು ಒಟ್ಟಾಗಿ 2017ರಲ್ಲಿ ‘ಪ್ರಬುದ್ಧ ಭಾರತ’ವನ್ನು ಮತ್ತೆ ಆರಂಭಿಸಿರುವುದೂ ಉಲ್ಲೇಖನೀಯ.

ಜನಜಾಗೃತಿಯೇ ಅವರ ಪತ್ರಿಕಾವೃತ್ತಿಯ ಮೂಲ ಆಶಯವಾಗಿದ್ದರಿಂದ ಅವರ ಯಾವ ಪತ್ರಿಕೆಗಳಿಗೂ ವಾಣಿಜ್ಯಕ ಉದ್ದೇಶ ಇರಲಿಲ್ಲ. ಸಹಜವಾಗಿಯೇ ಅವು ಆರ್ಥಿಕ ಮುಗ್ಗಟ್ಟು ಎದುರಿಸಬೇಕಾಯಿತು. ಆದರೆ ಸುಮಾರು ಮೂರೂವರೆ ದಶಕಗಳ ಕಾಲ ಪ್ರತ್ಯಕ್ಷವಾಗಿ ಪತ್ರಿಕಾ ವ್ಯವಸಾಯದಲ್ಲಿ ತೊಡಗಿಕೊಂಡಿದ್ದ ಅಂಬೇಡ್ಕರ್ ಅವರಿಗೆ ಸಾಮಾಜಿಕ ನ್ಯಾಯದ ಕೀಲಿಕೈಗಳಾಗಿ ಪತ್ರಿಕೆಗಳ ಬಗ್ಗೆ ಅಪಾರ ವಿಶ್ವಾಸ ಇತ್ತು. ಶೋಷಿತರನ್ನು ಶಿಕ್ಷಿತರನ್ನಾಗಿಸದೆ ಯಾವ ಹೋರಾಟವೂ ಸಾಧ್ಯವಿಲ್ಲ, ಈ ಪ್ರಕ್ರಿಯೆಯಲ್ಲಿ ಪತ್ರಿಕಾ ಮಾಧ್ಯಮ ಒಂದು ಅವಿಭಾಜ್ಯ ಅಂಗ ಎಂದು ಅವರು ನಂಬಿದ್ದರು.

ಅಂಬೇಡ್ಕರ್ ಅವರು ಪತ್ರಿಕಾವೃತ್ತಿ ಬಗ್ಗೆ ಹೊಂದಿದ್ದ ಕೆಲವು ಪ್ರಮುಖ ನಿಲುವುಗಳನ್ನು ಇತಿಹಾಸಕಾರರು ಹೀಗೆ ಗುರುತಿಸಿದ್ದಾರೆ: ಪತ್ರಿಕಾವೃತ್ತಿಯು ನ್ಯಾಯೋಚಿತ ಹಾಗೂ ಪೂರ್ವಗ್ರಹರಹಿತವಾಗಿರಬೇಕು; ವಾಸ್ತವಾಂಶಗಳನ್ನು ಆಧರಿಸಿರಬೇಕು, ಪೂರ್ವಕಲ್ಪಿತ ವಿಚಾರಗಳನ್ನಲ್ಲ; ಪತ್ರಿಕಾವೃತ್ತಿಯು ಒಂದು ಉದಾತ್ತ ಧ್ಯೇಯವಾಗಿರಬೇಕೇ ಹೊರತು ವ್ಯಾಪಾರವಲ್ಲ; ಪತ್ರಿಕಾವೃತ್ತಿ ಹಾಗೂ ಪತ್ರಕರ್ತರು ನೈತಿಕ ಮೌಲ್ಯಗಳನ್ನು ಹೊಂದಿರಬೇಕು; ನಿರ್ಭಯವು ಪತ್ರಿಕಾವೃತ್ತಿ ಹಾಗೂ ಪತ್ರಕರ್ತರ ಪ್ರಧಾನ ಲಕ್ಷಣವಾಗಿರಬೇಕು; ಸಮಾಜಹಿತದ ಪರವಾಗಿರುವುದು ಪತ್ರಿಕಾವೃತ್ತಿಯ ಪ್ರಾಥಮಿಕ ಕರ್ತವ್ಯ; ವ್ಯಕ್ತಿಪೂಜೆಗೆ ಅವಕಾಶ ಇರಬಾರದು; ವಸ್ತುನಿಷ್ಠತೆಯೇ ಪತ್ರಿಕೆಗಳ ಆದರ್ಶವಾಗಿರಬೇಕು, ಅತಿರಂಜಕತೆಯಲ್ಲ.

ನಮ್ಮ ಮಾಧ್ಯಮರಂಗವನ್ನು ಕಟ್ಟಿ ಬೆಳೆಸಿದ ಹಿರಿಯರು ಈ ಕ್ಷೇತ್ರದ ಬಗ್ಗೆ ಏನೆಲ್ಲ ಆದರ್ಶಗಳನ್ನು ಇಟ್ಟುಕೊಂಡಿದ್ದರೋ ಅವುಗಳ ಸಾರಸರ್ವಸ್ವ ಅಂಬೇಡ್ಕರ್ ಅವರ ಚಿಂತನೆಯಲ್ಲಿದೆ. ಮುಕ್ಕಾಲು ಶತಮಾನದ ನಂತರ ನಮ್ಮ ಮಾಧ್ಯಮರಂಗ ಸಾಗಿ ಬಂದಿರುವ ದಾರಿ ನೋಡಿದರೆ, ನಾವೊಂದು ಬೇರೆಯದೇ ಲೋಕದಲ್ಲಿ ಇರುವುದು ಎಲ್ಲರಿಗೂ ಗೊತ್ತಾಗುತ್ತದೆ. ಪೂರ್ವಗ್ರಹ, ವ್ಯಕ್ತಿಪೂಜೆ, ಕಲ್ಪಿತ ಸುದ್ದಿಗಳು, ಅತಿರಂಜಕತೆ, ವ್ಯಾಪಾರಿ ಮನೋಭಾವ- ಇಂದು ಬಹುಪಾಲು ಮಾಧ್ಯಮರಂಗದಲ್ಲಿ ಏನೆಲ್ಲ ಕಾಣುತ್ತಿದ್ದೇವೆಯೋ ಅವೆಲ್ಲ ಅಂಬೇಡ್ಕರ್ ಹೊಂದಿದ್ದ ಆಶಯಗಳಿಗೆ ಸಂಪೂರ್ಣವಾಗಿ ವಿರುದ್ಧ ದಿಕ್ಕಿನಲ್ಲಿವೆ.

ಸ್ವತಃ ಅರ್ಥಶಾಸ್ತ್ರದ ಬಹುದೊಡ್ಡ ವಿದ್ವಾಂಸರಾಗಿದ್ದ ಅಂಬೇಡ್ಕರ್ ಅವರೂ ಮಾಧ್ಯಮಗಳಿಗೆ ಸೂಕ್ತವಾದ ಒಂದು ‘ರೆವಿನ್ಯೂ ಮಾಡೆಲ್’ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಳ್ಳಲಿಲ್ಲ. ಅವರ ಕಾಲಕ್ಕೆ ಪತ್ರಿಕೆಗಳ ಉದ್ದೇಶವು ಮಾಹಿತಿ ಪ್ರಸಾರ, ಶಿಕ್ಷಣ ಹಾಗೂ ಜಾಗೃತಿಗಿಂತ ಆಚೆ ಬೇರೆ ಏನೂ ಇಲ್ಲದ್ದೇ ಇದಕ್ಕೆ ಪ್ರಮುಖ ಕಾರಣವಿರಬಹುದು. ಖುದ್ದು ಐದು ಪತ್ರಿಕೆಗಳನ್ನು ನಡೆಸಿಯೂ ಅವರು ಪತ್ರಕರ್ತ ಆಗಿದ್ದರೇ ಹೊರತು ಪತ್ರಿಕೋದ್ಯಮಿ ಆಗಲಿಲ್ಲ.

ವಾಚಕರ ವಾಣಿ

ಹಿಂದಿನ ಉಲ್ಲಂಘನೆಯನ್ನೂ ಪರಿಗಣಿಸಿ

ಕೋವಿಡ್ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಸಾಂಕ್ರಾಮಿಕ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸುವಂತೆ ಪೊಲೀಸ್ ಇಲಾಖೆಗೆ ಹೈಕೋರ್ಟ್ ಆದೇಶಿಸಿರುವುದು ಸರಿಯಾಗಿದೆ. ರಾಜಕಾರಣಿಗಳು, ಧಾರ್ಮಿಕ ಮುಖಂಡರು ನಿಯಮ ಪಾಲಿಸುವ ಮೂಲಕ ಜನಸಾಮಾನ್ಯರಿಗೆ ಮಾದರಿಯಾಗಬೇಕಿತ್ತು. ಅವರೇ ಮಾರ್ಗಸೂಚಿಗಳನ್ನು ಉಲ್ಲಂಘಿಸುತ್ತಿರುವುದು ಸರಿಯಲ್ಲ. ಹೀಗಾಗಿ ಅಂತಹ ಗಣ್ಯರ ವಿರುದ್ಧ ತ್ವರಿತವಾಗಿ ಕ್ರಮ ಜರುಗಿಸಿ ಎಂದು ಹೇಳಿರುವುದು ಸ್ವಾಗತಾರ್ಹ. ಇನ್ನು ಮೇಲೆ ಇಂತಹ ತಪ್ಪೆಸಗುವ ಗಣ್ಯರ ವಿರುದ್ಧ ಇಲಾಖೆಯು ಯಾವ ಹಿಂಜರಿಕೆಯೂ ಇಲ್ಲದೆ ಕ್ರಮ ಜರುಗಿಸಿ ಕರ್ತವ್ಯಪ್ರಜ್ಞೆ ಮೆರೆಯುತ್ತದೆ ಎಂದು ನಂಬಬಹುದೇನೋ.

ಗಣ್ಯ ವ್ಯಕ್ತಿಗಳು ಕಾನೂನನ್ನು ಉಲ್ಲಂಘಿಸಿದಾಗ ತಮ್ಮ ಸ್ಥಾನಾರ್ಹತೆಗೆ ಎರವಾಗಿ, ಕಾನೂನಿನ ದೃಷ್ಟಿಯಲ್ಲಿ ತಪ್ಪಿತಸ್ಥ ಅಥವಾ ಆರೋಪಿ ಎಂದಾಗುತ್ತಾರೆ. ಆಗ ಕೆಳಹಂತದ ಪೊಲೀಸ್ ಅಧಿಕಾರಿ ಕೂಡ ಅವರ ವಿರುದ್ಧ ಕ್ರಮ ಕೈಗೊಳ್ಳುವುದು ಸಾಧ್ಯವಾಗುತ್ತದೆ. ಸಾಂಕ್ರಾಮಿಕ ರೋಗಗಳ ನಿಯಂತ್ರಣ ಕಾಯ್ದೆಯನ್ನು ಉಲ್ಲಂಘಿಸಿ ಸಭೆ–ಸಮಾರಂಭಗಳನ್ನು ಈಗಾಗಲೇ ನಡೆಸಿರುವ ಪ್ರತಿಷ್ಠಿತರ ವಿರುದ್ಧವೂ ಕ್ರಮ ಜರುಗುವಂತಾದರೆ ಸಾಮಾನ್ಯ ಜನ ಸಹ ಎಚ್ಚೆತ್ತುಕೊಳ್ಳುತ್ತಾರೆ.

ಸಾಮಗ ದತ್ತಾತ್ರಿ, ಬೆಂಗಳೂರು

ಕೊರೊನಾ ನಿಯಂತ್ರಣ: ಜಾಗೃತದಳ ಅಗತ್ಯ

ಕೊರೊನಾ ಎರಡನೇ ಅಲೆ ನಿಯಂತ್ರಣದ ಸಲುವಾಗಿ ಸರ್ಕಾರವು ಜಾಗೃತದಳವೊಂದನ್ನು ನೇಮಿಸಬೇಕು. ಕೋವಿಡ್ ರೋಗಿಗಳನ್ನು ಇರಿಸಿರುವ ಎಲ್ಲ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳ ಮೇಲೆ ಈ ದಳವು ನಿಗಾ ಇರಿಸಬೇಕು. ಜನರಿಗೆ ಸರಿಯಾಗಿ ಚಿಕಿತ್ಸೆ ದೊರೆಯುವುದನ್ನು ಖಾತರಿಪಡಿಸಿಕೊಳ್ಳಬೇಕು. ಜೊತೆಗೆ ಜಾಗೃತದಳವು ಜಾತ್ರೆ, ಸಭೆ-ಸಮಾರಂಭ, ಮದುವೆ ಮುಂತಾದ ಕಾರ್ಯಕ್ರಮಗಳ ಮೇಲೆ ಹದ್ದಿನ ಕಣ್ಣಿಟ್ಟು, ಕಠಿಣ ಕ್ರಮಗಳನ್ನು ಜರುಗಿಸಬೇಕು. ಈ ಮೂಲಕ ಸರ್ಕಾರದ ಆರ್ಥಿಕ ಸಂಪನ್ಮೂಲ ಹಾಗೂ ಜನರ ಜೀವ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸಬೇಕು.

ಉಮೇಶ ಎಸ್. ಹಿರೇಮಠ, ಬೈಲಹೊಂಗಲ

ಸೆಲೆಬ್ರಿಟಿಗಳಿಗೂ ಇರುತ್ತದೆ ವೈಯಕ್ತಿಕ ಆಯ್ಕೆ

ರಾಹುಲ್ ದ್ರಾವಿಡ್ ಅವರು ಜಾಹೀರಾತೊಂದರಲ್ಲಿ, ಟ್ರಾಫಿಕ್ ಜಾಮ್ ವಿರುದ್ಧ ರೌದ್ರಾವತಾರ ತಾಳಿ, ಕಾರೊಂದರ ಗಾಜನ್ನು ಒಡೆಯುವುದಕ್ಕೆ ಸಂಬಂಧಿಸಿದಂತೆ ಡಾ. ಟಿ.ಗೋವಿಂದರಾಜು ಅವರು ಬರೆದಿರುವ ಪತ್ರದಲ್ಲಿ (ವಾ.ವಾ., ಏ. 12), ಜಾಹೀರಾತಿನಲ್ಲಿ ಪಾಲ್ಗೊಳ್ಳುವ ಸೆಲೆಬ್ರಿಟಿಗಳಿಗೆ ಸಾಮಾಜಿಕ ಹೊಣೆಗಾರಿಕೆ ಇರುವುದಿಲ್ಲವೇ ಎಂದು ಪ್ರಶ್ನಿಸಿದ್ದಾರೆ. ಟ್ರಾಫಿಕ್ ಜಾಮ್ ಆದರೆ ಯಾರಾದರೂ ಬ್ಯಾಟ್ ಅಥವಾ ದೊಣ್ಣೆ ಬೀಸಿ ಪಕ್ಕದ ಕಾರನ್ನು ಧ್ವಂಸ ಮಾಡಿ ‘ನಾನು ರೌಡಿ’ ಎಂದು ಅಬ್ಬರಿಸಿರಿ ಎಂಬುದು ಜಾಹೀರಾತಿನ ಸಂದೇಶ ಎಂದು ಅವರು ಹೇಳಿದ್ದಾರೆ. ಅವರು ಹೇಳಿದ ಹಾಗೆ, ಟ್ರಾಫಿಕ್ ಜಾಮ್ ಉಂಟಾದರೆ ಯಾರಾದರೂ ಬ್ಯಾಟ್ ಬೀಸಿ ಯಾರದೋ ಕಾರನ್ನು ಚಚ್ಚಲು ಸಾಧ್ಯವೇ? ಜನ ಪ್ರಜ್ಞಾವಂತರಾಗಿದ್ದು, ಜಾಹೀರಾತುಗಳನ್ನು ಸ್ವೀಕರಿಸುವಾಗ ಅಷ್ಟೊಂದು ಭ್ರಾಮಕವಾಗಿ ವರ್ತಿಸುವುದಿಲ್ಲ. ಇದೇ ರಾಹುಲ್ ದ್ರಾವಿಡ್ ತಂಬಾಕು, ಸಿಗರೇಟ್ ಸೇವನೆಯಿಂದಾಗುವ ಅಪಾಯಗಳ ಬಗ್ಗೆ ಜನಜಾಗೃತಿ ಮೂಡಿಸುವ ಜಾಹೀರಾತಿನಲ್ಲಿ ಪಾಲ್ಗೊಂಡಿರುವುದನ್ನು ಮರೆಯಬಾರದು. ಸಾಮಾಜಿಕ ಹೊಣೆಗಾರಿಕೆಗೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕೇ?

ಮತ್ತೊಂದು ಜಾಹೀರಾತಿನಲ್ಲಿ, ಬೆಂಚ್ ಮೇಲೆ ಕುಳಿತ ಅಜ್ಜಿಯೊಬ್ಬಳು ಕೆಳಗೆ ಬಿದ್ದಿದ್ದ ಊರುಗೋಲನ್ನು ಎತ್ತಿ ಕೊಡುವಂತೆ ಒಬ್ಬ ಹುಡುಗನನ್ನು ಕೇಳುತ್ತಾಳೆ. ಆದರೆ ಆ ಹುಡುಗ ಚಾಕೊಲೇಟ್ ತಿನ್ನುವುದರಲ್ಲಿ ಮಗ್ನನಾಗಿರುತ್ತಾನೆ. ಆಗ ಅಜ್ಜಿ ಸ್ವತಃ ಮುಂದೆ ಬಂದು ಅದನ್ನು ತೆಗೆದುಕೊಳ್ಳುತ್ತಾಳೆ. ಅಷ್ಟರಲ್ಲಿ ಆಕೆ ಕುಳಿತ ಬೆಂಚ್ ಮೇಲೆ ಭಾರವಾದ ವಸ್ತು ಬಿದ್ದು ಪುಡಿಪುಡಿಯಾಗುತ್ತದೆ. ಅದಕ್ಕೆ ಪ್ರತಿಯಾಗಿ ಅಜ್ಜಿಯು ಹುಡುಗನಿಗೆ ‘ನೀನು ಏನೂ ಮಾಡದೇ ಇದ್ದುದು ಒಳ್ಳೆಯದಾಯಿತು’ ಎನ್ನುತ್ತಾಳೆ. ಹಾಗಿದ್ದರೆ ಈ ಜಾಹೀರಾತಿನ ಪ್ರಕಾರ, ವಯಸ್ಸಾದವರಿಗೆ ಯಾರೂ ಸಹಾಯ ಮಾಡಬಾರದು ಎಂದು ಅರ್ಥವೇ? ಜನ ಹೀಗೆ ವರ್ತಿಸುತ್ತಾರೆಂದು ಭಾವಿಸುವುದು ಹಾಸ್ಯಾಸ್ಪದ ಆಗುವುದಿಲ್ಲವೇ? ಸೆಲೆಬ್ರಿಟಿಗಳಿಗೂ ವೈಯಕ್ತಿಕ ಆಯ್ಕೆಗಳಿರುತ್ತವೆ.

ಅಶೋಕ ಓಜಿನಹಳ್ಳಿ, ಕೊಪ್ಪಳ

ಹಬ್ಬದ ಮಹತ್ವ ಅರಿಯಿರಿ

ಯುಗಾದಿ ಸಂದರ್ಭದಲ್ಲಿ ರತ್ನ ಪಕ್ಷಿ ಅಥವಾ ಸಾಂಬಾರ್ ಕಾಗೆಯನ್ನು ನೋಡಲು ಜನ ತಂಡೋಪತಂಡವಾಗಿ ಹೊಲಗದ್ದೆಗಳಿಗೆ ಹೋಗುವುದನ್ನು ಕಾಣುತ್ತೇವೆ. ಅದೇ ರೀತಿ ಬೇವಿನ ಹೂಗಳು, ಎಲೆಗಳು ಬೇಕೇಬೇಕಾಗಿರುವುದರಿಂದ ಆ ದಿನ ಬೇವಿನ ಮರಕ್ಕೆ ಮುಗಿಬೀಳುವವರ ಸಂಖ್ಯೆಯೂ ಕಡಿಮೆ ಇಲ್ಲ. ಆಚರಣೆಗಳು ತಪ್ಪಲ್ಲ, ಆದರೆ ಮೂಲ ಉದ್ದೇಶವನ್ನೇ ಮರೆತರೆ? ರತ್ನ ಪಕ್ಷಿಯು ಇತರ ಪಕ್ಷಿಗಳಿಗಿಂತ ತುಸು ದುರ್ಬಲ. ಹೀಗಾಗಿ ಅದು ಅತಿ ಸುಲಭವಾಗಿ ಬೇಟೆಗಾರರಿಗೆ ಬಲಿಯಾಗುತ್ತದೆ. ಬಹುಶಃ ಇದರ ಅರಿವಿದ್ದ ನಮ್ಮ ಪೂರ್ವಜರು ಇದರ ಸಂರಕ್ಷಣೆಗಾಗಿ ಇಂತಹದ್ದೊಂದು ಆಚರಣೆ ತಂದಿದ್ದಿರಬಹುದೇನೋ. ಆದರೆ ಈ ಪಕ್ಷಿ ನಿಜಕ್ಕೂ ಈಗ ಅಪಾಯದ ಅಂಚಿನಲ್ಲಿದೆ. ಇದರ ಗೂಡನ್ನು ಹುಡುಕಿ, ಮೊಟ್ಟೆ, ಮರಿಗಳ ಗೋಣು ಮುರಿದು ಬಿಸಾಡುವ ವಿಕೃತ ಮೂಢನಂಬಿಕೆ ಜೀವಂತವಾಗಿದೆ. ಜೊತೆಗೆ ಇದರ ದೇಹದಲ್ಲಿ ಔಷಧೀಯ ಗುಣಗಳಿವೆ ಎಂದೋ ಅಥವಾ ಇನ್ನಾವುದೋ ಮೌಢ್ಯಕ್ಕೆ ಒಳಗಾಗಿ ಈ ನಿರುಪದ್ರವಿಯನ್ನು ಬೇಟೆಯಾಡಲಾಗುತ್ತಿದೆ.

ಅಳಿವಿನ ಅಂಚಿನಲ್ಲಿರುವ ರತ್ನ ಪಕ್ಷಿಯ ಬೇಟೆಯನ್ನು ಸಾರ್ವಜನಿಕರು ಪ್ರತಿರೋಧಿಸಬಹುದಲ್ಲವೇ? ಆ ಮೂಲಕ ಅವುಗಳ ಸಂತತಿ ಉಳಿದರೆ ನಿತ್ಯ ಯುಗಾದಿಯೇ ಅಲ್ಲವೇ? ಜೊತೆಗೆ ಬೇವಿನ ಮರದ ವಿಶೇಷ ಗೊತ್ತಿರುವುದೇ. ಅದೊಂದು ಗಟ್ಟಿ ಮರಮುಟ್ಟು ಜೊತೆಗೆ ಬೇಸಿಗೆಯಲ್ಲಿ ಅದರ ಹಣ್ಣು, ಬೀಜಗಳಿಂದ ಹಲವು ಉಪಯೋಗಗಳಿವೆ. ಔಷಧೀಯ ಗುಣಗಳಿರುವ ಬೇವಿನಮರಗಳನ್ನು ಉಳಿಸಿಕೊಳ್ಳುವ ಸಲುವಾಗಿ ಇದೊಂದು ಆಚರಣೆ ಬಂದಿರಲೂಬಹುದು. ಆದರೆ ನಾವು ವರ್ಷಪೂರ್ತಿ ಇಂತಹ ಅನೇಕ ಹೆಮ್ಮರಗಳನ್ನು ಕಡಿದು, ಹಬ್ಬ ಬಂದಾಗ ಮಾತ್ರ ಭಕ್ತಿ ತೋರಿಸುವುದು ಯಾವ ನ್ಯಾಯ? ಮುಂದಿನ ಯುಗಾದಿಗೆ ಇಂದೇ ಒಂದು ಬೇವಿನ ಸಸಿ ನೆಟ್ಟು ಬೆಳೆಸಿದರೆ ಅದರ ಸಂತತಿಯೂ ಉಳಿದಂತೆ, ನಮ್ಮ ಆಚರಣೆಯೂ ಈಡೇರಿದಂತೆ ಅಲ್ಲವೇ?

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜನತಂತ್ರದ ಆಧಾರ ಸ್ತಂಭಗಳು ಅಪಾಯದಲ್ಲಿ...

ಚುನಾವಣಾ ಆಯೋಗ, ನ್ಯಾಯಾಂಗ ಸ್ವತಂತ್ರ

ಸಾಂವಿಧಾನಿಕ ಸಂಸ್ಥೆಗಳ ದುರ್ಬಳಕೆ ಆಗುತ್ತಿದೆಯೇ?

• ಪ್ರೊ. ಬಿ.ಕೆ. ಚಂದ್ರಶೇಖರ್



ಪಶ್ಚಿಮ ಬಂಗಾಳದಲ್ಲಿ 8 ಹಂತಗಳಲ್ಲಿ ಮತದಾನ ನಡೆಯುತ್ತಿರುವುದು ಯಾರ ಅನುಕೂಲಕ್ಕಾಗಿ? ಮಮತಾ ಬ್ಯಾನರ್ಜಿ ಅವರು ಪ್ರಚಾರ ನಡೆಸುವುದಕ್ಕೆ 24 ತಾಸು ನಿಷೇಧ ಹೇರಿದ್ದ ಚುನಾವಣಾ ಆಯೋಗವು ಪ್ರಧಾನಿ ಮತ್ತು ಗೃಹ ಸಚಿವರ ಪ್ರಚೋದನಕಾರಿ ಭಾಷಣಗಳ ಕುರಿತು ಚಕಾರ ಎತ್ತದಿರುವುದು ಎದ್ದು ಕಾಣುತ್ತದೆ. ನ್ಯಾಯಾಂಗ ಕೂಡಾ ಈ ರೀತಿಯ ವಿಶ್ವಾಸಾರ್ಹತೆಯ ಕೊರತೆಗೆ ಹೊರತಾಗಿಲ್ಲ

‘ನೀವು ಒಕ್ಕೂಟ ವ್ಯವಸ್ಥೆಯನ್ನು ದುರ್ಬಲಗೊಳಿಸಿ, ಸಿಬಿಐನಂಥ ಸಂವಿಧಾನದತ್ತ ಪ್ರಮುಖ ಸಂಸ್ಥೆಗಳನ್ನು ಬಳಸಿಕೊಂಡು ವಿರೋಧ ಪಕ್ಷಗಳನ್ನು ನಾಶ ಮಾಡುತ್ತಿದ್ದೀರಿ. ಪ್ರಜಾಪ್ರಭುತ್ವ ಮತ್ತು ಆಳ್ವಿಕೆಯ ದಮನವಿದು. ಯೋಜನಾ ಆಯೋಗವನ್ನು ತೃಣೀಕರಿಸುತ್ತಿದ್ದೀರಿ!’

– ಗುಜರಾತ್ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ 2013ರ ಜೂನ್ ತಿಂಗಳಲ್ಲಿ ಕಾಂಗ್ರೆಸ್ ನೇತೃತ್ವದ ಕೇಂದ್ರದ ಯುಪಿಎ ಸರ್ಕಾರ ಕುರಿತು ಹೇಳಿದ್ದ ಮಾತಿದು.

ಅದೇ ಮೋದಿ, ಪ್ರಧಾನಿ ಹುದ್ದೆಗೇರಿ ಪ್ರಜಾಪ್ರಭುತ್ವದ ಕೇಂದ್ರ ಬಿಂದುವಾದ ಸಂಸತ್ತನ್ನು ನಿರ್ಲಕ್ಷಿಸಿ 2016ರ ನ. 8ರಂದು ರಾತ್ರಿ 8 ಗಂಟೆಗೆ ದೇಶವನ್ನುದ್ದೇಶಿಸಿ ನೋಟು ರದ್ದತಿ ನಿರ್ಧಾರ ಪ್ರಕಟಿಸಿದರು. ನೋಟು ರದ್ದು ಮಾಡಲು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ (ಆರ್‌ಬಿಐ) ಸರ್ಕಾರಕ್ಕೆ ಶಿಫಾರಸು ಬರಬೇಕು. ಹಾಗಾಗಿ, ಹಿಂದಿನ ದಿನ ಸಂಜೆ 5.30ಕ್ಕೆ ಆರ್‌ಬಿಐಗೆ ಸಂದೇಶ ಕಳುಹಿಸಿ ಒಪ್ಪಿಗೆ ಪಡೆದುಕೊಂಡಿದ್ದರು.

ಮರುದಿನ ಸಂಜೆ ಸಚಿವ ಸಂಪುಟದ ಅನುಮೋದನೆ ಪಡೆದ ನಂತರ ರಾತ್ರಿ 8 ಗಂಟೆಗೆ ಈ ಬಗ್ಗೆ ಘೋಷಣೆ ಮಾಡಿದರು. ಅಷ್ಟೇ ಸಾಲದು ಎಂಬಂತೆ, ತಮ್ಮ ನಿರ್ಧಾರವನ್ನು ಹೊರಗೆ ಪ್ರಕಟಿಸಿ, ಈ ಬಗ್ಗೆ ಸಂಸತ್ತಿನ ಚರ್ಚೆಯಲ್ಲಿ ಪಾಲ್ಗೊಳ್ಳುವುದು ಅನಾವಶ್ಯಕ ಎಂದರು ಪ್ರಧಾನಿ. ಅವರ ಪಕ್ಷದ ‘ಸಹಕಾರೀ ಒಕ್ಕೂಟ’ದ ಭರವಸೆಯನ್ನೂ ಉಲ್ಲಂಘಿಸಿದರು. ಮುಖ್ಯವಾಗಿ ಸಂಸತ್ತಿಗೆ ಅವರ ಉತ್ತರದಾಯಿತ್ವವೇ ಇಲ್ಲದಂತಾಯಿತು!

ಮತಗಟ್ಟೆಗಳಿಗೆ ಜನರು ಬಂದು ತಮ್ಮ ಆಯ್ಕೆಯನ್ನು ಸೂಚಿಸಿದ ಬಳಿಕ ಅದನ್ನು ಪ್ರಾಮಾಣಿಕವಾಗಿ ರಕ್ಷಿಸುವುದು ಚುನಾವಣಾ ಆಯೋಗದ ಜವಾಬ್ದಾರಿ. ಸಂವಿಧಾನದ 324ನೇ ವಿಧಿಯು ಚುನಾವಣಾ ಪ್ರಕ್ರಿಯೆಗೆ ಅಗತ್ಯವಾದ ಎಲ್ಲ ಅಧಿಕಾರವನ್ನು ನೀಡಿ ಸ್ವಾಯತ್ತ ಸಂಸ್ಥೆಯಾಗಿ ಸೃಷ್ಟಿಸಿದೆ. ಅಂದರೆ, ಚುನಾವಣಾ ಆಯೋಗವು ಕಾರ್ಯಾಂಗದ ಮರ್ಜಿಯೊಳಗೆ ಇಲ್ಲ. ಹೀಗಿದ್ದರೂ ಚುನಾವಣಾ ಆಯೋಗವು ಆಳುವ ಪಕ್ಷಕ್ಕೆ ಆಗಾಗ ಅನುಕೂಲ ಮಾಡಿಕೊಟ್ಟ ಅಪಾದನೆಯಿಂದ ಹೊರಬರಲು ಸಾಧ್ಯವಾಗಿಲ್ಲ.

ಸೋಲು-ಗೆಲುವು ಮತ್ತು ಕೆಲವು ಪಕ್ಷಗಳ ಅಳಿವು-ಉಳಿವಿನ ಪ್ರಶ್ನೆಗಳಲ್ಲದೆ, ಇತ್ತೀಚಿನ ವರ್ಷಗಳಲ್ಲಿ ನಮ್ಮ ಪ್ರಜಾತಂತ್ರ ವ್ಯವಸ್ಥೆಯ ಆಧಾರ ಸ್ತಂಭಗಳೇ ಕಂಡೂ ಕಾಣದಂತೆ ಅಪಾಯಕ್ಕೆ ಒಳಗಾಗಿವೆ. ಹೀಗಾಗಿ, ಕೆಲವು ಪಕ್ಷಾತೀತ, ಪ್ರತಿಷ್ಠಿತ, ಮಾಜಿ ಉನ್ನತ ಅಧಿಕಾರಿಗಳು ಸೇರಿದಂತೆ, ನಾಗರಿಕ ಸಂಸ್ಥೆಗಳು ಕಳಕಳಿಯಿಂದ ಚುನಾವಣಾ ಆಯೋಗದ ಪ್ರತಿ ನಿರ್ಧಾರವನ್ನು, ನಿಷ್ಕ್ರಿಯತೆಯನ್ನು ಸಾರ್ವಜನಿಕವಾಗಿ ಪರಿಶೀಲಿಸುತ್ತಿರುವುದು ಉತ್ತಮ ಹಾಗೂ ಗಮನಾರ್ಹ ಬೆಳವಣಿಗೆ.

2019ರ ಲೋಕಸಭೆ ಚುನಾವಣೆಯ ಪ್ರಚಾರದ ವೇಳೆ ಬಿಜೆಪಿಯಿಂದ ಸೇನೆಯ ದುರುಪಯೋಗ, ಮಾಧ್ಯಮಗಳಿಂದಾದ ಉಲ್ಲಂಘನೆಯ ವಿರುದ್ಧ ಅಧಿಕಾರ ಚಲಾಯಿಸುವ ಅನಿವಾರ್ಯತೆ ಇದ್ದರೂ ಚುನಾವಣಾ ಆಯೋಗ ಕೈಕಟ್ಟಿ ಕುಳಿತಿತ್ತು. ಈ ವಿಚಾರ ಸಾರ್ವಜನಿಕವಾಗಿ ತೀವ್ರ ಚರ್ಚೆಗೆ, ವಿರೋಧ-ವಿಶ್ಲೇಷಣೆಗೆ ಒಳಗಾಗಿದ್ದರೂ ಆಯೋಗ ಮಾತ್ರ ದಿವ್ಯ ಮೌನ ವಹಿಸಿತ್ತು. ಕೇಂದ್ರದ ಆಡಳಿತಾರೂಢ ಬಿಜೆಪಿ ತನ್ನ ಚುನಾವಣೆಯ ವೆಚ್ಚಗಳಿಗೆ ‘ಚುನಾವಣಾ ಬಾಂಡ್’ ರೂಪಿಸಿತ್ತು. ಆ ಮೂಲಕ, ಆ ಪಕ್ಷ ಸಾವಿರಾರು ಕೋಟಿ ಹಣ ಸಂಗ್ರಹಿಸಿತ್ತು. ಈ ಪ್ರಕ್ರಿಯೆಯ ಬಗ್ಗೆಯೂ ಚುನಾವಣಾ ಆಯೋಗ ಜಾಣ ಕುರುಡು ಪ್ರದರ್ಶಿಸಿತ್ತು!

ಸದ್ಯ ನಡೆಯುತ್ತಿರುವ ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ಎಂಟು ಹಂತಗಳಲ್ಲಿ ನಡೆಯುತ್ತಿರುವುದು ಯಾರ ಅನುಕೂಲಕ್ಕಾಗಿ? ತೃಣಮೂಲ ಕಾಂಗ್ರೆಸ್ (ಟಿಎಂಸಿ) ನಾಯಕಿ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಗೆ 24 ಗಂಟೆ ಪ್ರಚಾರ ಮಾಡುವುದಕ್ಕೆ ನಿಷೇಧ ಹೇರಿದ ಚುನಾವಣಾ ಆಯೋಗ, ಪ್ರಧಾನಿ ಮತ್ತು ಗೃಹ ಸಚಿವರ ಪ್ರಚೋದನಕಾರಿ ಭಾಷಣಗಳ ಕುರಿತಂತೆ ಚಕಾರ ಎತ್ತದಿರುವುದು ಎದ್ದು ಕಾಣುತ್ತದೆ. ಇದೀಗ ಆಯೋಗಕ್ಕೆ ಟಿಎಂಸಿ ಮನವಿ ಸಲ್ಲಿಸಿ ಅದರ ಪಕ್ಷಪಾತ ಹಾಗೂ ನಿಷ್ಕ್ರಿಯತೆಯನ್ನು ಪ್ರಶ್ನಿಸಿದ್ದು ಮಾಧ್ಯಮಗಳಲ್ಲಿ ಸುದ್ದಿಯಾಗಿದೆ.

ನ್ಯಾಯಾಂಗ ಕೂಡಾ ಈ ರೀತಿಯ ವಿಶ್ವಾಸಾರ್ಹತೆಯ ಕೊರತೆಗೆ ಹೊರತಾಗಿಲ್ಲ. 2018ರಲ್ಲಿ ಕೆಲವು ಸತ್ಕೀರ್ತಿ ಗಳಿಸಿದ್ದ, ಇನ್ನೂ ಸೇವೆಯಲ್ಲಿದ್ದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು ಮಾಧ್ಯಮ ಮುಂದೆ ಬಂದು ಅಂದಿನ ಮುಖ್ಯನ್ಯಾಯಮೂರ್ತಿಯವರು ಸರ್ಕಾರಕ್ಕೆ ಅನುಕೂಲವಾಗುವಂತೆ ಕಾರ್ಯನಿರ್ವಹಿಸಿದ್ದಾರೆ ಎಂದು ನೇರವಾಗಿಯೇ ಆರೋಪಿಸಿದ್ದರು! ಬಳಿಕ, ನಿವೃತ್ತಿಯ ನಂತರ ರಾಜ್ಯಸಭೆ ಸದಸ್ಯತ್ವ ಕೊಡುವ ಆಶ್ವಾಸನೆಯನ್ನು ಮುಖ್ಯ ನ್ಯಾಯಮೂರ್ತಿಯಾದ ರಂಜನ್ ಗೊಗೊಯಿ ಅವರಿಗೆ ಸೇವೆಯಲ್ಲಿದ್ದಾಗಲೇ ಸರ್ಕಾರ ನೀಡಿರುವುದು ಗುಟ್ಟಾಗಿ ಉಳಿದಿಲ್ಲ. ಅದೇ ರೀತಿ, ಮಹಾರಾಷ್ಟ್ರದ ನ್ಯಾಯಾಧೀಶ ಲೋಯಾ ಅವರ ಅನುಮಾನಾಸ್ಪದ ಸಾವು ಮುಂಬೈ ಹೈಕೋರ್ಟಿನಲ್ಲಿ ವಿಚಾರಣೆ ಹಂತದಲ್ಲಿದ್ದಾಗಲೇ ಸುಪ್ರೀಂ ಕೋರ್ಟಿಗೆ ವರ್ಗಾವಣೆ ಮಾಡಿಸಿದ್ದು ಯಾರೆಂಬುದು ಎಲ್ಲರಿಗೂ ತಿಳಿದ ವಿಷಯವೇ! ಕಾರ್ಯಾಂಗದ ಈ ರೀತಿಯ ಮಧ್ಯಪ್ರವೇಶ ಆಕಸ್ಮಿಕವಲ್ಲ. ಬದಲಾಗಿ ವ್ಯವಸ್ಥಿತವಾದ ನಿರ್ಧಾರ. ಪ್ರಜಾತಂತ್ರದ ಸಾಂವಿಧಾನಿಕ ಸಂಸ್ಥೆಗಳನ್ನು ಬಳಸಿಕೊಂಡು ಪ್ರಜಾಪ್ರಭುತ್ವಕ್ಕೇ ಕೊಡುತ್ತಿರುವ ಕೊಡಲಿ ಪೆಟ್ಟು!

ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಆದಾಯ ತೆರಿಗೆ (ಐ.ಟಿ) ಇಲಾಖೆಯನ್ನು ಕೂಡಾ ಕೇಂದ್ರ ಸರ್ಕಾರ ತನ್ನಿಷ್ಟದಂತೆ ದುರ್ಬಳಕೆ ಮಾಡಿಕೊಳ್ಳುತ್ತಿದೆ. ಐಟಿ, ಇ.ಡಿ, ಸಿಬಿಐ ಸಂವಿಧಾನಾತ್ಮಕವಾಗಿ ತಮ್ಮ ಕರ್ತವ್ಯ ನಿಭಾಯಿಸುವ ಬಗ್ಗೆ ತಕರಾರಿಲ್ಲ. ಆದರೆ, ಚುನಾವಣೆಗಳು ಹತ್ತಿರ ಬಂದಾಗ ವಿರೋಧಿಗಳನ್ನು ಹತ್ತಿಕ್ಕಲು ಈ ಸಂಸ್ಥೆಗಳನ್ನು ಬಳಸಿಕೊಂಡು ದಾಳಿ ನಡೆಸಲಾಗುತ್ತಿದೆ. ಇಂಥ ದಾಳಿಗಳ ಮೂಲಕ ವಿರೋಧಿಗಳ ಬಾಯಿ ಮುಚ್ಚಿಸುವ ಯತ್ನ ನಡೆಯುತ್ತಿದೆ. ಇದು ರಾಜಕೀಯ ದುಷ್ಟತನದ ಪರಮಾವಧಿಯಲ್ಲದೆ ಇನ್ನೇನು?

ಲೇಖಕ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ವಕ್ತಾರ

‘ಪಂಜರ’ದೊಳಗಿನ ಗಿಣಿ ಸಿಬಿಐ!

‘ದೆಹಲಿ ವಿಶೇಷ ಪೊಲೀಸ್ ಕಾರ್ಯ ಸಂಸ್ಥೆ ಕಾಯ್ದೆ’ ಅಡಿಯಲ್ಲಿ 1946ರಿಂದಲೂ ಕೇಂದ್ರ ಸರ್ಕಾರದ ಕಣ್ಗಾವಲಿನಲ್ಲಿ ಸಿಬಿಐ ಕಾರ್ಯನಿರ್ವಹಿಸುತ್ತಿದೆ. ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಬರುವ ಅಪರಾಧಗಳ ತನಿಖೆಗೆ ಕಾಯ್ದೆಯ ಸೆಕ್ಷನ್ 6ರ ಪ್ರಕಾರ ಆ ಸರ್ಕಾರಗಳ ಪೂರ್ವಾನುಮತಿ ಅಗತ್ಯ. ಕೆಲವು ಸರ್ಕಾರಗಳು ‘ಮುಕ್ತ’ ಅನುಮತಿ ನೀಡಿದರೆ, ಇನ್ನೂ ಕೆಲವು ರಾಜ್ಯಗಳು ಅನುಮತಿ ನೀಡುವ ಅಥವಾ ನಿರಾಕರಿಸುವ ಹಕ್ಕು ಉಳಿಸಿಕೊಂಡಿವೆ. ಈ ಸೆಕ್ಷನ್ ದಶಕಗಳಿಂದ ಚರ್ಚೆಗೆ, ಟೀಕೆಗೆ ಒಳಗಾಗುತ್ತಲೇ ಇದೆ. ಈ ಸೆಕ್ಷನ್ ಅಡಿಯಲ್ಲಿ ತನಿಖೆಗೆ ಅನುಮತಿ ಕೊಡುವ ಮತ್ತು ಅದನ್ನು ಹಿಂಪಡೆಯುವ ಹಕ್ಕು ರಾಜ್ಯ ಸರ್ಕಾರಕ್ಕಿದೆ. ಅಂದರೆ, ಸಂವಿಧಾನಾತ್ಮಕ ಒಕ್ಕೂಟ ವ್ಯವಸ್ಥೆಗೆ ತೋರಿರುವ ಪಕ್ಷಾತೀತ ಗೌರವ. ಜೊತೆಗೆ, ಸಿಬಿಐ ‘ಸ್ವಾಯತ್ತ’ ಸಂಸ್ಥೆ ಎಂಬುದು ಪಳೆಯುಳಿಕೆಯ ನಂಬಿಕೆ. ‘ಈ ಸ್ವಾಯತ್ತ ಸಂಸ್ಥೆಯ ‘ನಿಷ್ಪಕ್ಷಪಾತಿತನ’ದ ಬಗ್ಗೆ ಸಂಶಯವೇಕೆ’ ಎಂದು ಪ್ರಶ್ನಿಸುವ ಕೇಂದ್ರದ ನಡೆ, ಜಾಣತನದ ರಾಜಕೀಯವಷ್ಟೇ. ಇತ್ತೀಚಿನ ದಿನಗಳಲ್ಲಿ ಸಿಬಿಐ ಕೂಡಾ ಕೇಂದ್ರದ ‘ಪಂಜರ’ದೊಳಗಿನ ಗಿಣಿ ಎಂಬ ಮೂದಲಿಕೆಗೆ ಗುರಿಯಾಗಿದೆ.

ಪ್ರಚಲಿತ ವಿದ್ಯಮಾನಗಳ ಕುರಿತ ವಿಭಿನ್ನ ನೆಲೆಯ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಅವಕಾಶ ಒದಗಿಸುವ ವಿಶೇಷ ವೇದಿಕೆ ಪ್ರತಿ ಶನಿವಾರ

ಪ್ರಜಾವಾಣಿ ಚರ್ಚೆ

• ಸಿ.ಟಿ. ರವಿ

ಶಾಸಕಾಂಗ ಹಾಗೂ ಕಾರ್ಯಾಂಗ ತಪ್ಪಿ ನಡೆದಾಗ ಅವುಗಳನ್ನು ಸರಿದಾರಿಗೆ ತರುವ ಹೊಣೆಯನ್ನು ನ್ಯಾಯಾಂಗವು ನಿರ್ವಹಿಸುತ್ತಾ ಬಂದಿದೆ. ಚುನಾವಣಾ ಆಯೋಗವು ನಿಷ್ಪಕ್ಷಪಾತವಾಗಿ, ಪ್ರಾಮಾಣಿಕವಾಗಿ ಚುನಾವಣೆಗಳನ್ನು ನಡೆಸುತ್ತಾ ಬಂದಿದೆ. ಆದರೆ, ಸೋತ ತಕ್ಷಣ ಮತಯಂತ್ರಗಳೇ ಸರಿ ಇಲ್ಲ ಎಂದು ವಿರೋಧ ಪಕ್ಷಗಳು ದೂಷಿಸುತ್ತವೆ

ಈ ದೇಶದ ಅತ್ಯುನ್ನತ ತನಿಖಾ ಸಂಸ್ಥೆಯಾದ ಸಿಬಿಐ, ಆರ್ಥಿಕ ಅಪರಾಧ ನಿಯಂತ್ರಿಸುವ ಜಾರಿ ನಿರ್ದೇಶನಾಲಯ (ಇ.ಡಿ), ಆದಾಯ ತೆರಿಗೆ ಇಲಾಖೆಗಳನ್ನು ಬಿಜೆಪಿ ರಾಜಕೀಯವಾಗಿ ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ಕಾಂಗ್ರೆಸ್ ಮತ್ತು ಕೆಲವು ವಿರೋಧ ಪಕ್ಷಗಳು ಆರೋಪಿಸುತ್ತಿವೆ. ನ್ಯಾಯಾಂಗ ಮತ್ತು ಚುನಾವಣಾ ಆಯೋಗದ ಮೇಲೂ ಸಂಶಯದ ಎಳೆಗಳನ್ನೂ ಚಾಚಲು ಮುಂದಾಗುತ್ತಿವೆ. ಆದರೆ, ಈ ರೀತಿ ಸಂಸ್ಥೆಗಳನ್ನು ದುರುಪಯೋಗ ಮಾಡಿಕೊಳ್ಳಲು ಸಾಧ್ಯವೇ ಎಂಬ ಪ್ರಶ್ನೆಯನ್ನು ಮಂಥಿಸಿ ನೋಡಬೇಕಾಗಿದೆ.

ಭಾರತವು ಅತ್ಯಂತ ಬೃಹತ್ತಾದ ಲಿಖಿತ ಸಂವಿಧಾನವನ್ನು ಹೊಂದಿದ್ದು ದೇಶದ ಆಡಳಿತವು ಸಂವಿಧಾನದ ನಿರ್ದೇಶನದಂತೆಯೇ ನಡೆಯಬೇಕು. ಅದನ್ನು ಕಡೆಗಣಿಸಿ ಯಾವ ಸರ್ಕಾರವೂ ಆಡಳಿತ ನಡೆಸಲು ಸಾಧ್ಯವಿಲ್ಲ. ಬದಲಾಗುತ್ತಿರುವ ಪರಿಸ್ಥಿತಿಗೆ ಅನುಗುಣವಾಗಿ ಸಂವಿಧಾನಕ್ಕೆ ಕೆಲವು ತಿದ್ದುಪಡಿ ಮಾಡಬಹುದೇ ಹೊರತು ಮೂಲತತ್ವಗಳನ್ನು ಬದಲಾಯಿಸಲು ಸಾಧ್ಯವಿಲ್ಲ. ಆದರೆ, ಈ ದೇಶವನ್ನು 60 ವರ್ಷಗಳ ಕಾಲ ಆಳಿದ ಕಾಂಗ್ರೆಸ್ ಮೂಲತತ್ವವನ್ನೇ ಬದಲಾಯಿಸಲು ಮುಂದಾಗಿತ್ತು ಎಂಬುದು ಈಗ ಇತಿಹಾಸ. ತನ್ನ ಅಧಿಕಾರ ಉಳಿಸಿಕೊಳ್ಳಲು ಜನರ ಮೂಲಭೂತ ಹಕ್ಕುಗಳನ್ನೇ ಕಿತ್ತುಕೊಂಡು ತುರ್ತು ಸ್ಥಿತಿ ಜಾರಿಗೊಳಿಸಿತು. ತುರ್ತು ಪರಿಸ್ಥಿತಿ ಹೇರಿಕೆಗೆ ಆಗ ಮಾದರಿಯಾದದ್ದು 1933ರಲ್ಲಿ ಜರ್ಮನಿ ದೇಶದ ಸರ್ವಾಧಿಕಾರಿ ಹಿಟ್ಲರ್‌ನ ಆಡಳಿತ. ಆತ ಆಗ ವಿಪಕ್ಷ ನಾಯಕರನ್ನು ಬಂಧಿಸಿದ್ದ, ಪತ್ರಿಕಾ ಸ್ವಾತಂತ್ರ್ಯಕ್ಕೆ ನಿರ್ಬಂಧ ಹೇರಿದ್ದ, ಜನರನ್ನು ಸಮಾಧಾನಪಡಿಸಲು 25 ಅಂಶಗಳ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದ. ಆತನ ಆಪ್ತನೊಬ್ಬ ‘ಜರ್ಮನಿಯೆಂದರೆ ಹಿಟ್ಲರ್, ಹಿಟ್ಲರ್ ಎಂದರೆ ಜರ್ಮನಿ’ ಎಂದು ಘೋಷಿಸಿದ್ದ. ಈ ಎಲ್ಲಾ ಅಂಶಗಳು ಈ ದೇಶದಲ್ಲಿ 1975ರಲ್ಲಿ ತುರ್ತುಸ್ಥಿತಿ ಘೋಷಣೆಯಾದಾಗ ಇಲ್ಲೂ ಜಾರಿಗೆ ಬಂದಿದ್ದನ್ನು ನೆನಪಿಸಿಕೊಂಡಾಗ ಸಂವಿಧಾನವನ್ನೇ ಸ್ಥಗಿತಗೊಳಿಸುವ ಕಾರ್ಯಕ್ಕೆ ಮುಂದಾದವರು ಯಾರೆಂದು ಗೊತ್ತಾಗುತ್ತದೆ.

ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ವಾಕ್ ಸ್ವಾತಂತ್ರ್ಯ ರದ್ದತಿಯನ್ನು ಸಮರ್ಥಿಸಿ ಆಗಿನ ಅಟಾರ್ನಿ ಜನರಲ್ ನಿರೇನ್ ಡೇ ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಂಡಿಸಿದ್ದರು. ‘ಸಂವಿಧಾನದ 21ನೇ ವಿಧಿ ಅಡಿಯಲ್ಲಿ ಪ್ರಜೆಗೆ ಸ್ವಾತಂತ್ರ್ಯವನ್ನು ಮಾತ್ರ ಕೊಟ್ಟಿಲ್ಲ. ಜತೆಗೆ ಜೀವಿಸುವ ಹಕ್ಕನ್ನೂ ನೀಡಿದೆ. ಹಾಗಾಗಿ, ಸರ್ಕಾರವು ಒಬ್ಬ ವ್ಯಕ್ತಿಯನ್ನು ಗುಂಡಿಟ್ಟು ಕೊಂದರೆ, ನ್ಯಾಯಾಂಗದಿಂದ ಪರಿಹಾರ ಪಡೆಯುವ ಹಕ್ಕು ಆ ವ್ಯಕ್ತಿಯ ಪರಿವಾರಕ್ಕೆ ಇಲ್ಲವೇ’ ಎಂದು ಆಗಿನ ನ್ಯಾಯಮೂರ್ತಿ ಎಚ್.ಆರ್. ಖನ್ನಾ ಅವರು ಡೇ ಅವರನ್ನು ಪ್ರಶ್ನಿಸಿದ್ದರು. ಅದಕ್ಕೆ ಡೇ ಹೀಗೆ ಉತ್ತರಿಸಿದ್ದರು: ‘ತುರ್ತು ಪರಿಸ್ಥಿತಿ ಜಾರಿಯಲ್ಲಿರುವಾಗ ಹಾಗೆ ಮಾಡಿದರೆ (ಸರ್ಕಾರದಿಂದ ಹತ್ಯೆ) ತಪ್ಪಿಲ್ಲ’.

ಅಂದರೆ, ಮನುಷ್ಯನ ಪ್ರಾಣಹರಣಕ್ಕೂ ಆಗ ಅವಕಾಶ ಪಡೆದುಕೊಳ್ಳಲಾಗಿತ್ತು. ಈ ರೀತಿ ಮನುಷ್ಯನ ಜೀವಿಸುವ ಹಕ್ಕನ್ನೇ ಕಿತ್ತುಕೊಂಡಿದ್ದ ಪಕ್ಷವೊಂದು ಈಗ ಬಿಜೆಪಿಯ ಮೇಲೆ ಆರೋಪ ಮಾಡುತ್ತಿರುವುದು ಹಾಸ್ಯಾಸ್ಪದ.

ಒಂದು ಕಾಲದಲ್ಲಿ ಬಲಿಷ್ಠ ಮರದಂತಿದ್ದ ಕಾಂಗ್ರೆಸ್, ಈಗ ಬಳ್ಳಿಯಂತಾಗಿದೆ. ಅಸ್ತಿತ್ವ ಉಳಿಸಿಕೊಳ್ಳಲು ಹೆಣಗಾಡುತ್ತಿದೆ. ಎರಡು ಬಾರಿ ಪೂರ್ಣ ಬಹುಮತದೊಂದಿಗೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಹಲವು ರಾಜ್ಯಗಳಲ್ಲಿಯೂ ಅಧಿಕಾರದಲ್ಲಿದೆ. ಬಿಜೆಪಿಯ ಯಶಸ್ಸು ಸಹಿಸಿಕೊಳ್ಳಲಾಗದ ಕಾಂಗ್ರೆಸ್ ಪಕ್ಷವು ಸ್ವಾಯತ್ತ ಸಂಸ್ಥೆಗಳನ್ನು ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ ಎಂದು ತನ್ನ ಅಸಹನೆ ಹೊರಹಾಕುತ್ತಿದೆ.

ಈ ದೇಶದ ನ್ಯಾಯಾಂಗ ಇಂದು ಸ್ವತಂತ್ರ ಹಾಗೂ ಸ್ವಾಯತ್ತವಾಗಿದೆ. ಶಾಸಕಾಂಗ ಹಾಗೂ ಕಾರ್ಯಾಂಗ ತಪ್ಪಿ ನಡೆದಾಗ ಅವುಗಳನ್ನು ಸರಿದಾರಿಗೆ ತರುವ ಹೊಣೆಯನ್ನು ನಿರ್ವಹಿಸುತ್ತಾ ಬಂದಿದೆ. ಚುನಾವಣಾ ಆಯೋಗವು ಅತ್ಯಂತ ನಿಷ್ಪಕ್ಷಪಾತವಾಗಿ, ಪ್ರಾಮಾಣಿಕವಾಗಿ ಚುನಾವಣೆಯನ್ನು ನಡೆಸುತ್ತಾ ಬಂದಿದ್ದರೂ ಕಾಂಗ್ರೆಸ್ ಪಕ್ಷ ಸೇರಿದಂತೆ ಕೆಲವು ಪಕ್ಷಗಳು ತಮ್ಮ ಸಂಶಯವನ್ನು ತೇಲಿಬಿಡುತ್ತಿವೆ. ಪರಾಭವ ಅನುಭವಿಸಿದಾಕ್ಷಣ ಮತಯಂತ್ರಗಳನ್ನು ದೂಷಿಸಲು ಮುಂದಾಗುತ್ತವೆ. ತಮ್ಮ ಪರವಾಗಿ ಫಲಿತಾಂಶ ಬಂದಾಗ ಜನಾದೇಶವೆಂದು ಬೆನ್ನುತಟ್ಟಿಕೊಳ್ಳುವ ವಿಚಿತ್ರ ವರ್ತನೆಗೆ ಒಳಗಾಗಿವೆ.

ಪಶ್ಚಿಮ ಬಂಗಾಳದಲ್ಲಿ ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು 24 ತಾಸು ಚುನಾವಣಾ ಪ್ರಚಾರ ಮಾಡುವುದನ್ನು ಆಯೋಗ ನಿರ್ಬಂಧಿಸಿತು. ತಪ್ಪು ಒಪ್ಪಿಕೊಳ್ಳುವ ಬದಲು ಆಯೋಗವನ್ನೇ ಬಿಜೆಪಿ ಪರ ಎಂದು ದೂರುವ ಕೀಳುಮಟ್ಟಕ್ಕೆ ತೃಣಮೂಲ ಕಾಂಗ್ರೆಸ್ ಮುಂದಾಯಿತು.

ಮಮತಾ ಅವರಂತೂ ಮಾಡೆಲ್ ಕೋಡ್ ಆಫ್ ಕಾಂಡಕ್ಟ್ ಅನ್ನು ಮೋದಿ ಕೋಡ್ ಆಫ್ ಕಾಂಡಕ್ಟ್ ಎಂದು ಅವಹೇಳನ ಮಾಡಿದರು. ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಆಯೋಗ ಏಕಪಕ್ಷೀಯ ನಿರ್ಧಾರ ತಾಳಲಿಲ್ಲ. ಬಿಜೆಪಿ ಮುಖಂಡ ಸುವೇಂದು ಅಧಿಕಾರಿ ಅವರಿಗೆ ನೀತಿ ಸಂಹಿತೆ ಉಲ್ಲಂಘಿಸಿದ್ದಕ್ಕಾಗಿ ನೋಟಿಸ್ ಜಾರಿಗೊಳಿಸಿದರೆ, ರಾಹುಲ್ ಸಿನ್ಹಾ ಅವರನ್ನು 2 ದಿನ ಪ್ರಚಾರ ಮಾಡುವುದನ್ನು ನಿರ್ಬಂಧಿಸಿತು. ಇದನ್ನು ಅರ್ಥಮಾಡಿಕೊಳ್ಳದೆ ಆಯೋಗವನ್ನೇ ದೂರುವ ಪ್ರವೃತ್ತಿಗೆ ಕೆಲವು ಪಕ್ಷಗಳು ಮುಂದಾಗಿವೆ.

ಈ ಹಿಂದೆ ಯುಪಿಎ ಸರ್ಕಾರ ಇದ್ದಾಗ ಈ ಸಂಸ್ಥೆಗಳ ದುರುಪಯೋಗವಾಗಿದೆ. ಇಂದು ಕೇಂದ್ರದಲ್ಲಿ ಗೃಹ ಸಚಿವರಾಗಿರುವ ಬಿಜೆಪಿ ಮುಖಂಡ ಅಮಿತ್ ಶಾ ಅವರ ಮೇಲೆ ಅಂದು ಕಾಂಗ್ರೆಸ್ ಸರ್ಕಾರ ಸುಳ್ಳು ಆರೋಪ ಹೊರಿಸಿ ಮೊಕದ್ದಮೆ ದಾಖಲಿಸಿತ್ತು; ಮಾಲೇಗಾಂವ್ ಸ್ಫೋಟ ಪ್ರಕರಣದಲ್ಲಿ ಕರ್ನಲ್ ಪುರೋಹಿತ್ ಮತ್ತು ಸಾಧ್ವಿಯವರನ್ನು ಸಿಲುಕಿಸಲು ಯತ್ನಿಸಿದ್ದು, ಹಾಗೂ ಈ ದೇಶದಲ್ಲಿ ಹಿಂದೂ ಭಯೋತ್ಪಾದನೆ ಇದೆ ಎಂಬ ಸುಳ್ಳನ್ನು ಸತ್ಯವಾಗಿಸಲು ಯತ್ನಿಸಿದ್ದರ ಬಗ್ಗೆ ಕಾಂಗ್ರೆಸ್ ಮಾತನಾಡುವುದಿಲ್ಲ. ಬಿಜೆಪಿಗೆ ಸಾಂವಿಧಾನಿಕ ಸಂಸ್ಥೆಗಳ ಬಗ್ಗೆ ವಿಶ್ವಾಸ ಹಾಗೂ ಗೌರವವಿದೆ. ಕೇಂದ್ರದಲ್ಲಿ ಪ್ರಧಾನಿ ಮೋದಿಯವರ ನೇತೃತ್ವದ ಸರ್ಕಾರವು ಅತ್ಯಂತ ಸಮರ್ಥವಾಗಿ ಶುದ್ಧವಾದ ಆಡಳಿತ ನಡೆಸುತ್ತಿದೆ; ಟೀಕಿಸಲು ಯಾವುದೇ ವಿಷಯಗಳು ಈ ಪಕ್ಷಗಳಿಗೆ ದೊರಕುತ್ತಿಲ್ಲ. ಹಾಗಾಗಿಯೇ ಕಾಂಗ್ರೆಸ್ ಪಕ್ಷವು ಸಲ್ಲದ ಆರೋಪಗಳನ್ನು ಮಾಡುತ್ತಾ ಬರುತ್ತಿದೆ. ಸಂವಿಧಾನ ಈ ದೇಶದ ಅತ್ಯಂತ ಪವಿತ್ರವಾದ, ಜನರ ಬದುಕಿಗೆ ಪೂರಕವಾದ, ಆಡಳಿತಗಾರರಿಗೆ ದಾರಿದೀಪವಾದ ಗ್ರಂಥ ಎಂಬುದು ಬಿಜೆಪಿಯ ನಂಬಿಕೆ. ಅದನ್ನು ಅನುಸರಿಸಿ ಅದು ಈಗಲೂ ನಡೆಯುತ್ತಿದೆ. ಮುಂದೆಯೂ ನಡೆಯಲಿದೆ. ಮುಂದಿನ ಪೀಳಿಗೆಗೆ ಈ ಸಂವಿಧಾನವನ್ನು ಪರಿಶುದ್ಧವಾಗಿಯೇ ನೀಡುವ ನಿರ್ಧಾರ, ನಿಶ್ಚಯ, ಆಶಯ ಬಿಜೆಪಿಯದ್ದಾಗಿದೆ.

ಲೇಖಕ: ಶಾಸಕ, ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ಕುಂಬಳಕಾಯಿ ಕಳ್ಳ ಎಂದರೆ...

ಇ.ಡಿ, ಐಟಿ ದಾಳಿ ನಡೆಸಿದಾಗಲೆಲ್ಲಾ ‘ಇದು ಬಿಜೆಪಿ ಪ್ರೇರಿತ’ ಎಂಬುದು ಕಾಂಗ್ರೆಸ್ಸಿಗರ ಕೂಗು. ಆರ್ಥಿಕ ಅಪರಾಧದ ಆರೋಪದಲ್ಲಿ ದಾಳಿ ನಡೆದ ಪ್ರಕರಣಗಳಲ್ಲಿ ಕಾಂಗ್ರೆಸ್ಸಿನ ಹಿರಿಯ ಮುಖಂಡರೇ ಸಿಕ್ಕಿಬಿದ್ದು, ಸೆರೆಮನೆ ಸೇರಿ ಈಗ ಜಾಮೀನಿನ ಮೇಲೆ ಹೊರಬಂದಿದ್ದಾರೆ. ಜಾರಿ ನಿರ್ದೇಶನಾಲಯ ಬಿಜೆಪಿ ಮುಖಂಡರ ಮೇಲೂ ದಾಳಿ ನಡೆಸಿದೆ. ಇದನ್ನು ವಿರೋಧ ಪಕ್ಷಗಳು ಮನಗಾಣಬೇಕು. ಕುಂಬಳಕಾಯಿ ಕಳ್ಳ ಎಂದಾಕ್ಷಣ ಹೆಗಲು ಮುಟ್ಟಿನೋಡಿಕೊಳ್ಳುವ ಇವರ ವರ್ತನೆಯೇ ಅನುಮಾನಾಸ್ಪದ.

ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಮಾನವತೆಯೇ ನಿಜ ಧರ್ಮ

ವಿಶ್ವದಲ್ಲಿ ಧರ್ಮಗಳ ಹುಟ್ಟಿನಿಂದಲೇ ಮಾನವ ಸಂಘರ್ಷ ಅತಿರೇಕಕ್ಕೆ ಹೋಗಿದೆ ಅನ್ನೋ ಆರೋಪವಿದೆ. ಇದು ಅರ್ಧ ಸತ್ಯ. ಪೂರ್ಣ ಸತ್ಯ ಎಂದರೆ, ವಿಶ್ವದಲ್ಲಿ ಧರ್ಮ ಹುಟ್ಟದಿದ್ದರೆ ಮನುಷ್ಯ ಸಂಘರ್ಷ ಮತ್ತಷ್ಟು ತಾರಕಕ್ಕೇರಿ ಇಷ್ಟೊತ್ತಿಗೆ ಮಂಗಳಗ್ರಹದ ಜೀವಿಗಳಂತೆ ನಾಶವಾಗಿರುತ್ತಿದ್ದ. ಕಾಡಿನಲ್ಲಿ ಪ್ರಾಣಿಯಂತೆ ವರ್ತಿಸುತ್ತಿದ್ದ ಮಾನವನಿಗೆ ನಾಗರಿಕತೆ ಕಲಿಸಿ, ಅವನಲ್ಲಿ ರಾಕ್ಷಸಿತನ ಅಳಿಸಿ, ಇಲ್ಲಿವರೆಗೆ ಮನುಷ್ಯತನ ಬೆಳೆಸಿದ್ದೆ ಧರ್ಮ. ಧರ್ಮದ ಮೂಲ ಮತ್ತು ಅದರ ಆಶಯ ಅರ್ಥ ತಿಳಿಯದ ಮನುಷ್ಯನ ಬುದ್ಧಿ ವಿಕಲ್ಪದಿಂದ ಧರ್ಮ ತನ್ನ ನೈಜತೆ ಕಳೆದುಕೊಂಡಿದೆಯಷ್ಟೆ.

ಜ್ಞಾನಸಾಗರ ಮಂಥಿಸುವಾಗ ಜ್ಞಾನಾಮೃತದ ಜೊತೆ ಅಜ್ಞಾನದ ವಿಷವೂ ಉಕ್ಕುತ್ತೆ. ಹೀಗೆ ಉಕ್ಕುವ ಅಜ್ಞಾನದ ವಿಷವನ್ನು ಕುಡಿದು, ಸುಜ್ಞಾನ ಸವಿಯುವ ಶಿವ-ಶಿವೆಯರು ಬೇಕು. ಆಗಷ್ಟೆ ಧರ್ಮದ ಹುಟ್ಟು ಸಾರ್ಥಕ್ಯ ಪಡೆಯುವುದು. ಧರ್ಮಜ್ಞಾನ ಸವಿಯುವಾಗ, ಅಧರ್ಮದ ತಿಮಿರ ನುಸುಳದಂತೆ ಎಚ್ಚರವಹಿಸಬೇಕು. ಅಂಥ ಜಾಗೃತ ಪ್ರಜ್ಞೆ ನಮ್ಮಲ್ಲಿ ಮೂಡಬೇಕಾದರೆ ಸಾತ್ವಿಕ ಮನಸಿರಬೇಕು. ಪರರನ್ನು ಹಿಂಸಿಸದೆ, ಎಲ್ಲರನ್ನೂ ತನ್ನವರೆಂದು ಒಪ್ಪಿಕೊಳ್ಳುವ ಒಳ್ಳೆ ಬುದ್ಧಿಬೇಕು. ಇಂಥ ಒಳ್ಳೆ ಮನಸಿಲ್ಲದೆ, ಢಂಬಾಚಾರಕ್ಕೆ ದೇವರನ್ನು ಪೂಜಿಸುವ-ಆರಾಧಿಸುವ ಪ್ರದರ್ಶನ ಮಾಡಿದರೆ, ನಿಜಧರ್ಮದ ಅರಿವಾಗುವುದಿಲ್ಲ.

ನಾವು ತಿನ್ನುವ ಅನ್ನ ಒಳ್ಳೆಯದೋ-ಕೆಟ್ಟದೆಯೋ ಅಂತ ತಿಳಿಯಲು ನಾಲಿಗೆಗೆ ಗ್ರಹಣ-ಶಕ್ತಿ ಇದೆ. ಆದರೆ ಸುಜ್ಞಾನ ಯಾವುದು? ಅಜ್ಞಾನ ಯಾವುದು ಎಂದು ತಿಳಿಯುವಶಕ್ತಿ ನಮ್ಮ ಬುದ್ಧಿಗಿಲ್ಲ. ಅಂಥ ಗ್ರಹಣದ ಶಕ್ತಿಯನ್ನು ಬುದ್ಧಿಗೆ ಕಲ್ಪಿಸುವುದು ಧರ್ಮ. ಆ ಧರ್ಮ ನಮ್ಮ ಬುದ್ಧಿಯೊಳಗೆ ಸರಿಯಾದ ರೀತಿಯಲ್ಲಿ ಸ್ಥಾಪಿತವಾದರೆ, ಅಜ್ಞಾನ-ಸುಜ್ಞಾನದ ವ್ಯತ್ಯಾಸ ಗ್ರಹಿಸುವ ಬುದ್ಧಿಶಕ್ತಿ ಬರುತ್ತದೆ. ನಮ್ಮ ಬುದ್ಧಿಯೊಳಗೆ ಧರ್ಮ ಸರಿಯಾಗಿ ಸ್ಥಾಪಿತವಾಗದಿದ್ದರೆ ಮೂಢನಾಗಿ ಧರ್ಮಾಂಧನಾಗುತ್ತಾನೆ. ಇಂಥ ಪರರನ್ನು ದ್ವೇಷಿಸುವ ಕುಬುದ್ಧಿಗೆ ಧರ್ಮದ ನಿಜರೂಪ ಎಂದಿಗೂ ತಿಳಿಯಲಾರದು. ಧರ್ಮವನ್ನು ಸರಿಯಾದ ರೀತಿಯಲ್ಲಿ ಅಳವಡಿಸಿಕೊಳ್ಳದವರ ತಪ್ಪಿನಿಂದ ಇಂದು ಜಗತ್ತು ಧರ್ಮಾಂಧತೆಯಲ್ಲಿ ಬೇಯುತ್ತಿದೆ. ಧರ್ಮವನ್ನು ಸಂಕುಚಿತ ಬುದ್ಧಿಯಲ್ಲಿ ಬಂಧಿಸಿಡುವ ಅಲ್ಪಜ್ಞರಿಂದ ಜಗತ್ತು ನೋವು ಅನುಭವಿಸುತ್ತಿದೆ.

ಅಂತರ್ ಧರ್ಮಗಳ ಕಲಹದಿಂದ ದೇಶಕ್ಕೆ ದೇಶವೇ ಉರಿಯುತ್ತಿರುವುದನ್ನು ಕಂಡು ಕೆಲವರು, ಇಂಥ ಮಾನವ ದುರಂತಕ್ಕೆ ಧರ್ಮಗಳು ಹುಟ್ಟಬೇಕಿತ್ತಾ ಅಂತ ಅಸಮಾಧಾನದಿಂದ ನುಡಿಯುವುದಿದೆ. ರಸ್ತೆ ಅಪಘಾತವಾಗುತ್ತೆ ಅಂತ ವಾಹನ ಬಳಕೆಯೇ ತಪ್ಪು ಎನ್ನಲಾಗುತ್ತದೆಯೇ? ಮನುಷ್ಯ ಕಾರಣದಿಂದಾಗುವ ತಪ್ಪನ್ನ ಧರ್ಮದ ಮೇಲೆ ಹೊರಿಸುವುದು ಸರಿಯಲ್ಲ. ಧರ್ಮಗಳು ಹುಟ್ಟಿದಾಗಿನಿಂದ ಮಾನವರಲ್ಲಿ ಹುಟ್ಟಿದ ಸಂಕುಚಿತ ಬುದ್ಧಿ ನಿವಾರಣೆಗೆ ಪ್ರಯತ್ನಿಸಲಾಗಿದೆ. ಧರ್ಮಗಳ ನಡುವೆ ಸಮನ್ವಯತೆ ಬೆಳೆಸಲು ಶ್ರಮಿಸಲಾಗಿದೆ. ಅದರ ತತ್ಫಲವಾಗಿಯೇ ಜಗತ್ತಿನಲ್ಲಿ ಬಹಳಷ್ಟು ಧರ್ಮ ಸಂಘರ್ಷಗಳು ಕೊನೆಯಾಗಿವೆ. ಅದು ಇನ್ನೂ ಹಲವೆಡೆ ಮುಂದುವರೆದಿದೆ ಎಂದರೆ; ಅಲ್ಲಿ ವಿಶಾಲ ಮನೋಭಾವ ಅಳಿದು, ಸಂಕುಚಿತ ಮೂರ್ಖಭಾವ ಉಳಿದಿದೆ ಎಂದರ್ಥ. ಅಂಥ ಸ್ಥಳದಲ್ಲಿ ಉಳಿದಿರುವುದು ಧರ್ಮವಲ್ಲ, ಧರ್ಮದ ಹೆಸರಿನ ಮೌಢ್ಯ.

ಮನುಷ್ಯನನ್ನ ಮನುಷ್ಯನ ರೀತಿ ನೋಡುವ ದೃಷ್ಟಿಯೇ ಧರ್ಮ. ಅಂಥ ಮಾನವೀಯ ದೃಷ್ಟಿಯೇ ಕುರುಡಾದರೆ ಧರ್ಮ ಮಸುಕಾಗಿ, ಅಧರ್ಮ ಕೋರೈಸುತ್ತದೆ. ಇಂಥ ಅಧರ್ಮ ತಾಂಡವವಾಡುವಾಗ ಶ್ರೀಕೃಷ್ಣರಂಥ ಅವತಾರ ಪುರುಷರು ಜನ್ಮತಾಳಿ ಮಾನವತೆಯ ನಿಜಧರ್ಮ ತೋರಿಸಿದ್ದಾರೆ. ಬಹುಶಃ ಭಾರತದಲ್ಲಿ ನಡೆದಷ್ಟು ಧಾರ್ಮಿಕ ಆವಿಷ್ಕಾರ, ಪರಿಷ್ಕಾರ ಜಗತ್ತಿನ ಬೇರಾವ ಭೂಭಾಗದಲ್ಲೂ ನಡೆದಿರಲಾರದು. ಇದರಿಂದಾಗಿಯೇ, ಭಾರತ ಸರ್ವಧರ್ಮಗಳ ಸಮನ್ವಯ ಸತ್ವಭೂಮಿಯಾಗಿ ಬೆಳೆಯಲು ಸಾಧ್ಯವಾಗಿದೆ. ಧರ್ಮದೊಳಗೆ ಸೇರಿರುವ ಅಜ್ಞಾನ ಅಳಿದು, ಧರ್ಮಜ್ಞಾನ ‘ಸಚ್ಚಿದಾನಂದ’ ಭಾವದಲ್ಲಿ ಅರಳಿದರೆ, ಮಾನವತೆ ಹಣತೆ ಜಗತ್ತಿನೆಲ್ಲೆಡೆ ಶಾಶ್ವತವಾಗಿ ಬೆಳಗುತ್ತದೆ.

ಗುಂಡಣ್ಣ



ದಿನ ಭವಿಷ್ಯ

ಶನಿವಾರ 17 ಏಪ್ರಿಲ್ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಅಶ್ವಿನಿ ಪಂಚಮೀ ಗಂ. 25-3 (ಹ. 4-15) ಶನಿವಾರ ನಿತ್ಯ ನಕ್ಷತ್ರ ಮೃಗಶಿರ ಗಂ. 40-56 (ರಾ. 10-36) ಶೋಭನ ನಾಮ ಯೋಗ ಗಂ 24-20 ಬಾಲವ ಕರಣ ಗಂ. 25-3 ವಿಷಾಭಾವಃ ಅಮೃತ ಗಂ. 16-36 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ: 6-11 ಸೂರ್ಯಾಸ್ತ: 6-29 ಅದೃಷ್ಟ ಸಂಖ್ಯೆ 2 6

ಮೇಷ: ವೈದ್ಯಕೀಯ ಕ್ಷೇತ್ರ, ಸಂಶೋಧಕರು, ಔಷಧ ವಿತರಕರಿಗೆ ವೃತ್ತಿಯಲ್ಲಿ ಹೆಚ್ಚಿನ ಬದಲಾವಣೆ. ಲೇವಾದೇವಿ ವ್ಯವಹಾರ ನಡೆಸುವವರಿಗೆ ಹೆಚ್ಚಿನ ಲಾಭ ದೊರಕಲಿದೆ. ಸಂಗಾತಿಯ ಆರೋಗ್ಯದಲ್ಲಿ ವ್ಯತ್ಯಯ ಸಾಧ್ಯತೆ.

ವೃಷಭ: ಸಂಪತ್ತಿನಲ್ಲಿ ವೃದ್ಧಿಯನ್ನು ಕಂಡುಕೊಳ್ಳುವಿರಿ. ಜಲಸಂಬಂಧಿ ಉದ್ಯೋಗದಲ್ಲಿರುವವರಿಗೆ ಬಡ್ತಿ ಸಾಧ್ಯತೆ. ರಾಜಕೀಯ ವ್ಯಕ್ತಿಗಳಿಂದ ಕಿರಿಕಿರಿ ಸಾಧ್ಯತೆ. ಹೊಸ ವ್ಯಕ್ತಿಯೊಬ್ಬರ ಪರಿಚಯದಿಂದ ಸಂತಸ ಮೂಡಲಿದೆ.

ಮಿಥುನ: ಸಾಂಸಾರಿಕ ಜೀವನ ಸುಖಾನುಭವವನ್ನು ನೀಡಲಿದೆ. ವಿದ್ಯಾರ್ಥಿಗಳಿಗೆ ಪರೀಕ್ಷಾ ತಯಾರಿಯಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ. ಮಹಿಳಾ ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ಭಾಗ್ಯ ಲಭಿಸುವ ಸಾಧ್ಯತೆ. ವ್ಯಾಪಾರದಲ್ಲಿ ಪ್ರಗತಿ.

ಕರ್ಕಾಟಕ: ಮನಸ್ಸಿಗೆ ಉಲ್ಲಾಸ ತರುವ ಸುದ್ದಿಯನ್ನು ಕೇಳಲಿದ್ದೀರಿ. ವ್ಯಾಪಾರ ವ್ಯವಹಾರದಲ್ಲಿ ಉತ್ತಮ ಪ್ರತಿಫಲ ನಿರೀಕ್ಷೆ. ಉದ್ಯಮಿಗಳಿಗೆ ವಿಶೇಷ ಅನುಕೂಲತೆ. ಆರಕ್ಷಕ ಅಧಿಕಾರಿಗಳಿಗೆ ವಿಶೇಷ ಅಧಿಕಾರ ಪ್ರಾಪ್ತಿ.

ಸಿಂಹ: ಸಗಟು ವ್ಯಾಪಾರದಲ್ಲಿ ತೊಡಗಿರುವವರಿಗೆ ಧನಲಾಭ. ಗಣಕಯಂತ್ರ ಮುಂತಾದ ತಾಂತ್ರಿಕ ವಸ್ತುಗಳ ಖರೀದಿ ಸಾಧ್ಯತೆ. ಬಂಧುಗಳ ಸಹಕಾರದಿಂದ ಸಹೋದರರಿಂದ ಎದುರಾಗಬಹುದಾದ ವಿರೋಧಗಳು ಶಮನಗೊಳ್ಳಲಿವೆ.

ಕನ್ಯಾ: ಮನಸ್ಸಿಗೆ ಸ್ವಲ್ಪಮಟ್ಟಿನ ವ್ಯಥೆ. ಮಕ್ಕಳ ವಿಷಯದಲ್ಲಿ ಗಮನ ಅಗತ್ಯ. ಸ್ತ್ರೀಯರಿಗೆ ದೈಹಿಕ ಶ್ರಮ. ಯುವತಿಯರಿಗೆ ಮಾಂಗಲ್ಯ ಭಾಗ್ಯ ಕೂಡಿಬರಲಿದೆ. ಸ್ನೇಹಿತರೊಂದಿಗೆ ಆರ್ಥಿಕ ವಿಷಯಕ್ಕೆ ಸಂಬಂಧಿಸಿದಂತೆ ವಿರಸ.

ತುಲಾ: ವ್ಯವಸಾಯದಲ್ಲಿನ ಅಭಿವೃದ್ಧಿಯಿಂದ ಆದಾಯದಲ್ಲಿ ಹೆಚ್ಚಳ. ಔಷಧ ವಿತರಕರಿಗೆ ಅನುಕೂಲಕರ ವ್ಯವಹಾರ ಸಾಗಲಿದೆ. ಆಭರಣ ವ್ಯವಹಾರಸ್ಥರಿಗೆ ವ್ಯವಹಾರದಲ್ಲಿ ಚೇತರಿಕೆ ಉಂಟಾಗಿ ಲಾಭದಲ್ಲಿ ಹೆಚ್ಚಳವಾಗಲಿದೆ.

ವೃಶ್ಚಿಕ: ಜಮೀನು ಆಸ್ತಿಗಳಿಗೆ ಸಂಬಂಧಿಸಿದ ನೋಂದಣಿ ಕಾರ್ಯಗಳು ಪೂರ್ಣಗೊಳ್ಳಲಿವೆ. ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಭಾಗವಹಿಸುವ ಸದವಕಾಶ. ಯೋಧರು, ಕ್ರೀಡಾಪಟುಗಳಿಗೆ ಸರ್ಕಾರದ ಗೌರವ.

ಧನು: ಸಂಗೀತ ಮೊದಲಾದ ಲಲಿತಕಲೆಗಳ ಪರಿಣತರಿಗೆ ಪ್ರದರ್ಶನದ ಅವಕಾಶಗಳೊಂದಿಗೆ ಸಾರ್ವಜನಿಕ ಮನ್ನಣೆಗೆ ಪ್ರಾಪ್ತವಾಗುವ ಅವಕಾಶ. ಉತ್ತಮ ಆರೋಗ್ಯ ನಿಮ್ಮದಾಗಲಿದೆ. ಮಕ್ಕಳಿಗೆ ವಿದೇಶಕ್ಕೆ ತೆರಳುವ ಅವಕಾಶ.

ಮಕರ: ಬರಬೇಕಾದ ಹಣ ಹಿಂದಿರುಗಿ ಬರಲಿದೆ. ಸರ್ಕಾರಿ ಅಧಿಕಾರಿಗಳಿಂದ ಕಿರಿಕಿರಿ ಅಥವಾ ಬೆದರಿಕೆ. ಎಣ್ಣೆ, ಜೇನುತುಪ್ಪ, ಹಾಲು ಇತ್ಯಾದಿ ದ್ರವ ಪದಾರ್ಥಗಳ ವ್ಯಾಪಾರ ವ್ಯವಹಾರದಲ್ಲಿ ಅತ್ಯಂತ ಲಾಭ ದೊರಕಲಿದೆ.

ಕುಂಭ: ಗೃಹನಿರ್ಮಾಣ ಅಥವಾ ನವೀಕರಣ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಿದ್ದೀರಿ. ಗಣ್ಯ ವ್ಯಕ್ತಿಗಳ ಸಹಕಾರದಿಂದ ಕೆಲಸಕಾರ್ಯಗಳಲ್ಲಿ ಹೆಚ್ಚಿನ ಉತ್ಸಾಹ. ಸರ್ಕಾರಿ ಉದ್ಯೋಗದಲ್ಲಿರುವವರಿಗೆ ಬಡ್ತಿ.

ಮೀನ: ರಾಜಕೀಯ ಕ್ಷೇತ್ರದಲ್ಲಿ ವ್ಯವಹರಿಸುವವರಿಗೆ ಉತ್ತಮ ಸ್ಥಾನ ಲಭ್ಯ. ಆಸ್ತಿ ಖರೀದಿಯ ಸಾಧ್ಯತೆ. ಕೋರ್ಟು ಕಚೇರಿ ವ್ಯವಹಾರಗಳಲ್ಲಿ ನಿರೀಕ್ಷಿತ ಯಶವನ್ನು ಪಡೆಯಲಿದ್ದೀರಿ. ಉದ್ಯೋಗದಲ್ಲಿ ಪ್ರಗತಿಯನ್ನು ಕಾಣಬಹುದು.

ನಿಮ್ಮ ಜನ್ಮದಿನ 17-ಏಪ್ರಿಲ್ ಈ ದಿನ ಅತ್ಯಂತ ಶುಭಕರ. ಸಾಮಾನ್ಯ ವ್ಯಕ್ತಿತ್ವ ಕಂಡುಬಂದರೂ ಪ್ರತಿಭೆಗೆ ಕೊರತೆ ಇರದು. ನಿಮ್ಮ ವಿಶೇಷ ಪ್ರತಿಭೆಯು ಬೆಳಕಿಗೆ ಬರಲಿದೆ. ಸಹವರ್ತಿಗಳೊಂದಿಗಿನ ಬಾಂಧವ್ಯ ಹೆಚ್ಚುವುದರೊಂದಿಗೆ ಕಾರ್ಯಾನುಕೂಲವಾಗಲಿದೆ. ಉದ್ಯೋಗದಲ್ಲಿ ಪ್ರಗತಿ. ಆರೋಗ್ಯದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಿದ್ದೀರಿ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಏಪ್ರಿಲ್ 10ರಂದು ಸೀತಾಲಕುಚಿಯಲ್ಲಿ ಸಿಐಎಸ್‌ಎಫ್ ಸಿಬ್ಬಂದಿ ಮೇಲೆ ಅಲ್ಲಿಯ ಜನರು ನಡೆಸಿದ ದಾಳಿಯಲ್ಲಿ ಸಿಬ್ಬಂದಿ ಒಬ್ಬರು ಗಾಯಗೊಂಡಿದ್ದಾರೆ ಎಂದು ಪಶ್ಚಿಮ ಬಂಗಾಳ ಬಿಜೆಪಿ ಅಭ್ಯರ್ಥಿ ಚಿತ್ರವೊಂದನ್ನು ಟ್ವೀಟ್ ಮಾಡಿದ್ದಾರೆ. ಈ ಟ್ವೀಟ್ ಅನ್ನು ಬಿಜೆಪಿಯ ಹಲವು ನಾಯಕರು ಮರುಟ್ವೀಟ್ ಮಾಡಿದ್ದಾರೆ.

ಆದರೆ ಇದು ಸುಳ್ಳುಸುದ್ದಿ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಜಾರ್ಖಂಡ್‌ನ ಬಗಮಾರಾದ ಗಣಿ ಪ್ರದೇಶದಲ್ಲಿ ಕರ್ತವ್ಯದಲ್ಲಿದ್ದ ಸಿಐಎಸ್‌ಎಫ್ ಸಿಬ್ಬಂದಿ ಮೇಲೆ ಲಂಗೂರ್ ದಾಳಿ ನಡೆಸಿತ್ತು. ಅದರಲ್ಲಿ ಸಿಬ್ಬಂದಿ ಗಾಯಗೊಂಡಿದ್ದರು. ಅದೇ ಚಿತ್ರವನ್ನು ಈಗ ತಪ್ಪಾಗಿ ಹಂಚಿಕೊಳ್ಳಲಾಗುತ್ತಿದೆ ಎಂದು ಲಾಜಿಕಲ್ ಇಂಡಿಯನ್ ಹೇಳಿದೆ.

ಪದಬಂಧ 4569 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬಟ್ಟೆಯ ಅಗಲವಿದು (2)
2.ಹೆಪ್ಪುಗಟ್ಟಿದ ವಸ್ತು (3)
4.ತೆಳುವಾದ ಹೊಟ್ಟೆಯವಳು (4)
6.ದನಕರುಗಳು ಮೇಯುವ ಸ್ಥಳ (4)
8.ಪಾನಕ ಕುಡಿದು ಮಾಡಿದ ಅಡುಗೆ (2)
9.ಸಂಕಟದಿಂದ ಕಟ್ಟಿರುವ ತೆರ (2)
10.ಹೂಳಿಟ್ಟ ನಿಧಿ ಕರದೊಳಗಿದೆಯಲ್ಲಾ! (4)
12.ನಡುವೆ ಕೈ ಇದ್ದಾಗ ನಡೆದ ಘಟನೆ! (4)
14.ಈತ ಸರಿಸಮನಾದವನು (3)
15.ಅಂಕಣ ಬರಹದಲ್ಲಿರುವ ಸಂಖ್ಯೆ (2)

ಮೇಲಿಂದ ಕೆಳಕ್ಕೆ

1.ಅಗಲವಾದ ಹರಿವಾಣ (3)
2.ಆಳವಾದ ಗುಂಡಿಯಿದು (3)
3.ವಂಗ ದೇಶದ ಸಾಂಬಾರ ದ್ರವ್ಯ (3)
5.ಅತ್ತಿಂದಿತ್ತ ತೂಗಾಡುವ ವಸ್ತು (3)
7.ಹತ್ತರ ಗುಂಪು (3)
8.ಈತ ಪೋಷಕ (3)
9.ಕೊನೆಗೆ ಬೆಲೆಯಿದ್ದಾಗಲೆ ಇದು ಸೊಗಸು! (3)
11.ಅಸುರನನ್ನು ಹೀಗೂ ಕರೆವರು (3)
12.ಪ್ರತಿರೂಪ ಇಲ್ಲಿ ಕಾಣುತ್ತಿದೆ (3)
13.ಮದುವೆಯಿಲ್ಲಿ ಉಲ್ಟಾಪಲ್ಟಾ ಆಗಿಬಿಟ್ಟಿದೆ (3)



4568ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪಲಾಯನ 3.ಜನಹಿತ 5.ಕರಡಿ 6.ಅಧ್ವಾನ 7.ಗಣಪ 9.ಗುಮಾನಿ 11.ರಾವುತ 12.ಗುಲಾಮ 13.ಪರಿಣತ 15.ತಿನ್ನಾಸಕ

ಮೇಲಿಂದ ಕೆಳಕ್ಕೆ: 1.ಪಗಡಿ 2.ನಜ 4.ನಸುನಗು 5.ಕರಗ 8.ಪರಾಯಣ 10.ನಿಯಮ 12.ಗುಣಕ 14.ತತಿ

ಸುಡೊಕು 4955

					8	2	7	
			4	9				3
	7	8			2		5	
	3			4			8	
		1	7		5	6	2	
	6			1				
6			5	2		1		7
	1				4			
9		5		7		3		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4954 ಸುಡೊಕು

2	5	4	8	7	6	1	3	9
7	9	1	2	5	3	6	4	8
8	3	6	1	4	9	7	2	5
4	7	3	5	1	2	8	9	6
6	1	5	9	8	4	3	7	2
9	2	8	6	3	7	4	5	1
1	4	9	3	6	5	2	8	7
3	6	2	7	9	8	5	1	4
5	8	7	4	2	1	9	6	3

ಷೇರುಪೇಟೆ ವಹಿವಾಟು 28



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,581
ಇಂದಿನ ಅಂತ್ಯ	14,617
▲	36
ದಿನದ ಗರಿಷ್ಠ	14,697

ವಿನಿಮಯ ದರ

$ ಡಾಲರ್	74.35
£ ಪೌಂಡ್	102.45
€ ಯುರೊ	89.05
¥ ಯೆನ್ (100ಕ್ಕೆ)	68.46

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹505
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹510

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1630 (1600)
ಸೋಯಾ (ರಿಫೈನ್ಡ್)	₹1390 (1365)
ಸೂರ್ಯಕಾಂತಿ (ರಿಫೈನ್ಡ್)	₹1700 (1690)
ಪಾಮೋಲಿನ್	₹1295 (1275)

ಕೊಬ್ಬರಿ ಧಾರಣೆ

ಅರಸೀಕೆರೆ	₹14800-15666
ತುರುವೇಕೆರೆ	₹15300-15600

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೊಳೆ 900 - 9050
ಸಹುಗೋಟು 1,000-1,050
ರಾಶಿ 1,200-1,300
ರಾಶಿ ಉತ್ತಮ 1,300-1,400
ಜರಡಿ 1,500-1,550
ಹರಳಿದ್ದು 1,900-2,000
ಹಸಿರು ಸಾಧಾರಣ1,300-1,400
ಹಸಿರು ಉತ್ತಮ 1,700-1,750
ಹಸಿರು ಅತಿ ಉತ್ತಮ 1,900-2,000
ಕಾಳು ಮೆಣಸು 380
ಅಡಿಕೆ
ಪುತ್ತೂರು
ಕೋಕ 9500-24000
ಹೊಸತು 28500-41000
ಸುಳ್ಯ
ಕೋಕ 10000-22500
ಹೊಸತು 23000-41000
ಹಳತು 42500-50500
ಬಂಟ್ವಾಳ
ಕೋಕ 10000-22500
ಹೊಸತು 23500-41000

ಹಳತು 42500-50500
ಕುಂದಾಪುರ
ಹಳೆಚಾಲಿ 45000-49000
ಹೊಸಚಾಲಿ 35000-40000
ಕುಮಟಾ
ಚಿಪ್ಪು 26669-29999
ಕೋಕ 18569-28889
ಫ್ಯಾಕ್ಟರಿ 14099-17016
ಹಳೆಚಾಲಿ 45000-49000
ಹೊಸಚಾಲಿ 35000-40000
ಸಿದ್ದಾಪುರ
ಬಿಳಿಗೋಟು 24699-30189
ಕೋಕ 20099-29399
ಹಳೆಚಾಲಿ 34269-36199
ಕೆಂಪುಗೋಟು 23399-28789
ರಾಶಿ 39099-41599

ತಟ್ಟಿಬೆಟ್ಟೆ 29199-39869
ಯಲ್ಲಾಪುರ
ಬಿಳಿಗೋಟು 25609-31312
ಕೋಕ 18899-29299
ಚಾಲಿ 31899-39461
ಕೆಂಪುಗೋಟು 26899-32899
ರಾಶಿ 39930-45429
ತಟ್ಟಿಬೆಟ್ಟೆ 33899-38869
ಶಿವಮೊಗ್ಗ ಎಪಿಎಂಸಿ
ಬೆಟ್ಟೆ 42000-44299
ಗೊರಬಲು 125100-31859
ರಾಶಿ 38000-42589
ಸರಕು 48000-75400
ರಾಮನಗರ ರೇಷ್ಮೆ
ಮಿಶ್ರತಳಿ (ಸಿ.ಬಿ) 241-378
ದ್ವಿತಳಿ (ಬಿ.ವಿ) 296-468

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10,125	10,000	10000	132.7
ಎಸಿ	3,975	3,900	3,900	ಲಂಡನ್
ಆರ್‌ಪಿ	5100	5,100	5,150	1363
ಆರ್‌ಸಿ	2900	2950	2,900	--- ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

16-4-2021

ಜಾವಾ 70/80(ಹೊಸ)	10250-10300
ಜಾವಾ 80/90(ಹೊಸ)	9750-9800
ದಪ್ಪ ಮಧ್ಯಪ್ರದೇಶ(ಹೊಸ)	10000-11100
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640 (1610)
ಒಂದು ವಾರದ ಡೆಲಿವರಿ	1635 (1605)
ಸೋಯಾ ಕಚ್ಚಾ	1370 (1350)
ಪಾಮ್ ವಾರದ ಡೆಲಿವರಿ	1293 (1275)
ಸೂರ್ಯಕಾಂತಿ ಎಣ್ಣೆ ಕಚ್ಚಾ	1650 (1650)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
46,800 (46,750)
ಬೆಳ್ಳಿ ಕೆ.ಜಿ
68,700 (68,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎಲ್‌ಐಸಿ: ವಾರದಲ್ಲಿ ಐದು ದಿನ ಕೆಲಸ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ನೌಕರರಿಗೆ ವಾರದಲ್ಲಿ ಐದು ದಿನ ಕೆಲಸ, ಎರಡು ದಿನ (ಶನಿವಾರ, ಭಾನುವಾರ) ರಜೆ ವ್ಯವಸ್ಥೆ ಜಾರಿಗೆ ಬರುವ ಸಾಧ್ಯತೆ ಇದೆ. ಹೀಗೆ ಆದಲ್ಲಿ, ಗ್ರಾಹಕರು ವಾರದಲ್ಲಿ ಐದು ದಿನ ಮಾತ್ರ ಎಲ್‌ಐಸಿ ಕಚೇರಿಗಳಿಗೆ ತೆರಳಿ ಸೇವೆಗಳನ್ನು ಪಡೆಯುವ ಅವಕಾಶ ಇರುತ್ತದೆ.

'ವಾರದಲ್ಲಿ ಐದು ದಿನಗಳ ಕೆಲಸದ ವ್ಯವಸ್ಥೆಯನ್ನು ಜಾರಿಗೆ ತರಲು ಕೆಲವು ನಿಯಮಗಳನ್ನು ಪಾಲಿಸಬೇಕಿದೆ. ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ (ಐಆರ್‌ಡಿಎಐ) ನಿಯಮಗಳ ಅನ್ವಯ, ಇದರ ಬಗ್ಗೆ ಸಾರ್ವಜನಿಕರಿಗೆ ಮುಂಚಿತವಾಗಿ ಮಾಹಿತಿ ನೀಡಬೇಕು. ಹಾಗೆ ಮಾಹಿತಿ ನೀಡಿದ ನಂತರವಷ್ಟೇ ಹೊಸ ವ್ಯವಸ್ಥೆ ಜಾರಿಗೆ ಬರುವ ನಿರೀಕ್ಷೆ ಇದೆ. ಸದ್ಯಕ್ಕೆ ಈಗಿರುವ ವ್ಯವಸ್ಥೆ ಮುಂದುವರಿಯಲಿದೆ' ಎಂದು ಎಲ್‌ಐಸಿ ಮೂಲಗಳು ತಿಳಿಸಿವೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಕೇಂದ್ರ ಸರ್ಕಾರವು ಎಲ್‌ಐಸಿ ಷೇರುಗಳನ್ನು ಸಾರ್ವಜನಿಕರ ಖರೀದಿಗೆ ಮುಕ್ತಗೊಳಿಸುವ (ಐಪಿಒ) ಗುರಿ ಹೊಂದಿದೆ. ಸಾರ್ವಜನಿಕರಿಗೆ ಮಾರಾಟ ಮಾಡುವ ಷೇರುಗಳ ಪೈಕಿ ಶೇಕಡ 10ರಷ್ಟನ್ನು ವಿಮೆ ಹೊಂದಿರುವವರಿಗೆ ಮೀಸಲಿರಿಸಲಾಗುವುದು ಎಂದು ಕೂಡ ಕೇಂದ್ರ ಈಗಾಗಲೇ ಹೇಳಿದೆ.

ಎಲ್‌ಐಸಿಯಲ್ಲಿ ಇರುವ ಒಂದು ಲಕ್ಷಕ್ಕೂ ಅಧಿಕ ಸಂಖ್ಯೆಯ ನೌಕರರಿಗೆ 'ವಾರದಲ್ಲಿ ಐದು ದಿನ ಕೆಲಸ' ವ್ಯವಸ್ಥೆಯ ಪ್ರಯೋಜನ ಸಿಗಲಿದೆ. ಕೆಲಸದ ದಿನಗಳ ವಿಚಾರದಲ್ಲಿ ಬದಲಾವಣೆ ಅಲ್ಲದೆ, 'ನೌಕರರ ವೇತನದಲ್ಲಿ ಸರಿಸುಮಾರು ಶೇಕಡ 16ರಷ್ಟು ಹೆಚ್ಚಳಕ್ಕೂ ಕೇಂದ್ರ ಸರ್ಕಾರದಿಂದ ಅನುಮತಿ ದೊರೆತಿದೆ' ಎಂದು ಮೂಲಗಳು ತಿಳಿಸಿವೆ.

'ಎರಡನೆಯ ಅಲೆಯಿಂದ ಆರ್ಥಿಕತೆಗೆ ತೊಂದರೆ'

ಮುಂಬೈ (ಪಿಟಿಐ): ಕೋವಿಡ್–19 ಪ್ರಕರಣಗಳಲ್ಲಿ ಆಗುತ್ತಿರುವ ಹೆಚ್ಚಳವು ಆರ್ಥಿಕ ಪುನಶ್ಚೇತನಕ್ಕೆ ಅಪಾಯ ತಂದೊಡ್ಡಿದೆ ಎಂದು ಬ್ಯಾಂಕ್ ಆಫ್ ಅಮೆರಿಕ ಸೆಕ್ಯುರಿಟೀಸ್ ಹೇಳಿದೆ. 2020–21ರ ಮಾರ್ಚ್ ತ್ರೈಮಾಸಿಕದಲ್ಲಿ ಭಾರತದ ಒಟ್ಟು ಆಂತರಿಕ ಉತ್ಪಾದನೆಯಲ್ಲಿನ (ಜಿಡಿಪಿ) ಬೆಳವಣಿಗೆಯು ಶೇಕಡ 3ರಷ್ಟು ಆಗಿರುವ ಸಾಧ್ಯತೆ ಕಡಿಮೆ ಎಂದು ಅದು ಹೇಳಿದೆ.

ಬೆಳವಣಿಗೆಯ ಪ್ರಮಾಣವು ದುರ್ಬಲವಾಗಿದೆ. ಅರ್ಥ ವ್ಯವಸ್ಥೆಯ ಆರೋಗ್ಯವನ್ನು ಹೇಳುವ ಪ್ರಮುಖ ಸೂಚ್ಯಂಕಗಳು ಇಳಿಕೆ ಕಂಡಿವೆ. ಸಾಲ ನೀಡುವ ಪ್ರಮಾಣ ಕುಂದಿದೆ. ಕೋವಿಡ್–19 ಪ್ರಕರಣಗಳು ಹೆಚ್ಚಾಗುತ್ತಿರುವುದು ಸಮಸ್ಯೆಯನ್ನು ಜಾಸ್ತಿ ಮಾಡುತ್ತಿದೆ ಎಂದು ಅದು ಹೇಳಿದೆ.

ಕೋವಿಡ್‌ನ ಎರಡನೆಯ ಅಲೆಯು ರಾಷ್ಟ್ರಮಟ್ಟದಲ್ಲಿ ಲಾಕ್‌ಡೌನ್ ಇಲ್ಲದೆಯೇ ಕಡಿಮೆ ಆಗುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ. ದೇಶದ ಜಿಡಿಪಿಗೆ ಶೇಕಡ 16ಕ್ಕಿಂತ ಹೆಚ್ಚಿನ ಕೊಡುಗೆ ನೀಡುವ ಮಹಾರಾಷ್ಟ್ರ ರಾಜ್ಯದಲ್ಲಿ ಈಗಾಗಲೇ ಲಾಕ್‌ಡೌನ್ ರೀತಿಯ ನಿರ್ಬಂಧಗಳನ್ನು ಜಾರಿಗೆ ತರಲಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಎಟಿಎಫ್ ಬೆಲೆ ಶೇ 1ರಷ್ಟು ಇಳಿಕೆ

ನವದೆಹಲಿ (ಪಿಟಿಐ): ವಿಮಾನಗಳಲ್ಲಿ ಬಳಸುವ ಇಂಧನದ (ಎಟಿಎಫ್) ಬೆಲೆಯನ್ನು ಶುಕ್ರವಾರ ಶೇಕಡ 1ರಷ್ಟು ಇಳಿಕೆ ಮಾಡಲಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಕಡಿಮೆ ಆಗಿರುವ ಕಾರಣ, ಈ ತಿಂಗಳಲ್ಲಿ ದೇಶಿ ಮಾರುಕಟ್ಟೆಯಲ್ಲಿ ಎರಡನೆಯ ಬಾರಿ ದರ ಇಳಿಕೆ ಮಾಡಲಾಗಿದೆ.

ಭಾವಪೂರ್ಣ ಶ್ರದ್ಧಾಂಜಲಿ

ಕೆ. ರಾಮು
ಕೆಂಪೇಗೌಡನಗರ
ಸರ್ಕಾರಿ ನ್ಯಾಯ ಬೆಲೆ ಅಂಗಡಿ ಮಾಲೀಕರು ಮತ್ತು ಸಮಾಜ ಸೇವಕರು
ಕೆ. ನಾರಾಯಣ ಸ್ವಾಮಿ, ಮಾಜಿ ಮಹಾಪೌರರ ಕಿರಿಯ ಸಹೋದರ
ಇವರು ದಿನಾಂಕ 15-04-2021 ರಂದು ರಾತ್ರಿ 11.50ಕ್ಕೆ ದೈವಾಧೀನರಾಗಿರುತ್ತಾರೆ.

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

15ನೇ ವಾರ್ಷಿಕ ಪುಣ್ಯಸ್ಮರಣೆ



ಶ್ರೀ ಪಟೇಲ್ ಕೆ.ಎನ್. ಗೋವಿಂದರೆಡ್ಡಿ
(ಕೋರಮಂಗಲ) ನಿಧನ: 17-04-2006

ನಿಮ್ಮ ಆದರ್ಶಗಳೇ ನಮಗೆ ದಾರಿದೀಪ
ನಿಮ್ಮ ಆಶೀರ್ವಾದ ಎಂದೆಂದೂ ನಮ್ಮ ಮೇಲಿರಲಿ ಎಂದು ಆಶಿಸುವ
ಧರ್ಮಪತ್ನಿ, ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು

ಚೇತರಿಸಿಕೊಂಡ ರೂಪಾಯಿ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಶುಕ್ರವಾರ 58 ಪೈಸೆಯಷ್ಟು ಚೇತರಿಕೆ ಕಂಡಿತು. ವಿದೇಶಿ ಬಂಡವಾಳವು ಭಾರತದ ಕಡೆ ಹರಿದುಬಂದಿದ್ದು ರೂಪಾಯಿ ಬಲವರ್ಧನೆಗೆ ನೆರವಾಯಿತು.

ದಿನದ ವಹಿವಾಟಿನ ಆರಂಭದಲ್ಲಿ ಅಮೆರಿಕದ ಡಾಲರ್ ಎದುರು 74.76 ಇದ್ದ ರೂಪಾಯಿ ಮೌಲ್ಯವು, ವಹಿವಾಟಿನ ಕೊನೆಯಲ್ಲಿ 74.35ಕ್ಕೆ ತಲುಪಿತು. ಒಂದು ತಿಂಗಳಿಗೂ ಹೆಚ್ಚಿನ ಅವಧಿಯಲ್ಲಿ ರೂಪಾಯಿ ಮೌಲ್ಯದಲ್ಲಿ ಆಗಿರುವ ಅತ್ಯುತ್ತಮ ಏರಿಕೆ ಇದು. ಗುರುವಾರ ರೂಪಾಯಿ ಮೌಲ್ಯವು ಡಾಲರ್ ಎದುರು 74.93ಕ್ಕೆ ಕುಸಿದಿತ್ತು.

ನೀರವ್ ಮೋದಿ ಹಸ್ತಾಂತರ ಬ್ರಿಟನ್ ಗೃಹ ಇಲಾಖೆ ಅಸ್ತು

ಲಂಡನ್ (ಪಿಟಿಐ): ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ (ಪಿಎನ್‌ಬಿ) ₹ 13,500 ಕೋಟಿ ವಂಚನೆ ಪ್ರಕರಣದ ಆರೋಪಿ, ವಜ್ರದ ವ್ಯಾಪಾರಿ ನೀರವ್ ಮೋದಿ ಅವರನ್ನು ಭಾರತಕ್ಕೆ ಹಸ್ತಾಂತರಿಸುವ ಆದೇಶಕ್ಕೆ ಬ್ರಿಟನ್‌ನ ಗೃಹ ಕಾರ್ಯದರ್ಶಿ ಪ್ರೀತಿ ಪಟೇಲ್ ಸಹಿ ಹಾಕಿದ್ದಾರೆ.

ಬ್ರಿಟನ್‌ನ ಗೃಹ ಸಚಿವಾಲಯದ ಈ ಬಗ್ಗೆ ಹೇಳಿಕೆ ನೀಡಿದೆ. ಹಸ್ತಾಂತರಕ್ಕೆ ಅನುಮೋದನೆ ನೀಡಿದ್ದ ಲಂಡನ್‌ನ ವೆಸ್ಟ್ ಮಿನಿಸ್ಟರ್ ನ್ಯಾಯಾಲಯ ಕಳೆದ ಫೆಬ್ರುವರಿ ತಿಂಗಳಲ್ಲಿ ಪ್ರಕರಣವನ್ನು ಗೃಹ ಕಾರ್ಯದರ್ಶಿಗೆ ವರ್ಗಾಯಿಸಿತ್ತು.

50 ವರ್ಷದ ನೀರವ್ ಮೋದಿ ಅವರನ್ನು 2019ರ ಮಾರ್ಚ್ 19ರಂದು ಬಂಧಿಸಲಾಗಿದ್ದು, ಅಂದಿನಿಂದ ಲಂಡನ್‌ನ ವಾಂಡ್ಸ್‌ವರ್ಥ್ ಜೈಲಿನಲ್ಲಿ ಇದ್ದಾರೆ. ಗೃಹ ಇಲಾಖೆಯ ಆದೇಶ ಪ್ರಶ್ನಿಸಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಅವರಿಗೆ 14 ದಿನದ ಸಮಯವಿದೆ. ಜಿಲ್ಲಾ ನ್ಯಾಯಾಲಯ ಮತ್ತು ಗೃಹ ಕಾರ್ಯದರ್ಶಿ ಎರಡೂ ಆದೇಶವನ್ನು ಪ್ರಶ್ನಿಸಿ ನೀರವ್ ಮೋದಿ ಮೇಲ್ಮನವಿ ಸಲ್ಲಿಸಬಹುದಾಗಿದೆ.

ಪ್ರಕರಣದಲ್ಲಿ ಭಾರತದ ಪರ ವಾದಿಸಿದ್ದ ಕ್ರೌನ್ ಪ್ರಾಸಿಕ್ಯೂಷನ್ ಸರ್ವೀಸಸ್‌ನ (ಸಿಪಿಎಸ್) ವಕ್ತಾರರು, ಮೇಲ್ಮನವಿ ಸಲ್ಲಿಸಿದರೆ ಅದನ್ನು ಪ್ರಶ್ನಿಸಿ ಸರ್ಕಾರದ ಪರವಾಗಿ ವಾದ ಮುಂದುವರಿಸಲಾಗುವುದು ಎಂದು ತಿಳಿಸಿದರು.

ಐಐಟಿ–ಎಚ್ ಅಭಿವೃದ್ಧಿಪಡಿಸಿದ ಸೋಂಕು ನಿವಾರಕಗಳ ಬಿಡುಗಡೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಕೋವಿಡ್ ಸೋಂಕು ಹರಡುವಿಕೆ ತಡೆಗೆ ಪೂರಕ ಎನ್ನಲಾದ ಸ್ವಚ್ಛತೆಗೆ ಬಳಸುವ ಡ್ಯುರೊಕಿಯಾ ಸರಣಿಯ ಪರಿಕರಗಳನ್ನು ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ಶುಕ್ರವಾರ ಬಿಡುಗಡೆ ಮಾಡಿದರು.

ಐಐಟಿ ಹೈದರಾಬಾದ್‌ನ ಸಂಶೋಧಕರು, ಎಥೆನಾಲ್ ಆಧರಿಸಿದ ಈ ಸ್ಪ್ರೇ, ಸೋಂಕು ನಿವಾರಕಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಈ ಉತ್ಪನ್ನ ಬಳಸಿ ಒಮ್ಮೆ ಸ್ಪ್ರೇ ಮಾಡಿದರೆ ಅದರ ಪರಿಣಾಮ 35 ದಿನ ಇರುತ್ತದೆ. ಡ್ಯುರೊಕಿಯಾ ಉತ್ಪಾದಕರು ತಮ್ಮ ಉತ್ಪನ್ನಗಳು ಕೋವಿಡ್–19 ವೈರಾಣು ಸೇರಿ ಸೂಕ್ಷ್ಮ ವೈರಾಣುಗಳನ್ನು 60 ಕ್ಷಣದಲ್ಲಿ ನಿರ್ಮೂಲನೆ ಮಾಡುತ್ತವೆ ಎಂದು ಸಂಸ್ಥೆ ಹೇಳಿಕೊಂಡಿದೆ.

ಮಾಸ್ಕ್‌ಗಳಿಗೆ ಬಳಸಬಹುದಾದ ಸೋಂಕು ನಿವಾರಕ ಸ್ಪ್ರೇ ಪರಿಣಾಮ, ಮಾಸ್ಕ್ ಅನ್ನು ನೀರಿನಿಂದ ತೊಳೆಯುವವರೆಗೂ ಇರುತ್ತದೆ. ಆಲ್ಕೊಹಾಲ್ ಮುಕ್ತ ಸ್ಯಾನಿಟೈಸರ್, ಶಿಶುವಿಗೆ ಚರ್ಮ ರಕ್ಷಕ ಪರಿಕರ ಇತರೆ ಉತ್ಪನ್ನಗಳಾಗಿವೆ.

ಐಐಟಿ–ಎಚ್ ಸಂಶೋಧಕರು ಸಮಾಜ, ಪರಿಸರ ರಕ್ಷಣೆಗೆ ಪೂರಕವಾದ ಉತ್ಪನ್ನಗಳ ಸಂಶೋದನೆಯಲ್ಲಿ ತೊಡಗಿರುವುದು ನನಗೆ ಖುಷಿ ನೀಡಿದೆ ಎಂದು ಉತ್ಪನ್ನ ಬಿಡುಗಡೆ ಮಾಡಿದ ಸಚಿವರು ಹೇಳಿದರು.

ಡ್ಯೂರೊಕಿಯಾ ಉತ್ಪನ್ನಗಳು ಶೇ 99.99ರಷ್ಟು ಸೋಂಕು ಕೊಲ್ಲಲಿವೆ ಎಂದು ಐಐಟಿಎಚ್ ಹೇಳಿಕೆ ತಿಳಿಸಿದೆ. ಜೀವವೈದ್ಯಕೀಯ ಎಂಜಿನಿಯರಿಂಗ್ ವಿಭಾಗದ ಸಹ ಪ್ರಾಧ್ಯಾಪಕ ಡಾ.ಜ್ಯೋತ್ಸೆನೆಂದ್ರು ಗಿರಿ ನೇತೃತ್ವದ ತಂಡ ಇವನ್ನು ಅಭಿವೃದ್ಧಿಪಡಿಸಿದೆ.

ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ಅವರು ಶುಕ್ರವಾರ ಡ್ಯೂರೊಕಿಯಾ ಉತ್ಪನ್ನಗಳನ್ನು ಬಿಡುಗಡೆ ಮಾಡಿದರು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ, ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ:9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Farm House/ Land/ Resorts

Nelamangala

FARMLAND FOR Sale 5/10 Guntas Near Nelamangala. Suitable for Dairy Farming and Farm House Contact 9448119275/ 7829134000

Sites

Hesaraghatta

CNR DEVELOPERS and Builders BMRDA Sites Available.Contact 9448119275 / 7829134000

ಶಿಕ್ಷಣ

Special Courses

IN SHIVAMOGGA, 2-year course for PUC, CET, JEE with proper guidance All those appearing for these exams, For admission, Contact Siddharth Anantram Bhat, MSc, IIT Roorkee. Cell: 9324336949.

ಉದ್ಯೋಗಾವಕಾಶ

Part-Time Jobs

ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ ಗಳಿಸಿ 15,000-25,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9108059956, 9901929956

ಮನೆಯಿಂದಲೇ ಕುಳಿತು ಆಫ್‌ಲೈನ್ ಡೇಟಾ ಎಂಟ್ರಿ, ಕನ್ನಡ,ಇಂಗ್ಲೀಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸ ಗಳಿಸಿ 15,000-18,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9611285757, 9611625051

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

Engg/ Production Technical

URGENT REQUIREMENT for a MNC Company in Bangalore. Qualification ITI Diploma SSLC PUC. Salary Rs 13500 - Rs 16000. Call 8310894587 for Interview date and venue.

Wanted

ಬೇಕಾಗಿದ್ದಾರೆ: ಅಡುಗೆಕೆಲಸ, ಮನೆಕೆಲಸ, ಮಕ್ಕಳನ್ನು ನೋಡಿಕೊಳ್ಳುವವರು, ರೋಗಿಗಳನ್ನು ನೋಡಿಕೊಳ್ಳುವವರು, ಹೆಂಗಸರು ಬೇಕಾಗಿದ್ದಾರೆ. ಸಂಬಳ:18,000/- ಸಂಪರ್ಕಿಸಿ: ಸ್ಟ್ಯಾಂಡರ್ಡ್ ಸರ್ವೀಸ್ಸ್, 134/1, 3ನೇ ಮಹಡಿ, ಜ್ಯೋತಿ ಕಾಂಪ್ಲೆಕ್ಸ್, ಇನ್‌ಫ್ಯಾಂಟ್ರಿ ರೋಡ್, ಶಿವಾಜಿನಗರ, ಬೆಂಗಳೂರು-560051 080-44556677, 9844008345

ಭವಿಷ್ಯ

Astrology

★||ಸ್ತ್ರೀವಶೀಕರಣ ಸ್ಪೆಷಲಿಸ್ಟ್||★ ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ ಕರೆಮಾಡಿ. ಪಂಡಿತ್.ರಾವ್. 9901724082

★||ಶ್ರೀಆಂಜನೇಯಸ್ವಾಮಿ||★ ಆರಾಧನೆಯಿಂದ ಪ್ರೀತಿಪ್ರೇಮ, ವಶೀಕರಣ, ಸಾಲದಬಾದೆ, ಕೋರ್ಟ್‌ಕೇಸ್, ವ್ಯಾಪಾರ, ಸಂತಾನ ಇನ್ನೂಯಾವುದೇ ಗುಪ್ತ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 9972550137

★ವಶೀಕರಣ ಸ್ಪೆಷಲಿಸ್ಟ್★ ಗಂಡ ಹೆಂಡತಿ ಸಮಸ್ಯೆ, ಸ್ತ್ರೀಪುರುಷ ವಶೀಕರಣ, 200ವರ್ಷಗಳ ಇತಿಹಾಸ,25ಸಾವಿರ ಜನರಿಗೆ ಸಮಾಧಾನ,ಯಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ.7829724990

★ಕೊಳ್ಳೆಗಾಲದಿಂದ ನೇರಪರಿಹಾರ★ ಕೊಳ್ಳೆಗಾಲದ ಪ್ರಸಿದ್ಧ ಮನೆತನದವರಾದ ಮೋಡಿಬೆಟ್ಟಪ್ಪನವರು ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಫೋನಿನ ಮೂಲಕ ಪರಿಹಾರ ತಿಳಿಸುತ್ತಾರೆ. ಬಸ್ ಸ್ಟಾಪ್ ಪಕ್ಕ, ಕೊಳ್ಳೆಗಾಲ. 9686351668

EDUCATION
To Place your Classified Ads Contact:
9845114560

ವಾಹನ

Four Wheelers Selling

Others

ಹೊಸ ವರ್ಷದಲ್ಲಿ ನಿಮ್ಮ ಹೊಸ ಪ್ರಯಾಣವನ್ನು ಪ್ರಾರಂಭಿಸಿ
ACE Gold ಪೆಟ್ರೋಲ್ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

Ace ಪೆಟ್ರೋಲ್, ಡೀಸಲ್ ಮತ್ತು ಸಿಎನ್‌ಜಿ ಮಾದರಿಯಲ್ಲೂ ಲಭ್ಯ
1.99%* ಬಡ್ಡಿದರ
ಎಕ್ಸ್‌ಚೇಂಜ್ ಬೋನಸ್ ₹15,000/-* ವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore -7259784441
Bangalore/Mysore 95389 35533
Tumkur/Davanagere/ Chitradurga 98950 23373
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Bidar 80952 02223
Belgaum - 91088 64572
* ಷರತ್ತುಗಳು ಅನ್ವಯಿಸುತ್ತದೆ.

DH ಪ್ರಜಾವಾಣಿ
Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

'ಟೈಮ್‌ಲ್ಯಾಪ್ಸ್' ಪರಿಚಯ: 2.4 ಕೋಟಿ ಉಪಗ್ರಹ ಚಿತ್ರಗಳ ಸಂಗ್ರಹ

ಗೂಗಲ್ ಅರ್ಥ್‌ನಲ್ಲಿ ಹೊಸ ವೈಶಿಷ್ಟ್ಯ

ವಾಷಿಂಗ್ಟನ್ (ಪಿಟಿಐ): ಗೂಗಲ್ ಅರ್ಥ್‌ನಲ್ಲಿ 'ಟೈಮ್‌ಲ್ಯಾಪ್ಸ್' ವೈಶಿಷ್ಟ್ಯವನ್ನು ಪರಿಚಯಿಸಲಾಗಿದೆ ಎಂದು ಗೂಗಲ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಸುಂದರ್ ಪಿಚೈ ತಿಳಿಸಿದ್ದಾರೆ.

ಈ ವಿಶಿಷ್ಟವಾದ ಕಾರ್ಯಕ್ಕಾಗಿ ಗೂಗಲ್ ಅಪಾರ ಶ್ರಮವಹಿಸಿದೆ. ಕಳೆದ 37 ವರ್ಷಗಳಲ್ಲಿನ 2.4 ಕೋಟಿ ಉಪಗ್ರಹ ಚಿತ್ರಗಳನ್ನು ಸಂಗ್ರಹಿಸಿದೆ. '4ಡಿ' ಅನುಭವವನ್ನು ಇದು ನೀಡುತ್ತದೆ.

'ನಮ್ಮ ಭೂಮಿಯು ಕಳೆದ ಅರ್ಧ ಶತಮಾನದಲ್ಲಿ ವ್ಯಾಪಕ ಪರಿಸರ ಬದಲಾವಣೆಗಳನ್ನು ಕಂಡಿದೆ. ಭೂಮಿಯು ಯಾವ ರೀತಿಯ ಬದಲಾವಣೆಯನ್ನು ಕಂಡಿದೆ ಎನ್ನುವ ವಿಶ್ಲೇಷಣೆಯನ್ನು ಇಲ್ಲಿ ಮಾಡಲಾಗಿದೆ. ಜನರು ಹೊಸ ದೃಷ್ಟಿಕೋನದೊಂದಿಗೆ ನಮ್ಮ ಗ್ರಹವನ್ನು ನೋಡಬಹುದಾಗಿದೆ' ಎಂದು ಗೂಗಲ್ ಅರ್ಥ್ ನಿರ್ದೇಶಕ ರೆಬೆಕ್ಕಾ ಮೂರೆ ವಿವರಿಸಿದ್ದಾರೆ.



'ಅಮೆರಿಕ ಮತ್ತು ಐರೋಪ್ಯ ಒಕ್ಕೂಟ ಸಹಕಾರ ನೀಡಿದ್ದರಿಂದ ಈ ಕಾರ್ಯ ಸಾಧ್ಯವಾಗಿದೆ. ನಾಸಾ, ಅಮೆರಿಕದ ಜಿಯಾಲಜಿಕಲ್ ಸರ್ವೇ, ಯುರೋಪಿಯನ್ ಆಯೋಗ ಮತ್ತು ಯುರೋಪಿಯನ್ ಬಾಹ್ಯಾಕಾಶ ಸಂಸ್ಥೆ ಚಿತ್ರಗಳನ್ನು ಒದಗಿಸಿವೆ' ಎಂದು ಅವರು ತಿಳಿಸಿದ್ದಾರೆ.

'ಇದೇ ರೀತಿಯಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಜತೆಯೂ ಒಪ್ಪಂದ ಮಾಡಿಕೊಳ್ಳಲು ಗೂಗಲ್ ಮುಕ್ತ ಆಯ್ಕೆಗಳನ್ನು ಹೊಂದಿದೆ. ಕಳೆದ 15 ವರ್ಷಗಳಿಂದ ಕೋಟ್ಯಂತರ ಜನರು ಗೂಗಲ್ ಅರ್ಥ್‌ನಲ್ಲಿ ವಿವಿಧ ರೀತಿಯ ಮಾಹಿತಿಗಾಗಿ ಹುಡುಕಾಟ ನಡೆಸಿದ್ದಾರೆ. ಗೂಗಲ್ ಮ್ಯಾಪ್ ಮೂಲಕ ನಿಮ್ಮ ಮಾರ್ಗವನ್ನು ಕಂಡುಕೊಳ್ಳಬಹುದಾಗಿದೆ. ಗೂಗಲ್ ಅರ್ಥ್ ಮೂಲಕ ಇದಕ್ಕೂ ಭಿನ್ನವಾದ ವಿಶೇಷ ಮಾಹಿತಿಗಳನ್ನು ಪತ್ತೆ ಮಾಡಬಹುದಾಗಿದೆ. ಡಿಜಿಟಲ್ ರೂಪದಲ್ಲಿ ಗ್ರಹವನ್ನು ಪ್ರಸ್ತುತಪಡಿಸುವ ಪ್ರಯತ್ನ ಮಾಡಲಾಗಿದೆ. ಇದು ಮನರಂಜನೆ ನೀಡುವ ಜತೆಗೆ ಜನರಿಗೆ ಜ್ಞಾನವನ್ನು ಒದಗಿಸುತ್ತದೆ' ಎಂದು ವಿವರಿಸಿದ್ದಾರೆ.

2017ರ ಬಳಿಕ ಇದೇ ಮೊದಲ ಬಾರಿ ಅತಿ ದೊಡ್ಡ ಪ್ರಮಾಣದಲ್ಲಿ ಗೂಗಲ್ ಅರ್ಥ್‌ನಲ್ಲಿ ಅಪ್‌ಡೇಟ್ ಮಾಡಲಾಗಿದೆ. ಇದರಿಂದ, ನಾಲ್ಕು ದಶಕಗಳಲ್ಲಿನ ಭೂಮಿಯ ಬದಲಾವಣೆಗಳನ್ನು ಕಾಣಬಹುದಾಗಿದೆ.

ಮಾರುತಿ ಕಾರು ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ಅತಿದೊಡ್ಡ ಕಾರು ತಯಾರಿಕಾ ಕಂಪನಿಯಾದ ಮಾರುತಿ ಸುಜುಕಿ, ತನ್ನ ವಿವಿಧ ಮಾದರಿಯ ಕಾರುಗಳ ಬೆಲೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಗರಿಷ್ಠ ₹ 22,500ರವರೆಗೆ ಹೆಚ್ಚಳ ಮಾಡಿದೆ. ತಯಾರಿಕಾ ವೆಚ್ಚ ಹೆಚ್ಚಿದ ಕಾರಣದಿಂದಾಗಿ ಬೆಲೆ ಹೆಚ್ಚಿಸಲಾಗಿದೆ ಎಂದು ಕಂಪನಿ ಹೇಳಿದೆ.

ಸೆಲೆರಿಯೊ ಮತ್ತು ಸ್ವಿಫ್ಟ್ ಮಾದರಿಗಳನ್ನು ಹೊರತುಪಡಿಸಿ ಇತರ ಎಲ್ಲ ಮಾದರಿಗಳ ಬೆಲೆಯಲ್ಲಿ ಹೆಚ್ಚಳ ಆಗಲಿದೆ ಎಂದು ಕಂಪನಿಯು ಷೇರು ಮಾರುಕಟ್ಟೆಗೆ ಮಾಹಿತಿ ನೀಡಿದೆ. ಮಾರುತಿ ಸುಜುಕಿ ಕಂಪನಿಯು ₹ 2.99 ಲಕ್ಷ ಬೆಲೆಯ ಆಲ್ಟೊದಿಂದ ಆರಂಭಿಸಿ ₹ 12.39 ಲಕ್ಷ ಬೆಲೆಯ (ದೆಹಲಿಯ ಎಕ್ಸ್‌-ಷೋರೂಂ ಬೆಲೆ) ಎಸ್‌-ಕ್ರಾಸ್‌ವರೆಗೆ ಬೇರೆ ಬೇರೆ ಮಾದರಿಯ ಕಾರುಗಳನ್ನು ತಯಾರಿಸುತ್ತಿದೆ.

ತಯಾರಿಕಾ ವೆಚ್ಚದಲ್ಲಿ ಆದ ಹೆಚ್ಚಳದ ಕಾರಣದಿಂದಾಗಿ ಕಂಪನಿಯ ಕಾರುಗಳ ಬೆಲೆಯ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗುತ್ತಿದೆ ಎಂದು ಮಾರುತಿ ಸುಜುಕಿ ಮಾರ್ಚ್ ತಿಂಗಳಲ್ಲಿ ಹೇಳಿತ್ತು. ಈ ವರ್ಷದ ಜನವರಿಯಲ್ಲಿ ಕಂಪನಿಯು ಕೆಲವು ಮಾದರಿಯ ಕಾರುಗಳ ಬೆಲೆಯನ್ನು ಗರಿಷ್ಠ ₹ 34 ಸಾವಿರದವರೆಗೆ ಹೆಚ್ಚಿಸಿತ್ತು.

ಶೇ 18.3ರಷ್ಟು ಬೆಳೆದ ಚೀನಾ ಜಿಡಿಪಿ

ಬೀಜಿಂಗ್ (ಪಿಟಿಐ): ಮಾರ್ಚ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಚೀನಾದ ಜಿಡಿಪಿ ಶೇಕಡ 18.3ರಷ್ಟು ಬೆಳವಣಿಗೆ ಸಾಧಿಸಿದೆ. ದೇಶಿ ಮಾರುಕಟ್ಟೆಯಲ್ಲಿ ಹಾಗೂ ವಿದೇಶಗಳಲ್ಲಿ ಉತ್ತಮ ಬೇಡಿಕೆ ಕಂಡುಬಂದ ಕಾರಣಕ್ಕೆ ಈ ಬೆಳವಣಿಗೆ ಸಾಧ್ಯವಾಗಿದೆ.

ಚೀನಾ ದೇಶವು 1993ರಿಂದ ತನ್ನ ಜಿಡಿಪಿ ಅಂಕಿ–ಅಂಶಗಳನ್ನು ಪ್ರಕಟಿಸಲು ಆರಂಭಿಸಿದೆ. ಆ ಇಸವಿಯಿಂದ ಇಲ್ಲಿಯವರೆಗೆ ದಾಖಲಾಗಿರುವ ಅತಿ ಹೆಚ್ಚಿನ ತ್ರೈಮಾಸಿಕ ಬೆಳವಣಿಗೆ ಇದು ಎಂದು ಚೀನಾದ ರಾಷ್ಟ್ರೀಯ ಸಾಂಖ್ಯಿಕ ಸಂಸ್ಥೆ (ಎನ್‌ಬಿಎಸ್) ಹೇಳಿದೆ.

ಮಾರ್ಚ್ ತ್ರೈಮಾಸಿಕದಲ್ಲಿ ಚೀನಾದಲ್ಲಿ ಕೈಗಾರಿಕಾ ಉತ್ಪಾದನೆ ಸ್ಥಿರ ಏರಿಕೆ ಕಂಡಿದೆ, ಮಾರುಕಟ್ಟೆಯಲ್ಲಿ ಮಾರಾಟದ ಪ್ರಮಾಣ ಹೆಚ್ಚಿದೆ, ವಿದೇಶಿ ಮಾರುಕಟ್ಟೆಗಳಿಗೆ ಸಾಗುವ ಸರಕುಗಳ ಪ್ರಮಾಣದಲ್ಲಿ ಹೆಚ್ಚಾಗಿದೆ ಎಂದು ಅದು ಹೇಳಿದೆ.

ಪಾಕ್: ಶೌಖತ್ ತರೀನ್ ನೂತನ ಹಣಕಾಸು ಸಚಿವ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಅವರು ಶುಕ್ರವಾರ ಸಂಪುಟ ಪುನರ್‌ರಚನೆ ಮಾಡಿದ್ದು, ನೂತನ ಹಣಕಾಸು ಸಚಿವರಾಗಿ ಶೌಕತ್ ತರೀನ್ ಅವರನ್ನು ನೇಮಕ ಮಾಡಿದ್ದಾರೆ.

ವೃತ್ತಿಯಿಂದ ಬ್ಯಾಂಕರ್ ಆಗಿರುವ 68 ವರ್ಷದ ತರೀನ್ ಅವರು, ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ ನೇತೃತ್ವದ ಸರ್ಕಾರದಲ್ಲಿ (2009–10) ಅಲ್ಪಾವಧಿಯೇ ಈ ಸ್ಥಾನ ನಿಭಾಯಿಸಿದ್ದರು. ತಮ್ಮ ಸಿಲ್ಕ್ ಬ್ಯಾಂಕ್‌ಗಾಗಿ ಬಂಡವಾಳ ಸಂಗ್ರಹಿಸುವ ಗುರಿಯೊಂದಿಗೆ ಪದತ್ಯಾಗ ಮಾಡಿದ್ದರು. ಭ್ರಷ್ಟಾಚಾರ ಆರೋಪ ಎದುರಿಸುತ್ತಿರುವ ತರೀನ್ ಅವರು ಆರಂಭದಲ್ಲಿ ಹೊಸ ಹೊಣೆ ಒಪ್ಪಲು ನಿರಾಕರಿಸಿದ್ದರು.

ಇವರ ಮೇಲಿದ್ದ ಭ್ರಷ್ಟಾಚಾರ ಆರೋಪಗಳನ್ನು ತನಿಖಾ ಸಂಸ್ಥೆ ನ್ಯಾಷನಲ್ ಅಕೌಂಟಬಿಲಿಟಿ ಬ್ಯೂರೊ (ಎನ್‌ಎಬಿ) ಕೈಬಿಡಿಟ್ಟಿದೆಯೇ ಎಂಬುದು ತಕ್ಷಣಕ್ಕೆ ತಿಳಿದುಬಂದಿಲ್ಲ.

ಹಲವು ಸಕ್ಕರೆ ಕಾರ್ಖಾನೆಗಳ ಮಾಲೀಕರಾದ ಇವರ ಸಂಬಂಧಿ ಜೆಹಾಂಗೀರ್ ತರೀನ್ ಕೂಡಾ ಪ್ರಭಾವಿ ರಾಜಕಾರಣಿಯಾಗಿದ್ದು, ಸದ್ಯ ಸಕ್ಕರೆ ಹಗರಣದ ತನಿಖೆ ಎದುರಿಸುತ್ತಿದ್ದಾರೆ.

ಪಾಕಿಸ್ತಾನ: ಸಾಮಾಜಿಕ ಜಾಲತಾಣಗಳು ತಾತ್ಕಾಲಿಕ ಸ್ಥಗಿತ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದಲ್ಲಿ ಪ್ರತಿಭಟನೆಯನ್ನು ತಡೆಯುವ ನಿಟ್ಟಿನಲ್ಲಿ ಸಾಮಾಜಿಕ ಜಾಲತಾಣಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

'ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆವರೆಗೆ ಸಾಮಾಜಿಕ ಜಾಲತಾಣಗಳನ್ನು ಸ್ಥಗಿತಗೊಳಿಸುವಂತೆ' ಆಂತರಿಕ ಸಚಿವಾಲಯವು ಪಾಕಿಸ್ತಾನ ದೂರಸಂಪರ್ಕ ಪ್ರಾಧಿಕಾರಕ್ಕೆ (ಪಿಟಿಎ) ನಿರ್ದೇಶನ ನೀಡಿದೆ.

ಕಳೆದ ವರ್ಷ ಫ್ರಾನ್ಸ್‌ನಲ್ಲಿ ಧರ್ಮಕ್ಕೆ ಸಂಬಂಧಿಸಿ ಅವಹೇಳನಕಾರಿ ವ್ಯಂಗ್ಯ ಚಿತ್ರಗಳನ್ನು ಪ್ರಕಟಿಸಲಾಗಿತ್ತು. ಹಾಗಾಗಿ ಪಾಕಿಸ್ತಾನದಲ್ಲಿರುವ ಫ್ರಾನ್ಸ್‌ನ ರಾಯಭಾರಿಯನ್ನು ಹೊರಹಾಕುವಂತೆ ಆಗ್ರಹಿಸಿ ತೆಹ್ರೀಕ್‌-ಇ-ಲಬ್ಬೈಕ್ ಪಾಕಿಸ್ತಾನ(ಟಿಎಲ್‌ಪಿ) ಸಂಘಟನೆಯು ಕಳೆದ ಮೂರು ದಿನಗಳಿಂದ ಪ್ರತಿಭಟಿಸುತ್ತಿದೆ.

ಈ ಪ್ರತಿಭಟನೆಯು ಹಿಂಸಾತ್ಮಕ ರೂಪ ಪಡೆದಿದೆ.

ಗೂಗಲ್‌ನಿಂದ ಆಸ್ಟ್ರೇಲಿಯಾದ ಕಾನೂನು ಉಲ್ಲಂಘನೆ: ಫೆಡರಲ್ ನ್ಯಾಯಾಲಯ

ಕ್ಯಾನ್‌ಬೆರಾ, ಆಸ್ಟ್ರೇಲಿಯಾ (ಪಿಟಿಐ): ಆಂಡ್ರಾಯ್ಡ್ ಮೊಬೈಲ್ ಸಾಧನಗಳೊಂದಿಗೆ ವೈಯಕ್ತಿಕ ಸ್ಥಳದ ದತ್ತಾಂಶ ಸಂಗ್ರಹಿಸುವ ಮೂಲಕ ಬಳಕೆದಾರರನ್ನು ದಾರಿ ತಪ್ಪಿಸುತ್ತಿರುವ ಗೂಗಲ್, ಆಸ್ಟ್ರೇಲಿಯಾದ ಕಾನೂನನ್ನು ಉಲ್ಲಂಘಿಸಿದೆ ಎಂದು ನ್ಯಾಯಾಧೀಶರು ಶುಕ್ರವಾರ ತಿಳಿಸಿದ್ದಾರೆ.

ಫೆಡರಲ್ ನ್ಯಾಯಾಲಯದ ಈ ನಿರ್ಧಾರದಿಂದ ಆಸ್ಟ್ರೇಲಿಯಾದ ಕಾನೂನು ಮತ್ತು ಗ್ರಾಹಕ ಆಯೋಗಕ್ಕೆ ಭಾಗಶಃ ಗೆಲುವು ಸಿಕ್ಕಂತಾಗಿದೆ. ಈ ಗ್ರಾಹಕ ಆಯೋಗ, ಅಕ್ಟೋಬರ್ 2019ರಿಂದ ಗ್ರಾಹಕರ ಕಾನೂನು ಉಲ್ಲಂಘನೆಗಾಗಿ ಗೂಗಲ್ ವಿರುದ್ಧ ಕ್ರಮ ಜರುಗಿಸುತ್ತಿದೆ.

ನ್ಯಾಯಮೂರ್ತಿ ಥಾಮಸ್ ಥಾವ್ಲೆ ಅವರು 'ಗೂಗಲ್ ಆಂಡ್ರಾಯ್ಡ್ ಮೊಬೈಲ್ ಸಾಧನಗಳ ಮೂಲಕ ಜನವರಿ 2017 ಮತ್ತು ಡಿಸೆಂಬರ್ 2018ರ ನಡುವಿನ ವೈಯಕ್ತಿ ಸ್ಥಳದ ದತ್ತಾಂಶವನ್ನು ಸಂಗ್ರಹಿಸುವ ಮೂಲಕ ಬಳಕೆದಾರರ ದಾರಿ ತಪ್ಪಿಸುತ್ತಿರುವುದನ್ನು ಗುರುತಿಸಿದ್ದಾರೆ.

'ಇದು ಗ್ರಾಹಕರಿಗೆ, ವಿಶೇಷವಾಗಿ ಆನ್‌ಲೈನ್‌ನಲ್ಲಿ ಗೌಪ್ಯತೆ ಕಾಪಾಡಿಕೊಳ್ಳುವ ಹಾಗೂ ಕಾಳಜಿ ವಹಿಸುವವರಿಗೆ ದೊರೆತಿರುವ ಒಂದು ಪ್ರಮುಖ ಗೆಲುವು. ನ್ಯಾಯಾಲಯದ ಈ ನಿರ್ಧಾರ, ಗೂಗಲ್ ಸೇರಿದಂತೆ ಯಾವುದೇ ದೊಡ್ಡ ಉದ್ಯಮಗಳು ತಮ್ಮ ಗ್ರಾಹಕರನ್ನು ದಾರಿ ತಪ್ಪಿಸಬಾರದು ಎಂಬ ಬಲವಾದ ಸಂದೇಶವನ್ನು ರವಾನಿಸುತ್ತದೆ' ಎಂದು ಆಯೋಗದ ಅಧ್ಯಕ್ಷ ರಾಡ್ ಸಿಮ್ಸ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಇದು ವಿಶ್ವದಲ್ಲೇ ಮೊದಲ ಬಾರಿಗೆ ಇಂಥದ್ದೊಂದು ಪ್ರಕರಣದಲ್ಲಿ ಗೆಲುವು ಸಿಕ್ಕಿದ್ದು, ನಮಗೆ ತುಂಬಾ ಸಂತೋಷವಾಗಿದೆ' ಎಂದು ರಾಡ್ ಸೀಮ್ಸ್ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಈ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಗೂಗಲ್ ಸಂಸ್ಥೆ ಪರಿಶೀಲನೆ ನಡೆಸುತ್ತಿದೆ.

ಬ್ಯಾಟಿಂಗ್ ವೈಫಲ್ಯ ಅನುಭವಿಸಿದ ಮಯಂಕ್, ಗೇಲ್; ಫಫ್–ಮೋಯಿನ್ ಉತ್ತಮ ಜೊತೆಯಾಟ

ಚೆನ್ನೈ 'ಕಿಂಗ್ಸ್'ಗೆ ಮಣಿದ ಪಂಜಾಬ್

ಮುಂಬೈ (ಪಿಟಿಐ): ದೀಪಕ್ ಚಾಹರ್ ಮೊನಚಾದ ದಾಳಿ ಮತ್ತು ರವೀಂದ್ರ ಜಡೇಜ ಮಿಂಚಿನ ಫೀಲ್ಡಿಂಗ್ ಪಂಜಾಬ್ ಕಿಂಗ್ಸ್ ತಂಡದ ಬ್ಯಾಟ್ಸ್‌ಮನ್‌ಗಳನ್ನು ಕಂಗಾಲು ಮಾಡಿತು. ಫಫ್ ಡು ಪ್ಲೆಸಿ ಮತ್ತು ಮೋಯಿನ್ ಅಲಿ ಜೋಡಿ ಬ್ಯಾಟಿಂಗ್‌ನಲ್ಲಿ ಮಿಂಚಿ ಚೆನ್ನೈ ಸೂಪರ್ ಕಿಂಗ್ಸ್‌ಗೆ ಸುಲಭ ಜಯ ಗಳಿಸಿಕೊಟ್ಟರು.

ಶುಕ್ರವಾರ ರಾತ್ರಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಕೆ.ಎಲ್.ರಾಹುಲ್ ಬಳಗವನ್ನು ಮಣಿಸಿ ಪಾಯಿಂಟ್ ಪಟ್ಟಿಯ ಎರಡನೇ ಸ್ಥಾನಕ್ಕೇರಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಹಣಾಹಣಿಯಲ್ಲಿ 107 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಚೆನ್ನೈ ಇನ್ನೂ 26 ಎಸೆತಗಳು ಉಳಿದಿರುವಾಗಲೇ ನಾಲ್ಕು ವಿಕೆಟ್ ಕಳೆದುಕೊಂಡು ಜಯದ ದಡ ಸೇರಿತು.

ಇದು ಚೆನ್ನೈ ಸೂಪರ್ ಕಿಂಗ್ಸ್ ಪರ ಧೋನಿ ಆಡಿದ 200ನೇ ಪಂದ್ಯವಾಗಿತ್ತು.

24 ರನ್‌ಗಳಿಗೆ ಆರಂಭಿಕ ಬ್ಯಾಟ್ಸ್‌ಮನ್ ಋತುರಾಜ್ ಗಾಯಕವಾಡ್ ವಿಕೆಟ್ ಕಳೆದುಕೊಂಡ ಮಹೇಂದ್ರ ಸಿಂಗ್ ಧೋನಿ ಪಡೆಯ ಫಫ್ ಡು ಪ್ಲೆಸಿ (36; 33 ಎಸೆತ, 3 ಬೌಂಡರಿ, 1 ಸಿಕ್ಸರ್) ಮತ್ತು ಮೋಯಿನ್ ಅಲಿ (46; 31 ಎ, 7 ಬೌಂ, 1 ಸಿ) ಸುಲಭ ಜಯಕ್ಕೆ ಕಾರಣರಾದರು.

ಟಾಸ್ ಸೋತು ಬ್ಯಾಟಿಂಗ್ ಮಾಡಿದ ಪಂಜಾಬ್ ತಂಡಕ್ಕೆ ವೇಗಿ ದೀಪಕ್ ಚಾಹರ್ ಪೆಟ್ಟು ನೀಡಿದರು. ಶಾರೂಖ್ ಖಾನ್ (47; 36 ಎ, 4 ಬೌಂ, 2 ಸಿ) ಏಕಾಂಗಿ ಹೋರಾಟದ ಮೂಲಕ ಮೊತ್ತ ಮೂರಂಕಿ ಮೊತ್ತ ದಾಟಲು ನೆರವಾದರು. ಮೊದಲ ಓವರ್‌ನ ನಾಲ್ಕನೇ ಎಸೆತದಲ್ಲೇ ಮಯಂಕ್ ಅಗರವಾಲ್ ವಿಕೆಟ್ ಕಳೆದುಕೊಂಡರು. ನಾಯಕ ರಾಹುಲ್ ಜೊತೆಗೂಡಿದ ಕ್ರಿಸ್ ಗೇಲ್ ಆರಂಭಿಕ ಆಘಾತದಿಂದ ತಂಡವನ್ನು ರಕ್ಷಿಸಲು ಪ್ರಯತ್ನಿಸಿದರು. ಆದರೆ ಐದನೇ ಎಸೆತದಲ್ಲಿ ರವೀಂದ್ರ ಜಡೇಜ ಅವರ ಜಾದೂ ರಾಹುಲ್ ವಿಕೆಟ್ ಕಬಳಿಸಿತು. ದೀಪಕ್ ಎಸೆತದಲ್ಲಿ ಚೆಂಡು ಗೇಲ್ ಪ್ಯಾಡ್‌ಗೆ ಬಡಿದಿತ್ತು. ಎಲ್‌ಬಿಡಬ್ಲ್ಯುಗೆ ಮನವಿ ಸಲ್ಲಿಸುತ್ತಿದ್ದಂತೆ ಗೇಲ್ ಮತ್ತು ರಾಹುಲ್ ಒಂದು ರನ್ ಗಳಿಸಲು ಪ್ರಯತ್ನಿಸಿದರು. ಶಾರ್ಟ್ ಕವರ್ಸ್‌ನಲ್ಲಿದ್ದ ಜಡೇಜ ಮಿಂಚಿನ ವೇಗದಲ್ಲಿ ಚೆಂಡನ್ನು ಕೈಗೆತ್ತಿಕೊಂಡು ಸ್ಟಂಪ್‌ಗೆ ನೇರವಾಗಿ ಎಸೆದು ಬೇಲ್ಸ್ ಬೀಳಿಸಿದರು.

ಚಾಹರ್, ತಮ್ಮ ಮುಂದಿನ ಓವರ್‌ನಲ್ಲಿ ಕ್ರಿಸ್ ಗೇಲ್ ಮತ್ತು ನಿಕೋಲಸ್ ಪೂರನ್ ವಿಕೆಟ್ ಉರುಳಿಸಿದರು. ದೀಪಕ್ ಹೂಡಾ ಅವರೂ ಚಾಹರ್‌ಗೆ ಬಲಿಯಾದರು. 26 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡ ತಂಡಕ್ಕೆ ಶಾರೂಖ್ ಖಾನ್ ಮತ್ತು ಜೇ ರಿಚರ್ಡ್ಸನ್ ಆಸರೆಯಾದರು. ಇವರಿಬ್ಬರ 31 ರನ್ ಜೊತೆಯಾಟದಿಂದಾಗಿ ತಂಡದ ಮೊತ್ತ ಅರ್ಧಶತಕ ದಾಟಿತು. ರಿಚರ್ಡ್ಸನ್ ಔಟಾದ ನಂತರ ಶಾರೂಖ್ ಜೊತೆಗೂಡಿದ ಮುರುಗನ್ ಅಶ್ವಿನ್ ಏಳನೇ ವಿಕೆಟ್‌ಗೆ 30 ರನ್ ಸೇರಿಸಿ ತಂಡದ ಮೊತ್ತವನ್ನು ಶತಕದತ್ತ ಕೊಂಡೊಯ್ದರು. ಮೊಹಮ್ಮದ್ ಶಮಿ ಜೊತೆ ಶಾರೂಖ್ ಖಾನ್ ತಂಡದ ಮೊತ್ತವನ್ನು ಮೂರಂಕಿ ದಾಟಿಸಿದರು. ಆದರೆ ಅರ್ಧಶತಕದ ಅಂಚಿನಲ್ಲಿದ್ದಾಗ ವಿಕೆಟ್ ಕಳೆದುಕೊಂಡರು.

ದೀಪಕ್ ಚಾಹರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮಯಂಕ್ ಅಗರವಾಲ್ ವಿಕೆಟ್ ಪಡೆದ ದೀಪಕ್ ಚಾಹರ್ ಸಂಭ್ರಮ –ಪಿಟಿಐ ಚಿತ್ರ

ಸ್ಕೋರ್‌ಕಾರ್ಡ್

ಪಂಜಾಬ್ ಕಿಂಗ್ಸ್ 8ಕ್ಕೆ 106 (20 ಓವರ್‌ಗಳಲ್ಲಿ)

ಕೆ.ಎಲ್.ರಾಹುಲ್ ರನ್ ಔಟ್ (ರವೀಂದ್ರ ಜಡೇಜ)	5
ಮಯಂಕ್ ಅಗರವಾಲ್ ಬಿ ದೀಪಕ್ ಚಾಹರ್	0
ಕ್ರಿಸ್ ಗೇಲ್ ಸಿ ರವೀಂದ್ರ ಜಡೇಜ ಬಿ ದೀಪಕ್ ಚಾಹರ್	10
ದೀಪಕ್ ಹೂಡಾ ಸಿ ಫಫ್ ಡು ಪ್ಲೆಸಿ ಬಿ ದೀಪಕ್ ಚಾಹರ್	10
ನಿಕೋಲಸ್ ಪೂರನ್ ಸಿ ಶಾರ್ದೂಲ್ ಠಾಕೂರ್ ಬಿ ದೀಪಕ್ ಚಾಹರ್	0
ಶಾರೂಖ್ ಖಾನ್ ಸಿ ರವೀಂದ್ರ ಜಡೇಜ ಬಿ ಸ್ಯಾಮ್ ಕರನ್	47
ಜೇ ರಿಚರ್ಡ್ಸನ್ ಬಿ ಮೋಯಿನ್ ಅಲಿ	15
ಮುರುಗನ್ ಅಶ್ವಿನ್ ಸಿ ಫ್‌ಫ್ ಡು ಪ್ಲೆಸಿ ಬಿ ಡ್ವೇನ್ ಬ್ರಾವೊ	6
ಮೊಹಮ್ಮದ್ ಶಮಿ ಔಟಾಗದೆ	9
ರಿಲಿ ಮೆರೆಡಿತ್ ಔಟಾಗದೆ	0
ಇತರೆ (ವೈಡ್ 4)	4

ವಿಕೆಟ್ ಪತನ: 1-1 (ಮಯಂಕ್ ಅಗರವಾಲ್, 0.4), 2-15 (ಕೆ.ಎಲ್.ರಾಹುಲ್, 2.5), 3-19 (ಕ್ರಿಸ್ ಗೇಲ್, 4.2), 4-19 (ನಿಕೋಲಸ್ ಪೂರನ್, 4.4), 5-26 (ದೀಪಕ್ ಹೂಡಾ, 6.2), 6-57 (ಜೇ ರಿಚರ್ಡ್ಸನ್, 12.1), 7-87 (ಮುರುಗನ್ ಅಶ್ವಿನ್, 16.5), 8-101 (ಶಾರೂಖ್ ಖಾನ್, 19.1)

ಬೌಲಿಂಗ್: ದೀಪಕ್ ಚಾಹರ್ 4–1–13–4, ಸ್ಯಾಮ್ ಕರನ್ 3–0–12–1, ಶಾರ್ದೂಲ್ ಠಾಕೂರ್ 4–0–35–0, ರವೀಂದ್ರ ಜಡೇಜ 4–0–19–0, ಮೋಯಿನ್ ಅಲಿ 3–0–17–1, ಡ್ವೇನ್ ಬ್ರಾವೊ 2–0–10–1

ಚೆನ್ನೈ ಸೂಪರ್ ಕಿಂಗ್ಸ್ 4ಕ್ಕೆ 107 (15.4 ಓವರ್‌ಗಳಲ್ಲಿ)

ಋತುರಾಜ್ ಗಾಯಕವಾಡ್ ಸಿ ದೀಪಕ್ ಹೂಡಾ ಬಿ ಅರ್ಷದೀಪ್ ಸಿಂಗ್	5
ಫಫ್ ಡು ಪ್ಲೆಸಿ ಔಟಾಗದೆ	36
ಮೋಯಿನ್ ಅಲಿ ಸಿ ಶಾರೂಖ್ ಖಾನ್ ಬಿ ಮುರುಗನ್ ಅಶ್ವಿನ್	46
ಸುರೇಶ್ ರೈನಾ ಸಿ ಕೆ.ಎಲ್.ರಾಹುಲ್ ಬಿ ಮೊಹಮ್ಮದ್ ಶಮಿ	8
ಅಂಬಟಿ ರಾಯುಡು ಸಿ ನಿಕೋಲಸ್ ಪೂರನ್ ಬಿ ಮೊಹಮ್ಮದ್ ಶಮಿ	0
ಸ್ಯಾಮ್ ಕರನ್ ಔಟಾಗದೆ	5
ಇತರೆ (ಲೆಗ್ ಬೈ 5, ವೈಡ್ 2)	7

ವಿಕೆಟ್ ಪತನ: 1-24 (ಋತುರಾಜ್ ಗಾಯಕವಾಡ್, 4.6), 2-90 (ಮೋಯಿನ್ ಅಲಿ, 12.3), 3-99 (ಸುರೇಶ್ ರೈನಾ, 14.2), 4-99 (ಅಂಬಟಿ ರಾಯುಡು, 14.3)

ಬೌಲಿಂಗ್: ಮೊಹಮ್ಮದ್ ಶಮಿ 4–0–21–2, ಜೇ ರಿಚರ್ಡ್ಸನ್ 3–0–21–0, ಅರ್ಷದೀಪ್ ಸಿಂಗ್ 2–0–7–1, ರಿಲಿ ಮೆರೆಡಿತ್ 3.4–0–21–0, ಮುರುಗನ್ ಅಶ್ವಿನ್ 3–0–32–1

ಫಲಿತಾಂಶ: ಚೆನ್ನೈ ಸೂಪರ್ ಕಿಂಗ್ಸ್‌ಗೆ 6 ವಿಕೆಟ್‌ಗಳು ಜಯ

ಹೈದರಾಬಾದ್‌ಗೆ ಆಯ್ಕೆ ಗೊಂದಲ

ವಾರ್ನರ್ ಬಳಗಕ್ಕೆ ಇಂದು ರೋಹಿತ್ ಪಡೆ ಸವಾಲು

ಚೆನ್ನೈ (ಪಿಟಿಐ): ಸಮರ್ಪಕ ತಂಡವನ್ನು ಆಯ್ಕೆ ಮಾಡಿ ಕಣಕ್ಕೆ ಇಳಿಸುವ ಗೊಂದಲದಲ್ಲಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ವಿರುದ್ಧ ಶನಿವಾರ ಕಣಕ್ಕೆ ಇಳಿಯಲಿದೆ.

ಮೊದಲ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಗೆಲುವಿಗೆ 188 ರನ್‌ಗಳ ಗುರಿ ಬೆನ್ನತ್ತಿದ ಸನ್‌ರೈಸರ್ಸ್ 10 ರನ್‌ಗಳಿಂದ ಸೋತಿತ್ತು. ಆದರೆ ಎರಡನೇ ಪಂದ್ಯದಲ್ಲಿ 150 ರನ್‌ಗಳ ಗುರಿಯನ್ನು ತಲುಪಲು ಸಾಧ್ಯವಾಗದೆ ಆರು ರನ್‌ಗಳಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಶರಣಾಗಿತ್ತು. ಅಂತಿಮ 11 ಆಟಗಾರರ ಆಯ್ಕೆಯಲ್ಲಿ ಆಗುತ್ತಿರುವ ಲೋಪವೇ ಇದಕ್ಕೆ ಕಾರಣವಾಗುತ್ತಿದೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು 'ಆರೆಂಜ್ ಪಡೆ' ಪ್ರಯತ್ನಿಸುತ್ತಿದೆ. ಆದರೆ ಅದಕ್ಕೆ ಸಾಕಷ್ಟು 'ಬೆಂಚ್ ಬಲ' ತಂಡದಲ್ಲಿಲ್ಲ.

ಆರ್‌ಸಿಬಿಗೆ 2 ವಿಕೆಟ್‌ಗಳಿಂದ ಮಣಿದಿದ್ದ ಚಾಂಪಿಯನ್ ಮುಂಬೈ ಕಳೆದ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ಎದುರು 'ಮ್ಯಾಜಿಕ್' ಮಾಡಿ ಗೆದ್ದಿತ್ತು. ಕೇವಲ 152 ರನ್ ಕಲೆ ಹಾಕಿದ್ದರೂ ಬೌಲಿಂಗ್‌ನಲ್ಲಿ ಎದುರಾಳಿಗಳನ್ನು ಕಟ್ಟಿಹಾಕುವಲ್ಲಿ ಯಶಸ್ವಿಯಾಗಿತ್ತು.

ಅಂಥ ಬಲಿಷ್ಠ ತಂಡವನ್ನು ಎದುರಿಸುವುದು ಸದ್ಯದ ಪರಿಸ್ಥಿತಿಯಲ್ಲಿ ಸನ್‌ರೈಸರ್ಸ್‌ಗೆ ಸವಾಲೇ ಸರಿ. ಹಿಂದಿನ ಎರಡೂ ಪಂದ್ಯಗಳಲ್ಲಿ ಇಬ್ಬರು ವಿಕೆಟ್ ಕೀಪರ್ ಬ್ಯಾಟ್ಸ್‌ಮನ್‌ಗಳನ್ನು ಕಣಕ್ಕೆ ಇಳಿಸಿದ್ದ ಸನ್‌ರೈಸರ್ಸ್ ಅದರಲ್ಲಿ ಯಶಸ್ಸು ಕಂಡಿಲ್ಲ. ಇನಿಂಗ್ಸ್ ಆರಂಭಿಸುತ್ತಿರುವ ವೃದ್ಧಿಮಾನ್ ಸಹಾ ವೈಫಲ್ಯ ಕಾಣುತ್ತಿದ್ದಾರೆ. ಮೊದಲ ಪಂದ್ಯದಲ್ಲಿ ಏಳು ರನ್ ಗಳಿಸಿದ್ದ ಅವರು ನಂತರ ಒಂದು ರನ್‌ಗೆ ಔಟಾಗಿದ್ದರು.

ಬಿಸಿಸಿಐ ಕೇಂದ್ರೀಯ ಗುತ್ತಿಗೆ ಪದ್ಧತಿಯಿಂದ ಗುರುವಾರವಷ್ಟೇ ಮನೀಷ್ ಪಾಂಡೆ ಅವರನ್ನು ಕೈಬಿಡಲಾಗಿದೆ. ಹೀಗಾಗಿ ಮತ್ತೆ ರಾಷ್ಟ್ರೀಯ ತಂಡದ ಬಾಗಿಲು ಬಡಿಯಬೇಕಾದರೆ ಅವರು ಐಪಿಎಲ್‌ನಲ್ಲಿ ಇನ್ನಷ್ಟು ಮಿಂಚಿನ ಆಟಆಡಬೇಕಾಗಿದೆ.

ಬೌಲಿಂಗ್ ವಿಭಾಗದಲ್ಲೂ ತಂಡ ವೈಫಲ್ಯ ಕಾಣುತ್ತಿದೆ. ಟಿ.ನಟರಾಜನ್ ಅವರಿಗೆ ಕಳೆದ ಬಾರಿಯಷ್ಟು ಸಮರ್ಪಕವಾಗಿ ಬೌಲಿಂಗ್ ಮಾಡಲು ಆಗುತ್ತಿಲ್ಲ. ಭುವನೇಶ್ವರ್ ಕುಮಾರ್ ಕೂಡ ದುಬಾರಿಯಾಗುತ್ತಿದ್ದಾರೆ.

ಹಿಂದಿನ ಪಂದ್ಯದಲ್ಲಿ ರೋಚಕ ಜಯ ಗಳಿಸಿದ ನಂತರ ಮುಂಬೈ ನಿರಾಳ ವಾಗಿದ್ದು ಯಾವುದೇ ಬದಲಾವಣೆಗೆ ಮುಂದಾಗುವ ಸಾಧ್ಯತೆ ಇಲ್ಲ.





ಕಾಮನ್ವೆಲ್ತ್ ಗೇಮ್ಸ್‌ಗೆ ಮಹಿಳಾ ಕ್ರಿಕೆಟ್ ತಂಡ

ನವದೆಹಲಿ (ಪಿಟಿಐ): ಲಾಸ್ ಏಂಜಲೀಸ್‌ನಲ್ಲಿ 2028ರಲ್ಲಿ ನಡೆಯಲಿರುವ ಒಲಿಂಪಿಕ್ಸ್‌ಗೆ ಕ್ರಿಕೆಟ್ ಸೇರ್ಪಡೆಗೊಳಿಸಿದರೆ ಪುರುಷರ ಮತ್ತು ಮಹಿಳೆಯರ ತಂಡಗಳನ್ನು ಕಳುಹಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ನಿರ್ಧರಿಸಿದೆ.

ಶುಕ್ರವಾರ ವರ್ಚುವಲ್ ಆಗಿ ನಡೆದ ಅಪೆಕ್ಸ್ ಸಮಿತಿ ಸಭೆಯಲ್ಲಿ ಈ ಕುರಿತು ತೀರ್ಮಾನ ಕೈಗೊಳ್ಳಲಾಗಿದ್ದು 2022ರ ಕಾಮನ್ವೆಲ್ತ್ ಗೇಮ್ಸ್‌ಗೆ ಮಹಿಳಾ ಕ್ರಿಕೆಟ್ ತಂಡವನ್ನು ಕಳುಹಿಸುವುದಕ್ಕೂ ನಿರ್ಧರಿಸಲಾಯಿತು.

ವರ್ಷಾಂತ್ಯದಲ್ಲಿ ಭಾರತ ಮಹಿಳೆಯರ ಏಕದಿನ ಮತ್ತು ಟಿ20 ತಂಡಗಳ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಪ್ರವಾಸಕ್ಕೂ ಹಸಿರು ನಿಶಾನೆ ತೋರಿಸಲಾಯಿತು ಎಂದು ಬಿಸಿಸಿಐ ಹಿರಿಯ ಪದಾಧಿಕಾರಿಯೊಬ್ಬರು ತಿಳಿಸಿದರು.

ಈ ಬಾರಿಯೂ ಮಹಿಳೆಯರ ಟಿ20 ಚಾಲೆಂಜ್‌ಗೂ ಮೊದಲು ಆಟಗಾರ್ತಿಯರ ತರಬೇತಿ ಶಿಬಿರ ನಡೆಯಲಿದೆ. ಚಾಲೆಂಜ್ ನಂತರ ತಂಡ ಇಂಗ್ಲೆಂಡ್‌ಗೆ ಪಯಣಿಸಲಿದೆ. ತವರಿಗೆ ವಾಪಸಾದ ನಂತರ ವೆಸ್ಟ್ ಇಂಡೀಸ್ ಅಥವಾ ದಕ್ಷಿಣ ಆಫ್ರಿಕಾ ತಂಡಗಳು ಇಲ್ಲಿಗೆ ಬರಲಿವೆ. ಮಹಿಳೆಯರ ಏಕದಿನ ಮತ್ತು ಟಿ20 ದೇಶಿ ಟೂರ್ನಿಗಳನ್ನು ಪೂರ್ಣಪ್ರಮಾಣದಲ್ಲಿ ಆಯೋಜಿಸುವದಕ್ಕೂ ನಿರ್ಧರಿಸಲಾಯಿತು. ಆದರೆ ಪುರುಷರ ಟೂರ್ನಿಗಳ ಬಗ್ಗೆ ನಿರ್ಧಾರ ಕೈಗೊಳ್ಳಲಿಲ್ಲ. ಅನಧಿಕೃತವಾಗಿ ಟಿ20 ಲೀಗ್ ಆಯೋಜಿಸಿದ ಬಿಹಾರ ಕ್ರಿಕೆಟ್ ಸಂಸ್ಥೆಗೆ ಕಾರಣ ಕೇಳಿ ನೋಟಿಸ್ ನೀಡಲಾಯಿತು.

ಸಂಕ್ಷಿಪ್ತ ಸುದ್ದಿ

ಫುಟ್‌ಬಾಲ್ ಟೂರ್ನಿಗಳು ಸ್ಥಗಿತ

ಬೆಂಗಳೂರು: ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯು (ಕೆಎಸ್‌ಎಫ್‌ಎ), ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ತನ್ನ ಎಲ್ಲ ಲೀಗ್‌ಗಳು ಹಾಗೂ ಟೂರ್ನಿಗಳನ್ನು ಸ್ಥಗಿತಗೊಳಿಸಿದೆ.

'ಕೊರೊನಾ ಸೋಂಕು ಪ್ರಕರಣಗಳು ಹೆಚ್ಚುತ್ತಿರುವುದರಿಂದ ಆಟಗಾರರು ಹಾಗೂ ಸಿಬ್ಬಂದಿಯ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಟೂರ್ನಿಗಳನ್ನು ಮುಂದಿನ ಸೂಚನೆಯವರೆಗೆ ಸ್ಥಗಿತಗೊಳಿಸಲು ಎಲ್ಲಾ ಜಿಲ್ಲಾ ಸಂಸ್ಥೆಗಳಿಗೆ ತಿಳಿಸಲಾಗಿದೆ' ಎಂದು ಕೆಎಸ್‌ಎಫ್‌ಎ ಅಧ್ಯಕ್ಷ ಎನ್. ಎ. ಹ್ಯಾರಿಸ್ ಹೇಳಿದ್ದಾರೆ.

ಈಜು: ಕೆನಿಶಾ ಗುಪ್ತಾಗೆ ಚಿನ್ನ

ತಾಷ್ಕೆಂಟ್, ಉಜ್ಬೆಕಿಸ್ತಾನ (ಪಿಟಿಐ): ಭಾರತದ ಕೆನಿಶಾ ಗುಪ್ತಾ ಅವರು ಇಲ್ಲಿ ನಡೆಯುತ್ತಿರುವ ಈಜು ಚಾಂಪಿಯನ್‌ಷಿಪ್‌ನಲ್ಲಿ ಮೂರನೇ ಚಿನ್ನದ ಪದಕ ಗೆದ್ದರು. ಶುಕ್ರವಾರ ಮಹಿಳೆಯರ 50 ಮೀ. ಫ್ರೀಸ್ಟೈಲ್‌ನಲ್ಲಿ ವೈಯಕ್ತಿಕ ಗರಿಷ್ಠ ಸಾಧನೆಯ (26.61 ಸೆಕೆಂಡು) ಮೂಲಕ ಅವರು ಅಗ್ರಸ್ಥಾನ ಗಳಿಸಿದರು.

ಟೆನಿಸ್ ಟೂರ್ನಿ: ಅಂಕಿತಾಗೆ ಸೋಲು

ಜರ್ಮಲಾ, ಲಾಟ್ವಿಯ (ಪಿಟಿಐ): ಭಾರತದ ಅಂಕಿತಾ ರೈನಾ ಅವರು ಬಿಲಿ ಜೀನ್ ಕಿಂಗ್ ಕಪ್ ಟೆನಿಸ್ ವಿಶ್ವ ಗುಂಪಿನ ಪ್ಲೇ ಆಫ್‌ನ ಮೊದಲ ಪಂದ್ಯದಲ್ಲಿ ಸೋಲು ಅನುಭವಿಸಿದರು.

2017ರ ಫ್ರೆಂಚ್ ಓಪನ್ ಚಾಂಪಿಯನ್ ಎಲೆನಾ ಒಸ್ತಪೆಂಕೊ ಎದುರು ಭಾರತದ ಆಟಗಾರ್ತಿ 2-6, 7-5, 5-7ರಿಂದ ಮಣಿದರು. ಇದರೊಂದಿಗೆ ಭಾರತ ಟೂರ್ನಿಯಲ್ಲಿ 0–1ರ ಹಿನ್ನಡೆ ಅನುಭವಿಸಿದೆ.

ಬಾಕ್ಸಿಂಗ್: ಕ್ವಾರ್ಟರ್‌ಗೆ ಅರುಂಧತಿ, ಚಾನು

ನವದೆಹಲಿ (ಪಿಟಿಐ): ಖೇಲೊ ಇಂಡಿಯಾ ಕ್ರೀಡಾಕೂಟದ ಚಿನ್ನದ ಪದಕ ವಿಜೇತೆ ಅರುಂಧತಿ ಚೌಧರಿ (69 ಕೆಜಿ ವಿಭಾಗ) ಹಾಗೂ ಬೇಬಿರೋಜಿಸನಾ ಚಾನು (51 ಕೆಜಿ) ಅವರು ಅವರು ಪೋಲೆಂಡ್‌ನ ಕಿಯೆಲ್ಸೆಯಲ್ಲಿ ನಡೆಯುತ್ತಿರುವ ವಿಶ್ವ ಯೂತ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕ್ವಾರ್ಟರ್‌ಫೈನಲ್‌ಗೆ ಕಾಲಿಟ್ಟರು.

ಒಲಿಂಪಿಯನ್ ಅಹಮ್ಮದ್ ನಿಧನ

ಅಹಮ್ಮದ್ ಹುಸೇನ್

ಬೆಂಗಳೂರು: ರಾಷ್ಟ್ರೀಯ ಫುಟ್‌ಬಾಲ್ ತಂಡದ ಆಟಗಾರರಾಗಿದ್ದ, ಒಲಿಂಪಿಯನ್ ಅಹಮ್ಮದ್ ಹುಸೇನ್ (85) ಶುಕ್ರವಾರ ನಗರದಲ್ಲಿ ನಿಧನರಾದರು. ಅವರಿಗೆ ಕೋವಿಡ್ ಸೋಂಕು ತಗುಲಿತ್ತು ಎಂದು ರಾಜ್ಯ ಫುಟ್‌ಬಾಲ್ ಸಂಸ್ಥೆ ತಿಳಿಸಿದೆ.

ಹೈದರಾಬಾದ್‌ನಲ್ಲಿ ಜನಿಸಿದ ಅಹಮ್ಮದ್ ಹುಸೇನ್ ಅವರು ನಿಜಾಮ್ ಕಾಲೇಜಿನ ವಿದ್ಯಾರ್ಥಿಯಾಗಿದ್ದರು. ವೃತ್ತಿ ಬದುಕಿನ ಹೆಚ್ಚಿನ ಕಾಲವನ್ನು ಬೆಂಗಳೂರಿನಲ್ಲಿ ಕಳೆದ ಅವರು ಶಾಂತಿನಗರದಲ್ಲಿ ನೆಲೆಸಿದ್ದರು. ಡಿಫೆಂಡರ್ ಆಗಿದ್ದ ಅವರು 1956ರ ಒಲಿಂಪಿಕ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದ ಭಾರತ ತಂಡದಲ್ಲಿದ್ದರು. ಭಾರತ ಕ್ರೀಡಾ ಪ್ರಾಧಿಕಾರದ ಬೆಂಗಳೂರು ಕೇಂದ್ರದಲ್ಲಿ ಕೋಚ್ ಆಗಿಯೂ ಕಾರ್ಯನಿರ್ವಹಿಸಿದ್ದಾರೆ. ಅಹಮ್ಮದ್ ಹುಸೇನ್ ಇದ್ದ ಭಾರತ ತಂಡ 1958ರ ಏಷ್ಯನ್ ಗೇಮ್ಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿತ್ತು.

'ಅಶ್ವಿನ್ ಬೌಲಿಂಗ್ ಕೋಟಾ ಮುಗಿಸಬೇಕಿತ್ತು'

ಮುಂಬೈ (ಪಿಟಿಐ): ಬೌಲಿಂಗ್ ಬದಲಾವಣೆಯಲ್ಲಿ ಸಮರ್ಪಕ ನಿರ್ಧಾರ ಕೈಗೊಳ್ಳದೇ ಇದ್ದುದೇ ರಾಜಸ್ಥಾನ ರಾಯಲ್ಸ್ ಎದುರಿನ ಪಂದ್ಯದಲ್ಲಿ ಸೋಲನುಭವಿಸಲು ಕಾರಣ ಎಂದು ಡೆಲ್ಲಿ ಕ್ಯಾಪಿಟಲ್ಸ್ ತಂಡದ ಕೋಚ್ ರಿಕಿ ಪಾಂಟಿಂಗ್ ಅಭಿಪ್ರಾಯಪಟ್ಟಿದ್ದಾರೆ.

ಗುರುವಾರ ರಾತ್ರಿ ನಡೆದಿದ್ದ ಪಂದ್ಯದಲ್ಲಿ 148 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ್ದ ರಾಜಸ್ಥಾನ ರಾಯಲ್ಸ್ 42 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಈ ಸಂದರ್ಭದಲ್ಲಿ ಡೆಲ್ಲಿ ಪಾಳಯದಲ್ಲಿ ಗೆಲುವಿನ ಭರವಸೆ ಮೂಡಿತ್ತು. ಆದರೆ ನಂತರ ಚೇತರಿಸಿಕೊಂಡ ರಾಯಲ್ಸ್ ಮೂರು ವಿಕೆಟ್‌ಗಳ ಗೆಲುವು ಸಾಧಿಸಿತ್ತು.

ರಿಕಿ ಪಾಂಟಿಂಗ್

ಪಂದ್ಯದ ನಂತರ ಮಾತನಾಡಿದ ರಿಕಿ ಪಾಂಟಿಂಗ್ ಅವರು ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅವರಿಗೆ ಅವರ ಪೂರ್ಣ ಕೋಟಾದ ಬೌಲಿಂಗ್ ಮಾಡಲು ಅವಕಾಶ ನೀಡಬೇಕಾಗಿತ್ತು ಎಂದು ಹೇಳಿದರು. ಮೂರು ಓವರ್ ಬೌಲಿಂಗ್ ಮಾಡಿದ್ದ ಅಶ್ವಿನ್ ಕೇವಲ 14 ರನ್ ಬಿಟ್ಟುಕೊಟ್ಟಿದ್ದರು. ಇದರಲ್ಲಿ ಒಂದು ಬೌಂಡರಿ ಕೂಡ ಇರಲಿಲ್ಲ.

13ನೇ ಓವರ್‌ನಲ್ಲಿ ನಾಯಕ ರಿಷಭ್ ಪಂತ್ ಅವರು ಅಶ್ವಿನ್ ಬದಲಿಗೆ ಮಾರ್ಕಸ್ ಸ್ಟೋಯಿನಿಸ್ ಕೈಗೆ ಚೆಂಡು ನೀಡಿದ್ದರು. ಸ್ಟೋಯಿನಿಸ್ ಮೂರು ಬೌಂಡರಿ ಒಳಗೊಂಡಂತೆ ಒಟ್ಟು 15 ರನ್ ಬಿಟ್ಟುಕೊಟ್ಟಿದ್ದರು. ಇದು ರಾಯಲ್ಸ್‌ಗೆ ಚೇತರಿಕೆ ತುಂಬಿತ್ತು.

'ಅಶ್ವಿನ್ ಬದಲಿಗೆ ಸ್ಟೋಯಿನಿಸ್‌ಗೆ ಬೌಲಿಂಗ್ ನೀಡಿದ್ದು ಸರಿಯಾದ ಕ್ರಮವಾಗಿರಲಿಲ್ಲ. ಮೊದಲ ಪಂದ್ಯದಲ್ಲಿ ನಿರೀಕ್ಷೆಗೆ ತಕ್ಕಂತೆ ಆಡಲು ಸಾಧ್ಯವಾಗದ ಅಶ್ವಿನ್ ನಂತರ ಕಠಿಣ ಪರಿಶ್ರಮದ ಮೂಲಕ ಪರಿಸ್ಥಿತಿಗೆ ಹೊಂದಿಕೊಂಡಿದ್ದರು. ಹೀಗಾಗಿ ಈ ಪಂದ್ಯದಲ್ಲಿ ಉತ್ತಮ ದಾಳಿ ನಡೆಸಿದ್ದರು' ಎಂದು ಪಾಂಟಿಂಗ್ ಹೇಳಿದರು.

ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್: ಸಾಕ್ಷಿ ಮಲಿಕ್‌ಗೆ ಬೆಳ್ಳಿ

ಚಿನ್ನ ಗೆದ್ದ ವಿನೇಶಾ, ಅನ್ಶು, ದಿವ್ಯಾ

ಆಲ್ಮಾಟಿ, ಕಜಕಸ್ತಾನ (ಪಿಟಿಐ): ಒಲಿಂಪಿಕ್ಸ್ ಅರ್ಹತೆ ಗಿಟ್ಟಿಸಿರುವ ಭಾರತದ ವಿನೇಶಾ ಫೋಗಟ್, ಅನ್ಶು ಮಲಿಕ್ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕಗಳಿಗೆ ಮುತ್ತಿಟ್ಟಿದ್ದಾರೆ. ಏಷ್ಯನ್ ಕೂಟದಲ್ಲಿ ಮೊದಲ ಬಾರಿ ಇವರಿಬ್ಬರಿಗೆ ಚಿನ್ನದ ಪದಕಗಳು ಒಲಿದಿವೆ. ದಿವ್ಯಾ ಕಾಕ್ರನ್ ಕೂಡ ಚಿನ್ನ ಗೆದ್ದುಕೊಂಡರು. ಸಾಕ್ಷಿ ಮಲಿಕ್ ಅವರಿಗೆ ಬೆಳ್ಳಿ ಪದಕ ಒಲಿಯಿತು.

ಶುಕ್ರವಾರ ನಡೆದ ಮಹಿಳೆಯರ 53 ಕೆಜಿ ವಿಭಾಗದ ಫೈನಲ್‌ನಲ್ಲಿ ವಿನೇಶಾ ಅವರು ತೈಪೇಯ ಮೆಂಗ್ ಸೂನ್ ಶೇಹ್ ಅವರನ್ನು ಸೋಲಿಸಿದರು. 57 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಅನ್ಶು, ಅಂತಿಮ ಬೌಟ್‌ನಲ್ಲಿ 3–0ಯಿಂದ ಮಂಗೋಲಿಯಾದ ಬ್ಯಾಟ್ಸೆಟ್ಸೆಗ್ ಅಟ್ಲಾಂಟಸೆಟ್ಸ್‌ಗ್ ಸವಾಲು ಮೀರಿದರು.

72 ವಿಭಾಗದಲ್ಲಿ ಕಣಕ್ಕಿಳಿದಿದ್ದ ದಿವ್ಯಾ ಫೈನಲ್ ಹಣಾಹಣಿಯಲ್ಲಿ ಕೊರಿಯಾದ ಸುಜಿನ್ ಪಾರ್ಕ್ ಅವರನ್ನು ಮಣಿಸಿದರು. ಸರಿತಾ ಮೋರ್ ಬಳಿಕ ಕೂಟದಲ್ಲಿ ಎರಡು ಚಿನ್ನದ ಪದಕ ಗೆದ್ದ ಭಾರತದ ಎರಡನೇ ಕುಸ್ತಿಪಟು ಎನಿಸಿಕೊಂಡರು ದಿವ್ಯಾ. 2020ರಲ್ಲಿ ಅವರು 68 ಕೆಜಿ ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿದ್ದರು.

ವಿನೇಶಾ ಫೋಗಟ್–ಪಿಟಿಐ ಚಿತ್ರ

ವಿನೇಶಾ ಚಿನ್ನದ ಪದಕದ ಸುತ್ತಿನಲ್ಲಿ, ಆರಂಭದಲ್ಲಿ 6–0 ಮುನ್ನಡೆ ಸಾಧಿಸಿದ್ದರು. ಅದೇ ಲಯದಲ್ಲಿ ಮುಂದುವರಿದು ಬೌಟ್‌ನ ಮೊದಲ ಅವಧಿಯಲ್ಲೇ ಜಯ ತಮ್ಮದಾಗಿಸಿಕೊಂಡರು.ಶುಕ್ರವಾರ ಸೆಮಿಫೈನಲ್ ಬೌಟ್‌ನಲ್ಲಿ ಅವರು ಎದುರಿಸಬೇಕಿದ್ದ ಕೊರಿಯಾದ ಹ್ಯೂನ್‌ಯಂಗ್ ಗಾಯದ ಕಾರಣ ಹಿಂದೆ ಸರಿದರು. ಇದಕ್ಕೂ ಮೊದಲು ಎರಡು ಸುತ್ತುಗಳಲ್ಲಿ ವಿನೇಶಾ, ಮಂಗೋಲಿಯಾದ ಒಟ್ಗೊನ್ಜಾರ್ಗಲ್ ಗನ್‌ಬಾತರ್ ಹಾಗೂ ತೈಪೇಯ ಮೆಂಗ್ ಸೂನ್ ಶೇಹ್ ಎದುರು ಗೆದ್ದಿದ್ದರು.

19 ವರ್ಷದ ಅನ್ಶು, ಎರಡು ಬೌಟ್‌ಗಳಲ್ಲಿ ಅವರು ಕ್ರಮವಾಗಿ ಉಜ್ಬೆಕಿಸ್ತಾನದ ಸೆವಾರ ಈಶ್ಮುರತೊವಾ ಮತ್ತು ಕಿರ್ಗಿಸ್ತಾನದ ನಾಜಿರಾ ಮಾರ್ಸ್‌ಬೆಕ್ ಕಿಜಿ ಅವರನ್ನು ಮಣಿಸಿ ನಾಲ್ಕರ ಘಟ್ಟ ತಲುಪಿದ್ದರು.

ಸೆಮಿಫೈನಲ್‌ನಲ್ಲಿ ಮಂಗೋಲಿಯಾದ ಬ್ಯಾಟ್ಸೆಟ್ಸೆಗ್ ಅಟ್ಲಾಂಟಸೆಟ್ಸ್‌ಗ್ ಎದುರು ಅನ್ಶು 9–1ರಿಂದ ಜಯ ಸಾಧಿಸಿದ್ದರು. ಫೈನಲ್‌ನಲ್ಲಿ ಇದೇ ಎದುರಾಳಿಯನ್ನು ಅನ್ಶು ಎದುರಿಸಬೇಕಾಯಿತು.

ಸಾಕ್ಷಿಗೆ ಬೆಳ್ಳಿ: ಸಾಕ್ಷಿ ಮಲಿಕ್ (65 ಕೆಜಿ) ಬೆಳ್ಳಿ ಪದಕ ಗೆದ್ದುಕೊಂಡರು. ಫೈನಲ್ ಬೌಟ್‌ನಲ್ಲಿ ಅವರು ಮಂಗೋಲಿಯಾದ ಬೊಲೊರ್ಟ್‌ವುಂಗಲಾಗ್ ಜೊರಿಟ್ ಎದುರು ಸೋತರು.

ಪ್ರಶಸ್ತಿಗಳೊಂದಿಗೆ ಸ್ನಿಗ್ಧಾ ಕಾಂತ (ಎಡ) ಹಾಗೂ ಆರ್ಯ ಗಣಪತಿ

ಟೆನಿಸ್: ಆರ್ಯ, ಸ್ನಿಗ್ಧಾಗೆ ಪ್ರಶಸ್ತಿ

ಬೆಂಗಳೂರು: ಅಗ್ರಶ್ರೇಯಾಂಕದ ಆರ್ಯ ಗಣಪತಿ ಹಾಗೂ ಸ್ನಿಗ್ಧಾ ಕಾಂತ ಅವರು ಎಐಟಿಎ 14 ವರ್ಷದೊಳಗಿನವರ ಟೆನಿಸ್ ಟೂರ್ನಿಯ ಬಾಲಕ ಹಾಗೂ ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದರು.

ಇಲ್ಲಿಯ ಟ್ರಾನ್ಸ್‌ಫಾರ್ಮ್ ಟೆನಿಸ್ ಅಕಾಡೆಮಿಯಲ್ಲಿ ನಡೆದ ಟೂರ್ನಿಯ ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ ಆರ್ಯ 6-2, 6-3ರಿಂದ ಗಂಧರ್ವ ಜಿ.ಕೆ. ಅವರನ್ನು ಸೋಲಿಸಿದರು. ಬಾಲಕಿಯರ ವಿಭಾಗದಲ್ಲಿ ಜಿನಾಹ್ ಅಂಬರ್ ಸಾಲಾರ್ ಅವರನ್ನು 4-6, 6-3, 6-4ರಿಂದ ಸ್ನಿಗ್ಧಾ ಮಣಿಸಿದರು.

ಬಾಲಕರ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ನಿಖಿಲ್ ಶ್ರೀನಿವಾಸ್–ಲತೀಶ್ ಕೊಂಬಿಲ ಅವರು 6-2, 7-5ರಿಂದ ಗಂಧರ್ವ ಜಿ.ಕೆ–ಪ್ರಣೀತ್ ಗೋಗಿನೇನಿ ಅವರನ್ನು ಮಣಿಸಿದರು.

ಕುಸ್ತಿಪಟು ಪೂಜಾ ಧಂಡಾಗೆ ಕೋವಿಡ್

ಹಿಸಾರ್ (ಪಿಟಿಐ): ವಿಶ್ವ ಕುಸ್ತಿ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತೆ, ಕುಸ್ತಿ ಕೋಚ್ ಆಗಿರುವ ಪೂಜಾ ಧಂಡಾ ಅವರಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಸ್ವತಃ ಪೂಜಾ ಅವರೇ ಶುಕ್ರವಾರ ಇದನ್ನು ಖಚಿತಪಡಿಸಿದ್ದಾರೆ.

ಪೂಜಾ, 2018ರ ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಬೆಳ್ಳಿಯ ಪದಕ ಗೆದ್ದುಕೊಂಡಿದ್ದರು. ಕೆಲವು ತಿಂಗಳ ನಂತರ ವಿಶ್ವ ಚಾಂಪಿಯನ್‌ಷಿಪ್‌ನ ಮಹಿಳೆಯರ 57 ಕೆ.ಜಿ. ವಿಭಾಗದಲ್ಲಿ ರಜತ ಪದಕ ತಮ್ಮದಾಗಿಸಿಕೊಂಡಿದ್ದರು.

ಬ್ಯಾಸ್ಕೆಟ್‌ಬಾಲ್ ಟೂರ್ನಿ ಮುಂದಕ್ಕೆ

ಬೆಂಗಳೂರು: ಕಂಠೀರವ ಕ್ರೀಡಾಂಗಣದಲ್ಲಿ ಇದೇ 23ರಿಂದ ನಡೆಸಲು ಉದ್ದೇಶಿಸಿದ್ದ ಪುರುಷರ ರಾಜ್ಯ 'ಎ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಕೋವಿಡ್–19ರ ಹಿನ್ನೆಲೆಯಲ್ಲಿ ಮುಂದೂಡಲಾಗಿದೆ. ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ಗೌರವ ಕಾರ್ಯದರ್ಶಿ ಕೆ.ಗೋವಿಂದರಾಜ್ ಶುಕ್ರವಾರ ಈ ವಿಷಯವನ್ನು ತಿಳಿಸಿದ್ದಾರೆ.

ಪರಿಶುದ್ಧ ಆಯುರ್ವೇದಿಕ ಮೂಲಿಕೆಗಳಿಂದ ಸೂತ್ರೀಕರಿಸಲಾಗಿದೆ

ಕೇವಲ ಅರಿಶಿನ, ಚಂದನ ಅಷ್ಟೇ ಅಲ್ಲ "ರೂಪ ಮಂತ್ರ ಆಯುರ್ವೇದಿಕ ಕ್ರೀಮ್" ಅನ್ನು ಅಲೋ ವೆರಾ, ದ್ರಾಕ್ಷಿ, ತುಳಸಿ, ಮುಲೇಟಿ ಮುಂತಾದ 12 ಆಯುರ್ವೇದಿಕ ಮೂಲಿಕೆಗಳ ಸಮರ್ಪಕ ಸಮತೋಲಿತ ಮಿಶ್ರಣದಿಂದ ತಯಾರಿಸಲಾಗಿರುವ ಈ ಉತ್ಪನ್ನವು, ತ್ವಚೆಯನ್ನು ಆಳದಿಂದ ಕಾಂತಿಯುತಗೊಳಿಸಿ, ಕಂಗೊಳಿಸುವಂತೆ ಮಾಡಲು ಸಹಕಾರಿಯಾಗಿದೆ. ಇದು ಕಪ್ಪು ವೃತ್ತಗಳನ್ನು ಮತ್ತು ನರೆಗಳನ್ನು ಕಡಿಮೆಗೊಳಿಸುವ ಮೂಲಕ ತ್ವಚೆಯನ್ನು ಹಗುರವಾಗಿ ಮತ್ತು ಶುಭ್ರವಾಗಿ ಇರಿಸಲು ನೆರವಾಗುತ್ತದೆ.

New Dr. Juneja's ರೂಪ ಮಂತ್ರ®

Ayurvedic Cream, Capsules, Soap & Face Wash

after 3 week see results

www.roopmantra.com
24x7 Helpline: 87259 66666
AVAILABLE AT ALL MEDICAL & GENERAL STORES

Dr. Juneja's ಡಾ.ಆರ್ಥೋ ತೈಲ®

Divisa www.divisastore.com

ನಕಲಿಗಳ ಬಗ್ಗೆ ಎಚ್ಚರ

ಗ್ರಾಹಕರೇ ಗಮನಿಸಿ! ಕೆಲವು ಅಂಗಡಿಯವರು ಹೆಚ್ಚಿನ ಕಮಿಷನ್ ದುರಾಸೆಗೆ ಒಳಗಾಗಿ ಡಾ.ಆರ್ಥೋ ತೈಲ ರೀತಿಯ ಹೆಸರುಗಳನ್ನು ಹೊಂದಿರುವ ಕಳಪೆ ಮತ್ತು ನಕಲಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಿರುವುದು ನಮಗೆ ತಿಳಿದುಬಂದಿದೆ. ದಯವಿಟ್ಟು ಜಾಗೃತರಾಗಿರಿ, ಇಂತಹ ನಕಲಿ ಔಷಧಗಳು ಆರೋಗ್ಯಕ್ಕೆ ಸಮಸ್ಯೆ ಉಂಟು ಮಾಡಬಹುದಾಗಿರುತ್ತದೆ. ಆದ್ದರಿಂದ ಉತ್ಪನ್ನಗಳನ್ನು ಖರೀದಿಸುವುದಕ್ಕೂ ಮುನ್ನ, ಡಾ. ಆರ್ಥೋ ಸಂಪೂರ್ಣ ಹೆಸರು ಮತ್ತು ಪ್ಯಾಕೇಜಿಂಗ್ ಪರಾಮರ್ಶಿಸಿ ನೋಡಿ ಕೊಳ್ಳಿರಿ. ಡಾ.ಆರ್ಥೋ ಆಯುರ್ವೇದಿಕ ತೈಲವು ಇನ್ನಿತರ ಯಾವುದೇ ಉತ್ಪನ್ನವಾಗಲಿ, ಜಾಹೀರಾತು ಆಗಲಿ ಯಾವುದಕ್ಕೂ ಸಂಬಂಧ ಪಡುವುದಿಲ್ಲ.

ಸಂಪರ್ಕಿಸಿ
7876977777

ಕೀಲು ನೋವಿನ ಅತ್ಯುತ್ತಮ ಔಷಧಿ